downloaded from: www.kpscvaani.com

ರಾಯಲ್ ಕರಿಯರ್ ಅಕಾಡೆಮಿ, ಸಿಂಧನೂರು

# ಪಿ.ಡಿ.ಒ ಮತ್ತು ಗ್ರೇಡ್-1
# ಪರೀಕ್ಷಾ ಮಾರ್ಗದರ್ಶಿ

ಸಂಪಾದಕರು

**ಟಿ.ಎಚ್.ನಾಯಕ** M.A., B.Ed.    **ರಮೇಶ ಎಸ್.** M.A., B.Ed.

downloaded from: www.kpscvaani.com


| ಅಧ್ಯಾಯಗಳು | ಅಧ್ಯಾಯಗಳ ಶಿರ್ಷಿಕೆ | ಪ್ರಕರಣಗಳು |
|---|---|---|
| 1 | ಪ್ರಾರಂಭ ಮತ್ತು ವ್ಯಾಖ್ಯೆಗಳು | ಪ್ರಕರಣ–01 ರಿಂದ 2 |
| 01.ಎ | ಪಂಚಾಯತ ನೀತಿ ನಿರ್ದೇಶಕ ತತ್ವಗಳು | ಪ್ರಕರಣ–2 ಎ |
| 02 | ಗ್ರಾಮ ಸ್ವರಾಜನ ಘಟಕಗಳು | ಪ್ರಕರಣ–3 ರಿಂದ 3.4 |
| 03 | ಗ್ರಾಮ ಪಂಚಾಯತಿಗಳ ರಚನೆ ಮತ್ತು ಸ್ಥಾಯಿ ಸಮಿತಿಗಳ ರಚನೆ | ಪ್ರಕರಣ–4ರಿಂದ 57 |
| 04 | ಗ್ರಾ.ಪಂ.ಅಧ್ಯಕ್ಷ ಮತ್ತು ಉಪಾಧ್ಯಾಕ್ಷರ ಕಾರ್ಯಗಳು ಕರ್ತವ್ಯಗಳು ಅಧಿಕಾರಗಳು | ಪ್ರಕರಣ–58 ರಿಂದ 110 |
| 04. ಎ | ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು | ಪ್ರಕರಣ–110.ಎ |
| 05 | ಗ್ರಾ.ಪಂ.ಸಿಬ್ಬಂದಿಗಳು ಮತ್ತು ಕರ್ನಾಟಕ ಪಂಚಾಯತ ರಾಜ್ ಆಡಳಿತಾತ್ಮಕ ಸೇವೆ | ಪ್ರಕರಣ–111 ರಿಂದ 113.ಎ |
| 06 | ಚಿಕ್ಕನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶದ ಪರಿವರ್ತನೆ ಮತ್ತು ಸಂಯೋಜನೆ | ಪ್ರಕರಣ–114 ರಿಂದ 118 |
| 07 | ತಾಲೂಕು ಪಂಚಾಯತಿಯ ರಚನೆ | ಪ್ರಕರಣ–119 ರಿಂದ 144 |
| 08 | ತಾ.ಪಂ.ಅಧ್ಯಕ್ಷ–ಉಪಾಧ್ಯಾಕ್ಷರ ಕಾರ್ಯಗಳು ಕರ್ತವ್ಯಗಳು ಅಧಿಕಾರಗಳು ತಾ.ಪಂ. ಪ್ರಕಾರ್ಯಗಳು | ಪ್ರಕರಣ–145 ರಿಂದ 154 |
| 09 | ತಾಲೂಕು ಪಂಚಾಯತಿ ಸಿಬ್ಬಂದಿ | ಪ್ರಕರಣ –155 ರಿಂದ 157 |
| 10 | ಜಿಲ್ಲಾ ಪಂಚಾಯತಿ ರಚನೆ | ಪ್ರಕರಣ–158 ರಿಂದ 183 |
| 11 | ಜಿ.ಪಂ. ಅಧ್ಯಕ್ಷ–ಉಪಾಧ್ಯಕರ ಕಾರ್ಯಗಳು ಕರ್ತವ್ಯಗಳು ಅಧಿಕಾರಗಳು | ಪ್ರಕರಣ–184 ರಿಂದ 195 |
| 12 | ಈಲ್ಲಾ ಪಂಚಾಯತಿ ಸಿಬ್ಬಂದಿ | ಪ್ರಕರಣ–196 ರಿಂದ 198 |
| 13 | ತೆರಿಗೆಗಳು ಮತ್ತು ಫೀಜುಗಳು | ಪ್ರಕರಣ–199 ರಿಂದ 203 |
| 14 | ಸರಕಾರದಿಂದ ಉಪಕರಗಳು ಮತ್ತು ಆರ್ಥಿಕ ನೆರವು | ಪ್ರಕರಣ 204 ರಿಂದ 208 |
| 15 | ಪಂಚಾಯತಿಗಳ ಸ್ವತ್ತುಗಳು ಮತ್ತು ನಿಧಿಗಳು | ಪ್ರಕರಣ–209 ರಿಂದ231 |
| 16 | ಆಯುಕ್ತರ ಕಾರ್ಯಾಲಯದ ಸೃಜನೆ | ಪ್ರಕರಣ –232 ರಿಂದ 240 |
| 17 | ಹಣಕಾಸು ನಿಯಂತ್ರಣ ಲೆಕ್ಕಪರಿಶೀಲನೆ | ಪ್ರಕರಣ– 241 ರಿಂದ 267 |
| 18 | ಸಂಕೀರ್ಣ | ಪ್ರಕರಣ– 311 ರಿಂದ 321 |
| 19 | ನಿಯಮಗಳು ವಿನಿಯಮಗಳು ಮತ್ತು ಉಪ ವಿಧಿಗಳು | ಪ್ರಕರಣ–311 ರಿಂದ 321 |

downloaded from: www.kpscvaani.com


# ಭಾರತದಲ್ಲಿ ಸ್ಥಳೀಯ ಸರಕಾರಗಳ ಇತಿಹಾಸ ಮತ್ತು ಬೆಳವಣಿಗೆ

1. ವಿಕೇಂದ್ರಿಕರಣದ ಮೊದಲ ಹಂತ **ಸಂಯುಕ್ತ** ಪದ್ಧತಿಯಾದರೆ ನಂತರದ ಹಂತವೇ **ಸ್ಥಳೀಯ ಸರಕಾರ** ಪದ್ಧತಿಯಾಗಿದೆ.
2. ಸ್ಥಳೀಯ ಸರಕಾರ ಎಂದರೆ **ಆಡಳಿತ ನಡೆಸಲು ಸ್ಥಳೀಯ ಜನರಿಂದ ಆಯ್ಕೆಯಾದ ಮುಖಂಡರ ಗುಂಪು.**
3. ಸ್ಥಳೀಯ ಸರಕಾರಗಳ ರಚನೆಯನ್ನು ಬ್ರಿಟನ್ ಭಾರತ, ಅಮೇರಿಕಾ, ಫ್ರಾನ್ಸ್, ಪಾಕಿಸ್ತಾನ, ನೇಪಾಳ ಮುಂತಾದ ದೇಶಗಳಲ್ಲಿ ಕಾಣಬಹುದಾಗಿದೆ.

## I. ಪ್ರಾಚೀನ ಭಾರತದಲ್ಲಿ ಸ್ಥಳೀಯ ಸರಕಾರಗಳು

- ಋಗ್ವೇದದಲ್ಲಿ **ಸಭಾ** & **ಸಮಿತಿ** ಎಂಬ ಸ್ಥಳೀಯ ಸರಕಾರಗಳ ಉಲ್ಲೇಖವಿದೆ. ಇವುಗಳನ್ನು **'ಪ್ರಜಾಪತಿಯ ಅವಳಿ ಮುಕ್ಕಳೆಂದು'** ಕರೆಯಲಾಗಿದೆ.
- ಭಾರತದ ಪ್ರಾಚೀನ ಕೃತಿಗಳಾದ ರಾಮಾಯಣ, ಮಹಾಭಾರತ (ಶಾಂತಿಪರ್ವ) ಬೌದ್ಧರ ಜಾತಕ ಕತೆಗಳು ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರಚಾರ್ಯರ ನೀತಿ ಶಾಸ್ತ್ರ, ಮೇಗಾಸ್ತಾನಿಸನ–ಇಂಡಿಕಾ ಗ್ರಂಥ ಮುಂತಾದ ಕೃತಿಗಳಲ್ಲಿ ಸ್ಥಳೀಯ ಆಡಳಿತದ ಬಗ್ಗೆ ಉಲ್ಲೇಖಗಳಿವೆ.
- ಚಾಲುಕ್ಯರು–**ಗ್ರಾಮಸಂಘ,** ಗುಪ್ತರು–**ಮಹತ್ತರ,** ಚೋಳರು–**ಕಾಲರ್ರಮ್,** ಕದಂಬರು–**ಗಣಸಂಘ** ಎಂದು ಸ್ಥಳೀಯ ಆಡಳಿತವನ್ನು ಕರೆಯುತ್ತಿದ್ದರು.

1) **ಪಂಚರ ಆಡಳಿತ :** ಆದಿಕಾಲದಿಂದಲೂ ಭಾರತದಲ್ಲಿ **ಪಟೇಲ್, ಪಾಟಿಲ್, ಗೌಡ, ಕುಲಕರ್ಣಿ, ದೇಶಮುಖ್,** ಇವರು ಗ್ರಾಮಗಳಲ್ಲಿ ಆಡಳಿತ ನಡೆಸುತ್ತಿದ್ದರು. ಇವರ ಆಡಳಿತವನ್ನು **ಪಂಚರ ಆಡಳಿತ** ಎನ್ನಲಾಗುತ್ತಿತ್ತು. **ಪಂಚ** ಎಂಬ ಈ ಪದವೇ ಮುಂದಿನ ದಿನಗಳಲ್ಲಿ **ಪಂಚಾಯತಿ**ಯಾಗಿ ಬದಲಾವಣೆ ಹೊಂದಿತು.

   ಪಂಚರು ಪ್ರಮುಖವಾಗಿ ನ್ಯಾಯಾತೀರ್ಮಾನ (ಪಂಚಾಯತಿ ಕಟ್ಟೆ), ಭೂಮಿ ಹಂಚುವುದು, ಮತ್ತು ಕರ ವಸೂಲಿ ಮಾಡುವ ಅಧಿಕಾರ ಹೊಂದಿದ್ದವು.

2) **ಉತ್ತರ ಮೇರೂರು ಶಾಸನ :** 1ನೇ ಪರಾಂತಕನ ಈ ಶಾಸನವು ಚೋಳರ ಗ್ರಾಮಾಡಳಿತದ ಬಗ್ಗೆ ಸಂಪೂರ್ಣ ವಿವರಣೇಯನ್ನು ಒಳಗೊಂಡಿದೆ.

   ಚೋಳರ ಕಾಲದ ಕ್ರಿ.ಶ.10ರಿಂದ 14ರವರೆಗಿನ ಅವಧಿಯನ್ನು **ಸ್ವಯಂ ಆಡಳಿತದ ಸುವರ್ಣಕಾಲ** ಎನ್ನುವರು.

## II. ಮುಸ್ಲಿಂರ ಆಡಳಿತದಲ್ಲಿ ಸ್ಥಳೀಯ ಸರಕಾರಗಳು

- ಮೊಘಲ ರಾಜರ ಆಡಳಿತ ಕಾಲದಲ್ಲಿ **ಜಮೀನ್ದಾರಿ ಪದ್ಧತಿ ರೈತವಾರಿ ಪದ್ಧತಿ ಮಹಲ್ದಾರಿ ಪದ್ಧತಿ**ಗಳು ಜಾರಿಗೆ ಬಂದು ಸ್ಥಳೀಯ ಸರಕಾರಗಳ ಪ್ರಾಬಲ್ಯ ಕಡಿಮೆಯಾಗಿ ಅವು ಅವನತಿಯತ್ತ ಸಾಗಿದವು.

## III. ಬ್ರಿಟಿಷರ ಆಡಳಿತದಲ್ಲಿ ಸ್ಥಳೀಯ ಸರಕಾರಗಳು

- ಬ್ರಿಟಿಷರ ಕಾಲದಲ್ಲಿ ಗ್ರಾಮದ ದಾಖಲೆಗಳನ್ನು ನಿರ್ವಹಿಸಲು **"ಪತೆವಾರಿ"** ಅಧಿಕಾರಿಯನ್ನು ಪೋಲಿಸ್ ಕಾರ್ಯನಿರ್ವಹಿಸಲು **"ದರೋಗ"** ಅಧಿಕಾರಿಯನ್ನು ಹಾಗೂ ನ್ಯಾಯ ತೀರ್ಮಾನಿಸಲು **ಫೌಜದಾರ್** (ಮ್ಯಾಜಿಸ್ಟ್ರಿಟ್) ಎಂಬ ಅಧಕಾರವನ್ನು ನೇಮಿಸುವ ಮೂಲಕ ಸ್ಥಳೀಯ ಸರಕಾರಗಳ ಆಡಳಿತವನ್ನು ಕಡಿತಗೊಳಿಸ ಲಾಯಿತು.
- ಬ್ರಿಟಿಷರು ನಂತರದ ಅವಧಿಯಲ್ಲಿ ಭಾರತದಲ್ಲಿ ನಿಯಂತ್ರಿತ ಸ್ಥಳಿಯ ಸಂಸ್ಥೆಗಳನ್ನು ಆರಂಭಿಸಿದರು ಇದರ ಮುಖ್ಯ ಉದ್ದೇಶ ಕಂದಾಯ ಸಂಗ್ರಹಿಸುವುದಾಗಿತ್ತು.

1. **ಮದ್ರಾಸ ಮುನ್ಸಿಪಲ್ ಕಾರ್ಪೋರೇಶನ್** – 29 ಸೆಪ್ಟಂಬರ್–1688 ರಂದು ಸ್ಥಾಪನೆಯಾಯಿತು
2. **ಮುಂಬೈ ಮತ್ತು ಕೋಲ್ಕತ್ತ ಮುನ್ಸಿಪಲ್ ಕಾರ್ಪೋರೇಶನ್‌ಗಳ ಸ್ಥಾಪನೆ** – 1776 ರಲ್ಲಿ ಸ್ಥಾಪನೆಯಾದವು
3. **ಲಾರ್ಡ್‌ಮೆಯೋ ಘೋಷಣೆ** – 1870– ಆಡಳಿತ ವಿಕೇಂದ್ರೀಕರಿಸಲು ಶಿಫಾರಸ್ಸು
4. **ಲಾರ್ಡ್‌ರಿಪ್ಪನ್ ಘೋಷಣೆ** –1882 – ಲಾರ್ಡ್ ರಿಪ್ಪನ್‌ರು 18 ಮೇ 1882 ರಂದು ಹೊರಡಿಸಿದ ಘೊಷಣೆಯು ಸ್ಥಳೀಯ ಆಡಳಿತ ಸಂಸ್ಥೆಗಳ ಸ್ಥಾಪನೆಗೆ ಅವಕಾಶ ನೀಡಿತು.
   - ರಿಪ್ಪನ್‌ರವರ ಗೊತ್ತುವಳಿಯನ್ನು ಸ್ಥಳೀಯ ಸರಕಾರದ **ಮ್ಯಾಗ್ನಕಾರ್ಟ** ಎನ್ನುವರು.
   - ರಿಪ್ಪನ್‌ರನ್ನು ಭಾರತದ ಸ್ಥಳೀಯ ಸಂಸ್ಥೆಗಳ **ಪಿತಾಮಹ** ಎಂದು ಕರೆಯುತ್ತಾರೆ.

5) **ರಾಯಲ್ ಆಯೋಗ–1907 :–** ಸರ್ ಚಾರ್ಲ್ಸ ಹಾಬ್ ಹೌಸ್ ನೇತೃತ್ವದಲ್ಲಿ ಈ ಆಯೋಗವು ಸ್ಥಳಿಯ ಆಡಳಿತ ವಿಕೇಂದ್ರಿಕರಣದ ಸ್ಥಾಪನೆಗೆ ಶಿಫಾರಸ್ಸು ಮಾಡಿ 1909 ರಲ್ಲಿ ತನ್ನ ವರಧಿಯನ್ನು ಸಲ್ಲಿಸಿತು.
6) **1909 ರ ಮಾಂಟೆಗೋ–ಚೆಲ್ಮ್ಸ್‌ಫರ್ಡ್ ಸುಧಾರಣೆ:–** ಇದು ದ್ವಿ ಸರಕಾರದ ಪದ್ಧಿತಿಗೆ ಒತ್ತು ನೀಡಿತು.
7) **ಗ್ರಾಮ ಸ್ವರಾಜ್ಯ:–** ಇದು ಮಹಾತ್ಮ ಗಾಂಧಿಯವರ ಪರಿಕಲ್ಪನೆಯಾಗಿದೆ. ಗ್ರಾಮ ಸ್ವರಾಜ್ಯ ಎಂದರೆ ಗ್ರಾಮಗಳಿಗೆ ಸ್ವಯಂ ಆಡಳಿತ ನೀಡಿ ಬಲಪಡಿಸುದು ಎಂದರ್ಥ.

## IV. ಸ್ವತಂತ್ರ ಭಾರತದಲ್ಲಿ ಪಂಚಾಯತ್‌ರಾಜ್ ಬೆಳವಣಿಗೆ

- ಗಾಂಧೀಜಿಯವರ 'ಗ್ರಾಮ ಸ್ವರಾಜ್ಯದ ಕಲ್ಪನೆ'ಯನ್ನು ಕಾರ್ಯ ಗತಗೊಳಿಸಲು ಭಾರತ ಸಂವಿಧಾನದ 4ನೇ ಭಾಗದಲ್ಲಿ **ರಾಜ್ಯ ನಿರ್ದೇಶಕ ತತ್ವಗಳ 40ನೇ ವಿಧಿ**ಯ ಪಂಚಾಯತ್‌ರಾಜ್ ಸಂಸ್ಥೆಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ.
- 02–10–1952 ರಂದು **ಸಮುದಾಯ ಅಭಿವೃದ್ಧಿ ಕಾರ್ಯಕ್ರಮ** ಜಾರಿಯಾಯಿತು.
- 02–10–1953 ರಂದು **ರಾಷ್ಟ್ರೀಯ ವಿಸ್ತರಣಾ ಸೇವಾ ಕಾರ್ಯಕ್ರಮ** ಜಾರಿಗೆಗೊಂಡಿತು.

downloaded from: www.kpscvaani.com

# ಪಂಚಾಯತ್‌ರಾಜ್ ವಿಕಾಸಕ್ಕೆ ಸಂಬಂಧಿಸಿದ ಪ್ರಮುಖ ಆಯೋಗಗಳು

| | ಸಮಿತಿಗಳು | ನೇಮಕ | ವರದಿ ಸಲ್ಲಿಕೆ | ಪ್ರಮುಖ ಶಿಫಾರಸ್ಸುಗಳು |
|---|---|---|---|---|
| 1. | ಬಲವಂತರಾಯ ಮೆಹ್ತಾ ಸಮಿತಿ (ಪ್ರಜಾಸತ್ತಾತ್ಮಕ ವಿಕೇಂದ್ರಿಕರಣ ಸಮಿತಿ) | ಜನೆವರಿ 1957 | 24/11/1957 | 1) ಈ ಸಮಿತಿಯ ವರದಿಯನ್ನು 1958 ರಲ್ಲಿ NDC ಅಂಗೀಕರಿಸಿತು<br>2) ಈ ಸಮಿತಿ ಪಂಚಾಯತ್‌ರಾಜ್ ಹೆಸರಿನ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆಗೊಳಿಸಿತು.<br>3) ಈ ಸಮಿತಿ ಗ್ರಾಮ ಪಂಚಾಯತಿ, ಪಂಚಾಯತ ಸಮಿತಿ, ಜಿಲ್ಲಾ ಪರಿಷತ್ತು, ಎಂಬ 3 ಹಂತದ ಪಂಚಾಯತ್ ವ್ಯವಸ್ಥೆ ಜಾರಿಗೆಗೊಳಿಸಲು ಶಿಫಾರಸ್ಸು ಮಾಡಿತು.<br>4) ಜಿಲ್ಲಾಧಿಕಾರಿಯು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿರಬೇಕು.<br>5) ಪಂಚಾಯತ್ ಸಮಿತಿ ಮುಖ್ಯ ಕಾರ್ಯನಿರ್ವಹಣ ಸಂಸ್ಥೆಯಾಗಿರಬೇಕು ಹಾಗೂ ಜಿಲ್ಲಾ ಪರಿಷತ್ತು ಸಲಹೆ ನೀಡುವ ಮತ್ತು ಮೇಲ್ವಿಚಾರಣ ಸಂಸ್ಥೆಯಾಗಿರಬೇಕು.<br>**ಪರಿಣಾಮ:** ಈ ಸಮಿತಿಯು ಶಿಫಾರಸ್ಸುಗಳನ್ವಯ ದೇಶದಲ್ಲಿ ಪ್ರಪ್ರಥಮ ಪಂಚಾಯತ್‌ರಾಜ್ ಸಂಸ್ಥೆಯನ್ನು ರಾಜಸ್ತಾನ ರಾಜ್ಯದ ನಾಗೂರು ಜಿಲ್ಲೆಯಲ್ಲಿ ದಿ.02-10-1959 ರಂದು ನೆಹರೂ ಉದ್ಘಾಟಿಸಿದರು. 2ನೇ ರಾಜ್ಯ ಆಂಧ್ರಪ್ರದೇಶ ನಂತರ ಕರ್ನಾಟಕ, ಬಿಹಾರ, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಜಾರಿಯಾಯಿತು. |
| 2. | K.ಸಂತಾನಂ ಸಮಿತಿ (ಹಣಕಾಸು ವಿಕೇಂದ್ರಿಕರಣ ಸಮಿತಿ) | 1963 | | • ಇದನ್ನು ಪಂಚಾಯತಿಗಳಿಗೆ ಹಣಕಾಸನ್ನು ಹಂಚಿಕೆಮಾಡಲು ನೇಮಕ ಮಾಡಲಾಯಿತು<br>• ಪಂಚಾಯತಿಗಳು ಮನೆ, ತೆರಿಗೆ ಭೂಕಂದಾಯ ವಸೂಲಿ ಮಾಡಬಹುದು.<br>• ರಾಜ್ಯಮಟ್ಟದ ಅನುಧಾನವನ್ನು ಪಂಚಾಯತಿಗಳಿಗೆ ವರ್ಗಾಯಿಸುವುದು.<br>• ಪಂಚಾಯತ್‌ರಾಜ್ ಹಣಕಾಸು ಸಂಸ್ಥೆಯನ್ನು ಸ್ಥಾಪಿಸಬೇಕು. |
| 3. | ಅಶೋಕ ಮೇಹಾ ಸಮಿತಿ | 1977 | | 2 ಹಂತದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸುವುದು<br>1) ಜಿಲ್ಲಾ ಪರಿಷತ್ತು 2) ಮಂಡಲ ಪಂಚಾಯತಿ<br>• ಒಬ್ಬ ಪಂಚಾಯತ್‌ರಾಜ್ ಸಚಿವರನ್ನು ನೇಮಸುವುದು<br>• ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಭಾಗವಹಿಸಬಹುದು.<br>• SC/ST ಮತ್ತು ಮಕಿಳೆಯರಿಗೆ ಮೀಸಲಾತಿ ನೀಡುವುದು.<br>• ಅವಧಿ ಮುಗಿದ 6 ತಿಂಗಳೊಳಗೆ ಚುನಾವಣೆ ನಡೆಯಬೇಕು.<br>**ಪರಿಣಾಮಗಳು :** ಅಶೋಕ ಮೆಹಾ ಸಮಿತಿಯ ವರಧಿ ಆಧರಿಸಿ ಕರ್ನಾಟಕ, ಆಂಧ್ರ ಪ್ರದೇಶ, ಪಶ್ಚಿಮಬಂಗಾಳ, ರಾಜ್ಯಗಳು ಹೊಸ ಪಂಚಾಯತ್ ಕಾಯ್ದೆಯನ್ನು ಜಾರಿಗೆ ತಂದವು. |
| 4. | ದಂತವಾಲ ಸಮಿತಿ | 1978 | | • ಬ್ಲಾಕ್ ಮಟ್ಟದ ಯೋಜನೆಗೆ ಶಿಫಾರಸ್ಸು |
| 5. | ಹನುಮಂತರಾವ್ ಸಮಿತಿ | 1984 | | • ಜಿಲ್ಲಾ ಮಟ್ಟದ ಯೋಜನೆಗೆ ಶಿಫಾರಸ್ಸು |
| 6. | G.V.K.ರಾವ್ ಸಮಿತಿ | 1985 | | • ಈ ಸಮಿತಿಯನ್ನು 'ಆಡಳಿತ ಸಂಯೋಜನೆ ಮತ್ತು ಬಡತನ ನಿರ್ಮೂಲನಾ ಕಾರ್ಯಯೋಜನಾ ಸಮಿತಿ' ಎಂದು ಕರೆಯುವರು.<br>• ಪಂಚಾಯತಿಗಳಲ್ಲಿ ಅಧಿಕಾರ ಶಾಹಿಗಳು ಪಾಲ್ಗೊಳ್ಳುವಂತಿಲ್ಲ.<br>• ಜಿಲ್ಲಾ ಅಭಿವೃದ್ಧಿ ಆಯುಕ್ತರ (DDC) ನೇಮಕ |
| 7. | L.M. ಸಿಂಘ್ವಿ ಸಮಿತಿ | 1986 | | • ಈ ಸಮಿತಿಯನ್ನು 'ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿಗಾಗಿ ಪಂಚಾಯತ್ ರಾಜ್ ಸಂಸ್ಥಗಳ ಪುನಶ್ಚೇತ ಸಮಿತಿ' ಎನ್ನುವರು<br>• ಪಂಚಾಯತ ಸಂಸ್ಥಗಳಿಗೆ 'ಸಂವಿಧಾನಾತ್ಮಕ ಸ್ಥಾನಮಾನ' ನೀಡುವುದು<br>• ದೇಶದಾದ್ಯಂತ 3 ಹಂತಗಳ ಏಕರೂಪದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸುವುದು.<br>• ಹಣಕಾಸು ವಿಕೇಂದ್ರೀಕರಿಸಲು ಹಣಕಾಸು ಆಯೋಗವನ್ನು ರಚಿಸಬೇಕು<br>• ಗ್ರಾಮಗಳಲ್ಲಿ ನ್ಯಾಯ ಪಂಚಾಯತಿಗಳನ್ನು ಸ್ಥಾಪಿಸುವುದು. |

downloaded from: www.kpscvaani.com


| | | | | |
|---|---|---|---|---|
| 8. | | | | • ಗ್ರಾಮಸಭೆಗಳನ್ನು ರಚಿಸಿ ಹೆಚ್ಚಿನ ಅಧಿಕಾರ ನೀಡವುದು.<br>**ಪರಿಣಾಮಗಳು:–** • 64ನೇ ತಿದ್ದುಪಡಿ ಮಸೂದೆ (1989)<br>• 65ನೇ ತಿದ್ದುಪಡಿ ಮಸೂದೆ (1990)<br>• 73 ನೇ ತಿದ್ದುಪಡಿ ಮಸೂದೆ (1993) |
| 9. | P.K. ತುಂಗನ್ ಸಮಿತಿ | 1988 | | • ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಬೇಕು. |
| 10. | V.N. ಗಾಡ್ಗಿಲ್ ಸಮಿತಿ | 1989 | | • 3 ಹಂತದ ಪಂಚಾಯತಿಗಳ ರಚನೆ.<br>• ಎಲ್ಲಾ ಪಂಚಾಯತಿಗಳ ಅವಧಿ 5 ವರ್ಷ ಇರಬೇಕು. |

## ಕರ್ನಾಟಕದಲ್ಲಿ ಪಂಚಾಯತ್ ರಾಜ್ ವಿಕಾಸದ ಹಿನ್ನೆಲೆ

### ಮೈಸೂರು ಸಂಸ್ಥಾನದಲ್ಲಿ ಸ್ಥಳೀಯ ಆಡಳಿತ

1) **ಮುನ್ಸಿಪಲ್ ಸಮಿತಿ:** 1862 ರಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲಿ ರಚನೆಯಾಯಿತು.

2) **ಲೋಕಲ್ ಫಂಡ್ ಸಮಿತಿ:** 1862ರಲ್ಲಿ ರಚನೆ (ತೆರಿಗೆ ಸಂಗ್ರಹಿಸಲು)

1) **ಮೈಸೂರು ಲೋಕಲ್ ಬೋರ್ಡ್‌ಗಳ ಕಾಯ್ದೆ 1902:** ಇದು 01–01–1903 ರಂದು ಜಾರಿಯಾಯಿತು. ಈ ಕಾಯ್ದೆ 3 ಹಂತಗಳ ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆಗೊಳಿಸಿತು.

   1) ಪಂಚಾಯತ್ ಸಂಘ 2) ತಾಲೂಕ ಮಂಡಳಿ 3) ಜಿಲ್ಲಾ ಮಂಡಳಿ

2) **ಲೋಕಲ್ ಸೆಲ್ಫ್ ಗವರ್ನಮೆಂಟ್ ಕಮಿಟಿ:** 1914 ರ ಫೆಬ್ರುವರಿ ತಿಂಗಳಿನಲ್ಲಿ ಕಾಂತರಾಜೇ ಅರಸ್ ನೇತೃತ್ವದಲ್ಲಿ ರಚನೆ

3) **ಸ್ಥಳೀಯ ಸ್ವಯಂ ಹಣಕಾಸು ಸಮಿತಿ:** 1914 ರ ಮೇ ತಿಂಗಳಿನಲ್ಲಿ ದಿವಾನ ಕೆ.ಆರ್.ಶ್ರೀನಿವಾಸ್ ಅಯ್ಯಂಗಾರ್ ನೇತೃತ್ವದಲ್ಲಿ ರಚನೆ

4) **ಮೈಸೂರು ಸ್ಥಳಿಯ ಮಂಡಳೀ ಮತ್ತು ಗ್ರಾಮ ಪಂಚಾಯತ್ ಕಾಯ್ದೆ–1918**
   - ಚುನಾವಣೆಗಳ ಮೂಲಕ ಜನ ಪ್ರತಿನಿಧಿಗಳ ಆಯ್ಕೆ
   - 3 ಹಂತದ ಸ್ಥಳಿಯ ಆಡಳಿತ ವ್ಯವಸ್ಥೆ ಜಾರಿ
   - 3 ಹಂತದ ಪಂಚಾಯತಿಗಳ ಅಧಿಕಾರ ಅವಧಿ–3 ವರ್ಷಗಳು

5) **ಮೈಸೂರು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಬೋರ್ಡ್‌ಗಳ ಕಾಯ್ದೆ–1926**
   - 21 ವರ್ಷ ದಾಟಿದ ಎಲ್ಲರಿಗೂ ಮತದಾನದ ಹಕ್ಕನ್ನು ನೀಡಲಾಯಿತು. (ಮೊದಲ ಬಾರಿಗೆ)
   - ಮಹಿಳೆಯರು ಚುನಾವಣೆಗೆ ಸ್ಪರ್ದಿಸುವಂತಿಲ್ಲ.

6) **ಕಾಳೆ ಸಮಿತಿ**

7) **ಹೊಬಳಿ ಅಭಿವೃದ್ಧಿ ಯೋಜನೆ**

## ಕರ್ನಾಟಕದಲ್ಲಿ ನೇಮಕಗೊಂಡ ಪಂಚಾಯತ್ ಸಮಿತಿಗಳು–ಜಾರಿಯಾದ ಕಾಯ್ದೆಗಳು

| | ಸಮಿತಿಗಳು | ನೇಮಕ | ವರದಿ ಸಲ್ಲಿಕೆ | ಪ್ರಮುಖ ಶಿಫಾರಸ್ಸುಗಳು/ಅಂಶಗಳು |
|---|---|---|---|---|
| 1. | ವೆಂಕಟಪ್ಪ ಸಮಿತಿ | ಸೆಪ್ಟಂಬರ್ 1949 | 12/06/1950 | 1) ಸಮೂಹ ಪಂಚಾಯತಿ ಮತ್ತು ಜಿಲ್ಲಾ ಮಂಡಳಿಗಳ ರಚನೆ.<br>2) ಸಮನ್ವಯ ಸಮಿತಿ ( ತಾಲೂಕು ಮಟ್ಟದಲ್ಲಿ) ರಚನೆ.<br>3) ಪಂಚಾಯತಿಗಳ ಅಧಿಕಾರಾವಧಿ 4 ವರ್ಷ.<br>4) ಸದಸ್ಯರಾಗಲು ಕನಿಷ್ಠ ವಯಸ್ಸು 25 ವರ್ಷ.<br>5) ಈ ಸಮಿತಿಯು ವರಧಿಯನ್ವಯ ಮೈಸೂರು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಮಂಡಳಿಗಳ ಕಾಯ್ದೆ 1952 ಹಾಗೂ ಮೈಸೂರು ಪುರಸಭೆಗಳ ಕಾಯ್ದೆ 1952 ಜಾರಿಯಾದವು. |
| 2. | ಚಂದ್ರಶೇಖರಯ್ಯ ಸಮಿತಿ | 14/12/1953 | | • ಈ ಸಮಿತಿಯ ಮೋದಲ ಹೆಸರು: ಲೋಕಲ್ ಬೋರ್ಡ್ಸ್ ಎನಕ್ವೆರಿ ಸಮಿತಿ<br>• 3 ಹಂತದ ಪಂಚಾಯತಿಗಳ ರಚನೆ<br>• ಪರಿಶಿಷ್ಟ ಜಾತಿಗೆ ಮೀಸಲಾತಿ ನೀಡುವುದು.<br>• ತಹಸೀಲ್ದಾರರು ತಾಲೂಕು ಮಂಡಳಿಯ ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರಬೇಕು. |
| 3. | ಮೈಸೂರು ಗ್ರಾಮ ಪಂಚಾಯತ ಮತ್ತು ಜಿಲ್ಲಾ ಮಂಡಳಿಗಳ ಕಾಯ್ದೆ 1959 | ನವೆಂಬರ್ 1959 | | 1) ಈ ಕಾಯ್ದೆಯನ್ನು ವೆಂಕಟಪ್ಪ ಸಮಿತಿ, ಚಂದ್ರಶೇಕರಯ್ಯಸಮಿತಿ, ಬಲವಂತರಾಯ ಮೆಹ್ತಾ, ಸಮಿತಿಗಳ ವರಧಿಯನ್ನಾದರಿಸಿ ಜಾರಿಗೆಗಳಿಸಲಾಗಿದೆ |

downloaded from: www.kpscvaani.com

| | | | | |
|---|---|---|---|---|
| | | | | 2) ಈ ಕಾಯ್ದೆಯ ಪ್ರಮುಖಾಂಶಗಳು<br>• ಗ್ರಾಮ ಪಂಚಾಯಿತಿ:– 1500–10000 ಜನಸಂಖ್ಯೆಗೆ<br>• ತಾಲೂಕ ಅಭಿವೃದ್ಧಿ ಮಂಡಳಿ:–TDB<br>• ಜಿಲ್ಲಾ ಅಭಿವೃದ್ಧಿ ಮಂಡಳಿ:– ಜಿಲ್ಲಾಧಿಕಾರಿ ಅಧ್ಯಕ್ಷರು |
| 4. | ಕೊಂಡಜ್ಜಿ ಬಸಪ್ಪ ಸಮಿತಿ | 10/10/1962 | 25/02/1963 | • ಬ್ಲಾಕ್ ಮಟ್ಟದ ಯೋಜನೆಗೆ ಶಿಫಾರಸ್ಸು |
| 5. | ಹನುಮಂತರಾವ್ ಸಮಿತಿ | 1984 | | • ಜಿಲ್ಲಾ ಪರಿಷತ್ತ(DDB ಬದಲಿಗೆ) ಸ್ಥಾಪನೆ<br>• TDB ಮುಂದುವರಿಕೆ<br>• ನ್ಯಾಯ ಪಂಚಾಯತಿ ಸ್ಥಾಪನೆ<br>• MP, MLA, MLC. ಗಳು ಕೇವಲ ನಾಮಮಾತ್ರ ಸದಸ್ಯರು |

## ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕ ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತಿ ಕಾಯ್ದೆ 1983

ಜನತಾ ಪಕ್ಷದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್ ರವರು ಜನತೆಯ ಕೈಗೆ ಅಧಿಕಾರ ಎಂಬ ಘೋಷಣೆಯೊಂದಿಗೆ ಅಶೋಕ ಮೆಹ್ತಾ ಸಮಿತಿಯ ವರಧಿ ಆಧರಿಸಿ ಈ ಕಾಯ್ದೆಯನ್ನು 14–08–1985 ರಂದು ಜಾರಿಗೆ ತರಲಾಗಿದೆ.

### ಈ ಕಾಯ್ದೆಯ ಮುಖ್ಯಾಂಶಗಳು

3 ಹಂತಗಳ ಪಂಚಾಯತಿಯ ರಚನೆ

### I. ಜಿಲ್ಲಾ ಪರಿಷತ್

1 25000 ಜನಸಂಖ್ಯೆಗೆ ಒಬ್ಬ ಸದಸ್ಯ [ಮಲೆನಾಡು–12000]

2 ಮುಖ್ಯಕಾರ್ಯದರ್ಶಿ ನೇಮಕ (ಐಎಎಸ್ಮಟ್ಟದ)

3 9 ಸ್ಥಾಯಿ ಸಮಿತಿಗಳ ರಚನೆ

4 MLA, MLC, MP, DCC ಬ್ಯಾಂಕ್ ಅಧ್ಯಕ್ಷರು ಪದನಿಮಿತ್ತ ಸದಸ್ಯರು

### II. ತಾಲೂಕು ಪಂಚಾಯತ್ ಸಮಿತಿ

1. ಕೇವಲ ಸಲಹ ಮತ್ತು ಸಮನ್ವಯ ಸಮಿತಿ
2. ತಾಲೂಕಿನ Z.P ಸದಸ್ಯರು MP MLC ಮಂಡಲ ಪಂಚಾಯತಿ ಪ್ರಧಾನರು APMC, PCARD ಅಧ್ಯಕ್ಷರು ಪದನಿಮಿತ್ಯ ಸದಸ್ಯರು
3. ಮಹಿಳೆಯರು, SC, ST, OBC– ಒಟ್ಟು 5 ಸದಸ್ಯರು
4. ಅಧ್ಯಕ್ಷರು: ಶಾಸಕರು MLA (ತಾಲೂಕಿನ ಹೆಚ್ಚು ಭಾಗ ಪ್ರತಿನಿಧಿಸುದು)
5. ಕಾರ್ಯದರ್ಶಿ: ಕ್ಷೇತ್ರಾಭಿವೃದ್ಧಿ ಅಧಿಕಾರಿ

### III. ಮಂಡಲ ಪಂಚಾಯತಿ

1 10000–11000 ಜನಸಂಖ್ಯೆಗೆ ಒಂದು ಮಂಡಲ ಪಂಚಾಯತಿ (ಮಲೆನಾಡು–4000)

2 500 ಜನರಿಗೆ ಒಬ್ಬ ಸದಸ್ಯನ ಆಯ್ಕೆ

3 OBC ವರ್ಗದ ಇಬ್ಬರು ಸದಸ್ಯರ ನಾಮಕರಣ

4 SC ಗೆ ಶೇ 15 ರಷ್ಟು, ST ಗೆ ಶೇ 3 ರಷ್ಟು ಮೀಸಲಾತಿ

5. ಪ್ರಧಾನರು ಮತ್ತು ಉಪಪ್ರಧಾನರು ಸದಸ್ಯರಿಂದ ಆಯ್ಕೆ

ಈ ಕಾಯ್ದೆಯಡಿ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತಿನಲ್ಲಿ SC ಗೆ ಶೇ 15 ರಷ್ಟು, ST ಗೆ ಶೇ 3 ರಷ್ಟು ಮಹಿಳೆಯರಿಗೆ ಶೇ 25 ರಷ್ಟು ರಾಜಕೀಯ ಮೀಸಲಾತಿಯನ್ನು ನೀಡಲಾಗಿದೆ. [ಇದು ಭಾರತ ದೇಶದಲ್ಲೇ ಮೊದಲ ಪ್ರಯತ್ನವಾಗಿದೆ.]

### ಪಂಚಾಯತ್ ಸಂಸ್ಥೆಗಳಿಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆಗಳು

1) **64 ನೇ ತಿದ್ದುಪಡಿ ಮಸೂದೆ :–** ಸಿಂಗ್ವಿ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ರಾಜೀವ್‌ಗಾಂಧಿ ಅವರ ಕೇಂದ್ರ ಸರಕಾರ 1989 ಜುಲೈನಲ್ಲಿ 64ನೇ ತಿದ್ದುಪಡಿ ಮಸೂದೆಯನ್ನು ಮಂಡಿಸತು ಆದರೆ ಇದು ರಾಜ್ಯಸಭೆಯಲ್ಲಿ ಅಂಗೀಕಾರವಾಗಲಿಲ್ಲ.

2) **65 ನೇ ತಿದ್ದುಪಡಿ ಮಸೂದೆ :–** ವಿ.ಪಿ.ಸಿಂಗ್ ನೇತೃತ್ವದ ಕೇಂದ್ರ ಸರಕಾರ 1990ರಲ್ಲಿ 65ನೇ ತಿದ್ದುಪಡಿ ಮಸೂದೆಯನ್ನು ಮಂಡಿಸಿತು. ಇದು ಕೂಡಾ ವಿಫಲವಾಯಿತು ಹಾಗೂ ಸರಕಾರವು ಪತನಗೊಂಡಿತು.

### 73ನೇ ಸಂವಿಧಾನ ತಿದ್ದುಪಡಿ ಕಾಯ್ದೆ

- ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಲು ಪಿ.ವಿ.ನರಸಿಂಹರಾವ್ ನೇತೃತ್ವಲ್ಲಿ ಕೇಂದ್ರ ಸರಕಾರ 1991 ರಲ್ಲಿ 73ನೇ ತಿದ್ದುಪಡಿ ಮಸೂದೆಯನ್ನು ಮಂಡಿಸಿತು.
- ಈ ಮಸೂದೆ ಲೋಕಸಭೆಯಲ್ಲಿ 22–12–1992 ರಂದು ಮತ್ತು ರಾಜ್ಯಸಭೆಯಲ್ಲಿ 23–12–1992 ರಂದು ಅಂಗೀಕಾರ ಪಡೆಯಿತು.
- ನಂತರ 17 ರಾಜ್ಯ ವಿಧಾನ ಸಭೆಗಳ ಒಪ್ಪಿಗೆ ಪಡೆದು ನಂತರ 20–01–1993 ರಂದು ರಾಷ್ಟ್ರಪತಿಗಳಿಂದ ( ಡಾ॥ ಶಂಕರ್ ದಯಾಳ ಶರ್ಮಾ) ಅಂಕಿತಗೊಂಡಿತು.
- 73ನೇ ತಿದ್ದುಪಡಿ ಕಾಯ್ದೆ 24–ಏಪ್ರಿಲ್ 1993ರಂದು ದೇಶದಾದ್ಯಂತ ಜಾರಿಗೆ ಬಂದಿತು.
- 73 ನೇ ತಿದ್ದುಪಡಿಯ ಮೂಲಕ ಸಂವಿಧಾನಕ್ಕೆ '9 ನೇ ಬಾಗವನ್ನು' ಸೇರಿಸಲಾಗಿದೆ. ಇದಕ್ಕೆ 'ದಿ ಪಂಚಾಯತ್' ಎಂಬ ಶೀರ್ಷಿಕೆ

downloaded from: www.kpscvaani.com 

ನೀಡಲಾಗಿದೆ.

- 73 ನೇ ತಿದ್ದುಪಡಿ ಕಾಯ್ದೆಯು ಸಂವಿದಾನಕ್ಕೆ '11 ನೇ ಅನುಸೂಚಿಯನ್ನು' ಸೇರಿಸಿತು
- 11ನೇ ಅನುಸೂಚಿಯು ಪಂಚಾಯತ್ ಸಂಸ್ಥೆಗಳು ನಿರ್ವಹಿಸುವ '29 ವಿಷಯಗಳನ್ನು' ಒಳಗೊಂಡಿದೆ.
- ಸಂವಿದಾನದ 9 ನೇ ಭಾಗದಲ್ಲಿ '243 ರಿಂದ 243(0)' ವರೆಗಿನ ವಿದಿಗಳನ್ನು ಕಂಡು ಬರುತ್ತವೆ.
- ಈ ಕಾಯ್ದೆಯ 8 ರಾಜ್ಯಗಳ ಬುಡಕಟ್ಟು ಪ್ರದೇಶಗಳಿಗೆ ವಿಸ್ತರಿಸಿದ್ದು: 24–12–1996.
- ಈ ಕಾಯ್ದೆಯು 'ದೆಹಲಿ, ನಾಗಲ್ಯಾಂಡ್, ಮಿಜೋರಾಂ, ಮೇಘಾಲಯ' ಗಳನ್ನು ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳಲ್ಲಿ ಜಾರಿಯಲ್ಲಿದೆ.
- ಈ ಕಾಯ್ದೆಯು ದೇಶದ ಎಲ್ಲಾ ರಾಜ್ಯಗಳ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸಿದೆ. ( ಕೇಂದ್ರ ಸರಕಾರ 110 ನೇ ತಿದ್ದುಪಡಿ ಮೂಲಕ 27–08–2007 ರಿಂದ ಶೇ 50 ಮೀಸಲಾತಿ ಕಲ್ಪಿಸಿದೆ)
- ಈ ಕಾಯ್ದೆಯು ದೇಶದಾದ್ಯಂತ 3 ಹಂತದ ಏಕರೂಪದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸಿದೆ.
- 73 ನೇ ತಿದ್ದುಪಡಿ ಕಾಯ್ದೆಯು ಸ್ಥಳೀಯ ಸಂಸ್ಥೆಗಳ ಅಭ್ಯರ್ಥಿಗಳಿಗೆ ಕನಿಷ್ಟ 21 ವರ್ಷ ವಯಸ್ಸನ್ನು ನಿಗಧಿ ಮಾಡಿದೆ.

## ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ–1993

1) 73ನೇ ಸಂವಿಧಾನಾತ್ಮಕ ತಿದ್ದುಪಡಿ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿಗೊಳಿಸಲು ಎಂ.ವೀರಪ್ಪ ಮೊಯ್ಲಿ ಅವರ ಸರಕಾರ 26–04–1993 ರಂದು ವಿಧಾನ ಮಂಡಲದಲ್ಲಿ ಮಂಡನೆಯಾಗಿ ಅನುಮೋದನೆಗೊಂಡಿತು.
2) ನಂತರ 30–04–1993 ರಂದು ರಾಜ್ಯಪಾಲರಿಂದ (ಖುರ್ಷಿದ್ ಅಲಂಖಾನ) ಅಂಕಿತ ಪಡೆಯಿತು.
3) ಮೇ–10–1993 ರಿಂದ ರಾಜ್ಯದಾದ್ಯಂತ ಜಾರಿಗೆ ಬಂದಿತು.
4) ಈ ಕಾಯ್ದೆ ಜಾರಿಯಾದಾಗ ಪಂಚಾಯತ್ ರಾಜ್ ಸಚಿವರಾಗಿದ್ದವರು: ಎಂ.ವಾಯ್.ಘೋರ್ಪಡೆ
5) ಈ ಅಧಿನಿಯಮ ಕರ್ನಾಟಕದಲ್ಲಿ 3 ಹಂತದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸಿದೆ.
6) ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ ಆರಂಭದಲ್ಲಿ 18–ಅಧ್ಯಾಯಗಳು, 4–ಅನುಸೂಚಿಗಳು ಮತ್ತು 321 ಪ್ರಕರಣಗಳನ್ನು ಒಳಗೊಂಡಿದೆ.
7) ಪ್ರಸ್ತುತ ಅಂದರೆ 2015ರ (2ನೇ ತಿದ್ದುಪಡಿ) ಗ್ರಾಮಸ್ವರಾಜ್ ಅಧಿನಿಯಮದಂತೆ ಒಟ್ಟು 19–ಅಧ್ಯಾಯಗಳು 4–ಅನುಸೂಚಿಗಳು 321+66=387 ಪ್ರಕರಣಗಳನ್ನು ಒಳಗೊಂಡಿದೆ.
8) ಅತೀಹೆಚ್ಚು ಪ್ರಕರಣಗಳನ್ನು ಒಳಗೊಂಡ ಅಧ್ಯಾಯ:– 18ನೇ ಅಧ್ಯಾಯ (71 ಪ್ರಕರಣಗಳು).

## ಬೇಲೂರು ಘೋಷಣೆ–2004

23–01–2004 ರಂದು ಧಾರವಾಡ ಜಿಲ್ಲೆಯ ಬೇಲೂರು ಗ್ರಾಮದಲ್ಲಿ ಎಸ್.ಎಂ.ಕೃಷ್ಣರ ರಾಜ್ಯ ಸರಕಾರ ಪಂಚಾಯತ್‌ರಾಜ್ ಇಲಾಖೆಯ ಬೃಹತ್ ಸಮಾವೇಶ ನಡೆಸಿತು ಈ ಸಮಾವೇಶದಲ್ಲಿ ಪಂಚಾಯತ್ ರಾಜ್ ಸಚಿವರಾಗಿದ್ದ ಎಂ.ವಾಯ್.ಘೋರ್ಪಡೆ ಯವರು ಒಂದು ಘೋಷಣೆಯನ್ನು ಹೊರಡಿಸಿದರು. ಇದನ್ನೇ ಬೇಲೂರು ಘೋಷಣೆ ಎನ್ನುವರು.

### ಬೇಲೂರು ಘೋಷಣೆಯ ಪ್ರಮುಖ ಅಂಶಗಳು:–

1) ಪಂಚಾಯತಿಗಳು ಜಾರಿಗೊಳಿಸುವ ಎಲ್ಲಾ ಕಾಮಗಾರಿಗಳು ಟೆಂಡರ್ ಮೂಲಕ ಜಾರಿಯಾಗಬೇಕು.
2) ಪಂಚಾಯತಿಗಳಿಗೆ ಸರಕಾರದಿಂದ ಬಿಡುಗಡೆಯಾಗುವ ಹಣವು ರಾಷ್ಟ್ರೀಕೃತ ಬ್ಯಾಂಕುಗಳಿಂದ ಬಿಡುಗಡೆಯಾಗಬೇಕು.
3) ವಾರ್ಡಸಭೆ ಮತ್ತು ಗ್ರಾಮಸಭೆಗಳಿಗೆ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು.
4) ಪ್ರಾಥಮಿಕ ಶಾಲೆಗಳು, ಗ್ರಾಮೀಣ ಗ್ರಂಥಾಲಯಗಳು, ಅಂಗನವಾಡಿಗಳು, ವಯಸ್ಕರ ಶಿಕ್ಷಣ ಕೇಂದ್ರಗಳು, ನ್ಯಾಯಬೆಲೆ ಅಂಗಡಿಗಳನ್ನು, ಗ್ರಾಮ ಪಂಚಾಯತಿಗೆ ಒಪ್ಪಿಸುವುದು.
5) ಪ್ರತಿ ಜಿಲ್ಲೆಯಲ್ಲಿ ಪಂಚಾಯತಿ ಒಂಬಡ್ಸಮನ್ ಅಸ್ತಿತ್ವಕ್ಕೆ ತರುವುದು.

## S.G.ನಂಜಯ್ಯ ಮಠ ಸಮಿತಿ–2014

ಈ ಸಮಿತಿಯನ್ನು ಗ್ರಾಮ ಪಂಚಾಯತಿ ಪುನರ್ ವಿಂಗಡಣಾ ಮತ್ತ ಸರಹದ್ದು ನಿರ್ಧಾರಣ ಸಮಿತಿ ಎಂದು ಕರೆಯಲಾಗಿದೆ.

1) ನೇಮಕ–01–03–2014 2) ವರದಿ ಸಲ್ಲಿಕೆ–28–10–2014

**ಈ ಸಮಿತಿಯ ಪ್ರಮುಖ ಶಿಫಾರಸ್ಸುಗಳು**

- ರಾಜ್ಯದಲ್ಲಿ ಹೊಸದಾಗಿ 439 ಗ್ರಾಮ ಪಂಚಾಯತಿಗಳನ್ನು ರಚಿಸುವುದು
- 50 ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳಾಗಿ ಮೇಲ್ದರ್ಜೆಗೇರಿಸುವುದು.

## ಕರ್ನಾಟಕ ಪಂಚಾಯತ್‌ರಾಜ್ (ಮೊದಲನೆ ತಿದ್ದುಪಡಿ) ಅಧಿನಿಯಮ–2015

- ಈ ತಿದ್ದುಪಡಿಯು 29–04–2015ರಂದು ರಾಜ್ಯಪಾಲರಿಂದ ಅಂಕಿತ ಪಡೆಯಿತು.
- 30–04–2015 ಕರ್ನಾಟಕ ರಾಜ್ಯ ಪತ್ರದ ವಿಶೇಷಸಂಚಿಕೆ 382ರಲ್ಲಿ ಪ್ರಕಟವಾಯಿತು.

### ಮೂಲ ಅಧಿನಿಯಮಕ್ಕೆ ಮಾಡಲಾದ ತಿದ್ದುಪಡಿಗಳು:

1. ಪ್ರಕರಣ 44 ಕ್ಕೆ ತಿದ್ದುಪಡಿ:– ಮಹಿಳೆಯರಿಗೆ ಶೇ 50 ರಷ್ಟು ಮೀಸಲಾತಿ.
2. ಪ್ರಕರಣ 9 ಕ್ಕೆ ತಿದ್ದುಪಡಿ :– ಮತದಾನ ಮಾಡುವುದು ಪ್ರತಿಯೊಬ್ಬ ಮತದಾರನ ಕರ್ತವ್ಯ ಮತ್ತು ಕಡ್ಡಾಯಗೊಳಿಸಲಾಗಿದೆ.
3. ಪ್ರಕರಣ 44ಕ್ಕೆ ತಿದ್ದುಪಡಿ;– ಗ್ರಾಮ ಪಂಚಾಯಿತಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳಲ್ಲಿ ಮಹಿಳೆಯರಿಗೆ ಶೇ 50 ಸ್ಥಾನ ಮೀಸಲಿಡಲಾಯಿತು.
4. ಪ್ರಕರಣ 46ಕ್ಕೆ ತಿದ್ದುಪಡಿ:– ಗ್ರಾ.ಪಂ.ಅಧ್ಯಕ್ಷ–ಉಪಾಧ್ಯಕ್ಷ ಹುದ್ದೆಯ ಅವಧಿಯನ್ನು 30 ತಿಂಗಳಿನಿಂದ 5 ವರ್ಷಕ್ಕೆ ನಿಗಧಿಪಡಿಸಲಾಗಿದೆ.
5. ಪ್ರಕರಣ 123 ಕ್ಕೆ ತಿದ್ದುಪಡಿ :– ತಾ.ಪಂ ಗಳಲ್ಲಿ ಮಹಿಳೆಯರಿಗೆ ಶೇ 50 ರಷ್ಟು ಮೀಸಲಾತಿ ನಿಗದಿಮಾಡಲಾಗಿದೆ.

downloaded from: www.kpscvaani.com

6. ಪ್ರಕರಣ 125 ಕ್ಕೆ ತಿದ್ದುಪಡಿ :– ತಾ.ಪಂ ಚುನಾವಣೆ ಮತದಾನ ಮಾಡುವುದು ಕರ್ತವ್ಯ ಮತ್ತು ಕಡ್ಡಾಯ.(ಓಔಖಿಂಜಾರಿಯಾಯಿತು)
7. ಪ್ರಕರಣ 139 ಕ್ಕೆ ತಿದ್ದುಪಡಿ :– ತಾ.ಪಂ ಅಧ್ಯಕ್ಷ–ಉಪಾಧ್ಯಕ್ಷ ಹುದ್ದೆಯಲ್ಲಿ ಮಹಿಳೆಯರಿಗೆ ಶೇ 50 ಮೀಸಲಾತಿ ಮತ್ತು ಹುದ್ದೆಯ ಅವಧಿ 5 ವರ್ಷವಾಗಿರಬೇಕು
8. ಪ್ರಕರಣ 162 ಕ್ಕೆ ತಿದ್ದುಪಡಿ :– ಜಿ.ಪಂ ಯಲ್ಲಿ ಶೇ 50 ರಷ್ಟು ಮಹಿಲೆಯರಿಗೆ ಮೀಸಲಾತಿ ನಿಡುವುದು.
9. ಪ್ರಕರಣ 164 ಕ್ಕೆ ತಿದ್ದುಪಡಿ :– ಜಿ.ಪಂ ಚುನಾವಣೆಗಳಲ್ಲಿ ಮತದಾನ ಮಾಡುವುದು ಕರ್ತವ್ಯ ಮತ್ತು ಕಡ್ಡಾಯ. (NOTA ಜಾರಿಯಾಯಿತು)
10. ಪ್ರಕರಣ 177 ಕ್ಕೆ ತಿದ್ದುಪಡಿ :– ಜಿ.ಪಂ.ಅಧ್ಯಕ್ಷ–ಉಪಾಧ್ಯಕ್ಷರ ಹುದ್ದೆಯಲ್ಲಿ ಮಹಿಳೆಯರಿಗೆ ಶೇ–50 ರಷ್ಟು ಮೀಸಲಾತಿ ಮತ್ತು ಹುದ್ದೆಯ ಅವಧಿಯು 5 ವರ್ಷಕ್ಕೆ ನಿಗಧಿ ಪಡಿಸಲಾಗಿದೆ.

## ರಮೇಶಕುಮಾರ ಸಮಿತಿ –2015

ಅಧ್ಯಕ್ಷರು: ರಮೇಶಕುಮಾರ, ಸದಸ್ಯ ಕಾರ್ಯದರ್ಶಿ: ದಕ್ಷಿಣಾಮೂರ್ತಿ ಕೋರ್ ಕಮಿಟಿ ಅಧ್ಯಕ್ಷರು: ಸಿ.ನಾರಾಯಣ ಸ್ವಾಮಿ, ಉಪಸಮಿತಿ: ಎಚ್. ಕೆ ಪಾಟೀಲ್

- ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ) ಅಧಿನಿಯಮ 2015 ಕ್ಕೆ 16–12–2015 ರಂದು ರಾಜ್ಯ ಪಾಲರಿಂಧ ಅಂಕಿತ ಪಡೆದಿದೆ
- 31–12–2015 ರಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿತಕೆಯಲ್ಲಿ ಪ್ರಕಟವಾಗಿದೆ
- ನಂತರ ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ( 2ನೇ ತಿದ್ದುಪಡಿ) ಅಧಿನಿಯಮ 2015 ಎಂಬ ಶೀರ್ಷಿಕೆಯಡಿ ಜಾರಿಗೆ ಬಂದಿದೆ.

### ಗ್ರಾಮ ಸ್ವರಾಜ್ ಕಾಯ್ದೆಯ ಪ್ರಮುಖ ಅಂಶಗಳು:–

1) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಗೆ ಪುನರ್ ನಾಮಕರಣ – ಪ್ರಕರಣ 1ಕ್ಕೆ.
2) ಪೀಠಿಕೆ ಅಥವಾ ಶಿರ್ಷಿಕೆ–ಪ್ರಕರಣ–2ಕ್ಕೆ
3) ಪಂಚಾಯತಿ ನೀತಿ ನಿರ್ದೇಶಕ ತತ್ವಗಳ ಹೊಸದಾಗಿ ಸೇರ್ಪಡೆ–ಅಧ್ಯಾಯ–1ಎ. ಪ್ರ.2.ಎ
4) ಪಂಚಾಯತಿ ಸದಸ್ಯರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು– ಅಧ್ಯಾಯ–4ಎ. ಪ್ರ–110.ಎ
5) ನಿಯಮಗಳು ವಿನಿಯಮಗಳು ಮತ್ತು ಉಪವಿಧಿಗಳು ಹೊಸ ಸೇರ್ಪಡೆ– ಅಧ್ಯಾಯ–19
6) ಗ್ರಾ.ಪಂ.ಸಿಬ್ಬಂದಿ ಬದಲಿಗೆ ಕರ್ನಾಟಕ ಆಡಳಿತಾತ್ಮಕ ಸೇವೆ– ಅಧ್ಯಾಯ 5ಕ್ಕೆ ತಿದ್ದುಪಡಿ
7) ಸದಸ್ಯರಿಂದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆ–ಪ್ರ.43.ಬಿ ಸೇರ್ಪಡೆ.
8) ಗ್ರಾಮ ಸ್ವರಾಜನ್ ಘಟಕಗಳು–ಪ್ರ.3ಕ್ಕೆ ತಿದ್ದುಪಡಿ
9) 3 ಸ್ಥಾಯಿ ಸಮಿತಿಯ ಸ್ವರೂಪಗಳ ಬದಲಾವಣೆ– ಪ್ರ.61ಕ್ಕೆ ತಿದ್ದುಪಡಿ.
10) ಜಿ.ಪಂ.ಅಧ್ಯಕ್ಷರಿಗೆ ರಾಜ್ಯ ಸಚಿವರ ಸ್ಥಾನಮಾನ – ಪ್ರ.178ಕ್ಕೆ ತಿದ್ದುಪಡಿ.
11) ಪಂಚಾಯತ್ ರಾಜ್ ಆಯುಕ್ತರ ಕಾರ್ಯಾಲಯದ ಸ್ಥಾಪನೆ– ಪ್ರ.232–ಎ.
12) ಕರ್ನಾಟಕ ಪಂಚಾಯತ್‌ರಾಜ್ ಆಡಳಿತಾತ್ಮಕ ಸೇವೆ ಸ್ಥಾಪನೆ– ಪ್ರ.232.ಬಿ.
13) ಸಾಮಾಜಿಕ ಹೊಣೆಗಾರಿಕೆಗಳಿಗೆ ಶಾಸನಾತ್ಮಕ ಸ್ಪಂದನೆ– ಪ್ರ.58ಬಿ ಯಿಂದ 58 ಈ ವರೆಗೆ ಸೇರ್ಪಡೆ

    ಎ. ಅಸ್ಪೃಶ್ಯತೆ ನಿಯಂತ್ರಣ ಕ್ರಮಗಳು.

    ಬಿ. ಮಾನವನ ಘನತೆಗೆ ಕುಂದುಂಟಾಗುವ ಚಟುವಟಿಕೆಗಳನ್ನು ತಡೆಯುವುದು ಮತ್ತು ಆತ್ಮಹತ್ಯೆ ತಡೆಗೆ ವಿಶ್ವಾಸ ಕುದುರಿಸುವುದು.

    ಸಿ. ಮಹಿಳೆಯರ ಲೈಂಗಿಕ ಕಿರುಕುಳ ತಡೆಗೆ ಕ್ರಮಗಳು.
14) ಕುಂದು ಕೊರತೆ ನಿವಾರಣ ಪ್ರಾಧಿಕಾರ ಸ್ಥಾಪನೆ.– ಪ್ರಕರಣ–296ಕ್ಕೆ ತಿದ್ದುಪಡಿ 296–ಎ–296–ಬಿ.
15) ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ– ಪ್ರಕರಣ–310–ಬಿ.ಸೇರ್ಪಡೆ.
    * ಭ್ರಷ್ಟಾಚಾರ ನಿಷೇಧ ಕ್ರಮಗಳು
    * ಸಹಕಾರಿ ಸಂಘಗಳ ಸ್ಥಾಪನೆಗೆ ಉತ್ತೇಜನ
    * ಕೆಳಹಂತದಿಂದ ಯೋಜನೆಗಳ ಮೇಲ್ಮುಕ ಪಯಣ
    * ಸಾಮಾಜಿಕ ಸಂರಕ್ಷಣೆಯ ಕ್ರಮಗಳು
    * ಸಾಮಾಜಿಕ ಸೇವೆ ಒದಗಿಸುವುದು

## ರಾಷ್ಟ್ರೀಯ ಪಂಚಾಯತ್‌ರಾಜ್ ದಿನ – ಏಪ್ರಿಲ್ 24

1) 73ನೇ ತಿದ್ದುಪಡಿ ಕಾಯ್ದೆ ಜಾರಿಗೊಂಡ ಏಪ್ರೀಲ್–24ರ ದಿನವನ್ನು 2010ರಿಂದ ಪ್ರತಿವರ್ಷ ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಎಂದು ಆಚರಿಸಲಾಗುತ್ತದೆ.
2) 2015ರ ಪಂಚಾಯತ್ ರಾಜ್ ದಿವಸ:– 'ಸರಪಂಚ್ ಪತಿಗಳ ಆಡಳಿತ ವ್ಯವಸ್ಥೆ' ಅಂತ್ಯವಾಗಬೇಕು ಎಂದು ನರೇಂದ್ರ ಮೊದಿ ಹೇಳಿದ್ದಾರೆ.
3) 2016ರ ಪಂಚಾಯತ್ ರಾಜ್ ದಿವಸ:– 2016ರಲ್ಲಿ ಪಂಚಾಯತ್ ರಾಜ್ ದಿನವನ್ನು ಏಪ್ರಿಲ್ 14ರಿಂದ ಏಪ್ರಿಲ್ 24ರವರೆಗೆ ಡಾ.ಬಿ.ಆರ್.ಅಂಬೇಡ್ಕರರ 125ನೇ ಜನ್ಮದಿನಾಚಾರಣೆಯ ಅಂಗವಾಗಿ 'ಗ್ರಾಮ ಉದಯಸೇ ಭಾರತ ಉದಯ' ಎಂಬ ಅಭಿಯಾನದ ಮೂಲಕ ಆಚರಿಸಲಾಯಿತು.

### ಈ ಅಭಿಯಾನ ಈ ಕೆಳಗಿನ ಹಂತಗಳಲ್ಲಿ ನಡೆಯಿತು

| ಕ್ರ.ಸಂ | ದಿನಾಂಕ | ಕಾರ್ಯಕ್ರಮಗಳು |
|---|---|---|
| 1. | ಏಪ್ರಿಲ್–14 ರಿಂದ 16 | ಅಂಬೇಡ್ಕರರ ವಿಚಾರಗಳನ್ನು ಪಂಚಾಯತ್‌ಗಳಲ್ಲಿನ ಮತ್ತು ಸಮಾಜ ಕಲ್ಯಾಣ ಇಲಾಖೆಗಳಲ್ಲಿನ ಸೌಲಭ್ಯಗಳ ಕುರಿತು ಜನರಿಗೆ ತಿಳಿಸುವುದು. |
| 2. | ಏಪ್ರಿಲ್–17 ರಿಂದ 20 | ಕಿಸಾನ್ (ರೈತರ) ಗ್ರಾಮಸಭೆ ಗಳನ್ನು ನಡೆಸುವುದು. |
| 3. | ಏಪ್ರಿಲ್–21 | ನಮ್ಮ ಗ್ರಾಮ ನಮ್ಮ ಯೋಜನೆ ಕುರಿತು ವಾರ್ಡ ಸಭೆಗಳನ್ನು ನಡೆಸುವುದು. |
| 4. | ಏಪ್ರಿಲ್ 24ರಂದು | ಗ್ರಾಮ ಪಂಚಾಯತಿಗಳ ಕೇಂದ್ರಸ್ಥಾನದಲ್ಲಿ ಗ್ರಾಮಸಭೆಗಳನ್ನು ನಡೆಸುವುದು ಮತ್ತು ಪಂಚಾಯತ್ ರಾಜ್ ದಿನಾಚಾರಣೆ |

downloaded from: www.kpscvaani.com


1) ಮುಂದಿನ 5 ವರ್ಷಕ್ಕಾಗಿ 'ಸಮಗ್ರ ಯೋಜನೆಯನ್ನು' ಸಿದ್ದಪಡಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ.
2) 2016ರ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚಾರಣೆಯು ಮೊದಲಬಾರಿಗೆ ದೆಹಲಿಯಿಂದ ಹೊರಗೆ ಅಂದರೆ ಜಾರ್ಖಂಡ ರಾಜ್ಯದ ಬಿರ್ಸಾಮುಂಡಾರ ಜನ್ಮಸ್ಥಳವಾದ ಹಾಗೂ ಛೋಟಾ ನಾಗಪುರ್ ಎಂದೇ ಪ್ರಸಿದ್ಧವಾದ ಜೇಮಶೇಡ್ ಪುರದಲ್ಲಿ ನಡೆಯಿತು.

## 74ನೇ ಸಂವಿಧಾನ ತಿದ್ದುಪಡಿ

1) 74ನೇ ಸಂವಿಧಾನ ತಿದ್ದುಪಡಿಯು 'ಲೋಕಸಭೆಯಲ್ಲಿ' 22-12-1992 ರಂದು ಮತ್ತು ರಾಜ್ಯಸಭೆಯಲ್ಲಿ '23-12-1992' ಅಂಗಿಕಾರ ಪಡೆಯಿತು.
2) '20-04-1993' ರಂದು ರಾಷ್ಟಪತಿಗಳಿಂದ ಅಂಕಿತಗೊಂಡಿತು.
3) ನಂತರ 01-06-1993 ರಿಂದ ದೇಶದಲ್ಲಿ ಜಾರಿಗೆ ಬಂದಿದೆ.
4) 74ನೇ ತಿದ್ದುಪಡಿಯನ್ವಯ ಸಂವಿಧಾನಕ್ಕೆ 9-A ಭಾಗವನ್ನು ಸೇರಿಸಲಾಗಿದೆ.
5) 9-A ಭಾಗದಲ್ಲಿ ಪೌರಸಂಸ್ಥೆಗಳನ್ನು ವಿವರಿಸುವ 243 P ಯಿಂದ 243 ZG ವರೆಗಿನ ವಿಧಿಗಳು ಕಂಡುಬರುತ್ತವೆ.
6) ಮುನ್ಸಿಪಾಲಿಟಿಗಳಿಗೆ ಸಂಬಂಧಿಸಿದ 18 ವಿಷಯಗಳನ್ನು ಸಂವಿಧಾನದ 12ನೇ ಅನುಸೂಚಿಯು ಒಳಗೊಂಡಿದೆ.
7) ಈ ಕಾಯ್ದೆಯು 3 ಹಂತದ ಮುನ್ಸಿಪಾಲಿಟಿಗಳನ್ನು ಜಾರಿಗೊಳಿಸಿದೆ
   1) ಪಟ್ಟಣ ಪಂಚಾಯತಿ - ಗ್ರಾಮೀಣ ದಿಂದ ನಗರಕ್ಕೆ ಪರಿವರ್ತಿತ ಪ್ರದೇಶ
   2) ಮುನ್ಸಿಪಾಲ್ ಕೌನ್ಸಿಲ್ - ಚಿಕ್ಕನಗರ ಪ್ರದೇಶ
   3) ಮುನ್ಸಿಪಾಲ್ ಕಾರ್ಪೋರೇಶನ್ - ದೊಡ್ಡ ನಗರ ಪ್ರದೇಶ

### 74 ನೇ ಸಂವಿಧಾನ ತಿದ್ದುಪಡಿ ಪ್ರಮುಖ ವಿಧಿಗಳು

| ವಿಧಿಗಳು | ವಿಷಯಗಳು |
|---|---|
| 243 P | ವ್ಯಾಖ್ಯೆಗಳು |
| 243 Q | ಪೌರ ಸಭೆಗಳ ರಚನೆ |
| 243 R | ಪೌರ ಸಭೆಗಳ ಅಂಗ ರಚನೆ |
| 243 S | ಪೌರ ಸಭೆಗಳ ವಿಭಾಗ ಸಮಿತಿಗಳು ಇತ್ಯಾದಿಗಳ ರಚನೆ ಹಾಗೂ ಅಂಗ ರಚನೆ |
| 243 T | ಸ್ಥಾನಗಳ ಮೀಸಲಾತಿ |
| 243 U | ಪೌರ ಸಭೆಗಳ ಅವಧಿ |
| 243 V | ಸದಸ್ಯರ ಅನರ್ಹತೆ |
| 243 W | ಪೌರ ಸಭೆಗಳ ಅಧಿಕಾರಗಳು ಮತ್ತು ಜವಾಬ್ದಾರಿಗಳು |
| 243 X | ತೆರಿಗೆಯನ್ನು ವಿಧಿಸುವ ಪೌರ ಸಭೆಗಳ ಅಧಿಕಾರಗಳು |
| 243 Y | ಹಣಕಾಸು ಆಯೋಗ |
| 243 Z | ಪೌರ ಸಭೆಗಳ ಲೆಕ್ಕ ಪತ್ರಗಳ ಪರಿಶೋಧನೆ |
| 243 ZA | ಪೌರ ಸಭೆಗಳ ಚುನಾವಣೆ |
| 243 ZB | ಒಕ್ಕೂಟ ರಾಜ್ಯಗಳಿಗೆ ಅನ್ವಯ |
| 243 ZC | ಕೆಲವು ಪ್ರದೇಶಗಳಿಗೆ ಅನ್ವಯವಾಗದಿರುವುದು |
| 243 ZD | ಜಿಲ್ಲಾ ಯೋಜನಾ ಸಮಿತಿ |
| 243 ZE | ಮಹಾನಗರ ಯೋಜನಾ ಸಮಿತಿ |
| 243 ZF | ಜಾರಿಯಲ್ಲಿರುವ ಕಾನೂನುಗಳನ್ನು ಮತ್ತು ಅಸ್ತಿತ್ವದಲ್ಲಿರುವ ಪೌರ ಸಭೆಗಳನ್ನು ಮುಂದುವರಿಸುವುದು. |
| 243 ZG | ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯಗಳ ಮಧ್ಯಪ್ರವೇಶ ನಿಷೇಧ |

## ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳು

ನಮ್ಮ ರಾಜ್ಯದಲ್ಲಿ ಕರ್ನಾಟಕ ಮುನ್ಸಿಪಾಲ್ ಕಾಯ್ದೆ-1964 ಮತ್ತು ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಶನ್ ಕಾಯ್ದೆ-1976 ಇವುಗಳಿಗೆ 74ನೇ ಕಾಯ್ದೆಯನ್ವಯ ಅಗತ್ಯ ಬದಲಾವಣೆಗಳನ್ನು ತಂದು 3ಹಂತದ ಸ್ಥಳೀಯ ನಗರ ಸಂಸ್ಥೆಗಳನ್ನು ಜಾರಿಗೊಳಿಸಲಾಗಿದೆ.

### 1) ಮಹಾನಗರ ಪಾಲಿಕೆ ಅಥವಾ ನಗರ ಪಾಲಿಕೆಗಳು:

3 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ನಗರಗಳೇ ಮಹಾನಗರ ಪಾಲಿಕೆಗಳು.

* ಇದರ ಸದಸ್ಯರು: ಕಾರ್ಪೋರೇಟರ್‌ಗಳು
* ಅಧಿಕಾರಾವಧಿ: 5 ವರ್ಷ
* ಪ್ರತಿ ನಗರ ಪಾಲಿಕೆಯು 3 ಭಾಗಗಳಿಂದ ಕೂಡಿರುತ್ತದೆ.

1. ಕೌನ್ಸಿಲ್-ಇದರ ಅಧ್ಯಕ್ಷ - ಮೇಯರ್
2. ಸ್ಥಾಯಿ ಸಮಿತಿಗಳು:- 4 ಸ್ಥಾಯಿ ಸಮಿತಿಗಳಿರುತ್ತವೆ. ಸದಸ್ಯರ ಅವಧಿ 1 ವರ್ಷ.
3. ಆಯುಕ್ತರು:- IAS ಅಧಿಕಾರಿಯಾಗಿರುತ್ತಾರೆ.

### 2) ನಗರ ಸಭೆ / ಪುರಸಭೆ

50.000 ರಿಂದ 3.00.000 ಜನಸಂಖ್ಯೆಯಿರುವ ಪ್ರದೇಶಗಳು ಇದು ಸಹ ಈ ಕೆಳಗಿನ 3 ಭಾಗಗಳಿಂದ ಕೂಡಿರುತ್ತದೆ.

1. ಕೌನ್ಸಿಲ್ (ಅಧ್ಯಕ್ಷ)
2. ನಾಲ್ಕು ಸ್ಥಾಯಿ ಸಮಿತಿಗಳು
3. ಆಯುಕ್ತರು

### 3) ಪಟ್ಟಣ ಪಂಚಾಯತಿ:

20,000 ರಿಂದ 50,000 ಜನಸಂಖ್ಯೆಯಿರುವ ಪ್ರದೇಶಗಳು. ಇದು ಈ ಕೆಳಗಿನ 3 ಅಂಗಗಳಿಂದ ಕೂಡಿದೆ.

1. ಕೌನ್ಸಿಲ್ (ಅಧ್ಯಕ್ಷ)
2. 4ಸ್ಥಾಯಿ ಸಮಿತಿಗಳು
3. ಮುಖ್ಯಾಧಿಕಾರಿ

### 4) ಅಧಿಸೂಚಿತ ಪ್ರದೇಶದ ಸಮಿತಿ:

ಈ ಕೆಳಗಿನ 2 ವಿಧವಾದ ಪ್ರದೇಶಗಳ ಆಡಳಿತ ನಿರ್ವಹಣೆಗಾಗಿ ಅಧಿಸೂಚಿತ ಪ್ರದೇಶಗಳನ್ನು ರಚಿಸಲಾಗಿರುತ್ತದೆ.

downloaded from: www.kpscvaani.com

1. ಕೈಗಾರೀಕರಣದಿಂದ ಅತೀ ವೇಗವಾಗಿ ಅಭಿವೃದ್ಧಿ ಹೊಂದಿದ ಪ್ರದೇಶಗಳು.
2. ಮುನ್ಸಿಪಾಲಿಟಿ ರಚಿಸಲು ಅಗತ್ಯವಾದ ನಿಬಂಧನೆಗಳನ್ನು ಪೂರೈಸಿದ ಪ್ರದೇಶಗಳು.

* ಈ ಸಮಿತಿ ಮುನ್ಸಿಪಾಲಿಟಿಗಳ ಸಮಾನಾದ ಅಧಿಕಾರವನ್ನು ಹೊಂದಿರುತ್ತವೆ.
* ಈ ಸಮಿತಿಯ ಸದಸ್ಯರೆಲ್ಲರೂ ಸರಕಾರದಿಂದ ನೇಮಕ ಗೊಂಡಿರುತ್ತಾರೆ.
* ಕರ್ನಾಟಕದಲ್ಲಿ ಒಟ್ಟು 5 ಅಧಿಸೂಚಿತ ಪ್ರದೇಶಗಳಿವೆ.

1. ಭೀ.ಗುಡಿ (ಶಹಪುರ)
2. ಗೋಕಾಕ್ ಫಾಲ್ಸ್
3. ಹಟ್ಟಿಗೊಲ್ಡ ಮೈನ್ಸ್
4. ಕುದುರೆಮುಖ
5. ಶಹಾಬಾದ

**5) ಕಂಟೋನ್ಮೆಂಟ್ ಬೋರ್ಡ್ಸ್ [ ದಂಡು ಪ್ರದೇಶ ಮಂಡಳಿ]**

- ಕೇಂದ್ರ ಕಂಟೋನ್ಮೆಂಟ್ ಕಾಯ್ದೆ–1924ರ ಅಡಿಸ್ಥಾಪನೆ.
- ಸೇನಾತುಕುಡಿಗಳು ನೆಲೆಸಿರುವ ಪ್ರದೇಶಗಳನ್ನು ಕಂಟೋನ್ಮೆಂಟ್ ಬೋರ್ಡ್ಸ್ ಎನ್ನುತ್ತಾರೆ.
- ಇವು 'ಕೇಂದ್ರ ರಕ್ಷಣಾ ಸಚಿವಾಲಯದ' ನೇರ ಆಡಳಿತಕ್ಕೆ ಒಳಪಟ್ಟಿರುತ್ತವೆ.
- ಇವು ಚುನಾಯಿತ ಮತ್ತು ನಾಮಕರಣಗೊಂಡ ಸದಸ್ಯರನ್ನು ಒಳಗೊಂಡಿರುತ್ತದೆ.
- ಸದಸ್ಯರ ಅಧಿಕಾರಾವಧಿ –3 ವರ್ಷಗಳು
- ಬ್ರಿಗೇಡಿಯರ್ ಹಂತದ ಸೇನಾಧಿಕಾರಿ ಪದನಿಮಿತ್ಯ ಅಧ್ಯಕ್ಷರಾಗಿ ರುತ್ತಾರೆ.
- ಈ ಬೋರ್ಡುಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ (CEO) ಯನ್ನು ರಾಷ್ಟ್ರಪತಿಗಳು ನೇಮಿಸುತ್ತಾರೆ.

**97ನೇ ಸಂವಿಧಾನ ತಿದ್ದುಪಡಿ–2011 (ಹೆಚ್ಚಿನ ಅಭ್ಯಾಸಕ್ಕಾಗಿ)**

- ಸಹಕಾರಿ ಸಂಘಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಲು ಕೇಂದ್ರದ ಗಿಕಂ ಸರಕಾರ 2011ರಲ್ಲಿ ಸಂವಿಧಾನಕ್ಕೆ 97ನೇ ತಿದ್ದುಪಡಿ ಮಾಡಿತು.
- 97ನೇ ತಿದ್ದುಪಡಿಯ ಮೂಲಕ ಸಂವಿಧಾನಕ್ಕೆ 9-B ಭಾಗವನ್ನು ಸೇರಿಸಲಾಯಿತು.
- 9-B ಭಾಗದಲ್ಲಿ '243.ZH ದಿಂದ 243.ZT' ರವರೆಗಿನ ವಿಧಿಗಳು ಕಂಡುಬರುತ್ತವೆ.
- ಈ ತಿದ್ದುಪಡಿಯು ಸಹಕಾರ ಸಂಘಗಳನ್ನು ಸ್ಥಾಪಿಸುವುದು ಒಂದು ಮೂಲಭೂತ ಹಕ್ಕು. (ಸಂವಿಧಾನದ 19ನೇ ವಿಧಿ) ಎಂದು ಘೋಷಿಸುತ್ತದೆ.
- ಈ ತಿದ್ದುಪಡಿಯು ಒಂದು ಹೊಸ ರಾಜ್ಯ ನೀತಿ ನಿರ್ದೇಶಕ ತತ್ವವನ್ನು (43-Bವಿಧಿ) ಸೃಷ್ಟಿಸಿದೆ.

**ಸಂವಿಧಾನದ ಭಾಗ 9 ರಲ್ಲಿರುವ ವಿಧಿಗಳು**

| ವಿಧಿಗಳು | ವಿಷಯ |
|---|---|
| 243ನೇ ವಿಧಿ– ವ್ಯಾಖ್ಯೆಗಳು | ಈ ವಿಧಿಯು 9ನೇ ಭಾಗದಲ್ಲಿ ಬರುವ ಪ್ರಮುಖ ಪದಗಳನ್ನು ವ್ಯಾಖ್ಯಾನಿಸುತ್ತದೆ. ಉದಾ:–<br>1. ಜಿಲ್ಲೆ – ರಾಜ್ಯದಲ್ಲಿ ಬರುವ ಜಿಲ್ಲೆಯಾಗಿದೆ.<br>2. ಗ್ರಾಮಸಭೆ – ಗ್ರಾಮದ ಮತದಾರರ ಪಟ್ಟಿಯಲ್ಲಿರುವ ವ್ಯಕ್ತಿಗಳ ಸಮೂಹ.<br>3. ಮದ್ಯಂತರ ಮಟ್ಟ – ತಾಲೂಕು ಪಂಚಾಯತಿ [ಜಿ.ಪಂ. ಮತ್ತು ಗ್ರಾ.ಪಂ. ನಡುವಿನ ಮಟ್ಟ]<br>4. ಜನಸಂಖ್ಯೆ – ಕೊನೆಯ ಜನಗಣತಿಯಲ್ಲಿ ಪ್ರಕಟವಾಗಿರುವ ಅಂಕಿ–ಅಂಶ<br>5. ಪಂಚಾಯಿತಿ – 243–ಃ ವಿಧಿಯನ್ವಯ ರಚಿಸಲಾದ ಸ್ವಯಂ ಆಡಳಿತ ಘಟಕ<br>6. ಗ್ರಾಮ – ರಾಜ್ಯಪಾಲರಿಂದ ನಿಗದಿಸಲ್ಪಟ್ಟ ಒಂದು ಭಾಗ |
| 243.A<br>ಗ್ರಾಮ ಸಭೆ:– | 1) ಗ್ರಾಮ ಮಟ್ಟದಲ್ಲಿ ಶಾಸನಬದ್ಧವಾಗಿ ಮತ್ತು ಕಾನೂನು ಬದ್ದವಾಗಿ ಕಾರ್ಯನಿರ್ವಹಿಸುವ ಒಂದು ಸಭೆಯೇ ಗ್ರಾಮಸಭೆ. (ಹಳ್ಳಿಯ ವಿಧಾನಸಭೆ) |
| 243<br>ಪಂಚಾಯತಿಗಳ ರಚನೆ | 1. ಗ್ರಾಮ ಮಟ್ಟದಲ್ಲಿ – GP ಗ್ರಾಮ ಪಂಚಾಯತಿ<br>2. ಮಧ್ಯಂತರ ಮಟ್ಟದಲ್ಲಿ – TP ತಾಲೂಕು ಪಂಚಾಯತಿ<br>3. ಜಿಲ್ಲಾ ಮಟ್ಟದಲ್ಲಿ – ZP ಜಿಲ್ಲಾ ಪಂಚಾಯತಿ |
| 243. C ಪಂಚಾಯತಿಗಳ ಅಂಗರಚನೆ | ಪ್ರತಿ ಪಂಚಾಯತಿಯ ಚುನಾಯಿತ ಸದಸ್ಯರು ಹಾಗೂ ಸ್ಥಳೀಯ ಮತದಾರರ ಪಟ್ಟಿಯಲ್ಲಿ ಹೆಸರಿ ರುವ ಸಂಸದರು & ಶಾಸಕರಿಂದ ಕೂಡಿರಬೇಕು. |
| 243D ಸ್ಥಾನಗಳ ಮೀಸಲಾತಿ | • SC, ST, OBC ಮತ್ತು ಮಹಿಳೆಯರಿಗೆ (ಶೇ.33) ಮೀಸಲಾತಿ ಕಲ್ಪಿಸಬೇಕು.<br>• ಮಹಿಳೆಯರಿಗೆ ಪ್ರಸ್ತುತ ಶೇ.50ರಷ್ಟು ಮೀಸ ಲಾತಿ ಕಲ್ಪಿಸಲಾಗುತ್ತದೆ (110ನೇ ತಿದ್ದುಪಡಿಯನ್ವಯ).<br>• ಅಧ್ಯಕ್ಷ ಹುದ್ದೆಯ ಮೀಸಲಾತಿಯನ್ನು ಆಯಾ ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಕಲ್ಪಿಸುವುದು. |
| 243E ಪಂಚಾಯತಿಗಳ ಕಾಲಾವಿಧಿ | 3 ಹಂತದ ಪಂಚಾಯತಿಗಳ ಅವಧಿ ಅದರ ಮೊದಲ ಸಭೆಯ ಪ್ರಾರಂಭವಾದ ದಿನಾಂಕದಿಂದ 5 ವರ್ಷಗಳು ಇರುತ್ತದೆ. |
| 243F ಸದಸ್ಯರ ಅನರ್ಹತೆ | • ರಾಜ್ಯ ವಿಧಾನ ಮಂಡಲ ಮಾಡಿದ ಯಾವು ದೇ ಕಾನೂನಿನ್ವಯ ಅನರ್ಹಗೊಳಿಸಬಹುದು.<br>• 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಪಂಚಾಯತ್ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. |

downloaded from: www.kpscvaani.com


| | |
|---|---|
| 243G ಪಂಚಾಯತಿಗಳ ಅಧಿಕಾರ ಮತ್ತು ಜವಾಬ್ದಾರಿಗಳು | • ರಾಜ್ಯ ಸರಕಾರ ವಹಿಸಿದ ಕಾರ್ಯಗಳನ್ನು ನಿರ್ವಹಿಸುವುದು.<br>• ಸಾಮಾಜಿಕ & ಆರ್ಥಿಕ ಅಭಿವೃದ್ಧಿ ಯೋಜನೆ ಗಳನ್ನು ರೂಢಿಸಿ ಅನುಷ್ಠಾನಗೊಳಿಸುವಿಕೆ.<br>• 11ನೇ ಅನುಸೂಚಿಯಲ್ಲಿನ 29 ವಿಷಯಗಳನ್ನು ನಿರ್ವಹಿಸುವುದು. |
| 243H ತೆರಿಗೆ ಮತ್ತು ನಿಧಿ ಸಂಗ್ರಹ | • ಪಂಚಾಯತಿಗಳು ತೆರಿಗೆ ವಿಧಿಸುವ ಮತ್ತು ವಸೂಲಿ ಮಾಡುವ ಅಧಿಕಾರ ಹೊಂದಿವೆ.<br>• ರಾಜ್ಯಸರಕಾರ ವಿಧಿಸಿದ ತೆರಿಗೆ ಶುಲ್ಕಗಳನ್ನು ಪಂಚಾಯತಿಗಳಿಗೆ ಹಸ್ತಾಂತರಿಸುವುದು.<br>• ಪಂಚಾಯತಿಗಳ ಎಲ್ಲಾ ಆದಾಯ ಸಂದಾಯ ಮಾಡಲು ಒಂದು ನಿಧಿ ಸ್ಥಾಪಿಸುವುದು.<br>• ರಾಜ್ಯದ ಸಂಚಿತ ನಿಧಿಯಿಂದ ಪಂಚಾಯತಿಗಳಿಗೆ ಧನಸಹಾಯ ಮಾಡಲು ಕಾನೂನು |
| 243 I ಆರ್ಥಿಕ ಸ್ಥಿತಿಗಳನ್ನು ಸುಧಾರಿಸಲು ಹಣಕಾಸು ಆಯೋಗದ ರಚನೆ | • ಪ್ರತಿ 5 ವರ್ಷಗಳಿಗೊಮ್ಮೆ ರಾಜ್ಯಪಾಲರು ಹಣಕಾಸು ಆಯೋಗದ ರಚನೆ ಮಾಡುತ್ತಾರೆ.<br>• ಪ್ರಸ್ತುತ ಕರ್ನಾಟಕದಲ್ಲಿ 4ನೇ ಹಣಕಾಸು ಆಯೋಗ ಜಾರಿಯಲ್ಲಿದೆ.<br>1ನೇ – 1995–ಜಿ.ತಿಮ್ಮಯ್ಯ<br>2ನೇ–2000 – ಕೆ.ಪಿ.ಸುರೇಂದ್ರನಾಥ<br>3ನೇ – 2006– ಎ.ಪಿ.ಕೊಡ್ಲಿ<br>4ನೇ – 2015– ಸಿ.ಜಿ.ಚಿನ್ನಸ್ವಾಮಿ |
| 243 J ಪಂಚಾಯತಿಯ ಲೆಕ್ಕಪರಿಶೀಲನೆ | ಪಂಚಾಯತಿಗಳ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಪರಿಶೀಲನೆಗಾಗಿ ರಾಜ್ಯ ಶಾಸಕಾಂಗವು ಕಾನೂನನ್ನು ರೂಪಿಸಬಹುದು. |
| 243K ಪಂಚಾಯತಿಯ ಚುನಾವಣೆಗಳು | • ಪಂಚಾಯತಿಗಳ ಚುನಾವಣೆಗಳು ರಾಜ್ಯಪಾಲ ರಿಂದ ನೇಮಕಗೊಂಡ ಚುನವಣಾ ಆಯುಕ್ತ ರನ್ನು ಒಳಗೊಂಡ ರಾಜ್ಯಚುನಾವಣಾ ಆಯೋಗದ ಮೂಲಕ ನಡೆಯುತ್ತವೆ.<br>• ಚುನಾವಣಾ ಆಯುಕ್ತರನ್ನು ಹೈಕೋರ್ಟ ನ್ಯಾಯಮೂರ್ತಿಗಳನ್ನು ಅಧಿಕಾರದಿಂದ ಕೆಳಗಿಳಿಸುವ ಮಾದರಿಯಲ್ಲಿ ತೆಗೆಯಬೇಕು.<br>• ಸಂವಿಧಾನದ 243–ಏ, 243–0 ಮತ್ತು ಪಂಚಾಯತ್ ರಾಜ್ ಅಧಿನಿಯಮದ 308 ನೇ ಪ್ರಕರಣ ಇವು ಪಂಚಾಯತ್ ಚುನಾವಣೆ ಗಳ ಬಗ್ಗೆ ವಿವರಿಸುತ್ತವೆ. |
| 243L ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯ | • ಕೆಲವುರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇ ಶಗಳಿಗೆ ರಾಷ್ಟ್ರಪತಿಗಳು ಕೆಲವು ವಿನಾಯಿತಿ ನೀಡಿ ಪಂಚಾಯತ್ ವ್ಯವಸ್ಥೆಯನ್ನು ಜಾರಿ ಗೊಳಿಸಲು ಆದೇಶಿಸಬಹುದು.<br>• ಕೆಲವು ಈಶಾನ್ಯ ರಾಜ್ಯಗಳಲ್ಲಿ 2010 ರ ಹಿಂದೆ ಪಂಚಾಯತ ಸಂಸ್ಥೆಗಳು ಜಾರಿಯಲ್ಲಿರಲಿಲ್ಲ.<br>• 73ನೇ ತಿದ್ದುಪಡಿ ಕಾಯ್ದೆ ಜಮ್ಮು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲ. |
| 243 M ಕೆಲವು ಪ್ರದೇಶಗಳಿಗೆ ಈ ಕಾಯ್ದೆ ಅನ್ವಯು ವಾಗದಿರುವುದು. | ಸಂವಿಧಾನದ 244ನೇ ವಿಧಿಯಲ್ಲಿ ಸೂಚಿಸಿರುವ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟು ಪ್ರದೇಶಗಳಿಗೆ. ಈ ಕಾಯ್ದೆ ಅನ್ವಯವಾಗುವುದಿಲ್ಲ.<br>ಉದಾ:– ನಾಗಲ್ಯಾಂಡ, ಮೇಘಾಲಯ, ಮಿಜೋರಾಂ, ಜಮ್ಮುಕಾಶ್ಮೀರ, ದೆಹಲಿ ಮತ್ತು ಮಣಿಪುರದ ಗುಡ್ಡೆಗಾಡು ಪ್ರದೇಶ, ಪ.ಬಂಗಾಳದ ಡಾರ್ಜಲಿಂಗ್ ಜಿಲ್ಲೆ. |
| 243 N ಜಾರಿಯಲ್ಲಿರುವ ಕಾನೂನು ಪಂಚಾಯತಿಗಳ ಮುಂದುವರಿಕೆ | • ಪಂಚಾಯತಿಗೆ ಸಂಬಂಧಿಸಿದ ಎಲ್ಲಾ ರಾಜ್ಯದ ಕಾನೂನುಗಳು ಈ ಕಾಯ್ದೆಯು ಆರಂಭವಾಗಿ 1 ವರ್ಷ ಮುಗಿಯುವರೆಗೆ ಜಾರಿಯಲ್ಲಿರತಕ್ಕದ್ದು.<br>• ಅಸ್ತಿತ್ವದಲ್ಲಿರುವ ಪಂಚಾಯತಿಗಳು ಅವಧಿ ಮುಗಿಯುವರೆಗೂ ಮುಂದುವರೆಯಾವುದು. |
| 243 O ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯಗಳ ಮದ್ಯಪ್ರವೇಶ ನಿಷೇಧ | • ಪಂಚಾಯತ್ ಚುನಾವಣ ಕ್ಷೇತ್ರಗಳ ಮೀಸ ಲಾತಿ ಹಂಚಿಕೆಗೆ ಸಂಬಂಧಿಸಿದಂತೆ ನ್ಯಾಯಾಲ ಯಗಳ ಮದ್ಯ ಪ್ರವೇಶ ಮಾಡುವಂತಿಲ್ಲ. |

 downloaded from: www.kpscvaani.com

# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಲ್ಲಿನ ಅಧ್ಯಾಯಗಳು ಮತ್ತು ಅಧ್ಯಾಯಗಳಲ್ಲಿನ ಪ್ರಕರಣಗಳು

| ಅಧ್ಯಾಯಗಳು | ಅಧ್ಯಾಯಗಳ ಶೀರ್ಷಿಕೆ | ಪ್ರಕರಣಗಳು |
|---|---|---|
| 1 | ಪ್ರಾರಂಭ ಮತ್ತು ವ್ಯಾಖ್ಯೆಗಳು | ಪ್ರಕರಣ–01 ರಿಂದ 2 |
| 01.ಎ | ಪಂಚಾಯತ ನೀತಿ ನಿರ್ದೇಶಕ ತತ್ವಗಳು | ಪ್ರಕರಣ–2 ಎ |
| 02 | ಗ್ರಾಮ ಸ್ವರಾಜನ ಘಟಕಗಳು | ಪ್ರಕರಣ–3 ರಿಂದ 3.4 |
| 03 | ಗ್ರಾಮ ಪಂಚಾಯತಿಗಳ ರಚನೆ ಮತ್ತು ಸ್ಥಾಯಿ ಸಮಿತಿಗಳ ರಚನೆ | ಪ್ರಕರಣ–4ರಿಂದ 57 |
| 04 | ಗ್ರಾ.ಪಂ.ಅಧ್ಯಕ್ಷ ಮತ್ತು ಉಪಾಧ್ಯಾಕ್ಷರ ಕಾರ್ಯಗಳು ಕರ್ತವ್ಯಗಳು ಅಧಿಕಾರಗಳು | ಪ್ರಕರಣ–58 ರಿಂದ 110 |
| 04. ಎ | ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು | ಪ್ರಕರಣ–110.ಎ |
| 05 | ಗ್ರಾ.ಪಂ.ಸಿಬ್ಬಂದಿಗಳು ಮತ್ತು ಕರ್ನಾಟಕ ಪಂಚಾಯತ ರಾಜ್ ಆಡಳಿತಾತ್ಮಕ ಸೇವೆ | ಪ್ರಕರಣ–111 ರಿಂದ 113.ಎ |
| 06 | ಚಿಕ್ಕನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶದ ಪರಿವರ್ತನೆ ಮತ್ತು ಸಂಯೋಜನೆ | ಪ್ರಕರಣ–114 ರಿಂದ 118 |
| 07 | ತಾಲೂಕು ಪಂಚಾಯತಿಯ ರಚನೆ | ಪ್ರಕರಣ–119 ರಿಂದ 144 |
| 08 | ತಾ.ಪಂ.ಅಧ್ಯಕ್ಷ–ಉಪಾಧ್ಯಾಕ್ಷರ ಕಾರ್ಯಗಳು ಕರ್ತವ್ಯಗಳು ಅಧಿಕಾರಗಳು ತಾ.ಪಂ. ಪ್ರಕಾರ್ಯಗಳು | ಪ್ರಕರಣ–145 ರಿಂದ 154 |
| 09 | ತಾಲೂಕು ಪಂಚಾಯತಿ ಸಿಬ್ಬಂದಿ | ಪ್ರಕರಣ –155 ರಿಂದ 157 |
| 10 | ಜಿಲ್ಲಾ ಪಂಚಾಯತಿ ರಚನೆ | ಪ್ರಕರಣ–158 ರಿಂದ 183 |
| 11 | ಜಿ.ಪಂ. ಅಧ್ಯಕ್ಷ–ಉಪಾಧ್ಯಕರ ಕಾರ್ಯಗಳು ಕರ್ತವ್ಯಗಳು ಅಧಿಕಾರಗಳು | ಪ್ರಕರಣ–184 ರಿಂದ 195 |
| 12 | ಈಲ್ಲಾ ಪಂಚಾಯತಿ ಸಿಬ್ಬಂದಿ | ಪ್ರಕರಣ–196 ರಿಂದ 198 |
| 13 | ತೆರಿಗೆಗಳು ಮತ್ತು ಫೀಜುಗಳು | ಪ್ರಕರಣ–199 ರಿಂದ 203 |
| 14 | ಸರಕಾರದಿಂದ ಉಪಕರಗಳು ಮತ್ತು ಆರ್ಥಿಕ ನೆರವು | ಪ್ರಕರಣ 204 ರಿಂದ 208 |
| 15 | ಪಂಚಾಯತಿಗಳ ಸ್ವತ್ತುಗಳು ಮತ್ತು ನಿಧಿಗಳು | ಪ್ರಕರಣ–209 ರಿಂದ231 |
| 16 | ಆಯುಕ್ತರ ಕಾರ್ಯಾಲಯದ ಸೃಜನೆ | ಪ್ರಕರಣ –232 ರಿಂದ 240 |
| 17 | ಹಣಕಾಸು ನಿಯಂತ್ರಣ ಲೆಕ್ಕಪರಿಶೀಲನೆ | ಪ್ರಕರಣ– 241 ರಿಂದ 267 |
| 18 | ಸಂಕೀರ್ಣ | ಪ್ರಕರಣ– 311 ರಿಂದ 321 |
| 19 | ನಿಯಮಗಳು ವಿನಿಯಮಗಳು ಮತ್ತು ಉಪ ವಿಧಿಗಳು | ಪ್ರಕರಣ–311 ರಿಂದ 321 |

downloaded from: www.kpscvaani.com


# ಅಧ್ಯಾಯ 1

# ಪ್ರಾರಂಭಿಕ

## ಪ್ರಕರಣ 1: ಚಿಕ್ಕ ಹೆಸರು ಮತ್ತು ಪ್ರಾರಂಭ

1) ಚಿಕ್ಕ ಹೆಸರು:– ಈ ಹಿಂದೆ ಇದ್ದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ–1993ನ್ನು 2015ರ 2ನೇ ತಿದ್ದುಪಡಿಯನ್ವಯ 'ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ ರಾಜ್ ಅಧಿನಿಯಮ–1993' ಎಂದು ಕರೆಯಲಾಗಿದೆ.
2) ಪ್ರಾರಂಭ:– ಈ ಕಾಯ್ದೆಯು 10–05–1993 ರಂದು ಜಾರಿಗೆ ಬಂದಿದೆ.

## ಪ್ರಕರಣ 2: ಪದಗಳ ಅರ್ಥ ವಿವರಣೆ

1) **ಅಸಿಸ್ಟೆಂಟ್ ಕಮಿಷನರ್:** ಉಪವಿಭಾಗಾಧಿಕಾರಿ (AC)
2) **ಹಿಂದುಳಿದ ವರ್ಗಗಳು:** ಪಂಚಾಯತಿಗಳಲ್ಲಿ ಮೀಸಲಾತಿ ಪಡೆದಿರುವ ಪ್ರವರ್ಗ–A & ಪ್ರವರ್ಗ–B
3) **ಕಟ್ಟಡ ಎಂದರೆ :** ಮನೆ ಹೊರಮನೆ, ಅಂಗಡಿ, ಉಗ್ರಾಣ, ಶೆಡ್ಡ್, ಗುಡಿಸಲು, ಬೇಲಿ ಮತ್ತು ಗೋಡೆ ಆವರಣ, ವರಾಂಡ, ಮೇಲುಪಾಯ, ಬಾಗಿಲು ಇತ್ಯಾದಿ
4) **ವ್ಯವಹಾರ ಎಂದರೆ :** ತಯಾರಕೆ ಸ್ವರೂಪದ ವಾಣಿಜ್ಯ ವ್ಯವಾಹಾರ ಮತ್ತು ವ್ಯಾಪಾರ
5) **ಆಕಸ್ಮಿಕ ಖಾಲಿಸ್ಥಾನ :** ಅವಧಿ ಮುಗಿಯುವುದರೊಳಗೆ ಆಕಸ್ಮಿಕವಾಗಿ ಖಾಲಿಯಾದ ಸ್ಥಾನ
6) **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ :** ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO)
7) **ಕಮಿಷನರ್ :** ಪ್ರಾದೇಶಿಕ ಅಧಿಕಾರಿ
8) **ಕಂಪನಿ :** 1959 ರ ಕರ್ನಾಟಕ ಸರ್ಕಾರಿ ಸಂಘಗಳ ಅಧಿ ನಿಯಮದಡಿಯಲ್ಲಿ ನೊಂದಯಿತ ಸಂಘ ಮತ್ತು ರಾಜ್ಯದಲ್ಲಿ ವ್ಯವಹಾರ ನಿರ್ವಹಿಸುವ ಒಂದು ಸಂಘ
9) **ಡೆಪ್ಯುಟಿ ಕಮಿಷನರ್:** ರೆವಿನ್ಯೂ ಜಿಲ್ಲೆಯ ಜಿಲ್ಲಾಧಿಕಾರಿ (ವಿಭಾಗಾಧಿಕಾರಿ)

9.A) **ಗೊತ್ತು ಪಡಿಸಿದ ನ್ಯಾಯಾಲಯ :** ಎಲ್ಲಾ ಹಂತದ ಪಂಚಾಯತಿಗಳ ಚುನಾವಣಾ ವಿವಾಧಗಳನ್ನು ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಬಹುಭಾಗ)

10) **ಜಿಲ್ಲೆ ಎಂದರೆ :** ರೆವಿನ್ಯೂ (ಕಂದಾಯ) ಜಿಲ್ಲೆ
11) **ಯಾವುದೇ ಕಟ್ಟಡ ನಿರ್ಮಾಣ / ವಿಸ್ತರಣೆ :** ಮನೆ ಕಟ್ಟುವುದು ಕಟ್ಟಿದ ಕಟ್ಟಡವನ್ನು ಮಾರ್ಪಡಿಸುವುದು ಕಟ್ಟಡವನ್ನು ವಿಸ್ತರಿಸುವುದು ಮತ್ತು ಕಟ್ಟಡದ ಮೇಲೆ ಮೊಬೈಲ್ ಟವರ್ ನಿರ್ಮಿಸುವುದು ಇತ್ಯಾದಿ.
12) **ಕಾರ್ಯ ನಿರ್ವಾಹಕ ನಿರ್ಮಾಣ :** ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ
13) **ಕಾರ್ಖಾನೆ :** 1948ರ ಕಾರ್ಖಾನೆ ಕಾಯ್ದೆಯಡಿಯ ಕಾರ್ಖಾನೆಗಳಲ್ಲದೆ ಮಾನವ ಅಥವಾ ಇತರ ಪ್ರಾಣಿಶಕ್ತಿ ಮೂಲಕ ಉತ್ಪಾದನೆ ಮಾಡಿರದ ಯಂತ್ರಗಳ ಶಕ್ತಿಯ ಸಹಾಯದಿಂದ ಉತ್ಪಾದಿಸುವ ಔದ್ಯೋಮಿಕ ತಯಾರಿಕಾ ಘಟಕ.
14) **ಸರಕಾರ :** ರಾಜ್ಯ ಸರಕಾರ
15) **ಗ್ರಾಮ ಪಂಚಾಯತಿ :** ಈ ಕಾಯ್ದೆಯಡಿ ಸ್ಥಾಪಿಸಲಾದ ಗ್ರಾಮ ಪಂಚಾಯತಿ
16) **ಗ್ರಾಮ ಸಭಾ :** ಗ್ರಾ.ಪಂ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾಗಿರುವ ವ್ಯಕ್ತಿಗಳ ಒಂದು ನಿಕಾಯ

16.(ಎ) **ಜನವಸತಿ :** ಗ್ರಾ ಪಂ ಹೊರಗೆ ಇರುವ 100 ರಿಂದ 350 ಜನಸಂಖ್ಯೆಯುಳ್ಳ ಒಂದು ಸಣ್ಣ ವಸತಿ ಪ್ರದೇಶ ಗುಂಪು

16.(ಬಿ) **ಜನವಸತಿ ಸಭಾ :** ಜನವಸತಿಯ ಮತದಾರರ ಪಟ್ಟಿಯಲ್ಲಿ ನೊಂದಾಯಿತ ವ್ಯಕ್ತಿಗಳ ಒಂದು ನಿಕಾಯ

17) **ಆರೋಗ್ಯಾಧಿಕಾರಿ :** ತಾಲೂಕು ಅಥವಾ ಜಿಲ್ಲೆಯ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸರಕಾರಿ ಆರೋಗ್ಯ ಅಧಿಕಾರಿ
18) **ಸಾಂಕ್ರಮಿಕ ರೋಗ :** ಮಿದುಳು ಮಿದುಳು ಬಳ್ಳಿಜ್ವರ ಸಿತಾಳೆ ಸಿಡುಬು ಕಾಲಾರಾ ರಿಫ್ತಿರಿಯಾ ವಿಷಮಶಿತ ಜ್ವರ,ಕುಷ್ಟರೋಗ ದಡಾರ,ಪ್ಲೇಗ್ ರೇಬಿಸ್ ಕ್ಷಯ ನಾರುರೋಗ ಡೆಂಗ್ಯೂ ಊ1ಓ1 ಇತ್ಯಾದಿಗಳು.
19) **ಭೂ ಕಂದಾಯ :** ಭೂಮಿಯ ಧಾರಣಾ ಹಾಗೂ ವಿಷಯಕ್ಕೆ ಸಂಭಂದಿಸಿದಂತೆ ಸರಕಾರ ನಿಗದಿಪಡಿಸಿರುವ ಮೊತ್ತ ಮತ್ತು ಶುಲ್ಕ
20) **ಪಾಯಿಖಾನೆ ಮನೆ :** ಶೌಚಾಲಯ, ಶೌಚಗೃಹ, ಮೂತ್ರಾಲಯ
21) **ಸ್ಥಳೀಯ ಪ್ರಾಧಿಕಾರಿ :** ಮುನ್ಸಿಪಲ್‌ಕಾರ್ಪೊರೇಷನ್, ಮುನ್ಸಿಪಲ್ ಕೌನ್ಸಿಲ್ ಜಿ.ಪಂ, ತಾ.ಪಂ, ಗ್ರಾ.ಪಂ, ಅಭಿವೃದ್ಧಿ ಮಂಡಳಿ, ಯೋಜನಾ ಪ್ರಾಧಿಕಾರ, ನಗರಾಭಿವೃದ್ಧಿ ಪ್ರಾಧಿಕಾರ, ಇತ್ಯಾದಿ.
22) **ಮಾರುಕಟ್ಟೆ :** ಸರಕು ಮತ್ತು ಪ್ರಾಣಿಗಳನ್ನು ಸಾರ್ವಜನಿಕವಾಗಿ ಮಾರಾಟ ಮಾಡುವ ಸ್ಥಳ (ಕನಿಷ್ಟ 4 ಅಂಗಡಿಗಳನ್ನು ಸ್ಥಾಪಿಸಲಾದ ಮತ್ತು 10 ಪ್ರಾಣಿಗಳನ್ನು ಮಾರಾಟ ಮಾಡುವ ಸ್ಥಳ)
23) **ಉಪದ್ರವ :** ಜನರ ಆರೋಗ್ಯ ಮೇಲೆ ದುಷ್ಪರಿಣಾಮ ಬೀರುವ ಮತ್ತು ಪ್ರಾಣಕ್ಕೆ ಅಪಾಯಾಕಾರಿ ಯಾಗಬಹುದಾದ ಸ್ಥಳ ಹಾಗೂ ವಸ್ತು
24) **ಅಸಹ್ಯ ಹಾಗೂ ಅಪಾಯಕಾರಿ ವ್ಯಾಪಾರಿ :**ಜೀವಕ್ಕೆ ಆರೋಗ್ಯಕ್ಕೆ ಮತ್ತು ಆಸ್ತಿಗೆ ಅಪಾಯಕಾರಿಯಾಗಬವುದಾದ ಯಾವುದೇ ವ್ಯಾಪಾರ ಮತ್ತು ಉದ್ಯಮ
25) **ಅನುಭವದಾರ :** ಯಾವುದೇ ಭೂಮಿ ಮತ್ತು ಕಟ್ಟಡದ ಮಾಲಿಕ ಬಾಡಿಗೆದಾರ ಮತ್ತು ಲೆಸ್ಸಿಸ್ಸದಾರ
26) **ಅಸಹ್ಯಕರ ವಸ್ತು :** ಹೊಲಸು ಗ್ರಾಮಸಾರ ಕೊಚ್ಚೆ ಮನೆ ಮತ್ತು ಕೊಟ್ಟಿಗೆಯ ಕಸ ಉಗಳು ರದ್ದಿಕಾಗದ ಮುರುಕಲು ವಸ್ತಗಳು
27) **ಮಾಲಿಕ :** ಯಾವುದೇ ಕಟ್ಟಡದ ಮಾಲೀಕ, ಟ್ರಸ್ಟಿ, ಏಜೆಂಟ, ಬಾಡಿಗೆ ಸ್ವಿಕರಿಸುವವ.
28) **ಪಂಚಾಯತ್ ಪ್ರದೇಶ:** 4ನೇ ಪ್ರಕರಣದಡಿ ಘೋಷಿಸಲಾದ ಭೂಪ್ರದೇಶ

 downloaded from: www.kpscvaani.com

28–ಎ) **ಪಿ.ಡಿ.ಒ. ಎಂದರೆ:** ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ

28–ಬಿ) **ಪಂಚಾಯತಿ ಸಿಬ್ಬಂದಿ :** ಗ್ರಾ.ಪಂ.ನೇಮಕ ಮಾಡಿದ ಸಿಬ್ಬಂದಿಗಳು

28–ಸಿ) **ಜವಾಬ್ದಾರಿ ನಕ್ಷೆ:** ಪಂಚಾಯತಿಗಳು ಹೊಂದಿರಬಹುದಾದ ಜವಾಬ್ದಾರಿಗಳ ಪಟ್ಟಿ

28–ಡಿ) **ಚುನಾವಣಾ ಅಧಿಕಾರಿಗಳು:** ಈ ಅಧಿನಿಯಮದಲ್ಲಿ ಒಳಸಿರುವ ರಿಟರ್ನಿಂಗ್ ಆಫಿಸರ್ ಅಸಿಸ್ಟಂಟ ರಿಟರ್ನಿಂಗ್ ಆಫಿಸರ್ ಫ್ರಿಸೈಂಡಿಂಗ್ ಆಫಿಸರ್ ಮತ್ತು ಪೊಲಿಂಗ್ ಆಫಿಸರ್ ಎಂಬ ಪದಗಳಿಗೆ ರಾಜ್ಯ ಚುನಾವಣಾ ಆಯೋಗ ಜನತಾ ಪ್ರಾತಿನಿಧ್ಯದ ಅಧಿನಿಯಮ 1951 ರನ್ವಯ ಕೊಟ್ಟಿರುವ ಅರ್ಥಗಳನ್ನು ಹೊಂದಿರಬೇಕು.

28–ಡಿ) **ಚುನಾವಣಾ ಅಧಿಕಾರಿಗಳು:** ಈ ಅಧಿನಿಯಮದಲ್ಲಿ ಒಳಸಿರುವ ರಿಟರ್ನಿಂಗ್ ಆಫಿಸರ್ ಅಸಿಸ್ಟಂಟ ರಿಟರ್ನಿಂಗ್ ಆಫಿಸರ್ ಫ್ರಿಸೈಂಡಿಂಗ್ ಆಫಿಸರ್ ಮತ್ತು ಪೊಲಿಂಗ್ ಆಫಿಸರ್ ಎಂಬ ಪದಗಳಿಗೆ ರಾಜ್ಯ ಚುನಾವಣಾ ಆಯೋಗ ಜನತಾ ಪ್ರಾತಿನಿಧ್ಯದ ಅಧಿನಿಯಮ 1951 ರನ್ವಯ ಕೊಟ್ಟಿರುವ ಅರ್ಥಗಳನ್ನು ಹೊಂದಿರಬೇಕು.

29) **ಜನಸಂಖ್ಯೆ :** ಕೊನೆ ಜನಗಣತಿಯಲ್ಲಿ ಪ್ರಕಟವಾಗಿರುವ ಅಂಕಿ–ಅಂಶ

30) **ಖಾಸಗಿ ಮಾರುಕಟ್ಟೆ :** ಸಾರ್ವಜನಿಕವಲ್ಲದ ಮಾರುಕಟ್ಟೆ

31) **ಸಾರ್ವಜನಿಕಮಾರುಕಟ್ಟೆ:** ಪಂಚಾಯತಿ ಹಿಡಿತದಲ್ಲಿರುವ/ಸಾರ್ವಜನಿಕ ಬಳಕೆಗೆ ಲಭ್ಯವಿರುವ ಯಾವುದೇ ಮಾರುಕಟ್ಟೆ

32) **ಸಾರ್ವಜನಿಕ ಸ್ಥಳ:** ಸಾರ್ವಜನಿಕರ ಬಳಕೆಗೆ ಮುಕ್ತವಾಗಿರುವ ಯಾವುದೇ ಸ್ಥಳ

33) **ಸಾರ್ವಜನಿಕ ಬೀದಿ:** ಸಾರ್ವಜನಿಕರು ಉಪಯೋಗಿಸುವ ಯಾವುದೇ ರಸ್ತೆ ದಾರಿ ಬೀದಿ.

34) **ಅನುಸೂಚಿ :** ಈ ಅಧಿನಿಯಮಕ್ಕೆ ಲಗತ್ತಿಸಿರುವ ಅನುಸೂಚಿ

35) **ಅನುಸೂಚಿತ ಜಾತಿ ಮತ್ತು ಪಂಗಡ:** ಸಂವಿಧಾನದಲ್ಲಿ ಉಲ್ಲೇಖಿಸಲಾಗಿರುವ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳು.

36) **ಕಾರ್ಯದರ್ಶಿ :** ಗ್ರಾಮ ಪಂಚಾಯತ್ ಕಾರ್ಯದರ್ಶಿ.

36–ಎ) **ರಾಜ್ಯ ಚುನಾವಣಾ ಆಯೋಗ:** 308ನೇ ಪ್ರಕರಣದಡಿ ರಚಿತವಾದ ರಾಜ್ಯ ಚುನಾವಣಾ ಆಯೋಗ.

37) **ಬೀದಿ ಎಂದರೆ:** ಕಾಲುದಾರಿ, ಹೆದ್ದಾರಿ, ಬಂಡಿದಾರಿ, ಒಡ್ಡುದಾರಿ, ಸೇತುವೆ ರಸ್ತೆ, ಮಾರ್ಗ.

38) **ತಾಲೂಕು :** ರೆವಿನ್ಯೂ ತಾಲೂಕು.

39) **ತಾಲೂಕು ಪಂಚಾಯತಿ :** ಈ ಅಧಿನಿಯಮದಡಿ ಸ್ಥಾಪಿಸಲಾದ ತಾಲ್ಲೂಕ ಪಂಚಾಯತಿ.

40) **ವಾಹನ:** ಸಾರ್ವಜನಿಕರು ಬಳಸುವ ಎಲ್ಲಾ ಪ್ರಕಾರದ ವಾಹನಗಳು

41) **ತಹಶೀಲ್ದಾರ್ :**ರೆವಿನ್ಯೂ ತಾಲೂಕಿನ ತಹಸೀಲ್ದಾರ್.

42) **ಗ್ರಾಮ ಎಂದರೆ:** ರಾಜ್ಯಪಾಲರಿಂದ ನಿಗಧಿಸಲ್ಪಟ್ಟ ಒಂದು ಭಾಗ.

42–ಎ) **ದೂರದೃಷ್ಠಿ ಯೋಜನೆ :** ಪಂಚಾಯತ್ ಪ್ರದೇಶ ಒಟ್ಟಾರೆ ಅಭಿವೃದ್ಧಿಯನ್ನು ಸಾಧಿಸಲು ಇರುವ ಧೀರ್ಘಾವಧಿಯ ಯೋಜನೆಯಾಗಿದೆ.

42–ಬಿ) **ಸಮಾಜದ ಸುರಕ್ಷಿತವಲ್ಲದ ವರ್ಗಗಳು:** ಮಕ್ಕಳು, ವೃದ್ಧರು, ಮಹಿಳೆಯರು, ರೋಗಪೀಡಿತರು, ಅಶಕ್ತರು, ವಿಕಲಚೇತನರು, SC/ST ಜೀತ ಕಾರ್ಮಿಕರು, OBC ವರ್ಗಗಳು

42–ಸಿ) **ವಾರ್ಡ ಎಂದರೆ:** ಚುನಾವಣೆಗಳನ್ನು ನಡೆಸಲು ಗ್ರಾ.ಪಂ. ವ್ಯಾಪ್ತಿಯಲ್ಲಿ ಗುರುತ ಮಾಡಿರುವ ಚುನಾವಣಾ ಕ್ಷೇತ್ರ.

42–ಡಿ) **ವಾರ್ಡಸಭಾ:** ಗ್ರಾಂ.ಪಂ.ಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೊಂದಾಯಿತರಾದ ವ್ಯಕ್ತಿಗಳನ್ನು ಒಳಗೊಂಡ ಒಂದು ನಿಕಾಯ

43) **ಜಿಲ್ಲಾ ಪಂಚಾಯತಿ:** ಈ ಅಧಿನಿಯಮದಡಿಯಲ್ಲಿ ಸ್ಥಾಪಿಸಲಾದ ಜಿಲ್ಲಾ ಪಂಚಾಯತಿ

## ಅಧ್ಯಾಯ 1ಎ : ಪಂಚಾಯತಿ ನೀತಿ ನಿರ್ದೇಶಕ ತತ್ವಗಳು

### ಪ್ರಕರಣ 2–ಎ

* ಎಲ್ಲಿರಿಗೂ ಶುದ್ಧಕುಡಿಯುವ ನೀರು ಆರೋಗ್ಯ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸಿ ಗ್ರಾಮ ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವುದು
* ಗ್ರಾಮೀಣ ಮೂಲ ಸೌಲಭ್ಯಗಳನ್ನು ಒದಗಿಸುವುದು .
* ಗ್ರಾಮೀಣ ನಿವಾಸಿಗಳಿಗೆ ಆರ್ಥಿಕ, ಸಾಮಾಜಿಕ, ಪರಿಸರಾತ್ಮಕ' ವಾತಾವರಣವನ್ನು ಕಲ್ಪಿಸುವುದು ಹಾಗೂ ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡುವುದು
* ಸ್ಥಳೀಯ ಸಮುದಾಯದ ಕಲೆ, ಸಂಸ್ಕೃತಿ, ಪರಂಪರೆಯನ್ನು ಕಾಪಾಡುವುದು ಮತ್ತು ಗ್ರಾಮೀಣ ಪ್ರವಾಸೋಧ್ಯಮಕ್ಕೆ ಉತ್ತೇಜನ ನೀಡುವುದು.
* ದೇಶಿಯ ಆಹಾರ ಬೀಜಗಳು ತಳಿಗಳು ಔಷದಿಯ ಗುಣವುಳ್ಳ ವೈವಿಧ್ಯಮಯ ಗಿಡಮೂಲಿಕಗಳನ್ನು ಸಂರಕ್ಷಿಸುವುದು
* ಗ್ರಾಮಗಳಲ್ಲಿ ಕೃಷಿಕೈಗಾರಿಕೆಗಳಿಗೆ ಮತ್ತು ಗುಡಿಕೈಗಾರಿಕೆಗಳಿಗೆ ಉತ್ತೆಜನ ನೀಡುವುದು
* ಗ್ರಾಮೀಣ ಜನರ ಕರಕುಶಲ ಜ್ಞಾನವನ್ನು ಹೆಚ್ಚಿಸಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದು
* ಗ್ರಾಮಗಳಲ್ಲಿ ಸಹಕಾರಿ ಸಂಘಗಳ ರಚನೆ ಸಹಕಾರ ಮನೋಭಾವ ನಿರ್ಮಾಣ.

downloaded from: www.kpscvaani.com


# ಅಧ್ಯಾಯ 2A ವಾರ್ಡಸಭೆ ಮತ್ತು ಗ್ರಾಮಸಭೆ

### ಪ್ರಕರಣ 03: ಗ್ರಾಮ ಸ್ವರಾಜ್ಯನ ಘಟಕಗಳು

1. ಜನವಸತಿ ಸಭಾ:– 100ರಿಂದ350 ಜನರಿರುವ ಸಣ್ಣ ವಸತಿ ಪ್ರದೇಶ. ಜಿಲ್ಲೆಯ ಜಿಲ್ಲಾಧಿಕಾರಿಯು ಜನವಸತಿ ಪ್ರದೇಶಗಳನ್ನು ಮತ್ತು ಅದರ ಸಂಖ್ಯೆಯಷ್ಟು ಜನವಸತಿ ಸಭಾಗಳನ್ನು ನಿರ್ಧಿಷ್ಟಪಡಿಸಿ ಅಧಿಸೂಚಿಸುತ್ತಾರೆ.
2. ವಾರ್ಡಸಭಾ :– ಗ್ರಾ.ಪಂ.ಪ್ರದೇಶದ ಪರಿಮಿತಿಯೊಳಗೆ, ಎಷ್ಟು ವಾರ್ಡಗಳಿವೆ ಅಷ್ಟು ವಾರ್ಡ್ ಸಭಾಗಳು ಇರತಕ್ಕದ್ದು.
3. ಗ್ರಾಮಸಭಾ :– ಗ್ರಾಮ ಪಂಚಾಯತಿ ಪ್ರದೇಶದೊಳಗಿರುವ ಸಂಬಂಧಪಟ್ಟ ಗ್ರಾಮದ ಮತದಾರರ ಪಟ್ಟಿಯಲ್ಲಿ ಮತದಾರರೆಂದು ನೊಂದಾಯಿಸಿರುವ ಎಲ್ಲಾ ವ್ಯಕ್ತಿಗಳನ್ನು ಒಳಗೊಂಡ ಪ್ರತಿಯೊಂದು ಗ್ರಾಮ ಪಂಚಾಯತಿಯು ಒಂದು ಗ್ರಾಮ ಸಭೆ ಇರತಕ್ಕದ್ದು.

### ಪ್ರಕರಣ 3(A)
### ಜನವಸತಿ ಸಭಾದ ಪ್ರಕಾರ್ಯಗಳು ಮತ್ತು ಅಧಿಕಾರಗಳು

- ತನ್ನು ವ್ಯಾಪ್ತಿಯೊಳಗಿ "ವಾರ್ಡಸಭಾ" ಗ್ರಾಮಸಭಾಗಳಿಗೆ ನೇರವು ನೀಡುವುದು.
- ಸಮಾಜದ ಸುರಕ್ಷಿತವಲ್ಲದ ಜನರು ತಮ್ಮ ಹಕ್ಕುಗಳನ್ನು ಚಲಾಯಿಸುವುದಕ್ಕೆ ಸುರಕ್ಷಿತ, ಹಿತಕರ ಪರಿಸರ ಸೃಷ್ಟಿಸಿ ಸಾಮಾಜಿಕ ನ್ಯಾಯಾವನ್ನು ಎತ್ತಿಹಿಡಿಯುವುದು.
- ದೂರದೃಷ್ಟಿ ಯೋಜನೆಗಳನ್ನು ರೂಪಿಸಲು ಜನವಸತಿ ಪ್ರದೇಶದ ಜನರ ಸಾಮಾಜಿಕ ಆರ್ಥಿಕ ಅಂಕಿ ಅಂಶಗಳನ್ನು ಸಂಗ್ರಹಿಸಲು ಸಮೀಕ್ಷೆ ಮಾಡಲು ಗ್ರಾ.ಪಂ.ಗೆ ನೇರವಾಗುವುದು
- ಜನವಸತಿ ಪ್ರದೇಶದಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು. ನೀರು ಸರಬರಾಜು ಮಾಡುವುದು ಮತ್ತು ಸ್ಥಳೀಯ ಕುಂದು ಕೊರತೆಗಳನ್ನು ಗುರುತಿಸಿ ಪರಿಹಾರ ಕಂಡುಕೊಳ್ಳುವುದು.
- ಬಡತನ ನಿರ್ಮೂಲನೆ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಾಕ್ರಮಗಳಿಗಾಗಿ ಜನವಸತಿ ಪ್ರದೇಶದಲ್ಲಿನ ಅರ್ಹಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಿ ಗ್ರಾಮಸಭೆಗೆ ಕಳುಹಿಸಿ ಕೊಡುವುದು.
- ಸ್ಥಳೀಯ ಕರಕುಶಲ ಕಲೆಗಳನ್ನು ಮತ್ತು ಗುಡಿ ಕೈಗಾರಿಕೆಗಳನ್ನು ಪುನರುಜ್ಜೀವನ ಗೊಳಿಸುವುದು.
- ಸ್ಥಳೀಯ ಜನರ ಸಾಕ್ಷರತೆ ಮಟ್ಟವನ್ನು ಹೆಚ್ಚಿಸಿ ವಯಸ್ಕರ ಶಿಕ್ಷಣಕ್ಕೆ ಉತ್ತೇಜನ ನೀಡುವುದು.
- ಜನವಸತಿ ಪ್ರದೇಶದಲ್ಲಿ ಜಾತಿ ಧರ್ಮ ಮತ್ತು ಲಿಂಗಾಧಾರಿತ ತಾರತಮ್ಯಾಗಳನ್ನು ತಡೆಯುವುದು.
- ಸ್ಥಳೀಯ ಪ್ರದೇಶದಲ್ಲಿನ ಗೊಮಾಳ ಹುಲ್ಲುಗಾವಲು ಕೆರೆಗಳು ಸೇತುವೆಗಳು ರಸ್ತೆಗಳು ಮುಂತಾದ ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ಸಂರಕ್ಷಿಸುವುದು.

### ಪ್ರಕರಣ 3(B) : ಜನವಸತಿ ಸಭಾದ ಸಭೆಗಳು

**I) ಸಾಮಾನ್ಯ ಸಭೆ**

1. ಪ್ರತಿ 6 ತಿಂಗಳಿಗೆ ಒಮ್ಮೆ ನಡಯಬೇಕು
2. ಈ ಸಭೆ ಗ್ರಾಮಸಭೆ ನಡೆಯುವ 1 ತಿಂಗಳು ಮೊದಲು ನಡೆಯಬೆಕು
3. ಈ ಸಭೆಯನ್ನು ಜನವಸತಿ ಪ್ರದೇಶದ ಚುನಾಯಿತ ಸದಸ್ಯನು ಕರೆಯಬೇಕು ಹಾಗು ಈ ಸಭೆಯ ಅಧ್ಯಕ್ಷತೆ ವಹಿಸಬೇಕು.
4. **ಸಭೆ ಕರೆಯದಿದ್ದಾಗ**–ಜನವಸತಿ ಪ್ರದೇಶದ ಚುನಾಯಿತ ಸದಸ್ಯನು ಸರಿಯಾದ ಸಮಯದಲ್ಲಿ ಸಭೆಯನ್ನು ಕರೆಯಲು ಮತ್ತು ಅಧ್ಯಕ್ಷತೆ ವಹಿಸಲು ತಪ್ಪಿದರೆ ಆಗ ಪಿಡಿಒ /ಕಾರ್ಯಾದರ್ಶಿ ಕರೆಯತಕ್ಕದ್ದು ಮತ್ತು ಸಭೆಯಲ್ಲಿ ಉಪಸ್ಥಿತರಿರುವ ಸದಸ್ಯರು ಯಾವುದೇ ಮತದಾರರನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಬಹುದು

- **ಸಭೆಯಕೋರಂ:** ಒಟ್ಟು ಮತದಾರರ ಪೈಕಿ ಐದನೆಯ ಒಂದರಷ್ಟು( 1/5) ಸದಸ್ಯರು ಅಥವಾ 20 ಸದಸ್ಯರು ಇದರಲ್ಲಿ ಯಾವುದು ಕಡಿಮೆಯೊ ಅದು ಸಭೆಯ ಕೋರಂ ಆಗಿರುತ್ತದೆ. ಇದರಲ್ಲಿ ಶೇ–30 ರಷ್ಟು ಮಹಿಳೆಯರು ಇರಬೇಕು, ಎಸ್.ಸಿ./ ಎಸ್.ಟಿ. ಗಳು ತಮ್ಮ ಜನಸಂಖ್ಯೆಯ ಅನುಸಾರವಾಗಿ ಇರಬೇಕು.
- **ಕೋರಂ ಇಲ್ಲದಿದ್ದರೆ–** ಕೋರಂ ಇಲ್ಲದಿದ್ದಾಗ ಸಭೆಯ ಅಧ್ಯಕ್ಷತೆ ವಹಿಸಿದವರು 30 ನಿಮಿಷ ಕಾದು ನಂತರವು ಕೋರಂ ಇರದಿದ್ದರೆ ಸಭೆಯನ್ನು ಮುಂದೂಡಬೇಕು ಮತ್ತು ಮುಂದೂಡಿದ ಸಭೆಗೆ ಕೋರಂನ ಅಗತ್ಯವಿರುವುದಿಲ್ಲ.

**II) ವಿಶೇಷ ಸಭೆ**

- ಜನವಸತಿ ಪ್ರದೇಶದ ಶೇ– 10 ರಷ್ಟು ಮತದಾರರು ಲಿಖಿತ ಬೇಡಿಕೆ ಇಟ್ಟರೆ ಪಿ.ಡಿ.ಒ / ಕಾರ್ಯದರ್ಶಿಯು ವಿಶೇಷ ಸಭೆಯನ್ನು ಕರೆಯತಕ್ಕದ್ದು.
- ಈ ಸಭೆಯನ್ನು **"3 ತಿಂಗಳಿಗೆ ಒಮ್ಮೆ"** ಕರೆಯಬೇಕು. [3 ತಿಂಗಳಲ್ಲಿ– 2 ಭಾರಿ ಕರೆಯುವಂತಿಲ್ಲ.]

**III)ತುರ್ತುಸಭೆ**

- ಪ್ರಕೃತಿ ವಿಕೋಪ ಅಥವಾ ಸಾರ್ವಜನಿಕ ಮಹತ್ವದ ತುರ್ತು ವಿಷಯಗಳ ಚರ್ಚೆ ನಡೆಸಲು ತುರ್ತುಸಭೆಯನ್ನು "ಜನವಸತಿ ಪ್ರದೇಶದ ಚುನಾಯಿತ ಸದಸ್ಯನು" ಕರೆಯಬಹುದು.
- **ಅಧ್ಯಕ್ಷತೆ:** ಗ್ರಾಮ ಪಂಚಾಯಿತಿ ಅಧ್ಯಕ್ಷ /ಉಪಾಧ್ಯಕ್ಷರು.

### ಪ್ರಕರಣ 3(C)
### ವಾರ್ಡಸಭಾದ ಅಧಿಕಾರ ಮತ್ತು ಪ್ರಕಾರ್ಯಗಳು

- ವಾರ್ಡ ಸಭಾ ಪ್ರದೇಶಗಳಲ್ಲಿ "ಅನುಷ್ಠಾನಗೊಳಿಸಬೇಕಾದ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವನೆಗಳನ್ನು ಸಿದ್ದಪಡಿಸಿ ಅದನ್ನು ಗ್ರಾ. ಪಂ ಯೋಜನೆಯಲ್ಲಿ ಸೇರಿಸಲು "ಗ್ರಾಮ ಸಭೆಗೆ" ಕಳುಹಿಸತಕ್ಕದ್ದು.
- ಫಲಾನುಭವಿ ಆಧಾರಿತ ಯೋಜನೆಗಳಿಗಾಗಿ "ಅರ್ಹಫಲಾನುಭವಿಗಳ ಪಟ್ಟಿಯನ್ನು"ಸಿದ್ದಪಡಿಸಿ ಅದನ್ನು ಗ್ರಾಮಸಭೆಗೆ ಕಳುಹಿಸತಕ್ಕದ್ದು.
- ಸರಕಾರದ ಪಿಂಚಣಿ ಮತ್ತು ಸಬ್ಸಿಡಿಗಳಂತಹ ವಿವಿಧ ಕಲ್ಯಾಣಗಳ ನೇರವು ಪಡೆಯಲು ವ್ಯಕ್ತಿಗಳ ಅರ್ಹತೆಯನ್ನು ಪರಿಶೀಲಿಸುವುದು.
- ವಾರ್ಡಸಭಾದ ಸಭೆಯ ನಂತರ ಮುಂದಿನ 6 ತಿಂಗಳಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ಉದ್ದೇಶಿಸಿರುವ ಸೇವೆಗಳು ಮತ್ತು

 downloaded from: www.kpscvaani.com

ಕಾಮಾಗಾರಿಗಳ ಬಗ್ಗೆ ಗ್ರಾ. ಪಂ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳುವುದು.

- ವಾರ್ಡ ಸಭಾ ತಿರ್ಮಾನಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಗ್ರಾ ಪಂನಿಂದ ಮಾಹಿತಿ ಪಡೆಯುವುದು.
- ಗ್ರಾ ಪಂ ಯ ಸೇವೆಗಳು ಮತ್ತು ಕಾಮಾಗಾರಿಗಳ ಮೇಲ್ವಿಚಾರಣೆಗಾಗಿ ಸ್ವಯಂ ಸೇವಕರ ತಂಡಗಳನ್ನು ನೇಮಿಸುವುದು.
- ವಾರ್ಡ ಸಭಾದ ಸದಸ್ಯರು ಗ್ರಾ ಪಂ ಗೆ ತೆರಿಗೆಗಳನ್ನು ಮತ್ತು ಮರು ಪಾವತಿಸಬೇಕಾದ ಸಾಲಗಳನ್ನು ಸಂದಾಯ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.
- ವಾರ್ಡ ಪ್ರದೇಶದಲ್ಲಿ "ಬೀದಿ ದೀಪಗಳ ಅಳವಡಿಕೆ. ನೀರು ಸರಬರಾಜು ಘಟಕಗಳು ಮತ್ತು ಸಾರ್ವಜನಿಕ ನೈರ್ಮಲ್ಯ ಘಟಕಗಳಿಗೆ ನೀರಾವರಿ ಸೌಲಭ್ಯಗಳಿಗೆ ಆದ್ಯತೆ ನೀಡುವುದು. ಹಾಗೂ ಇವುಗಳ ವ್ಯವಸ್ಥೆಯಲ್ಲಿರುವ ಕುಂದು ಕೊರತೆಗಳನ್ನು ಗುರುತಿಸಿ ಪರಿಹಾರ ಸೂಚಿಸುವುದು.
- ಪರಿಸರ ಮಾಲಿನ್ಯನಿವಾರಣೆ ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕ ಕಳಕಳಿಯ ವಿಷಯಗಳಿಗೆ ಸಂಬಂಧಿಸಿದಂತೆ ಜನರಲ್ಲಿ ಅರಿವು ಮೂಡಿಸುವುದು.
- ವಾರ್ಡ ಪ್ರದೇಶದಲ್ಲಿನ ವಿವಿಧ ಗುಂಪುಗಳ ಜನರ ಮಧ್ಯೆ ಪರಸ್ಥರ ಸಾಮರಸ್ಯ ಐಕ್ಯತೆಮೂಡಿಸಲು ಹಾಗೂ ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಸಾಂಸ್ಕ್ರತೀಕ ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸುವುದು.
- ಗ್ರಾ.ಪಂ ಅಧಿಕಾರಿ ವರ್ಗದವರು ಸಲ್ಲಿಸಬೇಕಾದ ಸೇವೆಗಳು. ಕಾರ್ಯರೂಪಕ್ಕೆ ತರಬೇಕಾದ ಯೋಜನೆಗಳು ಕಾರ್ಯಕ್ರಮಗಳು. ಹಾಗೂ ವಾರ್ಡಾಸಭೆಯು ನಡೆದ ನಂತರದ ಬರುವ '6 ತಿಂಗಳ ಅವಧಿಯಲ್ಲಿ'. ಅವರು ಯಾವ ಸಾರ್ವಜನಿಕ ಕಾಮಗಾರಿಗಳನ್ನು ಕೈಗೋಳ್ಳಲು ಉದ್ದೇಶಿಸಿದ್ದಾರೊ. ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯುವುದು.
- ವಾರ್ಡಸಭಾದ ನಿವಾಸಿಗಳ' ಹಿತಾಸಕ್ತಿಗೆ ಸುರಕ್ಷೆತೆಗೆ ಆರೋಗ್ಯಕ್ಕೆ ಬಾದಕವಾಗುವ ಯಾವುದೇ ಚಟುವಟಿಕೆಗಳನ್ನು ತಡೆಯುವುದಕ್ಕೆ ಗ್ರಾ.ಪಂ ಗೆ ನೇರವಾಗುವುದು.

### ಪ್ರಕರಣ 3D : ವಾರ್ಡ್ ಸಭಾದ ಸಭೆಗಳು

1) **ಸಾಮಾನ್ಯ ಸಭೆಗಳು:–** [ಉ.ಪು–01]

- ವಾರ್ಡ್‌ಸಭೆಯು " 6 ತಿಂಗಳಿಗೆ ಒಮ್ಮೆ" ನಡೆಯತಕ್ಕದ್ದು
- ಇದು ಗ್ರಾಮಸಭೆಯ **'1 ತಿಂಗಳು'** ಮೊದಲು ನಡೆಯಬೇಕು
- ವಾರ್ಡ್‌ಸಭೆಯನ್ನು ಕರೆಯುವರು ಮತ್ತು ಅಧ್ಯಕ್ಷತೆ" ವಹಿಸುವರು. ವಾರ್ಡಿನ ಚುನಾಯಿತ ಸದಸ್ಯ"
- **ಸಭೆ ಕರೆಯದಿದ್ದಾಗ:** ವಾರ್ಡ ಸದಸ್ಯನು ಅಗತ್ಯವಿದ್ದಾಗ 'ಸಭೆಯನ್ನು ಕರೆಯದಿದ್ದರೆ, ಅಧ್ಯಕ್ಷತೆ ವಹಿಸಲು ವಿಫಲನಾದರೆ, ಗ್ರಾ.ಪಂ. ನಿಧಿಗೆ 100.ರೂ.ದಂಡ" ಪಾವತಿಸಬೇಕು & ಕಾರಣಗಳನ್ನು ತಿಳಿಸಬೇಕು.
- ಈ ಸಂದರ್ಭದಲ್ಲಿ 'ಪಿ.ಡಿ.ಒ\ಕಾರ್ಯದರ್ಶಿಯು' ವಾರ್ಡ್‌ಸಭೆ ಕರೆಯಬೇಕು. ಗ್ರಾ.ಪಂ ಸದಸ್ಯರು ಆಯ್ಕೆಮಾಡಿದ ಮತದಾರ ಅಧ್ಯಕ್ಷತೆ ವಹಿಸಬೇಕು.

2) **ವಿಶೇಷ ಸಭೆ**

- ವಾರ್ಡಸಭಾದ 'ಶೇ–10 ರಷ್ಟು ಮತದಾರರು' ಲಿಖಿತ ಬೇಡಿಕೆ ಇಟ್ಟಾಗ ಪಿ.ಡಿ.ಒ/ ಕಾರ್ಯದರ್ಶಿಯು' ವಿಶೇಷ ಸಭೆಯನ್ನು ಕರೆಯಬೇಕು.
- ವಿಶೇಷ ಸಭೆಯನ್ನು '3 ತಿಂಗಳಿಗೆ ಒಮ್ಮೆ' ಕರೆಯತಕ್ಕದ್ದು.

3) **ತುರ್ತು ಸಭೆ**

- ಪ್ರಕೃತಿ ವಿಕೋಪ ಅಥವಾ ಸಾರ್ವಜಿಕ ಮಹತ್ವದ ತುರ್ತು ವಿಷಯಗ ಚರ್ಚೆನಡಸಲು ತುರ್ತುಸಭೆಯನ್ನು "ಜನವಸತಿ ಪ್ರದೇಶದ ಚುನಾಯಿತ ಸದಸ್ಯನು" ಕರೆಯಬಹುದು
- **ಅಧ್ಯಕ್ಷತೆ :** ಗ್ರಾಮ ಪಂಚಾಯತಿ ಅಧ್ಯಕ್ಷ / ಉಪಾಧ್ಯಕ್ಷರು

### ಪ್ರಕರಣ 3(E)

### ಗ್ರಾಮ ಸಭಾ ಮತ್ತು ಅದರ ಪ್ರಕಾರ್ಯಗಳು:

- ಗ್ರಾಮ ಸಭಾ ಎಂದರೆ ಗ್ರಾಮ ಪಂಚಾಯತ್ ಪ್ರದೇಶದೊಳಗೆ ಮತದಾರರ ಪಟ್ಟಿಯಲ್ಲಿ ನೊಂದಾಯಿತರಾಗಿರುವ ವ್ಯಕ್ತಿಗಳ ಒಂದು ನಿಕಾಯ.
- ಗ್ರಾಮ ಸಭೆಯನ್ನು ಹಳ್ಳಿಯ ವಿಧಾನ ಸಭೆ ಎಂದು ಕರೆಯಲಾಗುತ್ತದೆ
- ಗ್ರಾಮ ಸಭೆಯ ಪ್ರಕಾರ್ಯಗಳು:
- ದೂರದೃಷ್ಠಿ ಯೋಜನೆಗಳನ್ನು ರೂಪಿಸುವುದು:
- ಜನವಸತಿ ಸಭೆಗಳ ಸಲಹೆಗಳನ್ನು ಪರಿಗಣಿಸಿ ಜನವಸತಿ ಪ್ರದೇಶದಲ್ಲಿ ಒದಗಿಸಬಹುದಾದ ಮೂಲಭೂತ ಸೌಕರ್ಯಗಳ ಬಗ್ಗೆ ಕ್ರಮ ಕೈಗೊಳ್ಳುವುದು.
- ಎಲ್ಲಾ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಪ್ರಯೋಜನಕಾರಿ ಆಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
- ಜನವಸತಿ ಸಭೆ ಮತ್ತು ವಾರ್ಡ್ ಸಭೆಗಳ ಅಗತ್ಯತೆಗಳನ್ನು ಪರಿಗಣಿಸಿದ ನೀತರ ಅಭಿವೃದ್ಧಿ ಯೋಜನೆಗಳ ನಿಧಿಗಳಿಗೆ ಒಳಪಟ್ಟು ಗ್ರಾ.ಪಂ.ಗಿಂತ ಮೊದಲು ಅನುಮೋದಿಸುವುದು.
- ಪಂಚಾಯಿತಿ ಪ್ರದೇಶದಲ್ಲಿ ಅನುಷ್ಠಾನಗೊಳ್ಳಬೇಕಾದ ಸ್ಕೀಮ್‌ಗಳು ಮತ್ತು ಕಾರ್ಯಕ್ರಮಗಳನ್ನುಆದ್ಯತೆಯನುಸಾರ ಕ್ರೋಡೀಕೃತ ಪ್ರಸ್ತಾವನೆಗಳನ್ನು ಸಿದ್ದಪಡಿಸುವುದು.
- ಪಂಚಾಯಿತಿ ಪ್ರದೇಶದಲ್ಲಿನ ವಿವಿಧ ಸ್ಕೀಮ್‌ಗಳಿಗೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಆದ್ಯತಾ ರ್‍ಯಾಂಕಿಂಗ್ ವಿಧಾನದ ಪ್ರಕಾರ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು.
- **ಉ.ಪ್ರ.3 :** ಗ್ರಾಮ ಸಭೆಯ ಯೋಜನೆಗಳನ್ನು ಮತ್ತ ಕಾರ್ಯ ಕ್ರಮಗಳನ್ನು ಜಾರಿಗೊಳಿಸುವಾಗ ಗ್ರಾ.ಪಂ.ನ ಎಲ್ಲಾ ಚಟುವಟಿಕೆಗಳಿಗೆ ಬೆಂಬಲ ನೀಡುವುದು.
- ಸ್ವಯಂ ಸೇವಾ ಕಾರ್ಮಿಕರಿಂದ ಮತ್ತು ಗುಂಪುಗಳಿಂದ ಅಭಿವೃದ್ಧಿ ಕಾಮಗಾರಿಗಳನ್ನು ಮೇಲ್ವಿಚಾರಣೆ ಮಾಡಿಸುವುದು.
- ನಿರ್ಮಲ ನೈರ್ಮಲ್ಯಿಕರಣ ಮತ್ತು ಸ್ವಚ್ಛ ಪರಿಸರವನ್ನು ನಿರ್ಮಿಸುವಲ್ಲಿ ಗ್ರಾಮ ಪಂಚಾಯಿತಿಗೆ ನೆರವು ನೀಡುವುದು.
- ವಯಸ್ಕರ ಶಿಕ್ಷಣ ಸಾಕ್ಷರತೆ ಅಭಿವೃದ್ದಿ ಕೌಟುಂಬಿಕ ಸಮಾಲೋಚನೆ ಮತ್ತು ಯುವಜನತೆಯ ವ್ಯಕ್ತಿತ್ವ ನಿರ್ಮಾಣದಂತಹ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವುದು.

**ಗ್ರಾಮ ಸಭೆಯ ಜವಾಬ್ದಾರಿಗಳು, ಮೇಲ್ವೀಚಾರಣೆ ಮತ್ತು ನಾಗರಿಕರ ಹಕ್ಕು ಬಾಧ್ಯತೆಗಳ ಕುರಿತು ಅರಿವು ಮೂಡಿಸುವುದು**

downloaded from: www.kpscvaani.com


ಎ) ಸಮಾಜದ ಅಸುರಕ್ಷಿತ ವರ್ಗಗಳ ಜನರು ತಮ್ಮ ಹಕ್ಕುಗಳನ್ನು ಮುಕ್ತವಾಗಿ ಚಲಾಯಿಸಲು ಅನಕೂಲ ಕಲ್ಪಿಸುವುದು, ಉತ್ತಮ ಸಾಮಾಜಿಕ ಪರಿಸರದ ಅಸ್ತಿತ್ವ ಖಚಿತಪಡಿಸಿಕೊಳ್ಳುವುದು.

ಗ್ರಾಮ ಪಂ. ಗೆ ಮತ್ತು ಅದರ ಚುನಾಯಿತ ಸದಸ್ಯರಿಗೆ/ ಇಲಾಖೆಯ ಅಧಿಕಾರಿಗಳಿಗೆ / ಇಬ್ಬರಿಗೂ ಎಲ್ಲ ನಾಗರಿಕರನ್ನು ಶೋಷಣೆಯ ವಿರುದ್ಧ ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳಲು ಸಹಾಯಕಾರಿ ಕ್ರಮಗಳ ಬಗ್ಗೆ ಪಂಚಾಯತ್‌ಗೆ ಸಲಹೆ ನೀಡತಕ್ಕದ್ದು.

ಬಿ) ಆ ಪ್ರದೇಶದ ಸ್ಥಳೀಯ ಕ್ರೀಡೆಗಳಿಗೆ, ಸ್ಪರ್ಧೆಗಳಿಗೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗೆ ಉತ್ತೇಜನ ನೀಡಿ ಪೋಷಿಸುವಂಥ ಸಾಂಸ್ಕೃತಿಕ ಹಬ್ಬಗಳನ್ನು, ಚಟುವಟಿಕೆಗಳನ್ನು ಆಯೋಜಿಸುವುದು. ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವುದು.

ಸಿ) ಸ್ವಚ್ಛತೆ,ಪರಿಸರ ಮತ್ತ ಜೀವಿ ಸಂರಕ್ಷಣೆ, ಮಾಲಿನ್ಯ ತಡೆಗಟ್ಟುವಿಕೆ ಮುಂತಾದ ಸಾರ್ವಜನಿಕ 'ಹಿತಾಸಕ್ತಿಯ ವಿಚಾರಗಳಲ್ಲಿ ನಾಗರಿಕರಿಗೆ ಅರಿವು ಮೂಡಡಿಸತಕ್ಕದ್ದು. ಗ್ರಾಮ ಪ್ರದೇಶದ ವ್ಯಾಪ್ತಿಯೊಳಗೆ ಸಾರ್ವಜನಿಕ ಶಾಂತಿ, ಸುರಕ್ಷತೆ ಮತ್ತು ಭದ್ರತೆಯ ಅಸ್ತಿತ್ವವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಡಿ) ಜಲಸಂರಕ್ಷಣೆ, ಪರಿಸರದ ಸಂರಕ್ಷಣೆ ಮತ್ತು ಜೈವಿಕವಾಗಿ ವಘಟಿಸಬಹುದಾದ ತ್ಯಾಜ್ಯಗಳ ಮರುಬಳಕೆ ವಿಷಯಗಳ ಕುರಿತು ಅರಿವು ಮೂಡಿಸತಕ್ಕದ್ದು.

ಇ) ಮಹಿಳೆಯರ, ಯುವಜನರ ಮತ್ತು ಹಿರಿಯ ನಾಗರಿಕರ ಸಂಘ ಸಂಸ್ಥೆಗಳೊಂದಿಗೆ ಚರ್ಚಿಸಿ, ಗ್ರಾಮ ಮಮಮಮಮಮಮಟ್ಟದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ, ವ್ಯಾಪಾರ ವ್ಯವಹಾರಗಳಿಗೆ, ವಾಣಿಜ್ಯೋದ್ಯಮಗಳಿಗೆ ಉತ್ತೇಜನ ನೀಡುವುದು, ಜನರು ಲಾಭದಾಯಕ ಉದ್ಯೋಗ ಪಡೆದುಕೊಳ್ಳಲು, ಕೌಶಲ್ಯಾಭಿವೃದ್ಧಿ ತರಬೇತಿ ಒದಗಿಸತಕ್ಕದ್ದು ಮತ್ತು ಅಂಥ ಕ್ರಮಕ್ಕಾಗಿ ಗ್ರಾ.ಪಂ. ಗೆ ಪ್ರಸ್ತಾವಗಳನ್ನು ಸಲ್ಲಿಸತಕ್ಕದ್ದು.

ಎಫ್) ಗ್ರಾ.ಪಂ. ಪ್ರದೇಶದ ಒಳಗೆ ಇರುವ ಗೋಮಾಳ, ಹಲ್ಲುಗಾವಲುಗಳು, ಕೆರೆಗಳು, ಕೆರೆ ದಂಡೆಗಳು, ಅಂತರ್ಜಲ, ರಸ್ತೆಗಳು, ಸೇತುವೆಗಳು, ಗಣಿಗಳು ಇತ್ಯಾದಿ ಸಾರ್ವಜನಿಕ ಸ್ವತ್ತುಗಳನ್ನು ಸಂರಕ್ಷಿಸತಕ್ಕದ್ದು.

ಜಿ) ಗ್ರಾಮ ಪ್ರದೇಶದಲ್ಲಿ ಜನಪದ ಕಲೆ, ಕರಕುಶಲ ಕಲೆ ಗೃಹ ಕೈಗಾರಿಕೆಗಳು ಮತ್ತು ಗುಡಿ ಕೈಗಾರಿಕೆಗಳ ಪುನರುಜ್ಜೀವನಕ್ಕೆ ಯತ್ತೇಜನ ನೀಡತಕ್ಕದ್ದು.

ಹೆಚ್) ಗ್ರಾಮದ ನಿವಾಸಿಗಳಿಗೆ ರಕ್ಷಣೆ, ಭದ್ರತೆ ಸ್ವಾತಂತ್ರ್ಯ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಐ) ಅಲ್ಲಿಯ ಸಾಂಸ್ಕೃತಿ ಪರಂಪರೆ, ಸಾಂಸ್ಕೃತಿ ಅನನ್ಯತೆಯನ್ನು, ವಿವಾದಗಳನ್ನು ಬಗೆಹರಿಸಿಕೊಳ್ಳಲು ಅವರು ಅನುಸರಿಸುತ್ತಿರುವ ಸಾಂಪ್ರದಾಯಿಕ ವಿಧಾನವನ್ನು ಸಂರಕ್ಷಿಸಲು ಸಮರ್ಥರಾಗಿರತಕ್ಕದ್ದು.

ಜೆ) ಜಾತಿ, ಪಂಥ, ಧರ್ಮ ಮತ್ತು ಲಿಂಗ ಆಧಾರದ ಮೇಲೆ ಜನರ ಮಧ್ಯೆ ಇರುವ ತಾರತಮ್ಯವನ್ನು ತಡಗಟ್ಟಲು ಕ್ರಮ ತೆಗೆದುಕೊಳ್ಳತಕ್ಕದ್ದು.

ಕೆ) ಪಂಚಾಯತ್ ಪ್ರದೇಶದಲ್ಲಿ ಅಕ್ರಮವಾಗಿ ಲೇವಾದೇವಿ ನಡೆಸುವ ಚಟುವಟಿಕೆಗಳನ್ನು ತಡೆಯತಕ್ಕದ್ದು. ಅಂಥ ಚಟುವಟಿಕೆ ವಿರದ್ಧ ಸೂಕ್ತ ಕ್ರಮ ಕೈಗೊಳ್ಳವ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿ ಮಾಡುವಿದಕ್ಕೆ ಅನುವಾಗುವಂತೆ ಗ್ರಾ.ಪಂ.ಗೆ ಮಾಹಿತಿ ನೀಡತಕ್ಕದ್ದು.

### ಗ್ರಾಮ ಸಭೆಯ ಹಣಕಾಸು ಮತ್ತು ಲೆಕ್ಕ ಪರಿಶೋಧನೆ

(ಎ) ಆಯವ್ಯಯ ಏರ್ಪಾಟುಗಳನ್ನು, ಯೋಜನಾ ವೆಚ್ಚದ ವಿವರಗಳನ್ನು ಮತ್ತು ಪ್ರತಿಯೊಂದು ಕೆಲಸ ಕಾರ್ಯಕ್ಕೆ ನಿಧಿಗಳ ಹಂಚಿಕೆಯನ್ನು ಮತ್ತು ಗ್ರಾಮ ಪದೇಶದಲ್ಲಿ ಕಾರ್ಯಗತಗೊಳಿಸಬೇಕೆಂದು ಪ್ರಸ್ತಾಪೆಸಿರುನ ಅಥವಾ ಕಾರ್ಯಗತಗೊಳಿಲು ಉದ್ದೇಶಿಸಿರುವ ಕಾಮಗಾರಿಗಳ ಅಂದಾಜಿನ ಮತ್ತು ಸಾಮಗ್ರಿಗಳ ವೆಚ್ಚಗಳ ವಿವರಗಳನ್ನು ಸಹ ಸಿದ್ಧಪಡಿಸಬಹುದು.

ಪ್ರತಿ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ ಎಲ್ಲಾ ಗ್ರಾಮಸಭಾಗಳ ವಿಶೇಷ ಸಭೆಯಲ್ಲಿ ಅವುಗಳನ್ನು ಚರ್ಚಿಸಬಹುದು ಮತ್ತು ಅನುಮೋದಿಸಬಹುದು.

(ಬಿ) ಹಿಂದಿನ ಆರ್ಥಿಕ ವರ್ಷದ ಲೆಕ್ಕಪತ್ರಗಳ ವಾರ್ಷಿಕ ವರದಿಯನ್ನು, ಕಳೆದ ವರ್ಷದ ಲೆಕ್ಕಪರಿಶೋಧನಾ ಮತ್ತು ಅದಕ್ಕೆ ಉತ್ತರಗಳನ್ನು ಮತ್ತು ಪಂಚಾಯತ್ ಜಮಾ– ಬಂದಿ ವರದಿಯನ್ನು ಸಿದ್ಧಪಡಿಸಬಹುದು ಮತ್ತು ಆ ಬಗ್ಗೆ ಕೈಗೊಂಡ ಕ್ರಮವನ್ನು ಪ್ರತಿ ವರ್ಷದ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಎಲ್ಲಾ ಗ್ರಾಮಸಭೆಗಳ ವಿಶೇಷ ಸಭೆಯಲ್ಲಿ ಚರ್ಚಿಸಬಹುದು ಮತ್ತು ಅದನ್ನು ಅನುಮೋದಿಸಬಹುದು.

**ಉ.ಪ್ರ.– 6:**

- ಗ್ರಾಮಸಭಾದ ನಿರ್ಣಯಗಳ ಬಗ್ಗೆ ಅನುಸರಣಾ ಕ್ರಮ ಕೈಗೊಳ್ಳಲಾಗಿದೆಯೇ ಎನ್ನುವ ಬಗ್ಗೆ ಮಾಹಿತಿಯನ್ನು ಗ್ರಾಮ ಪಂಚಾಯತ್‌ನಿಂದ ಪಡೆದುಕೊಳ್ಳುವುದು.
- ಗ್ರಾಮ ಪಂಚಾಯತ್ ಅಧಿಕಾರಿಗಳು ಯಾವ ಯಾವ ಸೇವೆಗಳನ್ನು ಸಲ್ಲಿಸುತ್ತಿದ್ದಾರೆ ಮತ್ತು ಗ್ರಾಮಸಭಾದ ಸಭೆಯ ನಂತರದ 6 ತಿಂಗಳುಗಳ ಅವಧಿಯಲ್ಲಿ ಅವರು ಕೈಗೊಳ್ಳಲು ಉದ್ದೇಶಿಸಿರುನ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಗ್ರಾಮ ಪಂಚಾಯತ್ ಅಧಿಕಾರಿಗಳಿಂದ ಕೇಳಬಹುದು ಮತ್ತು ಪಡೆದುಕೊಳ್ಳಬಹುದು.

### ಪ್ರಕರಣ 3(F) : ಗ್ರಾಮ ಸಭೆಯ ಕರ್ತವ್ಯಗಳು

1. ಎಲ್ಲಾ ವರ್ಗದ ಜನರಿಗೆ ವಿಶೇಷವಾಗಿ ದುರ್ಬಲರು ಮತ್ತು ಅಲೆಮಾರಿ ಕಾರ್ಮಿಕರಿಗೆ ಎಲ್ಲಾ ಯೋಜನೆಗಳು ಲಾಭದಾಯಕವೇ ಎಂಬುದನ್ನು ಖಚಿತಪಡಿಸುವುದು.
2. ಪ್ರತಿಯೊಂದು ಜನವಸತಿ ಸಭಾಗಳು ಹಾಗೂ ವಾರ್ಡ್ ಸಭಾಗಳ ಅಗತ್ಯಗಳನ್ನು ನೋಡಿಕೊಂಡು 'ಆದ್ಯತಾ ಶ್ರೇಣಿಯ' ವಿಧಾನದ ಪ್ರಕಾರ ಪಂಚಾಯತ್ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಎಲ್ಲಾ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಆದ್ಯತೆನ್ನು ನಿರ್ಧರಿಸಿ ಕ್ರೋಡಿಕೃತ ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು.
3. ಗ್ರಾಮ ಪಂಚಾಯಿತ್ತಿ, ತಾಲ್ಲೂಕು ಪಂಚಾಯಿತ್ತಿ, ಜಿಲ್ಲಾ ಪಂಚಾಯಿತ್ತಿ ಅಥವಾ ಸರ್ಕಾರವು ನಿಗದಿಪಡಿಸಿದ ಮಾನದಂಡದ ಆಧಾರದ ಮೇಲೆ ಉದ್ದೇಶಿತ ಯೋಜನೆಗಳ ಅಡಿಯಲ್ಲಿ ಪಂಚಾಯತ್ ಪ್ರದೇಶದಿಂದ ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಆಯ್ಕೆ ಮಾಡುವುದು ಮತ್ತು ಸಲಹೆಗಳನ್ನು ಪರಿಗಣಿಸಿದ ತರವಾಯ 'ಆದ್ಯತಾ ಶ್ರೇಣಿಯ' ಅನ್ವಯ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಜನವಸತಿ ಮತ್ತು ವಾರ್ಡ್ ಸಭಾಗಳು ಕಳುಹಿಸಿದ ಕ್ರಮದಲ್ಲಿ ಸೇರಿಸಲು ಗ್ರಾ.ಪಂ.ಗೆ ಕಳುಹಿಸತಕ್ಕದ್ದು.
4. ಪಂಚಾಯತ್ ಪ್ರದೇಶದಲ್ಲಿ ನೈರ್ಮಲ್ಯ ವ್ಯವಸ್ಥೆ ಒದಗಿಸುವಲ್ಲಿ ಗ್ರಾಮ ಪಂಚಯಿತ್ತಿ ಕಾರ್ಯನಿರ್ವಾಹಕ ಸಿಬ್ಬಂದಿಗೆ ನೆರವಾಗುವುದು

 downloaded from: www.kpscvaani.com

ಮತ್ತು ಗ್ರಾಮದ ಪ್ರದೇಶದಲ್ಲಿ ಬಯಲು ಬಹಿರ್ದೆಸೆ ಮುಕ್ತ ಸ್ವಚ್ಛ ಮತ್ತು ಆರೋಗ್ಯಕರ ಪರಿಸರವನ್ನು ಸೃಷ್ಟಿಸುವುದು ಮತ್ತು ಕಸ ಸಾಗಣೆಗೆ ಸ್ವಯಂ ಸೇವಕರನ್ನು ಸಜ್ಜುಗೊಳಿಸುವುದು.

5. ತೆರಿಗೆಯನ್ನು ಮತ್ತು ಇತರ ಬಾಕಿಗಳನ್ನು ಪಾವತಿಸುವಂತೆ ಮತ್ತು ಸ್ವಚ್ಛತೆ ಕಾಪಾಡುವಂತೆ ಗ್ರಾಮ ಸಭಾ ಸದಸ್ಯರ ಮನವೊಲಿಸುವುದು.
6. ಗ್ರಾಮ ಪಂಚಾಯ್ತಿ ಪ್ರದೇಶದ ಒಳಗೆ ಇರುವ ಗೋಮಾಳ, ಹುಲ್ಲುಗಾವಲುಗಳು, ಕೆರೆಗಳು, ಕೆರೆ ಅಚ್ಚುಕಟ್ಟು ಪ್ರದೇಶದ, ಅಂತರ್ಜಲ, ರಸ್ತೆಗಳು, ಸೇತುವೆಗಳು, ಗಣಿಗಳು ಮುಂತಾದ ಸಾರ್ವಜನಿಕ ಸ್ವತ್ತುಗಳನ್ನು ಸಂರಕ್ಷಿಸುವುದು ಮತ್ತು ನಿರ್ವಹಿಸುವುದು.
7. ಗ್ರಾಮದ ನಿವಾಸಿಗಳು ಸುರಕ್ಷೆಯಿಂದ ಇರಯವದನ್ನು, ಭದ್ರತೆ ಒದಗಿಸಿರುವುದನ್ನು ಮತ್ತು ಸ್ವಾತಂತ್ರ್ಯದಿಂದ ಇರುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು.

### ಪ್ರಕರಣ- 3(G) : ಗ್ರಾಮ ಸಭಾದ ಸಾಮಾನ್ಯಸಭೆ

1. ಮೊದಲ ಸಭೆ :- ಗ್ರಾ. ಪಂ. ರಚನೆಯಾದ "60 ದಿನದೊಳಗಿ" ಮೊದಲ ಗ್ರಾಮ ಸಭೆಯನ್ನು ಕರೆಯತಕ್ಕದ್ದು. ನಂತರ ಪ್ರತಿ "6 ತಿಂಗಳಿಗೊಮ್ಮೆ" ನಿರ್ಧರಿಸಿದ ದಿನಾಂಕದಂದು ಗ್ರಾಮಸಭೆಯನ್ನು ಕರೆಯತಕ್ಕದ್ದು

1) ಗ್ರಾಮಸಭೆ ಕರೆಯುವರು ;- ಗ್ರಾಮಪಂಚಾಯತಿ ಅಧ್ಯಕ್ಷ
2) ಗ್ರಾಮಸಭೆಯ ಅಧ್ಯಕ್ಷತೆ :-ಗ್ರಾ. ಪಂ. ಅಧ್ಯಕ್ಷ / ಉಪಾಧ್ಯಕ್ಷ / ಆಯ್ಕೆಯಾದ ಸದಸ್ಯರೆಲೊಬ್ಬರು ಗ್ರಾಮ ಸಬಾದ ಅಧ್ಯಕ್ಷತೆ ವಹಿಸತಕ್ಕದ್ದು
3) ಗ್ರಾಮಸಭೆ ಕರೆಯದಿದ್ದರೆ ;- ಗ್ರಾ ಪಂ ಅಧ್ಯಕ್ಷನು ನಿಗಧಿತ ಸಮಯದೊಳಗೆ ಗ್ರಾಮಸಭೆಯನ್ನು ಕರೆಯಲು ವಿಫಲನಾದರೆ " ಕಾರ್ಯನಿರ್ವಾಹಕ ಅಧಿಕಾರಿ"ಯು ಸಭೆಯನ್ನು ಕರೆಯಬೇಕು.

- ಸಭೆ ಕರೆಯದ ಗ್ರಾ. ಪಂ. ಅಧ್ಯಕ್ಷನು ಗ್ರಾಮ ಪಂಚಯತಿ ನಿಧಿಗೆ "1000 ರೂ "ದಂಡ" ಪಾವತಿಸಬೇಕು. ಮತ್ತು ಸಭೆ ಕರೆಯದಿರಲು ಕಾರಣಗಳನ್ನು ಮುಂದಿನ ಗ್ರಾಮಸಭೆಯಲ್ಲಿ ತಿಳಿಸಬೇಕು

4) ಗ್ರಾಮ ಸಭೆಯ ಕೋರಂ ;- ಗ್ರಾಮ ಸಭಾದಲ್ಲಿನ ಒಟ್ಟು ಮತದಾರರ ಪೈಕಿ " ಹತ್ತನೆ ಒಂದು ಭಾಗ (1/10) ದಷ್ಟು ಮತದಾರರ ಅಥವಾ 100 ಸದಸ್ಯರು ಇದರಲ್ಲಿ ಯಾವುದು ಕಡಿಮೆಯೋ ಅದು "ಕೋರಂ" ಆಗಿದೆ
5) ಕೋರಂ ಮೀಸಲಾತಿ :- ಪ್ರತಿ ವಾರ್ಡಸಭಾದಿಂದ "ಕನಿಷ್ಠ 10 ಮಂದಿ ಸದಸ್ಯರು" ಗ್ರಾಮ ಸಭೆಯಲ್ಲಿ ಹಾಜರಿರತಕ್ಕದು. ಇದರಲ್ಲಿ ಶೇ 30 ಕ್ಕಿಂತ ಕಡಿಮೆ" ಇಲ್ಲದಂತೆ ಮಹಿಳೆಯರು. ಹಾಗೂ ಪರಿಶಿಷ್ಠ ಜಾತಿ ಮತ್ತು ಪಂಗಡದವ್ಯಕ್ತಿಗಳು ಅವರವರ ಜನಸಂಖ್ಯೆಗೆ ಅನುಗುಣವಾಗಿ ಇರತಕ್ಕದ್ದು.
6) ಕೋರಂ ಇಲ್ಲದಿದ್ದರೆ :- ಸಭೆಗೆ ಅಗತ್ಯೆ ಕೋರಂ ಇಲ್ಲದಿದ್ದರೆ ಅಧ್ಯಕ್ಷತೆ ವಹಿಸಿದವರು. 30 ನಿಮಿಷಗಳವರಗೆ" ಕಾಯಬೇಕು ನಂತರವು ಕೋರಂ ಇಲ್ಲದಿದ್ದರೆ ಮುಂದಿನ ಯಾವುದೇ ದಿನಕ್ಕೆ ಮುಂದೂಡಬಹುದು.ಮುಂದೂಡಿದ ಸಭೆಗೆ "ಕೋರಂ"ನ ಅಗತ್ಯವಿಲ್ಲ.
7) ನಿರ್ಣಯಗಳ ಅಂಗೀಕಾರ :- ಗ್ರಾಮಸಭೆಯಲ್ಲಿ ಚರ್ಚಿಸಲಾದ" ಎಲ್ಲಾ ವಿಷಯಗಳನ್ನು ಹಾಗೂ ಮಂಡನೆಯಾದ ಎಲ್ಲ ನಿರ್ಣಯಗಳನ್ನು ಹಾಜರಿರುವ ಸದಸ್ಯರ ಬಹುಮತದ ಮೂಲಕ ಅಂಗೀಕರಿಸತಕ್ಕದ್ದು.
8) ದಾಖಲಾತಿ :- ಗ್ರಾಮ ಸಭೆಯಲ್ಲಿನ ಎಲ್ಲಾವಿವರಗಳನಗನು "ಟಿಪ್ಪಣಿ (ನಡಾವಳಿ) ಪುಸ್ತಕದಲ್ಲಿ" ದಾಖಲಿಸಬೇಕು ನಂತರ ಅಧ್ಯಕ್ಷ ಪ್ರಮಾಣಿಕರಿಸಬೇಕು.

### ಪ್ರಕರಣ 3(H) : ಗ್ರಾಮಸಭಾದ "ವಿಶೇಷ ಸಭೆ"

**ಉ.ಪ್ರ-1)**

ಗ್ರಾಮ ಸಭಾದ ವ್ಯಾಪ್ತಿಯೊಳಗೆ ಇರುವ "ಮಹಿಳೆಯರು, ಪರಿಶಿಷ್ಠ ಜಾತಿ ಪಂಗಡಗಳು, ರೈತರು, ಕರಕುಶಲ ಕೆಲಸಗಾರರು, ಯುವ ಜನರು, ಮತ್ತು ಹಿರಿಯ ನಾಗರಿಕರ ಗುಂಪುಗಳು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೋಳ್ಳಲು ಮತ್ತು ಅಭಿವೃದ್ದಿಗಾಗಿ ಕಾಲಕಾಲಕ್ಕೆ ಸಭೆನಡೆಸಿ ಸಲಹೆ ಸಹಿತ ತಮ್ಮ ಗುಂಪಿನ ರೂಪುರೇಷೆಗಳನ್ನು ಗ್ರಾಮ ಸಭೆಯ ಮುಂದಿಡಬಹುದು.

**ಉ.ಪ್ರ-2)**

ಗ್ರಾ.ಪಂ. ಅಧ್ಯಕ್ಷನು ಈ ಕೆಳಗಿನ ಕಾರಣಗಳಿಂದ ವಿಶೇಷ ಗ್ರಾಮ ಸಭೆಯನ್ನುಕರೆಯ ಬಹುದಾಗಿದೆ.

1. ಪರಿಶಿಷ್ಠ ಜಾತಿ ಮತ್ತು ಪಂಗಡಗಳು, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ SC, ST ಮಹಿಳೆಯರು ಮತ್ತು ಮಕ್ಕಳ ಸಬಲಿಕರಣಕ್ಕಾಗಿ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ಈ ಸಭೆಯನ್ನು ಕನಿಷ್ಠ ವರ್ಷಕ್ಕೆ 1 ಬಾರಿಯಾದರು ಕರೆಯತಕ್ಕದ್ದು.
2. ಗ್ರಾಮ ಸಭಾದ ಶೇ.10 ರಷ್ಟು ಸದಸ್ಯರು ಲಿಖಿತ ಬೇಡಿಕೆ ಇಟ್ಟರೆ ನಿರ್ದಿಷ್ಟ ವಿಷಯದ ಕುರಿತು ಚರ್ಚಿಸಲು ವಿಶೇಷ ಗ್ರಾಮ ಸಭೆಯನ್ನು ಕರೆಯಬೇಕು. ಇಂತ ಯಾವುದೇ ವಿಶೇಷ ಸಭೆಗಳ ನಡುವೆ "3 ತಿಂಗಳ ಅಂತರವಿರಬೇಕು"
3. ಏಪ್ರೀಲ್ & ಅಕ್ಟೋಬರ್ ತಿಂಗಳ ವಿಶೇಷ ಗ್ರಾಮಸಭೆ

a) **ಏಪ್ರೀಲ್** : ಹಿಂದಿನ ವರ್ಷದ ವಾರ್ಷಿಕ ಲೇಕ್ಕ ಪತ್ರ, ಲೇಕ್ಕ ಪರಿಶೋಧನಾವರದಿ, ಜಮಾ ಬಂದಿ ವರಧಿ

b) **ಅಕ್ಟೋಬರ್** : ಯೋಜನಾ ವೆಚ್ಚದ ವಿವರ, ನಿಧಿಯ ಹಂಚಿಕೆ, ಕಾಮಗಾರಿಗಳ ಅಂದಾಜು, ಸಾಮಾಗ್ರಿ ವೆಚ್ಚ.

downloaded from: www.kpscvaani.com


# ಅಧ್ಯಾಯ 3

# ಗ್ರಾಮ ಪಂಚಾಯತಿಗಳು ಹಾಗೂ ಸ್ಥಾಯಿ ಸಮಿತಿಗಳ ರಚನೆ

## ಪ್ರಕರಣ 4: ಗ್ರಾಮ ಪಂಚಾಯತಿ ಪ್ರದೇಶದ ಘೋಷಣೆ ಗ್ರಾಮ ಪಂಚಾಯತಿಗಳ ಸ್ಥಾಪನೆ

**ಉ. ಪ್ರ–01**

1. ಸರಕಾರಿ ಆದೇಶದನ್ವಯ "ಜಿಲ್ಲಾಧಿಕಾರಿಯು" 5000–7000" ಜನಸಂಖ್ಯೆಗೆ ಒಂದು ಗ್ರಾಮ ಪಂಚಾಯತಿಯನ್ನು ರಚಿಸಬಹುದು. ವಿಶೇಷ ವಿನಾಯಿತ ಜಿಲ್ಲೆಗಳು:– ಬೆಳಗಾವಿ, ಚಿಕ್ಕಮಗಳೂರು, ದ.ಕನ್ನಡ, ಉ.ಕನ್ನಡ, ಹಾಸನ,ಕೊಡಗು, ಶಿವಮೊಗ್ಗ, ಉಡುಪಿ, ಧಾರವಾಡ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ "2500 ಜನಸಂಖ್ಯೆಗೆ" (1999 ಕ್ಕೆ ಮೊದಲು–6000) ಕಡಿಮೆ ಇಲ್ಲದ ಪ್ರದೇಶವನ್ನು ಗ್ರಾಮ.ಪಂಚಾಯತಿ ಎಂದು ಘೋಷಿಸಬಹುದು
2. ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ. ಅವಶ್ಯಕ ಎಂದು ಕಂಡು ಬಂದಲ್ಲಿ ಮತ್ತು ಮೇಲಿನ 10 ಜಿಲ್ಲೆಗಳ ಪ್ರದೇಶಗಳಲ್ಲಿ 5. ಕಿ.ಮಿ ತ್ರಿಜ್ಯ 10 ಕಿ. ಮೀ ವ್ಯಾಸದ ಪ್ರದೇಸವನ್ನು ಪಂಚಾಯತಿ ಎಂದು ಘೋಷಿಸಬಹುದು
3. ಜಿಲ್ಲಾಧಿಕಾರಿಯು ಸರಕಾರದ ವಿಶೇಷ ಅನುಮತಿ ಪಡೆದು 5000 ಕ್ಕಿಂತ ಕಡಿಮೆ 7000 ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಯಾವುದೇ ಗ್ರಾಮ & ಗ್ರಾಮಗಳ ಗುಂಪನ್ನು ಪಂಚಾಯತಿ ಪ್ರದೇಶ ಎಂದು ಘೋಷಿಸಬಹುದು.

**ಉ.ಪ್ರ–02: ಜಿಲ್ಲಾಧಿಕಾರಿಗಳಿಗೆ ಇರುವ ಅಧಿಕಾರಗಳು**

1. ಯಾವುದೇ ಪಂಚಾಯತಿ ಪ್ರದೇಶದೊಳಗೆ ಯಾವುದೇ ಗ್ರಾಮ ಗ್ರಾಮಗಳ ಗುಂಪನ್ನುಸೇರಿಸಿ ಹೆಚ್ಚಿಸಬಹುದು ಮತ್ತು ತೆಗೆದು ಕಡಿಮೆ ಮಾಡಬಹುದು
2. ಯಾವುದೇ ಪಂಚಾಯತಿಯ ಕೇಂದ್ರ ಸ್ಥಾನ ಬದಲಾಯಿಸಬಹುದು.
3. ಯಾವುದೇ ಪಂಚಾಯತಿಯ ಹೆಸರನ್ನು ಬದಲಾಯಿಸಬಹುದು.
4. ಯಾವುದೇ ಪ್ರದೇಶವನ್ನು ಪಂಚಯತಿ ಪ್ರದೇಶ ಆಗಿಲ್ಲ ಎಂದು ಘೋಷಿಸಬಹುದು.

## ಪ್ರಕರಣ 5: ಗ್ರಮ ಪಂಚಾಯತಿ ರಚನೆ

1. ಪ್ರತಿ 400 ಜನಸಂಖ್ಯೆಗೆ ಒಬ್ಬರಂತೆ ಗ್ರಾಮ ಪಂಚಾಯತಿ ಸದಸ್ಯರ ಆಯ್ಕೆ ನಡೆಯುತ್ತದೆ
2. ಕಾಲಕಾಲಕ್ಕೆ ರಾಜ್ಯ ಚುನಾವಣಾ ಆಯೋಗ ನಿಗಧಿ ಪಡಿಸಿದ "ಚುನಾಯತ ಸದಸ್ಯರನ್ನು" ಗ್ರಾಮ ಪಂಚಾಯತಿ ಹೊಂದಿರತಕ್ಕದ್ದು

**(ಉ.ಪ್ರ–2) ಮೀಸಲಾತಿ :**

- ರಾಜ್ಯ ಚುನಾವಣಾ ಆಯೋಗದ ಆದೇಶದನ್ವಯ "ಜಿಲ್ಲಾಧಿಕಾರಿ" ಯವರು ಮೀಸಲಾತಿ ನಿಗಧಿ ಪಡಿಸುತ್ತಾರೆ
- SC/ST ಮೀಸಲಾತಿ :– ಖಅ/ಖಖ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿ ನಿಗಧಿಪಡಿಸಬೇಕು
- ಪ್ರತಿ ಗ್ರಾ.ಪಂ.ಯಲ್ಲಿ SC/ST ಗೆ ಕನಿಷ್ಠ ಒಂದೊಂದು ಸ್ಥಾವನ್ನಾದರು ಮೀಸಲಿಡಬೇಕು

**(ಉ.ಪ್ರ–3) ಹಿಂದುಳಿದ ವರ್ಗಗಳು:**

- OBC. ವರ್ಗಗಳಿಗೆ ಶೇ–1/3 ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕು ಅದರಲ್ಲಿ ಪ್ರವರ್ಗ– A.ಗೇ ಶೇ.80 ರಷ್ಟು ಮತ್ತು ಪ್ರವರ್ಗ– B ಗೇ ಶೇ.20 ರಷ್ಟು ಮೀಸಲಾತಿ ನೀಡಬೇಕು

**(ಉ.ಪ್ರ–4) ಮಹಿಳಾ ಮೀಸಲಾತಿ:**

- ಶೇ–50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು
- **ಮೀಸಲಾತಿ ಹಂಚಿಕೆ:** ಈ ಮೀಸಲಾತಿ ಸ್ಥಾನಗಳನ್ನು ಪಂಚಾಯತಿಯ ಬೇರೆ–ಬೇರೆ ಕ್ಷೇತ್ರಗಳಿಗೆ ಹಂಚಿಕೆ ಮಾಡತಕ್ಕದ್ದು. ಈ ಹಂಚಿಕೆಯು "10 ವರ್ಷಗಳವರಗೆ" ಮುಂದುವರೆಯುತಕ್ಕದ್ದು.

**(ಉ.ಪ್ರ–5) ಜಿಲ್ಲಾಧಿಕಾರಿಯ ಅಧಿಕಾರಗಳು**

1) ಚುನಾವಣಾ ಕ್ಷೇತ್ರಗಳ(ವಾರ್ಡ) ವಿಂಡಣೆ ಮತ್ತು ನಿಗದಿ
2) ವಾರ್ಡಿನ ವ್ಯಾಪ್ತಿಯನ್ನು ನಿಗಧಿ ಪಡಿಸುವುದು
3) ಪ್ರತಿಯೊಂದು ವಾರ್ಡಿನ ಸ್ಥಾನಗಳನ್ನು ನಿಗಧಿಮಾಡುವುದು.

**(ಉ.ಪ್ರ–6) ಮರುಚುನಾವಣೆ :**

- 1ನೇ ಉಪಪ್ರಕರಣದಲ್ಲಿ ನಿರ್ಧಿಪಡಿಸಿದಂತೆ ಅಗತ್ಯಪಡಿಸಿದಂಷ್ಟು ಸದಸ್ಯರು (2/3) ಚುನಾಯಿತರಾಗಿದಿದ್ದರೆ ಚುನಾಯಿತ ಸದಸ್ಯರ ಹೆಸರು ಪ್ರಕಟಿಸಿದ ಒಂದು ತಿಂಗಳೊಳಗೆ ಆಅ ಯವರು ಮತ್ತೊಂದು ಚುನಾವಣೆ ನಡೆಸಬೇಕು

**(ಉ.ಪ್ರ–7) ಕ್ರಮ ಬದ್ಧವಾದ ಗ್ರಾಮ ಪಂಚಾಯಿತಿ :**

- ಗ್ರಾಮ ಪಂಚಾಯಿತಿಗೆ ಶೇ–2/3 ರಷ್ಟು ಸದಸ್ಯರು ಚನಾಯಿತರಾಗಿದ್ದಾರೆ ಆ ಗ್ರಾಮ ಪಂಚಾಯತಿಯ ಕ್ರಮಬದ್ಧವಾಗಿ ರಚಿತವಾಗಿದೆ ಎಂದು ಬಾವಿಸತಕ್ಕದ್ದು.

**(ಉ.ಪ್ರ–8) ಸದಸ್ಯರ ಹೆಸರು ಪ್ರಕಟಣೆ :**

- ಕ್ರಮ ಬದ್ಧವಾಗಿ ಚುನಾಯಿತರಾಗಿರುವುದಾಗಿ ಬಾವಿಸಲಾದ ಸದಸ್ಯರ ಹೆಸರುಗಳನ್ನು ಜಿಲ್ಲಾಧಿಕಾರಿಯವರು ಗೊತ್ತುಪಡಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು.

## ಪ್ರಕರಣ 6

### ಗ್ರಾಮ ಪಂಚಾಯತಿಯನ್ನು ನಿಗಮಿತಗೊಳಿಸುವುದು

- ಪ್ರತಿಯೊಂದು ಗ್ರಾಮ ಪಂಚಾಯತಿಯು __________ ಗ್ರಾಮ ಪಂಚಾಯತಿ ಎಂಬ ಹೆಸರಿನಿಂದ ನಿಗಮಿತವಾಗಿರುತ್ತಕ್ಕದ್ದು ಹಾಗೂ ಶಾಸ್ವತ ಉತ್ತಾರಾಧಿಕಾರತ್ವವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು.

## ಪ್ರಕರಣ 7

### ಮತದಾನ ವಿಧಾನ ಮತ್ತು ಚುನಾವಣಾ ಕಾರ್ಯವಿಧಾನ

- (ಉ.ಪ್ರ –1) 1) ಪ್ರತಿ ಮತದಾರ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತ ನೀಡುವಂತಿಲ್ಲ ವಾರ್ಡಿನಿಂದ ಎಷ್ಟು ಸದಸ್ಯರು ಚುನಾಯಿತರಾಗ ಬೇಕಾಗಿದೆಯೋ ಅಷ್ಟು ಮತಗಳನ್ನು ಪ್ರತಿಯೊಬ್ಬ ಮತದಾರ ಹೊಂದಿರುತ್ತಾನೆ

downloaded from: www.kpscvaani.com

- (ಉ.ಪ್ರ) 2) ಗ್ರಾಮ ಪಂಚಾಯತಿಗೆ ಚುನಾವಣೆಗಳು ಪಕ್ಷರಹಿತವಾಗಿ ನಡೆಯತ್ತವೆ
- (ಉ.ಪ್ರ) 3) ಮತದಾನ ಯಂತ್ರಗಳ ಮೂಲಕ ಗ್ರಾ.ಪಂ ಚುನಾವಣೆ ನಡೆಸತಕ್ಕದ್ದು.

### ಪ್ರಕರಣ–8
### ಆಡಳತ ಸಮಿತಿ ಹಾಗೂ ಆಡಳಿತಾಧಿಕಾರಿಯ ನೇಮಕ

1. ಗ್ರಾಮ ಪಂಚಾಯತಿಗೆ ಚುನಾವಣೆ ನಡೆಸಲು ತೊಂದರೆ–ಯುಂಟಾದರೆ ಹಾಗೂ ಚುನಾವಣೆಯಲ್ಲಿ 2/3 ಕ್ಕಿಂತ ಸದಸ್ಯರು ಚುನಾಯಿತರಾಗಿದ್ದರೆ ಹಾಗೂ ಅವಧಿ ಮುಗಿದ್ದಿರೆ ಆಗ ಜಿಲ್ಲಾಧಿಕಾರಿಯ ಅಧಿಸೂಚನೆ ಮೂಲಕ ಆಡಳಿತ ಸಮಿತಿ ಹಾಗೂ ಆಡಳಿತಾಧಿಕಾರಿಯನ್ನು ನೇಮಕ ಮಾಡುತ್ತಾರೆ.
2. ಆಡಳಿತ ಸಮಿತಿ ಹಾಗೂ ಆಡಳಿತಾಧಿಕಾರಿಯ ಹುದ್ದೆಯ ಅವಧಿ –6 ತಿಂಗಳು ಆಗಿರುತ್ತದೆ.
3. ಆಡಾಳಿತಾಧಿಕಾರಿ ಹಾಗೂ ಆಡಳಿತ ಸಮಿತಿಯು ನೇಮಕಗೊಂಡಾಗ ಮುಂಚೆ ಆಯ್ಕೆಯಾಗಿದ್ದ ಸದಸ್ಯರ ಸದಸ್ಯತ್ವ ನಿಂತು ಹೋಗುತ್ತದೆ.
4. ಗ್ರಾಮ ಪಂಚಾಯತಿಯು ಕ್ರಮಬದ್ಧವಾಗಿ ರಚನೆಯಾದ ನಂತರ ಜಿಲ್ಲಾಧಿಕಾರಿಯವರು ಆಡಳಿತಾಧಿಕಾರಿಯನ್ನು ಹಿಂತೆದುಕೊಳ್ಳುತ್ತಾರೆ.

### ಪ್ರಕರಣ 9 : ಮತದಾನದ ಹಕ್ಕು

- ಉ.ಪ್ರ 1) ಮತದಾರರ ಪಟ್ಟಿಯಲ್ಲಿ ಹೆಸರಿರುವರು ಮಾತ್ರ ಮತದಾನ ಮಾಡಬಹುದು
- ಉ.ಪ್ರ 2) ಒಬ್ಬ ಮತದಾರ ಒಂದು ಬಾರಿ ಮಾತ್ರ ಮತದಾನ ಮಾಡಬೇಕು
- ಉ.ಪ್ರ 3) ಮತದಾರನು ತನ್ನ ಮತವನ್ನು ಯಾವುದೇ ಅಭ್ಯರ್ಥಿಗೆ ನೀಡದೆ (NOTA) ಚುನಾಯಿಸಬಹುದು
- ಉ.ಪ್ರ 4) ಮತದಾನ ಮಾಡುವುದು ಪ್ರತಿಯೊಬ್ಬ ಮತದಾರನ ಆದ್ಯಕರ್ತವ್ಯ ಮತ್ತು ಕಡ್ಡಾಯವಾಗಿದೆ.

### ಪ್ರಕರಣ 10 : ಮತದಾರರ ಪಟ್ಟಿ

- ಜಿ. ಪಂ. ಯ ಮತದಾರರ ಪಟ್ಟಿಯನ್ನು ಗ್ರಾಮ ಪಂಚಾಯತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿ ಎಂದು ಭಾವಿಸಬೇಕು
- ನಾಮ ಪತ್ರಿಕೆಗಳನ್ನು ಸಲ್ಲಿಸಲು ಇರುವ ಕೊನೆಯ ದಿನಾಂಕದ ನಂತರ ಅಥವಾ ಚುನಾವಣೆಯು ಮುಕ್ತಾಯವಾಗುವುದಕ್ಕೂ ಮುಂಚೆ ಮತದಾರರ ಪಟ್ಟಿಯಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿಲ್ಲ
- ಗ್ರಾಮ ಪಂಚಾಯತಿ ಚುನಾವನಾ ಕ್ಷೇತ್ರದ ಮತದಾರರ ಪಟ್ಟಿಯನ್ನು "ತಹಸೀಲ್ದಾರ" ತಯಾರಿಸುತ್ತಾರೆ. ಮತದಾರರ ಪಟ್ಟಿಯ ಪ್ರತಿಯನ್ನು "ಪಿಡಿಓ /ಕಾರ್ಯದರ್ಶಿಯು" ತಮ್ಮ ಬಳಿ ಇಟ್ಟುಕೋಂಡಿರಬೇಕು.

### ಪ್ರಕರಣ–11–ಸದಸ್ಯತ್ವಕ್ಕೆ ಅರ್ಹತೆ

1. ಭಾರತೀಯ ನಾಗರಿಕನಾಗಿರಬೇಕು
2. 21 ವರ್ಷ ವಯಸ್ಸಾಗಿರಬೇಕು
3. ಮೀಸಲು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮೀಸಲಾತಿ ಹೋಂದಿರಬೇಕು.

### ಪ್ರಕರಣ–11–ಸದಸ್ಯತ್ವಕ್ಕೆ ಅರ್ಹತೆ

1. ಭಾರತೀಯ ನಾಗರಿಕನಾಗಿರಬೇಕು
2. 21 ವರ್ಷ ವಯಸ್ಸಾಗಿರಬೇಕು
3. ಮೀಸಲು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮೀಸಲಾತಿ ಹೋಂದಿರಬೇಕು.

### ಪ್ರಕರಣ– 12–ಸದಸ್ಯರಾಗಲು ಅನರ್ಹತೆ

- 1965 ರ ಅಬಕಾರಿ ಕಾಯ್ದೆಯ ಅನ್ವಯ 3 ತಿಂಗಳಿಗಿಂತ ಹೆಚ್ಚು ಜೈಲು ಶಿಕ್ಷೆ ಒಳಪಟ್ಟ ವ್ಯಕ್ತಿಯಾಗದ್ದರೆ.
- 1973 ರ ಅಪರಾಧ ಕಾಯ್ದೆ ಅನ್ವಯ ಶಿಕ್ಷೆಗೊಳಪಟ್ಟ ವ್ಯಕ್ತಿ
- ಸ್ಥಳೀಯ ಪ್ರಾಧಿಕಾರದ ನೌಕರಿಯಿಂದ ವಜಾದ ವ್ಯಕ್ತಿ
- ಸರ್ಕಾರಿ ನೌಕರಿಯಿಂದ ಭ್ರಷ್ಟಾಚಾರ ಕಾರಣಕ್ಕಾಗಿ ವಜಾಗೊಂಡ ವ್ಯಕ್ತಿ
- ಸಿ.ಎ. ಅಸೋಸಿಯೇಷನ್ ಬಾರ್ ಕೌನ್ಸಿಲ್, ಹಾಗೂ ಮೆಡಿಕಲ್ ಅಸೋಸಿಯೇಷನ್‌ದಿಂದ ವಜಾ ಆದ ವ್ಯಕ್ತಿ.
- ಪಂಚಾಯ್ತಿ ಪರವಾಗಿ ಅಥವಾ ವಿರುದ್ಧವಾಗಿ ವಕೀಲನಾಗಿ ಕೆಲಸ ಮಾಡುತ್ತಿರುವ ವ್ಯಕ್ತಿ.
- ಪಂಚಾಯ್ತಿ ಕಾಮಾಗಾರಿಕೆಯಲ್ಲಿ ಸಿಬ್ಬಂದಿ ಪೂರೈಕೆಯಲ್ಲಿ ಮುಂತಾದ ಹಣಕಾಸು ಚಟುವಟಿಕೆಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹಣಕಾಸಿನ ಸಂಬಂಧ ಹೊಂದಿದ ವ್ಯಕ್ತಿ ಶೌಚಾಲಾಯ ಹೊಂದಿದ್ದರೆ.
- ಪಂಚಾಯ್ತಿಗೆ ಯಾವುದಾದರೂ ಬಾಕಿ ಉಳಿಸಿಕೊಂಡಿದರೆ.

### ಪ್ರಕರಣ–13 – ಸದಸ್ಯರ ಸ್ಥಾನವು ಖಾಲಿಯಾಗುವುದು:–

- 12ನೇ ಪ್ರಕರಣದಡಿ ಅನರ್ಹಗೊಂಡಿದ್ದರೆ.
- ಗ್ರಾ.ಪಂ.ಅನುಮತಿಯಿಲ್ಲದೆ " ಸತತ 3ಕ್ಕಿಂತ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ. ನಿರಂತರವಾಗಿ 4 ತಿಂಗಳಿಗಿಂತ ಹೆಚ್ಚು ಕಾಲ ಗ್ರಾಮ ಪಂಚಾಯತ್ ಪ್ರದೇಶದಿಂದ ಹೊರಗಿದ್ದರೆ.
- ಗೈರು ಹಾಜರಾಗಲು ಅನುಮತಿ ಕೇಳಿ ಪಂಚಾಯತಿಗೆ ಸದಸ್ಯನು ಸಲ್ಲಿಸಿದ್ದಲ್ಲಿ ಅರ್ಜಿಯ ದಿನಾಂಕದಿಂದ 1 ತಿಂಗಳೊಳಗೆ ಪಂಚಾಯತಿಯು ತನ್ನ ನಿರ್ಣಯವನ್ನು ತಿಳಿಸಬೇಕು ತಪ್ಪಿದ್ದಲ್ಲಿ ಅನುಮತಿ ನೀಡಿದೆ ಎಂದು ತಿಳಿಯಬೇಕು.

### ಪ್ರಕರಣ–14– ಏಕ ಕಾಲದ ಸದಸ್ಯತ್ವದ ನಿಷೇಧ:–

- **ಅಭ್ಯರ್ಥಿಯಿಂದ ಆಯ್ಕೆ:–** ಒಬ್ಬ ವ್ಯಕ್ತಿಯು ಗ್ರಾ.ಪಂ.ಯ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿಂದ ಆಯ್ಕೆಯಾದರೆ ಆ ವ್ಯಕ್ತಿಯು ನಿರ್ಧಿಷ್ಠ ಪಡಿಸಿದ ಕಾಲದೊಳಗೆ ಜಿಲ್ಲಾಧಿಕಾರಿಗೆ ಲಿಖಿತ ಪತ್ರವನ್ನು ನೀಡಿ ಒಂದು ಕ್ಷೇತ್ರವನ್ನು ಆಯ್ಕೆಮಾಡಿಕೊಳ್ಳಬೇಕು.
- **ಚೀಟಿ ಎತ್ತುವುದು :–** ಸದಸ್ಯರನು ಒಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳದಿದ್ದಲ್ಲಿ ಜಿಲ್ಲಾಧಿಕಾರಿಯು.
- **ಖಾಲಿಸ್ಥಾನದ ಭರ್ತಿ :–** ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು.

### ಪ್ರಕರಣ–15– ಚುನಾವಣಾ ತಕರಾರು ಅರ್ಜಿ:–

- ಅರ್ಜಿ ಸಲ್ಲಿಕೆ :– ಚುನಾವಣೆ ಸಂಬಂಧಪಟ್ಟ ತಕರಾರು ಅರ್ಜಿಯನ್ನು ಯಾವುದೇ ಅಭ್ಯರ್ಥಿ ಅಥವಾ ಮತದಾರನು ಚುನಾವಣೆ ಫಲಿತಾಂಶ ಘೋಷಣೆಯಾದ "30 ದಿನದೊಳಗೆ ಗೊತ್ತು ಪಡಿಸಿದ ನ್ಯಾಯಾಲಯದಲ್ಲಿ (ಹಿರಿಯ ಸಿವಿಲ್ ನ್ಯಾಯಾಧೀಶ) ಸಲ್ಲಿಸಬಹುದಾಗಿದೆ.
- ಭದ್ರತೆಗಾಗಿ '500 ರೂಪಾಯಿ ಠೇವಣಿ' ಇಡತಕ್ಕದ್ದು.
- ಪ್ರತಿವಾದಿಗಳು: ಅರ್ಜಿದಾರನು ಆಯ್ಕೆಯಾದ ಅಭ್ಯರ್ಥಿಗಳು ಅಥವಾ ನಡೆದ ಚುನಾವಣೆಯು ಅನೂರ್ಜಿತವೆಂದು ಘೋಷಿಸಲು

downloaded from: www.kpscvaani.com 

ಕೇಳಬಹುದು ಹಾಗೂ ಆರೋಪ ಮಾಡಲಾದ ಅಭ್ಯರ್ಥಿಗಳನ್ನು ಪ್ರತಿವಾದಿಗಳಾಗಿಸುವುದು.

- ಕ್ರಮಬದ್ಧತೆ: ಎಷ್ಟು ಪ್ರತಿವಾದಿಗಳಿರುತ್ತಾರೆ ಸಂಖ್ಯೆಯ ಅರ್ಜಿಗಳಿರಬೇಕು.

**ಪ್ರಕರಣ–16– ತಕರಾರು ಅರ್ಜಿಯ ಒಳಾಂಶಗಳು**

- ಪಕ್ಷಕಾರರ ಹೆಸರುಗಳು ಭ್ರಷ್ಟಾಚಾರದ ಮಾಡಲಾದ ದಿನಾಂಕ, ಸ್ಥಳ, ಮತ್ತು ಆರೋಪಿಸುವ ಭ್ರಷ್ಟಾಚಾರದ ಸಂಪೂರ್ಣ ವಿವರಗಳ ನಿರೂಪಣೆ ಇರತಕ್ಕದ್ದು.
- ಅರ್ಜಿಯ ಯಾವುದೇ ಅನುಸೂಚಿ ಅಥವಾ ಅನುಬಂಧಕ್ಕೂ ಅರ್ಜಿದಾರನು "ಸಹಿ ಮಾಡಿರತಕ್ಕದ್ದು.

**ಪ್ರಕರಣ 17: ಚುನಾವಣಾ ತಕರಾರು ಅರ್ಜಿಯ ವಿಚಾರಣೆ**

- ಅರ್ಜಿ ಕ್ರಮಬದ್ಧವಾಗಿಲ್ಲವೆಂದು ಅದನ್ನು ತಿರಸ್ಕರಿಸುವುದು.
- ಒಂದಕ್ಕಿಂತ ಹೆಚ್ಚು ಅರ್ಜಿಗಳು ಸಲ್ಲಿಕೆಯಾದಾಗ ನ್ಯಾಯಾಧೀಶರು ತಮ್ಮ ವಿವೇಚನೆಯ ಮೇರೆಗೆ ವಿಚಾರಣೆ ಮಾಡಬಹುದು.
- ವಿಚಾರಣೆ ಆರಂಭವಾದ 14 ದಿನದೊಳಗೆ ಹೊಸ ಪ್ರತಿವಾದಿಗಳನ್ನು ಹಾಗೂ ಸಾಕ್ಷಿಗಳನ್ನು ಸೇರಿಸಲು ಅವಕಾಶವಿದೆ.
- ಭ್ರಷ್ಟಚಾರಕ್ಕೆ ಪೂರಕವಾದ ವಿವರಗಳನ್ನು ಸೆರಿಸಲು ಅವಕಾಶವಿದೆ
- ವಿಚಾರಣೆಯನ್ನು ಗೊತ್ತು ಪಡಿಸಿದ ನ್ಯಾಯಾಲಯವು 3ನೇ ದಿನವನ್ನು ಮಿರಿ ಮುಂದುಡಬವುದು
- ಈ ವಿಚಾಣೆಯನ್ನು ಸಾದ್ಯಾವಾದಷ್ಟು 6ತಿಂಗಳೋಳಗೆ ಮುಗಿಸಬೆಕು
- 1908 ರ ಸಿವಿಲ್ ಪ್ರಕ್ರಿಯಾ ಸಂಹಿತ ಪ್ರಕಾರ ಅರ್ಜಿ ವಿಚಾರಣೆ ಮಾಡಬೆಕು
- 1872 ರ ಸಾಕ್ಷಿ ಅಧಿನಿಯಮದ ಪ್ರಕಾರ ಸಾಕ್ಷಿಗಳನ್ನು ವಿಚಾರಣೇ ಮಾಡಬೇಕು

**ಪ್ರಕರಣ 18: ಗೊತ್ತುಪಡಿಸಿದ ನ್ಯಾಯಾಲಯದ ತೀರ್ಮಾನ**

- ಚುನಾವಣಾ ತಕರಾರು ಅರ್ಜಿಯನ್ನು ವಜಾ ಮಾಡಬಹುದು
- ಚುನಾವಣೇಯು ಅನೊರ್ಜಿತವೇಂದು ತಿರ್ಪುನಿಡಬಹುದು
- ಚುನಾವಣೇಯು ಉರ್ಜಿತವೇಂದು (ಕ್ರಮಬದ್ದ) ಎಂದು ತಿರ್ಪುನಿಡಬಹುದು
- ಚುನಾವಣೇಯಲ್ಲಿ ಯಾವುದೆ ಭ್ರಷ್ಟಚಾರ ನಡೆದಿದೆ ಅಥವಾ ನಡೆದಿಲ್ಲ ಎಂದು ಹೆಳಬಹುದು
- ಭ್ರಷ್ಟಚಾರ ನಡೆದಿದ್ದು ಸಾಭಿತಾದರೆ ಅದರಲ್ಲಿ ಪಾಲ್ಗೊಂಡವರಿಗೆ ಶಿಕ್ಷೆ ನೀಡಬಹುದು.

**ಪ್ರಕರಣ 19**

**ಚುನಾವಣೆಯು ಅನೂರ್ಜಿತವೆಂದು ಘೋಷಿಸಲು ಕಾರಣಗಳು**

- ಆಯ್ಕೆಯಾದ ಅಭ್ಯರ್ಥಿಯು ಅನರ್ಹನೆಂದು ಸಾಬೀತಾದರೆ
- ಚುನಾಯಿತ ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಯಾವುದೆ ವ್ಯಕ್ತಿ ಭ್ರಷ್ಟಚಾರ ಮಾಡಿದ್ದು ಸಾಬೀತಾದರೆ
- ಕಾನುನು ಬದ್ದವಾಗಿರದ ನಾಮ ಪತ್ರವನ್ನು ಸ್ವೀಕಾರ ಮಾಡಿದ್ದರೆ
- ನ್ಯಾಯ ಬದ್ದವಾದ ನಾಮಪತ್ರವನ್ನು ಅಕ್ರಮವಾಗಿ ತಿರಸ್ಕರಿದಿದ್ದರೆ

**ಪ್ರಕರಣ 20 : ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದಂತಹ ಕಾರಣಗಳು**

- ಚುನಾವಣಾ ತಕರಾರು ಅರ್ಜಿಯನ್ನು ದಾಖಲಿಸಿದ ವ್ಯಕ್ತಿಯು ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಪ್ರಶ್ನಿಸುವದರ ಮೂಲಕ ತಾನು ಅಥವಾ ಇತರ ಯಾವುದೆ ಅಭ್ಯರ್ಥಿಯು ಕ್ರಮಬದ್ದವಾಗಿ ಚುನಾಯಿತರಾಗಿದ್ದಾರೆ ಎಂದು ಘೋಷಣೆ ಮಾಡಬೆಕೆಂದು ಕೊರಿಕೊಂದಿದ್ದರೆ
- ಗೊತ್ತು ಪಡಿಸಿದ ನ್ಯಾಯಲದ ತೀರ್ಮಾನ ಅಂತಿಮವಾಗಿರುತ್ತದೆ.

**ಪ್ರಕರಣ 21**

**ಸಮಾನ ಮತಗಳು ಬಂದಾಗ ಕಾರ್ಯ ವಿಧಾನ**

- ಚುನಾವಣಾ ತಕರಾರು ಅರ್ಜಿಯ ವಿಚಾರಣೆ ಸಮಯದಲ್ಲಿ ಆ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಗಳಿಗೆ ಸಮಾನ ಮತಗಳು ಬಂದಾಗ ಸಿವಿಲ್ ನ್ಯಾಯಾಧೀಶರು ಚೀಟಿ ಎತ್ತುವ ಮೂಲಕ ಅಭ್ಯರ್ಥಿ ಆಯ್ಕೆ ಮಾಡತಕ್ಕದ್ದು **ಪ್ರಕರಣ 22 : ಚುನಾವಣಾ ಭ್ರಷ್ಟಾಚಾರಗಳು**

- 1951ರ ಜನಪ್ರತಿನಿಧಿ ಕಾಯ್ದೆ ಪ್ರಕಾರ ಮತದಾರರನ್ನು ಓಲೈಸಿಕೊಳ್ಳಲು ನೀಡುವ ಲಂಚ
- ಚುನಾವಣಾ ಪ್ರಚಾರ ಸಂದರ್ಭದಲ್ಲಿ ರಾಷ್ಟ್ರಧ್ವಜ, ರಾಷ್ಟ್ರಲಾಂಛನಗಳನ್ನು ಬಳಸಿ ಮತ ಕೇಳುವುದು.
- ಚುನಾವಣಾ ಸಮಯದಲ್ಲಿ ಜಾತಿ, ಧರ್ಮ, ಪ್ರದೇಶ, ಜನಾಂಗ ಇವುಗಳ ಮೇಲೆ ಮತ ಕೇಳುವುದು.
- ಜಾತಿ, ಧರ್ಮ, ಪ್ರದೇಶ, ಜನಾಂಗ ಇವುಗಳ ನಡುವೆ ದ್ವೇಷ ಮೂಡಿಸಿ ಗಲಭೆ ಉಂಟು ಮಾಡುವುದು
- ಮುದ್ರಕರ ಹೆಸರು, ಮುದ್ರಣ ಸಂಖ್ಯೆ ಇಲ್ಲದೆ ಕರಪತ್ರಗಳನ್ನು ಪ್ರಕಟ ಮಾಡಿದರೆ ಮತದಾರರ ಮೇಲೆ ದಬ್ಬಾಳಿಕೆ ನಡೆಸುವುದು.
- ಚುನಾವಣೆಗೆ ನಿಂತ ವ್ಯಕ್ತಿಯ ಚಾರಿತ್ರ್ಯ ವಧೆ ಮಾಡುವುದು ಅಂದರೆ ಅವರ ಬಗೆಗೆ ಇಲ್ಲಸಲ್ಲದ ಅಪಪ್ರಚಾರ ಮಾಡುವುದು.
- ಮತದಾರರಿಗೆ ಮಧ್ಯ ಹಂಚುವುದು, ಮಧ್ಯಪಾನ ಕೂಟಗಳನ್ನು ಏರ್ಪಡಿಸುವುದು.
- ಮೇಲಿನ ಅಪರಾದವು ಸಾಬೀತಾದರೆ ಅವರಿಗೆ ಗರಿಷ್ಠ 5 ವರ್ಷಗಳ ವರೆಗೆ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ.

**ಪ್ರಕರಣ 23 : ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ**

- ಭ್ರಷ್ಟಾಚಾರ ಆರೋಪ ಸಾಬೀತಾದರೆ ಗೊತ್ತುಪಡಿಸಿದ ನ್ಯಾಯಾಲಯದ ನಿರ್ಣಯದ ದಿನಾಂಕದಿಂದ "5 ವರ್ಷಗಳ ಅವಧಿಯವರಿಗೆ ಯಾವುದೇ ಸ್ಥಳೀಯಯ ಪ್ರಾಧಿಕಾರದ ಸದಸ್ಯತ್ವಕ್ಕೆ ಅನರ್ಹನಾಗುವರು.

**ಪ್ರಕರಣ 24: ಆದೇಶಗಳನ್ನು ತಿಳಿಸುವುದು**

- ಗೊತ್ತುಪಡಿಸಿದ ನ್ಯಾಯಾಲಯವನ್ನು ಆದೇಶಗಳನ್ನು ಪ್ರಕಟಿಸಿದ ನಂತರ ಅದರ ಒಂದು ಪ್ರತಿಯನ್ನು ರಾಜ್ಯ ಚುನಾವಣಾ ಆಯುಕ್ತರಿಗೆ ಮತ್ತು ಸಂಬಂಧಪಟ್ಟ ಪಂಚಾಯತಿಗೆ ಕಳುಹಿಸತಕ್ಕದ್ದು.

**ಪ್ರಕರಣ 24(ಬ) : ಬಾಕಿ ಪ್ರಕರಣಗಳ ವರ್ಗಾವಣೆ**

- ಕರ್ನಾಟಕ ಪಂಚಾಯತ್‌ರಾಜ್ [2ನೇ ತಿದ್ದುಪಡಿ] ಅಧಿನಿಯಮ–2015' ಪ್ರಾರಂಭಕ್ಕೂ ಮೊದಲು ಚುನಾವಣಾ ವಿವಾದಗಳಿಗೆ

 downloaded from: www.kpscvaani.com

ಸಂಬಂಧಿಸಿದಂತೆ" ಕಿರಿಯ ಸಿವಿಲ್ ಜಡ್ಜ್ ಅಥವಾ ಹಿರಿಯ ಸಿವಿಲ್ ಜಡ್ಜ್" ರವರ ನ್ಯಾಯಾಲಯಗಳಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳು "ಗೊತ್ತುಪಡಿಸಿದ ನ್ಯಾಯಾಲಯಕ್ಕೆ ವರ್ಗಾಹಿಸತಕ್ಕದ್ದು

**ಪ್ರಕರಣ 25: ಸ್ಥಾನವು ಖಾಲಿಯಾದರೆ ಹೊಸ ಚುನಾವಣೆಗಳು**

- ಯಾವುದೇ ಸದಸ್ಯನ ಸ್ಥಾನವು ಖಾಲಿಯಾದರೆ ಖಾಲಿಯಾದ ಸ್ಥಾನಕ್ಕೆ 6 ತಿಂಗಳೊಳಗೆ' ಹೊಸ ಚುನಾವಣೆ ನಡೆಸಬೇಕು

**ಪ್ರಕರಣ 26: ಮತದಾನದ ಕೇಂದ್ರದಲ್ಲಿ ಅದರ ಬಳಿಯಲ್ಲಿ ಚುನಾವಣಾ ಪ್ರಚಾರನಿಷೇಧ**

- ಮತ ನೀಡುವಂತೆ ಮನ ಒಲಿಸಲು ಒತ್ತಾಯಿಸುವುದು
- ಚುನಾವಣೆಗೆ ಸಂಬಂಧಪಟ್ಟ ಯಾವುದೇ ನೋಟಿಸು/ ಸಂಕೇತಗಳನ್ನು' ಪ್ರದರ್ಶಸುವಂತಿಲ್ಲ. [ಉ.ಪು.2]2 ಈ ನಿಯಮ ಉಲ್ಲಂಘಿಸಿದರೆ. "500. ರೂಪಾಯಿ ದಂಡ" ಹಾಕಲಾಗುವುದು.

**ಪ್ರಕರಣ 27: ಮತದಾನ ಕೇಂದ್ರದಲ್ಲಿ ಅವುಗಳ ಹತ್ತಿರ ಅನುಚಿತ ನಡೆತೆಗಾಗಿ ದಂಡನೆ**

[ಉ.ಪು.–1]

1, ಮತದಾನ ಕೇಂದ್ರದಲ್ಲಿ ಅದರ ಪ್ರವೇಶ ದ್ವಾರದೊಳಗೆ "ಧ್ವನಿವರ್ಧಕಗಳನ್ನು ಬಳಸಿ ಪ್ರಚಾರ ಮಾಡವಂತಿಲ್ಲ

2. ಮತದಾನಕ್ಕೆ ನೇಮಕವಾಗಿರುವ ಚುನಾವಣಾ ಸಿಬ್ಬಂದಿಗೆ ಕಿರುಕುಳ ನೀಡುವುದು ಮತದಾನಕ್ಕೆ ಅಡಿಪಡಿಸುವುದು ಅಪರಾಧವಾಗಿದೆ.

[ಉ.ಪು.–2]

3. ಈ ನಿಯಮ ಉಲ್ಲಂಘಿಸಿದ ವ್ಯಕ್ತಿಗೆ "3 ತಿಂಗಳು ಜೈಲು ಶಿಕ್ಷೆ" ವಿಧಿಸಬಹುದಾಗಿದೆ

[ಉ.ಪು.–3]

4. ದುರ್ನಡತೆ ತೋರುವ ವ್ಯಕ್ತಿಗಳನ್ನು ಬಂದಿಸುವಂತೆ 'ಪ್ರಿಸಿಡಿಂಗ್ ಆಫಿಸರ್' ಪೋಲಿಸ್ ಅಧಿಕಾರಿಗೆ ನಿರ್ದೆಶಿಸಬಹುದು.

**ಪ್ರಕರಣ 28: ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡನೆ**

[ಉ.ಪು–01]

1) ಮತದಾನ ಕೇಂದ್ರದಲ್ಲಿ ಯಾವುದೇ ವ್ಯಕ್ತಿ ದುರ್ನಡತೆ ತೊರಿಸಿದರೆ ಅಂಥವರನ್ನು "ಮತಗಟ್ಟೆ ಅಧಿಕಾರಿ" ಮತದಾನದಕೇಂದ್ರದಿಂದ ಹೊರ ಹಾಕಬಹುದು.
2) ಮತದಾನ ಹಕ್ಕುಳ್ಳ ವ್ಯಕ್ತಿಗೆ ಮತ ಚಲಾಯಿಸಲು ಅಡ್ಡಿ ಪಡಿಸುವಂತಿಲ್ಲ
3) ದುರ್ನಡತೆಗಾಗಿ ಹೊರ ಹಾಕಿದ ವ್ಯಕ್ತಿ ಮತದಾನ ಕೇಂದ್ರವನ್ನು ಮತ್ತೆ ಪ್ರವೇಶಿಸಿದರೆ ದುರ್ನಡತೆ ತೋರಿದರೆ 3ತಿಂಗಳ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಬಹುದಾಗಿದೆ.

**ಪ್ರಕರಣ 29: ಮತದಾನದ ರಹಸ್ಯವನ್ನು ಕಾಪಾಡುವುದು**

1) ಚುನಾವಣೆಯಲ್ಲಿ ಮತ ದಾಖಲಿಸುವುದಕ್ಕೆ ಮತ್ತು ಮತ ಎಣಿಸುವುದಕ್ಕೆ ಸಂಬಂಧಿಸಿದಂತೆ ಮತದಾರರು, ಅಧಿಕಾರಗಳು, ಏಜೆಂಟರು ಮತ್ತು ಇತರೆ ವ್ಯಕ್ತಿಗಳು ಮತದಾನದ ರಹಸ್ಯವನ್ನು ಕಾಪಾಡಬೇಕು.
2) ಈ ನಿಯಮ ಉಲ್ಲಂಘಿಸಿದರೆ 3 ತಿಂಗಳು ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದಾಗಿದೆ.

**ಪ್ರಕರಣ 30: ಚುನಾವಣೆಯಲ್ಲಿ ಅಧಿಕಾರಿಗಳು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡುವಂತಿಲ್ಲ /ಮತದಾನದ ಮೇಲೆ ಪ್ರಭಾವ ಬೀರುವಂತಿಲ್ಲ**

1) ಚುನಾವಣಾ ಕಾರ್ಯಕ್ಕೆ ನೇಮಕಗೊಂಡ ಸಿಬ್ಬಂದಿ ಅಥವ ಪೋಲಿಸ್ ಅಧಿಕಾರಿಗಳು ಯಾವುದೇ ಅಭ್ಯರ್ಥಿಯ ಪರವಾಗಿ ಕೆಲಸಮಾಡುವಂತಿಲ್ಲ ಹಾಗೂ ಮತಹಾಕುವಂತೆ ಅಥವಾ ಹಾಕದಂತೆ ಮತದಾರರ ಮೇಲೆ ಪ್ರಭಾವ ಬೀರುವಂತಿಲ್ಲ.
2) ಈ ನಿಯಮ ಉಲ್ಲಂಘಿಸಿದವರಿಗೆ 6 ತಿಂಗಳು ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.

**ಪ್ರಕರಣ 31: ಚುನಾವಣೆಗಳಿಗೆ ಸಂಬಂಧಿಸಿದ ಸರಕಾರಿ ಕರ್ತವ್ಯ ಭಂಗ**

1) ಚುನಾವಣಾ ಕಾರ್ಯಕ್ಕೆ ನೇಮಕಗೊಂಡ ಚುನಾವಣಾ ಸಿಬ್ಬಂದಿಯ ಕರ್ತವ್ಯಕ್ಕೆ ಯಾರು ಅಡ್ಡಿಪಡಿಸುವಂತಿಲ್ಲ.
2) ಅಡ್ಡಿ ಪಡಿಸಿದವರಿಗೆ 500 ರೂಪಾಯಿ ದಂಡ ವಿಧಿಸಬಹುದಾಗಿದೆ.

**ಪ್ರಕರಣ 31(ಎ): ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ**

1) ಮತಗಟ್ಟೆಯನ್ನು ವಶಪಡಿಸಿಕೊಂಡು ಮತದಾನದ ಮೇಲೆ ಪ್ರಭಾವ ಬೀರುವುದು.
2) ಮತದಾನ ಮಾಡದಂತೆ ಅಡ್ಡಿಪಡಿಸುವುದು.
3) ಮತ ಎಣಿಕೆ ಕೇಂದ್ರವನ್ನು ವಶಪಡಿಸಿಕೊಂಡು ಮತ ಎಣಿಕೆಗೆ ಅಡ್ಡಿಪಡಿಸುವುದು.
4) ಈ ಮೇಲಿನ ಕೃತ್ಯಗಳಲ್ಲಿ ವ್ಯಕ್ತಿಗಳು ತೊಡಗಿದ್ದರೆ, 6 ತಿಂಗಳಿನಿಂದ 2 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.
5) ಈ ಮೇಲಿನ ಕೃತ್ಯಗಳಲ್ಲಿ ಸರಕಾರಿ ನೌಕರರು ತೊಡಗಿದ್ದರೆ ಅವರಿಗೆ 1 ವರ್ಷದಿಂದ 3 ವರ್ಷದ ವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.

**ಪ್ರಕರಣ 31 (ಬಿ): ಸರಕಾರಿ ನೌಕರರು ಏಜೆಂಟರಾಗುವಂತಿಲ್ಲ**

1) ಸರಕಾರಿ ಸೇವೆಯಲ್ಲಿರುವ ಯಾವುದೇ ವ್ಯಕ್ತಿಯು ಅಭ್ಯರ್ಥಿಯ ಪರವಾಗಿ ಚುನಾವಣಾ ಏಜೆಂಟನಾಗಿ ಕೆಲಸಮಾಡುವಂತಿಲ್ಲ.
2) ಈ ನಿಯಮ ಉಲ್ಲಂಘಿಸಿದವರಿಗೆ 3 ತಿಂಗಳು ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.

**ಪ್ರಕರಣ 32: ಮತದಾನ ಕೇಂದ್ರದಿಂದ ಮತ ಪತ್ರವನ್ನು ತೆಗೆದುಕೊಂಡು ಹೋಗುವುದು**

1) ಮತ ಪತ್ರಗಳನ್ನು ನಿರ್ದಿಷ್ಟ ಪಡಿಸಿದ ಮತಗಟ್ಟೆಯಲ್ಲಿಯೇ ಹಾಕಬೇಕು. ಅದನ್ನು ಹೊರಗೆ ತೆಗೆದುಕೊಂಡು ಹೋಗುವುದು ಅಪರಾಧ.
2) ಮತ ಪತ್ರವನ್ನು ತೆಗೆದುಕೊಂಡು ಹೋಗುವವರನ್ನು ಪರೀಕ್ಷಿಸಬೇಕು.
3) ಈ ಅಪರಾಧ ಸಾಭೀತಾದರೆ 1 ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.

downloaded from: www.kpscvaani.com 

**ಪ್ರಕರಣ 33: ಇತರ ಅಪರಾಧಗಳು ಮತ್ತು ದಂಡನೆ**

1) ಅ. ನಾಮ ಪತ್ರವನ್ನು ವಿರೂಪಗೊಳಿಸುವುದು ಅಥವಾ ನಾಶಪಡಿಸಿದರೆ.

ಆ. ಚುನಾವಣಾ ನೋಟೀಸನ್ನು ಅಥವಾ ಮತಗಟ್ಟೆಯ ಮೇಲೆ ಅಂಟಿಸಿದ ಪಟ್ಟಿಯನ್ನು ನಾಶ ಮಾಡಿದರೆ.

ಇ. ಮತ ಪತ್ರದ ಮೇಲಿನ ಚಿಹ್ನೆಗಳನ್ನು ಮೋಸದಿಂದ ವಿರೂಪ/ನಾಶಗೊಳಿಸಿದರೆ.

ಈ. ಅನಧಿಕೃತ ಮತ ಪತ್ರವನ್ನು ಮತಗಟ್ಟೆಯಲ್ಲಿ ಹಾಕುವುದು.

ಉ. ಚುನಾವಣಾ ಸಿಬ್ಬಂದಿಯಲ್ಲದ ವ್ಯಕ್ತಿ ಮತಪತ್ರ ಹಂಚಿಕೆ ಮಾಡಿದರೆ.

ಊ.ಮತಗಟ್ಟೆ ಅಥವಾ ಮತಪತ್ರವನ್ನು ನಾಶಪಡಿಸಿದರೆ ಅಪರಾಧವಾಗುತ್ತದೆ.

2) ಈ ಮೇಲಿನ ಅಪರಾಧಗಳನ್ನು ಅಧಿಕಾರಿಗಳು ಮಾಡಿದರೆ 2 ವರ್ಷ ಜೈಲು ಶಿಕ್ಷೆ ಅಥವಾ ದಂಡ ವಿಧಿಸಲಾಗುತ್ತದೆ.

3) ವ್ಯಕ್ತಿಗಳು ಮಾಡಿದರೆ ಅವರಿಗೆ 6 ತಿಂಗಳ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.

**ಪ್ರಕರಣ 34:**
**ಚುನಾವಣೆಯ ಸಂದರ್ಭದಲ್ಲಿ ವೈರತ್ವವನ್ನು ಉತ್ತೇಜಿಸುವುದು**

1) ಚುನಾವಣೆ ಸಮಯದಲ್ಲಿ ಯಾವುದೇ ವ್ಯಕ್ತಿಯು ಧರ್ಮ, ಜಾತಿ, ಭಾಷೆ ಸಮುದಾಯಗಳ ಆಧಾರದ ಮೇಲೆ ಜನರಲ್ಲಿ ವೈರತ್ವ ಅಥವಾ ದ್ವೇಷದ ಭಾವನೆಗಳನ್ನು ಉತ್ತೇಜಿಸುವುದು ಅಪರಾಧ. ಈ ಅಪರಾಧ ಮಾಡಿದವರಿಗೆ 3 ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ.

**ಪ್ರಕರಣ-35: ಚುನಾವಣೆಯ ದಿನ ಮತ್ತು ಹಿಂದಿನ ದಿನದಂದು ಸಾರ್ವಜನಿಕ ಸಭೆಗಳನ್ನು ನಡೆಸುವಂತಿಲ್ಲ**

1) ಯಾವುದೇ ವ್ಯಕ್ತಿಯು ಮತದಾನದ ದಿನ ಅಥವಾ ಅದರ ಹಿಂದಿನ ದಿನ ಸಾರ್ವಜನಿಕ ಸಭೆ ನಡೆಸುವಂತಿಲ್ಲ.

2) ಮೇಲಿನ ನಿಯಮ ಉಲ್ಲಂಘಿಸಿದವರಿಗೆ 250 ರೂಪಾಯಿ ದಂಡ ವಿಧಿಸಲಾಗುತ್ತದೆ.

**ಪ್ರಕರಣ 36:**
**ಚುನಾವಣೆಯ ದಿನದಂದ ಜಾತ್ರೆ ಇತ್ಯಾದಿಗಳ ನಿಷೇಧ**

1) ಮತದಾನ ನಡೆಯುವ ದಿನದಂದು ಜಾತ್ರೆ, ಉತ್ಸವ ಮತ್ತು ಸಂತೆಗಳನ್ನು ನಿಷೇಧಿಸುವ ಅಧಿಕಾರವನ್ನು ಜಿಲ್ಲಾಧಿಕಾರಿ ಯವರು ಹೊಂದಿದ್ದಾರೆ.

**ಪ್ರಕರಣ 37: ಚುನಾವಣಾ ಸಭೆಗಳಲ್ಲಿ ಗಲಾಟೆ**

1) ಚುನಾವಣೆಗೆ ಸಂಬಂಧಿಸಿದ ಯಾವುದೇ ಸಾರ್ವಜನಿಕ ಸಭೆಯನ್ನು ಅಡ್ಡಿಪಡಿಸಿ ಗಲಾಟೆ ಮಾಡಿದ ವ್ಯಕ್ತಿಗಳನ್ನು ವಾರೆಂಟ್ ಇಲ್ಲದೆ ಪೋಲಿಸರು ಬಂದಿಸಬಹುದು.

2) ಈ ಅಪರಾಧ ಮಾಡಿದ ವ್ಯಕ್ತಿಗೆ '500 ರೂಪಾಯಿ' ದಂಡ ವಿಧಿಸಲಾಗುತ್ತದೆ.

**ಪ್ರಕರಣ-38-ಕಿರು ಹೊಲಿಗೆಗಳು ಭಿತ್ತಿಪತ್ರಗಳು ಮುಂತಾದವುಗಳನ್ನು ಮುದ್ರಿಸುವುದರ ಬಗ್ಗೆ ನಿರ್ಬಂಧಗಳು:**

1) ಯಾವುದೇ ವ್ಯಕ್ತಿಯು ಮುದ್ರಕ ಹಾಗೂ ಪ್ರಕಾಶಕರ ಹೆಸರು, ವಿಳಾಸ ಇಲ್ಲದಿರುವ ಬಿತ್ತಿಪತ್ರಗಳು ಅಥವಾ ಕಿರು ಹೊತ್ತಿಗೆಗಳನ್ನು ಮುದ್ರಿಸಿ ಹಂಚುವಂತಿಲ್ಲ.

2) ಅಧಿಕೃತವಾಗಿ ಮುದ್ರಿಸಿದ ಬಿತ್ತಿಪತ್ರ ಅಥವಾ ಕಿರುಹೊತ್ತಿಗೆಗಳ ಒಂದು ಪ್ರತಿಯನ್ನು ಮುದ್ರಕನು ಜಿಲ್ಲಾ ಮ್ಯಾಜಿಸ್ಟ್ರೇಟರ್ ಗೆ ಕಳುಹಿಸಬೇಕು.

3) ಈ ನಿಯಮ ಉಲ್ಲಂಘಿಸಿದವರಿಗೆ 6 ತಿಂಗಳು ಜೈಲು ಶಿಕ್ಷೆ ಮತ್ತು 1000 ರೂ.ದಂಡ ವಿಧಿಸಬಹುದಾಗಿದೆ / ಇವೆರಡನ್ನು ವಿಧಿಸಬಹುದಾಗಿದೆ.

**ಪ್ರಕರಣ 39:**
**ಚುನಾವಣೆಯಲ್ಲಿ ಕಾನೂನು ವಿರುದ್ಧವಾಗಿ ವಾಹನವನ್ನು ಬಾಡಿಗೆ ಪಡೆಯುವುದು ಮತ್ತು ಒದಗಿಸುವುದಕ್ಕೆ ದಂಡನೆ**

1) ರೂ. 500 ರೂಪಾಯಿ ದಂಡ ವಿಧಿಸಲಾಗುವುದು. (ವಯೋವೃದ್ಧರು ಮತ್ತು ವಿಕಲ ಚೇತನರನ್ನು ಹೊರತುಪಡಿಸಿ)

**ಪ್ರಕರಣ 40:**
**ಕೆಲವು ಅಪರಾಧಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನ್**

1) ಜಿಲ್ಲಾಧಿಕಾರಿಯವರ ಆದೇಶವಿಲ್ಲದೆ ಯಾವುದೇ ದಂಡನಿಯ ಅಪರಾಧವನ್ನು ಸಂಜ್ಞೇ ಅಪರಾಧ ಎಂದು ನ್ಯಾಯಾಲಯ ಪರಿಗಣಿಸುವಂತಿಲ್ಲ.

**ಪ್ರಕರಣ 41: ಸದಸ್ಯರ ಹುದ್ದೆಯ ಅವಧಿ**

- ಗ್ರಾಮ ಪಂಚಾಯತಿ ಸದಸ್ಯರ ಅಧಿಕಾರಾವಧಿ 5 ವರ್ಷ.

**ಪ್ರಕರಣ 42: ಸದಸ್ಯರ ಹುದ್ದೆಯ ಅವಧಿ ಪ್ರಾರಂಭ**

1) ಸದಸ್ಯರ ಹುದ್ದೆಯ ಅವಧಿಯು ಪಂಚಾಯತಿಯ ಪ್ರಥಮ ಸಭೆಯ ದಿನಾಂಕದಿಂದ ಆರಂಭವಾಗುತ್ತದೆ.

2) ಆಕಸ್ಮಿಕವಾಗಿ ಖಾಲಿಯಾದ ಸ್ಥಾನಕ್ಕೆ ಭರ್ತಿಯಾದ ಸದಸ್ಯನ ಹುದ್ದೆಯ ಅವಧಿಯು 'ಸದಸ್ಯನ ಹೆಸರು ಪ್ರಕಟಿಸಿದ ದಿನದಿಂದ ಆರಂಭವಾಗುತ್ತದೆ.

**ಪ್ರಕರಣ 43: ಸದಸ್ಯರ ರಾಜೀನಾಮೆ**

- ಗ್ರಾಮ ಪಂಚಾಯತಿ ಸದಸ್ಯನು ತನ್ನ ರಾಜೀನಾಮೆಯನ್ನು ಲಿಖಿತವಾಗಿ ಅಧ್ಯಕ್ಷರಿಗೆ ಸಲ್ಲಿಸಬೇಕು.
- ರಾಜೀನಾಮೆ ಪತ್ರವನ್ನು 15 ದಿನದೊಳಗೆ ಹಿಂಪಡೆಯದಿದ್ದರೆ ಅದು ಅಂಗೀಕಾರವಾಗುತ್ತದೆ.

**ಪ್ರಕರಣ 43(ಎ): ಸದಸ್ಯರನ್ನು ತೆಗೆದು ಹಾಕುವುದು**

1) ಈ ಕೆಳಗಿನ ಸಂದರ್ಭಗಳಲ್ಲಿ ಸರಕಾರವು ಯಾವುದೇ ಸದಸ್ಯನನ್ನು ವಜಾಮಾಡಬಹುದು:-

- ಸದಸ್ಯತ್ವದ ಘನತೆಗೆ ಕುಂದು ಬರುವಂತೆ ನಡೆದುಕೊಂಡರೆ ದುರ್ನಡತೆ ತೋರಿದ್ದರೆ.
- ಆಯ್ಕೆಯಾದ ನಂತರ ಅನರ್ಹನೆಂದು ಸಾಬಿತಾಸರೆ
- ಕರ್ತವ್ಯ ನಿರ್ವಹಿಸಲು ಅಸಮರ್ಥನೆಂದು ಜಿಲ್ಲಾ ವೈದ್ಯಾಧಿಕಾರಿ ಪ್ರಮಾಣಪತ್ರ ನೀಡಿದರೆ,
- ಮತಿಭ್ರಮಣೆಗೊಂಡರೆ ಅಥವಾ ದಿವಾಳಿಯಾದರೆ
- ಚುನಾವಣೆ ಸಮಯದಲ್ಲಿ ಮತ ಪಡೆಯಲು ಅಕ್ರಮ ಎನಿಸಿದರೆ

 downloaded from: www.kpscvaani.com

- ಗ್ರಾ. ಪಂ. ಕಾಮಗಾರಿಯಲ್ಲಿ ಪಾಲುದಾರನಾಗಿದ್ದರೆ
- ಪಂಚಾಯತಿ ಆಸ್ತಿಯನ್ನು ವಯಕ್ತಿಕ ಹಿತಾಸಕ್ತಿಗಾಗಿ ಬಳಸುತ್ತಿದ್ದರೆ ಅಥವಾ ದುರುಪಯೋಗ ಪಡಿಸಿಕೊಂಡರೆ

2) ಈ ಮೇಲಿನ ಆಪಾದನೆಯಲ್ಲಿ ಸದಸ್ಯನು ವಜಾಗೊಂಡಿದ್ದರೆ, ಅವನು ಯಾವುದೇ ಪಂಚಾಯತಿಗೆ "ಮುಂದಿನ ಆರು(6) ವರ್ಷಗಳ ವರೆಗೆ" ಸ್ಪರ್ಧಿಸಲು ಅನರ್ಹನಾಗಿರುತ್ತಾನೆ.

## ಪ್ರಕರಣ 43(ಬಿ):
## ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ

1) ಪ್ರತಿಯೊಬ್ಬ ಸದಸ್ಯನೂ ಆಯ್ಕೆಯಾದ "3 ತಿಂಗಳೊಳಗೆ" ಹಾಗೂ ನಂತರ ತನ್ನ ಅಧಿಕಾರ ಮುಗಿಯುವವರೆಗೂ ಪ್ರತಿ ಆರ್ಥಿಕ ವರ್ಷ ಮುಕ್ತಾಯ ವಾದ "1 ತಿಂಗಳೊಳಗೆ"ತನ್ನ ಕುಟುಂಬ ಸದಸ್ಯರ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಯ (2 ಲಕ್ಷಕ್ಕಿಂತ ಹೆಚ್ಚು) ಘೋಷಣೆಯ ಪತ್ರವನ್ನು 'PDO' ಮೂಲಕ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ಸದಸ್ಯನ ಅವಧಿಯು ಹಣಕಾಸು ವರ್ಷ ಮುಕ್ತಾಯ ವಾಗುವ 2ತಿಂಗಳ ಮೊದಲು ಪ್ರಾರಂಭವಾದರೆ ಅವರು ಮುಂದಿನ ಹಣಕಾಸು ವರ್ಷ ಪ್ರಾರಂಭ ವಾದ ನಂತರ "2 ತಿಂಗಳೊಳಗೆ" ಆಸ್ತಿ ಘೋಷಣೆ ಮಾಡತಕ್ಕದ್ದು.
2) ಎಲ್ಲಾ ಸದಸ್ಯರು ಘೋಷಣೆ ಮಾಡಿದ ಆಸ್ಥಿ ವಿವರ ವನ್ನು ಪಿಡಿಓ ಸ್ವೀಕರಿಸಿ ಅದನ್ನು "ಮೇ ಮೊದಲ ವಾರದಲ್ಲಿ" ಒಂದು ವೇಳೆ ಸದಸ್ಯರು ತಡವಾಗಿ ಸಲ್ಲಿಸಿದ್ದರೆ "ಜುಲೈ ಮೊದಲ ವಾರದಲ್ಲಿ" ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸ ತಕ್ಕದ್ದು.
3) ಸದಸ್ಯನು ತನ್ನ ಆಸ್ತಿಯನ್ನು ಘೋಷಿಸಿದ ನಂತರ ತನ್ನ ಯಾವುದೇ ಆಸ್ಥಿಯನ್ನು ಮಾರಿದರೆ ಖರೀದಿಸಿದರೆ ಅದರ ವಿವರ ವನ್ನು "45 ದಿನದೊಳಗೆ" ಸಲ್ಲಿಸ ತಕ್ಕದ್ದು
4) ಸದಸ್ಯರು ಆಸ್ತಿಯನ್ನ ನಿಗದಿತ ಅವಧಿಯೊಳಗೆ ಘೊಷಣೆ ಮಾಡದಿದ್ದರೆ ಅಥವಾ ಸುಳ್ಳು ಘೋಷಣೆ ಮಾಡಿದರೆ ರಾಜ್ಯ ಚುನಾವಣಾ ಆಯೋಗವು ಅವನಿಗೆ ಅಹವಾಲು ಹೇಳಿ ಕೊಳ್ಳಲು ಅವಕಾಶ ನೀಡ ನಂತರ ಸದಸ್ಯ ಸ್ಥಾನ ದಿಂದ ತೆಗೆದು ಹಾಕತಕ್ಕದ್ದು.

## ಪ್ರಕರಣ 44: 'ಅಧ್ಯಕ್ಷ' ಹಾಗೂ 'ಉಪಾದ್ಯಕ್ಷ'ರ ಚುನಾವಣೆ ಮತ್ತು ಮೀಸಲಾತಿ

1) ಗ್ರಾ. ಪಂ. ಚುನಾವಣೆ ಮುಗಿದ "1 ತಿಂಗಳೊಳಗೆ" ಅದ್ಯಕ್ಷ ಉಪಾಧ್ಯಕ್ಷರ ಆಯ್ಕೆ ನಡೆಸಬೇಕು
2) ಮೀಸಲಾತಿ–

- ರಾಜ್ಯ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರಬೇಕು .
- ಪರಿಶಿಷ್ಟ ಜಾತಿ ಅಭ್ಯರ್ಥಿ ಇರದಿದ್ದರೆ ಪರಿಶಿಷ್ಟ ಪಂಗಡಕ್ಕೆ ಕೊಡಬೇಕು,ಅದೇ ರೀತಿ ಪರಿಶಿಷ್ಟ ಪಂಗಡದ ಅಭ್ಯಾರ್ಥಿ ಇರದಿದ್ದರ ಪರಿಶಿಷ್ಟ ಜಾತಿ ಅಭ್ಯಾರ್ಥಿಗೆ ಕೊಡಬೆಕು.
- 1/3 ರಷ್ಟು ಸ್ಥಾನ ಹಿಂದುಳಿದ ವರ್ಗದವರಿಗೆ ನೀಡಬೇಕು.ಅದರಲ್ಲಿ ಶೇ 80ರಷ್ಟು ಪ್ರವರ್ಗ 'ಅ' ಮತ್ತು ಶೇ 20ರಷ್ಟು ಪ್ರವರ್ಗ 'ಬ' ವರ್ಗಕ್ಕೆ ಮೀಸಲು ನೀಡಬೇಕು ಹಾಗೂ 'ಅ' ವರ್ಗದ ಅಭ್ಯರ್ಥಿ ಇರದಿದ್ದರೆ 'ಬ' ವರ್ಗಕ್ಕೆ 'ಬ' ವರ್ಗದ ಅಭ್ಯರ್ಥಿ ಇರದಿದ್ದರೆ 'ಅ' ವರ್ಗಕ್ಕೆ ನೀಡಬೇಕು.
- ಮಹಿಳೆಯರಿಗೆ ಶೇ 50 ರಷ್ಟು ಮೀಸಲಾತಿ ನೀಡಬೇಕು.
- ಯಾವುದೇ ಕಾರಣಕ್ಕೆ ಮೀಸಲಾತಿ ಶೇ 50 ದಾಟುವಂತಿಲ್ಲ.

## ಪ್ರಕರಣ 45: ಗ್ರಾಮಪಂಚಾಯತಿ ಸ್ಥಾಪನೆಯಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಚುನಾವಣಾಕಾರ್ಯ ವಿಧಾನ

1) ಗ್ರಾ. ಪಂ. ರಚನೆಯಾದ "1 ತಿಂಗಳೊಳಗೆ ಗೊತ್ತು ಪಡಿಸಿದ ಅಧಿಕಾರಿಯು" ಗ್ರಾ.ಪಂ. ಸಭೆಯನ್ನು ಕರೆಯತಕ್ಕದ್ದು ಮತ್ತು ಸಭೆಯ ಅದ್ಯಕ್ಷತೆ ವಹಿಸತಕ್ಕದ್ದು, ಮೊದಲ ಸಭೆಯಲ್ಲಿ ಸದಸ್ಯರು ತಮ್ಮಲ್ಲೆ ಇಬ್ಬರನ್ನು ಅಧ್ಯಕ್ಷ–ಉಪಾಧ್ಯಕ್ಷರಾಗಿ ಚುನಾಯಸತಕ್ಕದ್ದು
2) ಅಧ್ಯಕ್ಷ–ಉಪಾಧ್ಯಕ್ಷ ಚುನಾವಣಾ ಸಿಂಧುತ್ವಕ್ಕೆ ಸಂಭಂಧಪಟ್ಟಂತೆ ಗೋತ್ತುಪಡಿಸಿದ ನ್ಯಾಯಲಯದ(ಹಿರಿಯ ಸಿವಿಲ್ ಜಡ್ಜ) ತೀರ್ಮಾನವೇ ಅಂತಿಮವಾಗಿರುತ್ತದೆ.

## ಪ್ರಕರಣ 46: ಅಧ್ಯಕ್ಷ–ಉಪಾಧ್ಯಾಕ್ಷರ ಹುದ್ದೆಯ ಅವಧಿ ಮತ್ತು ಸೇವಾಷರತ್ತುಗಳು

1) ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಅವಧಿಯು ಚುನಾವಣೆಯ ದಿನಾಂಕದಿಂದ 5 ವರ್ಷಗಳು ಅಥವಾ ಅವರ ಸದಸ್ಯತ್ವ ನಿಂತು ಹೋಗುವರೆಗೂ ಆಗಿರುತ್ತದೆ
2) ಅಧ್ಯಕ್ಷ–ಉಪಾಧ್ಯಕ್ಷ ಮತ್ತು ಸ್ಥಾಯ ಸಮಿತಿಗಳ ಅಧ್ಯಕ್ಷರ ವೇತನ, ಸೇವಾ ಷರತ್ತುಗಳು ಸರಕಾರ ನಿಗದಿಪಡಿಸಿದಂತೆ ಇರುತ್ತದೆ

## ಪ್ರಕರಣ 47:
## ಅಧ್ಯಕ್ಷ ಹುದ್ದೆ ಖಾಲಿ ಇರುವ ಅವಧಿಯಲ್ಲಿ ಅಧ್ಯಕ್ಷ ನೇಮಕ

1) ಅಧ್ಯಕ್ಷರ ಹುದ್ದೆ ಖಾಲಿ ಇರುವಾಗ ಉಪಾಧ್ಯಕ್ಷರು ಅಧ್ಯಕ್ಷರ ಅಧಿಕಾರಗಳನ್ನು ಚಲಾಯಿಸತಕ್ಕದ್ದು
2) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆ ಗಳು ಖಾಲಿ ಇದ್ದಾಗ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನು ಗ್ರಾ.ಪಂ. ಅಧ್ಯಕ್ಷರ ಅಧಿಕಾರಗಳನ್ನು ಚಲಾಯಿಸತಕ್ಕದ್ದು

## ಪ್ರಕರಣ 48:
## ಅಧ್ಯಕ್ಷ–ಉಪಾಧ್ಯಕ್ಷರ ರಾಜಿನಾಮೆ ಅಥವಾ ತೆಗೆದುಹಾಕುವುದು

1) ಗ್ರಾಮ ಪಂಚಾಯತಿ ಅಧ್ಯಕ್ಷನು ತನ್ನ ರಾಜೀನಾಮೆಯನ್ನು ಅಸಿಸ್ಟಂಟ್ ಕಮಿಷನರ್ ಅವರಿಗೆ ಸಲ್ಲಿಸಬೇಕು ಹಾಗೂ ಉಪಾಧ್ಯಕ್ಷನು ಗ್ರಾಮ ಪಚಾಯಿತಿ ಅಧ್ಯಕ್ಷರಿಗೆ ಸಲ್ಲಿಸಬೇಕು.
2) ಅಧ್ಯಕ್ಷ–ಉಪಾಧ್ಯಕ್ಷರು ಸಲ್ಲಿಸಿದ ರಾಜೀನಾಮೆಯನ್ನು 10 ದಿನ ದೊಳಗೆ ವಾಪಸು ಪಡೆಯಲು ಅವಕಾಶವಿದೆ ಪಡೆಯದಿದ್ದರೆ 10 ದಿನಗಳ ನಂತರ ಅಂಗೀಕಾರವಾಗುತ್ತದೆ.
3) ಅಧ್ಯಕ್ಷ–ಉಪಾಧ್ಯಕ್ಷರು ಕರ್ತವ್ಯನಿರ್ವಹಿಸಲು ವಿಫಲವಾದರೆ ಅಧಿಕಾರ ದುರುಪಯೋಗ ಮಾಡಿಕೊಂಡರೆ ಅವರಿಂದ ಹೇಳಿಕೆ ಪಡೆದುಕೊಂಡು ಸರಕಾರ ಅವರನ್ನು ವಜಾಮಾಡುತ್ತದೆ ವಜಾಗೊಂಡ ನಂತರ ಅವರು ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಗೆ ನಿಲ್ಲುವಂತಿಲ್ಲ.

## ಪ್ರಕರಣ 49:
## ಅಧ್ಯಕ್ಷ–ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ

- ಅಧ್ಯಕ್ಷ–ಉಪಾಧ್ಯಕ್ಷರ ವಿರುದ್ದದ ಅವಿಶ್ವಾಸ ನಿರ್ಣಯದ ಪ್ರಸ್ಥಾವನೆಗೆ ಒಟ್ಟು ಸದಸ್ಯರ ಅರ್ಧದಷ್ಟು ಸದಸ್ಯರು ಸಹಿಮಾಡಿ 10 ದಿನ ಮುಂಚಿತ ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಬೇಕು

downloaded from: www.kpscvaani.com


- **ಅವಿಶ್ವಾಸ ನಿರ್ಣಯದ ನಿಯಮಗಳು :**

1) ಅಧ್ಯಕ್ಷ-ಉಪಾಧ್ಯಕ್ಷರಾಗಿ 30 ತಿಂಗಳು ಆಗಿರಬೇಕು
2) ಅಧ್ಯಕ್ಷ-ಉಪಾಧ್ಯಕ್ಷರಿಗೆ 10 ದಿನ ಮುಂಚಿತವಾಗಿ ನೋಟಿಸು ನೀಡಬೇಕು.
3) ಅವಿಶ್ವಾಸ ನಿರ್ಣಯವನ್ನು 2/3 ರಷ್ಟು ಸದಸ್ಯರ ಬಹುಮತದಿಂದ ಪಾಸುಮಾಡಬೇಕು ಆಗ ಅಧ್ಯಕ್ಷ-ಉಪಾಧ್ಯಕ್ಷರು ಅಧಿಕಾರ ಕಳೆದು ಕೊಳ್ಳುತ್ತಾರೆ.
4) ಒಮ್ಮೆ ಅವಿಶ್ವಾಸ ನಿರ್ಣಯಕ್ಕೆ ಸೋಲಾದರೆ ಮುಂದೆ 2 ವರ್ಷಗಳವರೆಗೆ ಮತ್ತೆ ಅವಿಶ್ವಾಸ ನಿರ್ಣಯ ಮಂಡಿಸುವಂತಿಲ್ಲ.

### ಪ್ರಕರಣ 50: ಸಭೆಗಳ ಕಾರ್ಯವಿಧಾನ

- ಗ್ರಾಮ ಪಂಚಾಯಿತಿಯ ಸಭೆಯಲ್ಲಿನ ಕಾರ್ಯವಿಧಾನವು ಗೊತ್ತು ಮಡಿಸಿರುವಂತೆ ಇರತಕ್ಕದ್ದು.

### ಪ್ರಕರಣ 51: ಆಕಸ್ಮಿಕ ಖಾಲಿ ಸ್ಥಾನಗಳು

- ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರ ಸ್ಥಾನವು ಆಕಸ್ಮಿಕವಾಗಿ ಖಾಲಿಯಾದರೆ ಅಂತಹ ಸ್ಥಾನಗಳನ್ನು ಚುನಾವಣೆಯ ಮೂಲಕ ತುಂಬಬೇಕು.

### ಪ್ರಕರಣ– 52– ಗ್ರಾಮಪಂಚಾಯತಿ ಸಭೆಗಳು

**1) ಸಾಮಾನ್ಯ ಸಭೆ**

- ಸಾಮಾನ್ಯ ಸಭೆಗಳನ್ನು 1 ತಿಂಗಳಿಗೊಮ್ಮೆ ನಡೆಸಬೇಕು
- ಸಾಮಾನ್ಯ ಸಭೆಯ ದಿನಾಂಕ, ಸಮಯವನ್ನು ಅಧ್ಯಕ್ಷ ನಿರ್ಧರಿಸಬೇಕು
- ಸಾಮಾನ್ಯ ಸಭೆಗೆ ಪಿ.ಡಿ.ಒ/ ಕಾರ್ಯದರ್ಶಿಯು 7 ದಿನ ಮುಂಚಿತ ವಾಗಿ ಎಲ್ಲಾ ಸದಸ್ಯರಿಗೆ ನೋಟಿಸು ನೀಡಬೇಕು

**2) ವಿಶೇಷ ಸಭೆ**

- ಅಧ್ಯಕ್ಷನು ತಾನು ಸೂಕ್ತವೆಂದು ಯೋಚಿಸಿದಾಗ ಅಥವಾ ಒಟ್ಟು ಸದಸ್ಯರ ಪೈಕಿ 1/3 ರಷ್ಟು ಸದಸ್ಯರು ಲಿಖಿತ ಮನವಿ ಸಲ್ಲಿಸಿದರೆ 15 ದಿನದ ಒಳಗೆ ಒಂದು ವಿಶೇಷ ಸಭೆ (15ದಿನಗಳಿಗೊಮ್ಮೆ) ಕರೆಯತಕ್ಕದ್ದು
- ವಿಶೇಷ ಸಭೆಗೆ ಪಿಡಿಒ /ಕಾರ್ಯದರ್ಶಿಯು 3 ದಿನ ಮುಂಚೆ ನೋಟಿಸು ನೀಡಬೇಕು

**3) ತುರ್ತುಸಭೆ**

- ತುರ್ತು ವಿಷಯಗಳ ಚರ್ಚೆಗಾಗಿ 24 ಗಂಟೆಯೊಳಗೆ ತುರ್ತು ಸಭೆಯನ್ನು ಕರೆಯಬಹುದಾಗಿದೆ
- ಗ್ರಾಮ ಪಂಚಾಯತಿಯ ಪ್ರತಿ ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷ ವಹಿಸಬೇಕು ಅಧ್ಯಕ್ಷ ಇಲ್ಲದಿದ್ದರೆ, ಉಪಾಧ್ಯಕ್ಷ ವಹಿಸತಕ್ಕದ್ದು ಒಂದು ವೇಳೆ ಇಬ್ಬರು ಇಲ್ಲದಿದ್ದರೆ ಸದಸ್ಯಲ್ಲಿ ಒಬ್ಬರು ವಹಿಸಿಕೊಳ್ಳಬೇಕು

### ಪ್ರಕರಣ 53: ಸಭೆಯ ಕೋರಂ ಮತ್ತು ಕಾರ್ಯವಿಧಾನ

- ಸಾಮಾನ್ಯ ಸಭೆ ಮತ್ತು ವಿಶೇಷ ಸಭೇಗೆ ಒಟ್ಟು ಸದಸ್ಯರ ಅರ್ಧದಷ್ಟು ಕೋರಂ ಇರಬೇಕು.
- ಕೋರಂ ಇಲ್ಲದಿದ್ದರೆ 30 ನಿಮಿಷ ಕಾಯಬೇಕು. ನಂತರವು ಕೋರಂ ಇರದಿದ್ದರೆ ಸಭೆಯನ್ನು ಮುಂದೂಡಬೇಕು. (ರಜಾದಿನವಾಗಿರದ ದಿನಕ್ಕೆ)
- ಪಂಚಾಯತಿ ಪ್ರಥಮ ಸಭೆಗೂ ಕೋರಂ ಇರಬೇಕು.
- ಮುಂದೂಡಿದ ಸಭೆಗೆ ಕೋರಂನ ಅಗತ್ಯವಿಲ್ಲ.

**ಕಾರ್ಯವಿಧಾನ :**

1. ಸದಸ್ಯನ ಹಣಕಾಸಿನ ಅಕ್ರಮದ ಬಗ್ಗೆ ಚರ್ಚೆ ನಡೆಯುತ್ತಿದ್ದರೆ ಅಂತವರು ಸಭೆಯಲ್ಲಿ ಪಾಲ್ಗೊಳ್ಳುವಂತಿಲ್ಲ.
2. ಅಧ್ಯಕ್ಷ/ಉಪಾಧ್ಯಕ್ಷರ ಅಕ್ರಮಗಳ ಬಗ್ಗೆ ಚರ್ಚೆ ಮಾಡುತ್ತಿದ್ದರೆ ಅವರು ಅಧ್ಯಕ್ಷತೆ ವಹಿಸುವಂತಿಲ್ಲ.
3. ಪಂಚಾಯಿತಿ ಸಭೆಗಳು ಸಾರ್ವಜನಿಕ ಮುಕ್ತವಾಗಿರಬಹುದು ಅಥವಾ ಗುಪ್ತವಾಗಿ ನಡೆಸಬಹುದು.

### ಪ್ರಕರಣ 54: ನಿರ್ಣಯಗಳನ್ನು ಮಾರ್ಪಾಟು ಮಾಡುವುದು ಅಥವಾ ರದ್ದು ಪಡಿಸುವುದು

ಗ್ರಾ.ಪಂ.ಸಭೆಯಲ್ಲಿ ಒಮ್ಮೆ ಕೈಗೊಂಡ ನಿರ್ಣಯಗಳನ್ನು ಅಂಗೀಕರಿಸಿದ ನಂತರ ಅದನ್ನು 6 ತಿಂಗಳೊಳಗೆ ಬದಲಿಸುವಂತಿಲ್ಲ. ಆದರೆ ವಿಶೇಷ ಸಂದರ್ಭದಲ್ಲಿ ಕೈಗೊಂಡ ನಿರ್ಣಯಗಳನ್ನು ಬದಲಾಯಿಸಲು/ರದ್ದು ಪಡಿಸಲು ವಿಶೇಷ ಸಭೆ ಕರೆಯಬೇಕು. ವಿಶೇಷ ಸಭೆಯ ಒಟ್ಟು ಸದಸ್ಯರ ಅರ್ಧದಷ್ಟು ಸದಸ್ಯರ ಅಂಗೀಕಾರದ ಮೂಲಕ ಮಾಡಬಹುದಾಗಿದೆ.

### ಪ್ರಕರಣ 55: ನಡವಳಿಕೆ ಪುಸ್ತಕ

- ನಡವಳಿಕೆ ಪುಸ್ತಕ ಗ್ರಾಮ ಪಂಚಾಯತಿ "ಪಿ.ಡಿ.ಒ./ಕಾರ್ಯ ದರ್ಶಿಯ" ಅಧೀನದಲ್ಲಿರಬೇಕು.
- ಸಭೆ ನಡೆದ ದಿನಾಂಕ ಸಮಯ ಹಾಜರಿದ್ದ ಸದಸ್ಯರು ಅಥವಾ ಅಧಿಕಾರಿಗಳ ಹೆಸರು ಚಚಿಸಿದ ವಿಷಯ ಅಂಗೀಕರಿಸಿದ ನೀರ್ಣಯ ಇತ್ಯಾದಿಗಳನ್ನು ನಡವಳಿಕೆ ಪುಸ್ತಕದಲ್ಲಿ ದಾಖಲಿಸಬೇಕು
- ನಡವಳಿಕೆ ಪುಸ್ತಕಕ್ಕೆ ಕೊನೆಯಲ್ಲಿ "ಸಭಾಧ್ಯಕ್ಷರು" ಸಹಿ ಹಾಕಬೇಕು
- ನಡವಳಿಕೆ ಪುಸ್ತಕದ ಒಂದು ಪ್ರತಿಯನ್ನು ಕಾರ್ಯದರ್ಶಿಯು 'ಸಭೆ ನಡೆದ 10 ದಿನಗಳೊಳಗೆ' ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗೆ ಮತ್ತು 3 ದಿನಗಳೊಳಗೆ ಎಲ್ಲಾ ಸದಸ್ಯರಿಗೆ ಕಳುಹಿಸಬೇಕು.
- ಸಭೆಯ ವಿವರಗಳನ್ನು ಒಳಗೊಂಡ ಪ್ರತಿಯನ್ನು 3 ದಿನದೊಳಗೆ ಸೂಚನಾ ಫಲಕದಲ್ಲಿ ಅಂಟಿಸಬೇಕು.

### ಪ್ರಕರಣ 55: ಅಡ್ಡ ಪ್ರಶ್ನೆಗಳು ಅಥವಾ ನಿರ್ಣಯಗಳು

- ಅಡ್ಡ ಪ್ರಶ್ನೆಗಳು ಪಂಚಾಯತಿಯ ಆಸ್ತಿ ಅಥವಾ ಸ್ವತ್ತುಗಳ ದುರುಪಯೋಗ, ಕಾಮಗಾರಿಗಳ ನಿರ್ಲಕ್ಷ್ಯ, ಕುಂದುಕೊರತೆ ಇತ್ಯಾದಿಗಳು ಕುರಿತ ಇರಬೇಕು
- ಅಡ್ಡ ಪ್ರಶ್ನೆಗಳನ್ನು ಸದಸ್ಯರು ಪಂಚಾಯತಿ ಅಧ್ಯಕ್ಷರಿಗೆ ಕೇಳಬೇಕು
- ಕೇಳಬೇಕಾದ ಅಡ್ಡ ಪ್ರಶ್ನೆಗಳನ್ನು ಲಿಖಿತವಾಗಿ 5 ದಿನ ಮುಂಚೆ ಅಧ್ಯಕ್ಷರಿಗೆ ಸಲ್ಲಿಸಬೇಕು

### ಪ್ರಕರಣ 57: ವ್ಯವಹಾರಗಳ ವಿಧಮಾನ್ಯತೆ

- ಗ್ರಾ.ಪಂ.ಯ ಸಭೆಗಳಲ್ಲಿ ಅಥವಾ ಸ್ಥಾಯಿ ಸಮಿತಿಗಳ ಸಭೆಗಳಲ್ಲಿ ಯಾವುದೇ ನಿರ್ಣಯಗಳನ್ನು ಅಂಗೀಕರಿಸುವ ಸಮಯದಲ್ಲಿ ಸದಸ್ಯರು ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಮತವನ್ನು ನೀಡುತ್ತಾರೆ.
- ನಿರ್ಣಯದ ನಂತರ ಸದಸ್ಯರ ಸದಸ್ಯತ್ವ ನಿಂತು ಹೋದರೆ ತೆಗೆದುಕೊಂಡ ನಿರ್ಣಯವನ್ನು ಅಸಿಂಧು ಎಂದು ಭಾವಿಸಬಾರದು.
- ಬಹುಸಂಖ್ಯಾತ ಸದಸ್ಯರು ಭಾಗವಹಿಸಿ ತೆಗೆದುಕೊಂಡ ನಿರ್ಣಯ ಗಳಿಗೆ ವಿಧಿ ಮಾನ್ಯತೆ ನೀಡತಕ್ಕದ್ದು.

 downloaded from: www.kpscvaani.com

# ಅಧ್ಯಾಯ 4

# ಗ್ರಾ.ಪಂ.ಅಧ್ಯಕ್ಷ ಮತ್ತು ಉಪಾಧ್ಯಾಕ್ಷರ ಕಾರ್ಯಗಳು ಕರ್ತವ್ಯಗಳು ಅಧಿಕಾರಗಳು

## ಪ್ರಕರಣ–58: ಗ್ರಾಮ ಪಂಚಾಯತಿಯ ಪ್ರಕಾರ್ಯಗಳು

**ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳು :**

- ಪ್ರತಿ ವರ್ಷ ಶೇ.10 ಕ್ಕಿಂತ ಕಡಿಮೆ ಇಲ್ಲದಷ್ಟು ಮನೆಗಳಿಗೆ ಶೌಚಾಲಯ ಒದಗಿಸುವುದು.
- ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು.
- ತೆರಿಗೆ, ಶುಲ್ಕಗಳನ್ನು ಪರಿಶೀಲಿಸುವುದು ಹಾಗೂ ವಸೂಲು ಮಾಡುವುದು.
- ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು.
- ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗ ನಿರೋಧಕ ಚುಚ್ಚು ಮದ್ದು ನೀಡುವ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಸ್ವಾಸ್ಥ್ಯ ಪರಿಸರ ನಿರ್ಮಿಸುವಲ್ಲಿ ಗ್ರಾ.ಪಂ.ಗಳು ಹೆಚ್ಚಿನ ಗಮನ ನೀಡಬೇಕು.
- ಸರಕಾರದಿಂದ ಅನುಷ್ಠಾನಗೊಳ್ಳುತ್ತಿರುವ ಲಸಿಕಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕು.
- ಆರೋಗ್ಯ ಜಾಗೃತಿ ಶಿಬಿರಗಳನ್ನು ಆಯೋಜಿಸಬೇಕು.
- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳನ್ನು ಸಂಘಟಿಸುವುದು.
- ಜನನ ಮರಣಗಳ ತೂರಿತ ನೊಂದಣಿ ಮತ್ತು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.
- ಗ್ರಾಮ ನೈರ್ಮಲ್ಯ ಗ್ರಾ..ಪಂ.ನ ಮಹತ್ತರ ಹೊಣೆಗಾರಿಕೆ.ಗ್ರಾಮದ ಜನವಸತಿ ಪ್ರದೇಶಗಳಲ್ಲಿ ಕೊಳಚೆ ನೀರು ನಿಲ್ಲದಂತೆ ಸೂಕ್ತ ಚರಂಡಿ ವ್ಯವಸ್ಥೆ ಮಾಡಬೇಕು ತಿಪ್ಪೆಗುಂಡಿಗಳನ್ನು ಜನವಸತಿ ಪ್ರದೇಶ ಬಿಟ್ಟು ಹೊರಗೆ ನಿರ್ಮಿಸಬೇಕು.
- ಕುಡಿಯುವ ನೀರಿನ ಮೂಲಗಳ ಸುತ್ತುಮುತ್ತ ನೈರ್ಮಲ್ಯವನ್ನು ಕಾಪಾಡಬೇಕು ಬಯಲು ಮಲವಿರ್ಸಜನೆಯನ್ನು ಸಂಪೂರ್ಣವಾಗಿ ತೊಡದು ಹಾಕಬೇಕು

**ಸಾರ್ವಜನಿಕ ರಸ್ತೆ ನಿರ್ಮಾಣ ದುರಸ್ತಿ & ನಿರ್ವಹಣೆ**

- ಗ್ರಾಮೀಣ ಸಂಪರ್ಕ ವವ್ಯಸೆಯನ್ನು ಸುಧಾರಿಸುವ ಜವಾಬ್ದಾರಿಯನ್ನು ಗ್ರಾ.ಪಂ.ಗಳಿಗೆ ನೀಡಿದೆ.ವಿವಿಧ ಯೊಜನೆಗಳ ಮೂಲಕ ರಸ್ತೆಗಳನ್ನು ನಿರ್ಮಿಸುವುದು ಇರುವ ರಸ್ತೆಗಳ ದುರಸ್ತಿ & ನಿರ್ವಹಣೆಗೆ ಆದ್ಯತೆ ನೀಡಬೇಕು ಕಾಮಗಾರಿಗಳ ಗುಣಮಟ್ಟ ಕಾಪಾಡಬೇಕು.
- ಸಾರ್ವಜನಿಕ ರಸ್ತೆ & ಸ್ಥಳಗಳ ಮೇಲಿನ ಒತ್ತುವರಿಯನ್ನು ತೆಗೆದು ಹಾಕುವುದು.
- ಸ್ಥಳೀಯ ಸರ್ಕಾರವಾಗಿರುವ ಗ್ರಾ.ಪಂ. ಸಾರ್ವಜನಿಕ ಆಸ್ತಿಯನ್ನು ಕಾಪಾಡಬೇಕು ರಸ್ತೆಗಳು,ಗ್ರಾಮ ಠಾಣಾ, ಗೋಮಾಳ, ಕೆರೆ ಇತ್ಯಾದಿ ಪ್ರದೇಶಗಳ ಒತ್ತುವರಿಯಾಗದಂತೆ ನೋಡಿಕೊಳ್ಳಬೇಕು ಆಗಿರುವ ಒತ್ತುವರಿಯನ್ನು ತೆರವುಗೊಳಸಬೇಕು.
- ಬೀದಿ ದೀಪಗಳನ್ನು ಒದಗಿಸಿ, ವಿದ್ಯತ್ ಶುಲ್ಕಗಳನ್ನು ನಿಯಮಿತವಾಗಿ ಸಂದಾಯ ಮಾಡುವುದು.
- ಗ್ರಾ.ಪಂ. ವ್ಯಾಪ್ತಿಯಲ್ಲಿ ಹಲವು ರಿತಿ ಸಮುದಾಯ ಆಸ್ತಿಗಳಿರುತ್ತದೆ. ಶಾಲಾ ಕಟ್ಟಡಗಳು, ಅಂಗನವಾಡಿ ಕಟ್ಟಡಗಳು, ಆರೋಗ್ಯ ಉಪ ಕೇಂದ್ರ, ಕೋಳವೆ ಬಾವಿಗಳು, ಕುಡಿಯುವ ನೀರಿನ ಸ್ಥಾವರಗಳು, ಕೆರೆಗಳು, ಗೋಮಾಳ, ಸಾಮಾಜಿಕ ಅರಣ್ಯ, ಮರಳು, ಕಲ್ಲು ಮುಂತಾದ ಖನಿಜ ಸಂಪತ್ತು.... ಇವೆಲ್ಲವನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ಸ್ಥಳೀಯ ಸರ್ಕಾರವಾಗಿರುವ ಗ್ರಾಮ ಪಂಚಾಯಿತಿಗಳು ನಿರ್ವಹಿಸಬೇಕು.

**ಪಂಚಾಯಿತಿಯ ಜವಾಬ್ದಾರಿಗಳು :**

- ಕೆಲಸ ಕಾರ್ಯಗಳನ್ನು ಅಧ್ಯಕ್ಷರು, ಅಧಿಕಾರಿಗಳು ನಿರ್ವಹಿಸಬೇಕು. ಇವರು ಗ್ರಾಮದ ವಾಸಿಗಳನ್ನು ಆರ್ಥಿಕ, ಸಾಮಾಜಿಕ & ಸಾಂಸ್ಕೃತಿಕವಾಗಿ ಅಭಿವೃದ್ಧಿ ಪಡಿಸಬೇಕು.
- ವಾರ್ಡ ಸಭಾ ಮತ್ತು ಗ್ರಾಮ ಸಭಾ ನೀಡಿದ ಸಲಹೆಗಳನ್ನು ಅನುಷ್ಠಾನಕ್ಕೆ ತರುವುದು.
- ಸಮಾಜದ ತುಳಿತಕ್ಕೆ ಒಳಗಾದವರ ಹಕ್ಕುಗಳನ್ನು ರಕ್ಷಿಸುವುದು.
- ಎಲ್ಲ ನಾಗರಿಕರನ್ನು ಶೋಷಣೆಯಿಂದ ರಕ್ಷಿಸುವುದು.
- ಕೋಮು ಸೌಹಾರ್ದತೆ ಕಾಪಾಡುವುದು.
- ಪಂಚಾಯ್ತಿ ಕಾರ್ಯಾಲಯಕ್ಕೆ ಮಹಿಳೆಯರು, ದುರ್ಬಲ ವರ್ಗದವರು ಸಕ್ರಿಯವಾಗಿ ಬರುವಂತೆ ನೋಡಿಕೊಳ್ಳಬೇಕು
- ಪಂಚಾಯ್ತಿ ಸದಸ್ಯರ ಕೌಶಲವನ್ನು ಹೆಚ್ಚಿಸುವುದಕ್ಕಾಗಿ ತರಬೇತಿ ಏರ್ಪಡಿಸುವುದು
- ಪಂಚಾಯ್ತಿ ಕಾರ್ಯಗಳಿಗೆ ಅಂಗವಿಕಲರಿಗೆ ಗಾಲಿ ಕುರ್ಚಿಗಳನ್ನು ಒದಗಿಸುವುದು
- ಪಂಚಾಯ್ತಿ ಆವರಣದಲ್ಲಿ ಮಗು ಪಾಲನಾ ಕೇಂದ್ರ ಇರಬೇಕು
- ಗ್ರಾಮದಲ್ಲಿ ಸಾಂಸ್ಕೃತಿಕ ಹಬ್ಬಗಳು, ಸಾಹಿತ್ಯ ಚಟುವಟಿಕೆಗಳು, ಕ್ರೀಡಾಕೂಟಗಳನ್ನು ಸಂಘಟಿಸುವುದು
- ಕೌಟುಂಬಿಕವಾಗಿ ನೊಂದವರಿಗೆ ಸಮಾಲೋಚನಾ ಕೇಂದ್ರ ಆರಂಭಿಸುವುದು
- ಮಹಿಳೆಯರು, ರೈತರು & ಕಾರ್ಮಿಕರಿಗಾಗಿ ಸ್ವಸಹಾಯ ಗುಂಪುಗಳು ರಚಿಸುವುದು
- ಸಾಲದ ಬಡ್ಡಿಯ ಮೇಲೆ ನಿಯಂತ್ರಣ, ಖಾಸಗಿ ಲೇವಾದೇವಿದಾರರ ಮೇಲೆ ನಿಗಾವಹಿಸುವುದು
- ವಿವಿಧ ರೀತಿಯ ಗಣತಿ ಕಾರ್ಯಗಳನ್ನು ನೋಡಿಕೊಳ್ಳವುದು
- ಪ್ರಾಣಿಗಳ ಮೃತ ದೇಹವನ್ನು ಸಾಗಿಸುವುದು
- ಜೈವಿಕ ಪರಿಸರ ರಕ್ಷಣೆಗೆ ಒತ್ತು ನೀಡುವುದು
- ಸೆಗಣಿಗುಂಡಿ & ಕೃಷಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸುವುದು, ನೀರು & ಪರಿಸರ ರಕ್ಷಣೆ

downloaded from: www.kpscvaani.com


- ಕೃಷಿ, ಗ್ರಾಮೀಣ ಕೈಗಾರಿಕೆ, ಸಣ್ಣ ಉದ್ದಿಮೆಗಳಿಗೆ ಬೆಂಬಲ ನೀಡುವುದು, ಜನರಲ್ಲಿ ಸಹಕಾರ ಭಾವನೆ ಮೂಡಿಸುವುದು

**ಗ್ರಾಮ ಪಂಚಾಯತಿ ಕರ್ತವ್ಯಗಳು.**

- ಪಂಚಾಯಿತಿ ಪ್ರದೇಶದ ವಾರ್ಷಿಕ ಯೋಜನೆ ಸಿದ್ದಪಡಿಸುವದು.
- ವಾರ್ಷಿಕ ಬಜೆಟ್ ಸಿದ್ದಪಡಿಸುವುದು .
- ಪ್ರಕೃತಿ ವಿಕೋಪಗಳಿಗೆ ಪರಿಹಾರ ಒದಗಿಸುವುದು.
- ಸಾರ್ವಜನಿಕ ಸ್ವತ್ತುಗಳಲ್ಲಿನ ಅತಿಕ್ರಮಣ ತಡೆಯುವುದು.
- ಸಮುದಾಯ ಕಾರ್ಯಗಳಿಗೆ ವಂತಿಗೆ ನೀಡುವುದು.
- ಗ್ರಾಮಗಳ ಅತ್ಯಾವಶ್ಯಕ ಅಂಕಿಅಂಶ ಇಟ್ಟುಕೊಳ್ಳುವುದು.
- ಸಮಗ್ರ ಗ್ರಾಮ ಕೃಷಿ ಯೋಜನೆ ಸಿದ್ದಪಡಿಸಿ, ಮೇಲ್ವಿಚಾರಣೆ ನಡೆಸುವುದು.
- ನರ್ಸರಿ ಸ್ಥಾಪಿಸುವುದು.
- ಮಣ್ಣು, ನೀರು, ಮತ್ತು ಬೀಜಗಳ ಸಂರಕ್ಷಣೆಗೆ ಯೋಜನೆ ರೂಪಿಸುವುದು.
- ಮಾರುಕಟ್ಟೆ ಧಾರಣೆ ಪ್ರದರ್ಶಿಸುವುದು.
- ಕೃಷಿವಿಮಾ ಯೋಜನೆಗಳ ಮೇಲ್ವಿಚಾರಣೆ ಮಾಡುವುದು.
- ಸಾಂಕ್ರಾಮಿಕ ರೋಗ ತಡೆಗಟ್ಟುವುದು.
- ಗ್ರಾಮೀಣ ಮೀನು ಮತ್ತು ಮಾಂಸದ ಮಾರುಕಟ್ಟೆ ಸ್ಥಾಪಿಸುವುದು.
- ಹುಲ್ಲುಗಾವಲು ಅಭಿವೃದ್ಧಿ ಮಾಡುವುದು.
- ಪ್ರವಾಸೋದ್ಯಮ ಚಟುವಟಿಕೆಗೆ ಉತ್ತೇಜನ ನೀಡುವುದು.
- ಆಹಾರ ಸಂಸ್ಕರಣೆಗೆ ಸಂಬಂಧಿಸಿದ ಚಟುವಟಿಕೆಗೆ ಉತ್ತೇಜನ ನೀಡುವುದು.
- ಗ್ರಾಮೀಣ ವಸತಿ ಸಹಕಾರ ಸಂಘಗಳ ಸ್ಥಾಪನೆ.
- ನೀರು ಸರಬರಾಜು ಯೋಜನೆ ನಿರ್ವಹಣೆ.
- ಸ್ಮಶಾನಗಳ ವ್ಯವಸ್ಥೆ.
- ಭೂ,ಜಲಮಾರ್ಗ ನಿರ್ವಹಣೆ.
- ಪ್ರಾಥಮಿಕ ಶಾಲೆಗಳ ಮೇಲುಸ್ಥವಾರಿ ನೋಡುವುದು.
- ವಾಚನಾಲಯಗಳ ನಿರ್ವಹಣೆ.
- ಆಟದ ಮೈಧಾನ ನಿರ್ಮಾಣ.
- ಮಾರುಕಟ್ಟೆ ಸೌಲಭ್ಯ ಕಲ್ಪಿಸುವುದು ಮತ್ತು ಜಾತ್ರೆಗಳನ್ನು ನಡೆಸುವುದು.
- ಎಸ್.ಸಿ., ಎಸ್.ಟಿ. ಕಾಲೋನಿಗಳಿಗೆ ಸೌಲಭ್ಯ ಒದಗಿಸುವುದು.
- ಗ್ರಾಮದ ಇತಿಹಾಸ, ಸಂಸ್ಕೃತಿ, ಪರಂಪರೆಗಳ ದತ್ತಾಂಶಗಳ ಸಂಗ್ರಹ.
- ಒಟ್ಟು 30 ಇಲಾಖೆಗಳ ಹೊಣೆ ನಿರ್ವಹಣೆ.

**ಪಂಚಾಯತಿಯ ನೈತಿಕ ನಿಯಮಗಳು:–**

**ಪ್ರಕರಣ 58: A**

- ಜೀತಗಾರಿಕೆ ಸಂಬಂಧದಲ್ಲಿ ವರಧಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರತಕ್ಕದ್ದು ಜೀತ ಪದ್ಧತಿ ಹಾಗೂ ಜೀತಗಾರಿಕೆ ಪಂಚಾಯತಿ ಪ್ರದೇಶ ದಲ್ಲಿ ನಡೆಯತ್ತಿದ್ದರೆ ಅದರ ಬಗ್ಗೆ ಜಿಲ್ಲಾಧಿಕಾರಿಗೆ ಅಥವಾ ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ವರಧಿ ಮಾಡತಕ್ಕದ್ದು

**ಪ್ರಕರಣ–58– B**

- ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಳನ್ನು ತಡೆಗಟ್ಟುವುದು.
- ಮೂಢನಂಬಿಕೆ ಪದ್ಧತಿಗಳನ್ನು ತಡೆಗಟ್ಟುವುದು
- ಅಸ್ಪೃಶ್ಯತೆ ನಿವಾರಣೆ ಮತ್ತು ಸಾಮಾಜಿಕ ಬಹಿಷ್ಕಾರ

**ಪ್ರಕರಣ–58-C**

ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟವುದು

ವಿವಿಧ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಶೊಷಣೆ ತಡಗಟ್ಟುವುದು ಮತ್ತು ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದು

**ಪ್ರಕರಣ–58– D**

- ಒತ್ತುವರಿ ಮಾಡಿಕೊಂಡಿರುವ ಗ್ರಾಮ ಪಂಚಾಯತಿಯ ಸ್ವತ್ತನ್ನು ಪುನಃ ಸಾಧಿನ ಪಡಿಸಿಕೊಳ್ಳುವುದು.

**ಪ್ರಕರಣ–58–E**

- ಸ್ವಚ್ಚ ಪರಿಸರವನ್ನು ಕಾಪಾಡುವುದು

**ಪ್ರಕರಣ–58–F**

- ಈ ಅಪಾಯಕಾರಿ ಕಲ್ಲು ಗಣಿಗಾರಿಕೆ ಕೊಳಪವೆ ಬಾವಿಗಳನ್ನು ತೆರೆದ ಭಾವಿಗಳನ್ನು ತೊಡುವುದು ಮತ್ತು ಹೊಂಡಗಳನ್ನು ನಿರ್ಮಿಸುವುದು.

### ಪ್ರಕರಣ–59: ಕಾರ್ಯಗಳನ್ನು ವಹಿಸಿಕೊಡುವುದು

- ಸರಕಾರವು ಅಧಿಸೂಚನೆಯ ಮೂಲಕ ಪಂಚಾಯತಿ ಪ್ರದೇಶದಲ್ಲಿನ ಅರಣ್ಯಗಳು, ಬಂಜರುಭೂಮಿ, ಗೋಮಾಳ ಮತ್ತು ಖಾಲಿ ಭೂಮಿಗಳ ನಿರ್ವಹಣೆಯನ್ನು ಗ್ರಾ.ಪಂ.ಗೆ ವಹಿಸಿಕೊಡಬಹುದು
- ಸರಕಾರದ ಪರವಾಗಿ ಗ್ರಾಮ ಪಂಚಾಯತಿಯು ವಿವಿಧ ದಾಖಲೆಗಳನ್ನು(ಭೂಕಂದಾಯ)ಇಟ್ಟುಕೊಳ್ಳಹುದು
- ಗ್ರಾಮಪಂಚಾಯತಿಗೆ ವಹಿಸಿದ ಕಾರ್ಯಗಳನ್ನು ಸರಕಾರ ಹಿಂತೆಗೆದುಕೊಳ್ಳಬಹುದು.

### ಪ್ರಕರಣ–60:
### ಗ್ರಾಮ ಪಂಚಾಯತಿಯ ಸಾಮಾನ್ಯ ಅಧಿಕಾರಗಳು

- ಗ್ರಾಮ ಪಂಚಾಯತಿಯ ತನಗೆ ವಹಿಸಿಕೊಟ್ಟ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ಅಧಕಾರ ಹೊಂದಿದೆ

### ಪ್ರಕರಣ–60(A) : ಗುತ್ತಿಗೆಗಳನ್ನು ಮಾಡಿಕೊಳ್ಳುವ ವಿಧಾನ

- ಕಾಮಗಾರಿಗಳ ನಿರ್ವಹಣೆ ಸರಕು ಸೇವೆಗಳನ್ನು ಒದಗಿಸಲು ಗ್ರಾ.ಪಂ.ಯು ಮಾಡಿಕೋಳ್ಳುವ ಒಪ್ಪಂದಗಳು ಕರ್ನಾಟಕ ಸಾರ್ವನಿಕ ಸಂಗ್ರಹಣೆಯ ಅಧಿನಿಯಮ–1999 ಉಪಬಂಧಗಳಿಗೆ ಅನುಸಾರವಾಗಿರಬೇಕು.
- ಗ್ರಾಮ ಪಂಚಾಯತಿಯ ಪರವಾಗಿ ಕಆಔ ರವರು ಗುತ್ತಿಗೆ ಹಾಗೂ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ಹೊಂದಿದ್ದಾರೆ.

### ಪ್ರಕರಣ–60(B) : ಸಾಮುದಾಯಿಕ ಗುತ್ತಿಗೆಗಳು

- ಸರಕಾರವು ನಿಗದಿಪಡಿಸಿದ 20 ಲಕ್ಷದವರೆಗಿನ ಪಂಚಾಯತಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಗ್ರಾಮಸಭೆಯ ಶಿಫಾ ರಸ್ಸಿನ ಮೇರೆಗೆ ಪಂಚಾಯತಿಗೆ ಶೇ.10 ಕ್ಕಿಂತ ಕಡಿಮೆ ಇಲ್ಲದಂತೆ ಕೊಡುಗೆ ನೀಡಿದ ಯಾವುದೇ ವ್ಯಕ್ತಿ ಹಾಗೂ ಸಮೂಹಕ್ಕೆ ಗುತ್ತಿಗೆ ನೀಡಬಹುದಾಗಿದೆ.

 downloaded from: www.kpscvaani.com

**ಪ್ರಕರಣ-61: ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಗಳು**

- ವರ್ಷಪೂರ್ತಿ ಕಾರ್ಯನಿರ್ವಹಿಸುವ ಸಮಿತಿಗಳೇ ಸ್ಥಾಯಿ ಸಮಿತಿಗಳು. ಇವು ಪಂಚಾಯ್ತಿಯ ಸರ್ವ ಸದಸ್ಯರ ಸಭೆಯ ಕೆಲಸವನ್ನು ಕಡಿಮೆ ಮಾಡುತ್ತವೆ.
- ಈ ಸಮಿತಿಯ ಪಂಚಾಯ್ತಿ ಸದಸ್ಯರೊಂದಿಗೆ ಹೊರಗಿನವರಗೆ ಕೂಡ ಸದಸ್ಯರಾಗಲು ಅವಕಾಶವಿದೆ.
- ಸಾಮಾನ್ಯ ಸ್ಥಾಯಿಸಮಿತಿ ಇದರ ಸಭಾಪತಿ ಗ್ರಾ.ಪಂ. ಉಪಾಧ್ಯಕ್ಷರಾಗಿರುತ್ತಾರೆ

1) **ಸಾಮಾನ್ಯ ಸ್ಥಾಯಿ ಸಮಿತಿ: ಇದು ಈ ಕೆಳಗಿನ ಕಾರ್ಯಗಳನ್ನು ನೋಡಿಕೊಳ್ಳುತ್ತದೆ.**

- ಕೃಷಿ ಮತ್ತು ಕೃಷಿಗೆ ಪೂರಕವಾದ ಚಟುವಟಿಕೆಗಳು
- ಕೈಗಾರಿಕಾ ಚಟುವಟಿಕೆಗಳು
- ಕಾಮಗಾರಿಗಳ ಮೇಲ್ವಿಚಾರಣೆ
- ಸಾಮಾಜಿಕ ಕಾರ್ಯಗಳು
- ಆರೋಗ್ಯ ಮತ್ತು ನೈರ್ಮಲೀಕರಣ
- ಉತ್ಪಾದನಾ ಚಟುವಟಿಕೆಗಳು
- ಶಿಕ್ಷಣದ ಕಾರ್ಯಕ್ರಮಗಳು
- ಫಲಾನುಭವಿಗಳ ಮೇಲ್ವಿಚಾರಣೆ
- ಸಿಬ್ಬಂದಿ
- ಬಡತನ ನಿರ್ಮೂಲನಾ ಕಾರ್ಯಕ್ರಮಗಳು

ಈ ಸಮಿತಿಗೆ **ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ** ಸಭಾಪತಿ.

**2) ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ:–**

ಈ ಸಮಿತಿಯ ಕಾರ್ಯಗಳು:–

- ಪಂಚಾಯ್ತಿಯ ಆಯವ್ಯಯ ರೂಪಿಸುವುದು.
- ಪಂಚಾಯ್ತಿಯ ಲೆಕ್ಕ ಪತ್ರಗಳ ನಿರ್ವಹಣೆ
- ತೆರಿಗೆ ಸಂಗ್ರಹ
- ಸಾಲ ಮತ್ತು ಸಾಲ ಮರುಪಾವತಿ ಬರಬೇಕಾದ ಬಾಕಿಗಳ ಮೇಲ್ವಿಚಾರಣೆ

ಈ ಸಮಿತಿಯ ಸಭಾಪತಿ **ಗ್ರಾಮ ಪಂಚಾಯ್ತಿ ಅಧ್ಯಕ್ಷ**ರಾಗಿರುತ್ತಾರೆ.

3) **ಸಾಮಾಜಿಕ ನ್ಯಾಯ ಸಮಿತಿ:** ಸಭಾಪತಿಯು ಎಸ್.ಸಿ./ಎಸ್.ಟಿ. ಸದಸ್ಯರು ಆಗಿರಬೇಕು.

ಕಾರ್ಯಗಳು

* ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಕಲ್ಯಾಣವನ್ನು ನೋಡಿಕೊಳ್ಳುವುದು.
* ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರ ಮೇಲೆ ದೌರ್ಜನ್ಯ ಮತ್ತು ಶೋಷಣೆ ನಡೆಯದಂತೆ ನೋಡಿಕೊಳ್ಳುವುದು.
* ಹಿಂದುಳಿದ ವರ್ಗದವರ ಕಲ್ಯಾಣ. ಅಲ್ಲದೆ ಅವರ ಮೇಲೆ ಶೋಷಣೆಯಾಗದಂತೆ ನೋಡಿಕೊಳ್ಳುವುದು.
* ಮಹಿಳೆ ಮತ್ತು ಮಕ್ಕಳ ಕಲ್ಯಾಣ ಮತ್ತು ಅವರ ಮೇಲಿನ ದೌರ್ಜನ್ಯ ತಡೆಗಟ್ಟುವುದು.
* ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಶೋಷಣೆಯನ್ನು ತಡೆಗಟ್ಟುವುದು ಮತ್ತು ಅರಿವು ಮೂಡಿಸುವುದು.
* ಪರಿಶಿಷ್ಠ ಜಾತಿ ಅಥವಾ ಪರಿಶೀಷ್ಠ ಪಂಗಡದ ಸದಸ್ಯರನ್ನು ಈ ಸಮಿತಿಯ ಸಭಾಪತಿಯಾಗಿ ನೇಮಕ ಮಾಡಲಾಗುತ್ತದೆ.

**ಸ್ಥಾಯಿ ಸಮಿತಿಗಳ ಸಾಮಾನ್ಯ ನಿಯಮಗಳು:–**

- ಪ್ರತಿ ಸಮಿತಿಯಲ್ಲಿ ಕನಿಷ್ಠ 3, ಗರಿಷ್ಠ 5 ಸದಸ್ಯರಿರಬೇಕು.
- ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯುವಕ ಸಂಘ, ಯವತಿಯರ ಸಂಘಗಳು, ಕ್ರೀಡಾ ಕ್ಲಬ್‌ಗಳು ಇವೇ ಮುಂತಾದ ಸಂಘಟನೆಗಳಿಗೆ ಸೇರಿದವರನ್ನು ಸ್ಥಾಯಿ ಸಮಿತಿಯಲ್ಲಿ ಸಹ–ಸದಸ್ಯರನ್ನಾಗಿ ಮಾಡಿಕೊಳ್ಳಲು ಅವಕಾಶವಿದೆ.
- ಸ್ಥಾಯಿ ಸಮಿತಿ ಸದಸ್ಯರ ಅವಧಿ 30 ತಿಂಗಳು.
- ಸ್ಥಾಯಿ ಸಮಿತಿಗೆ ಪಂಚಾಯ್ತಿ ಕಾರ್ಯದರ್ಶಿಯು ಸಹ ಕಾರ್ಯದರ್ಶಿಯಾಗಿರುತ್ತಾರೆ.
- ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಮಹಿಳೆಯರಿಗೆ, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡದವರಿಗೆ ಕಡ್ಡಾಯವಾಗಿ ಸದಸ್ಯತ್ವ ನೀಡಬೇಕು.

## ಪ್ರಕರಣ-61(ಎ)
## ಗ್ರಾಮ ಪಂಚಾಯತಿಯ ಇತರ ಸಮಿತಿಗಳು

1) ಗ್ರಾ.ಪಂ.ಯು ಸ್ಥಾಯಿ ಸಮಿತಿಗಳಲ್ಲದೇ ತನ್ನ ಇತರ ಉದ್ದೇಶಕ್ಕಾಗಿ ನಿರ್ದಿಷ್ಟ ಸದಸ್ಯರನ್ನು ಒಳಗೊಂಡ " 1 ಅಥವಾ 1ಕ್ಕಿಂತ ಹೆಚ್ಚು ಇತರ ಸಮಿತಿಗಳನ್ನು ಗ್ರಾಮ ಪಂಚಾಯತಿಯು ನೇಮಕ ಮಾಡಬಹುದಾಗಿದೆ.
   1. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ(SDMC).
   2. ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ.
   3. ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ.
   4. ಆಹಾರ ಖಾತ್ರಿ ಸಮಿತಿ.
   5. ಮಹಿಳೆಯರ ಶೋಷಣೆ ತಡೆಗಟ್ಟುವ ಸಮಿತಿ
   6. ಗ್ರಾಮ ಪಂಚಾಯತಿ ಲೋಕ ಶಿಕ್ಷಣ ಸಮಿತಿ.
   7. ಬಡತನ ನಿರ್ಮೂಲನಾ ಮತ್ತು ವಸತಿ ಸಮಿತಿ.
   8. ಗ್ರಾಮ ಅರಣ್ಯ ಸಮಿತಿ.
   9. ಜಲಾನಯನ ಕಾರ್ಯಕ್ರಮಗಳ ಅನುಷ್ಠಾನ ಸಮಿತಿ.
   10. ಬಾಲ ವಿಕಾಸ ಸಮಿತಿ.

## ಪ್ರಕರಣ-62: ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಪ್ರಕಾರ್ಯಗಳು ಮತ್ತು ಅಧಿಕಾರಿಗಳು

**1) ಅಧ್ಯಕ್ಷರ ಕಾರ್ಯಗಳು**

1. ಪಂಚಾಯತಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಣೆ.
2. ಪಂಚಾಯತಿ ಸಭೆಗಳನ್ನು ಕರೆಯುವುದು ಮತ್ತು ಅಧ್ಯಕ್ಷತೆ ವಹಿಸುವುದು.
3. ಗ್ರಾಮ ಪಂಚಾಯತಿ ದಾಖಲೆಗಳನ್ನು ಪರಿಶೀಲಿಸುವುದು.
4. ಪಂಚಾಯತಿ ಕಾಮಗಾರಿಗಳ ಮೇಲ್ವಿಚಾರಣೆ
5. ಪಂಚಾಯತಿ ಸಿಬ್ಬಂದಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ

**ಉ.ಪ್ರ-2:** 24 ಗಂಟೆಯೊಳಗೆ ನೋಟಿಸು ನೀಡಿ ತುರ್ತುಸಭೆ ಕರೆಯುವ ಅಧಿಕಾರ.

2) **ಉಪಾಧ್ಯಕ್ಷನ ಕಾರ್ಯಗಳು:–** ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅಧ್ಯಕ್ಷರ ಕಾರ್ಯಗಳನ್ನು ನಿರ್ವಹಿಸುವುದು.

downloaded from: www.kpscvaani.com 

### ಪ್ರಕರಣ-63: ರಸ್ತೆಗಳು ಸೇತುವೆಗಳು ಮುಂತಾದವುಗಳ ಬಗ್ಗೆ ಗ್ರಾಮ ಪಂಚಾಯತಿಯ ಅಧಿಕಾರಗಳು

- ಖಾಸಗಿಯಾಗಿರದ ಮತ್ತು ಯಾವುದೇ ಸ್ಥಳೀಯ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡದ ತನ್ನ ವ್ಯಾಪ್ತಿಯಲ್ಲಿನ ಎಲ್ಲಾ ರಸ್ತೆಗಳು, ಸೇತುವೆಗಳು, ಬಂಡಿದಾರಿ, ಚರಂಡಿ, ಬಾವಿ, ಇತ್ಯಾದಿಗಳ ಮೇಲೆ. ಗ್ರಾ.ಪಂ.ಗೆ ಅಧಿಕಾರವಿದೆ.
- ನೂತನ ಬಡಾವಣೆ ಹೊಸ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಿಸುವುದು.
- ಯಾವುದೇ ರಸ್ತೆ ಜಲಮಾರ್ಗಗಳನ್ನು ಸುಧಾರಣೆ ಮಾಡುವುದು, ಇಲ್ಲವೆ ಮುಚ್ಚುವುದು.

### ಪ್ರಕರಣ-64: ಕಟ್ಟಡಗಳ ನಿರ್ಮಾಣದ ಬಗ್ಗೆ ನಿಯಂತ್ರಣ

- ಪಂಚಾಯತಿ ಅನುಮತಿಯಿಲ್ಲದೇ ಯಾವುದೇ ಕಟ್ಟಡವನ್ನು ನಿರ್ಮಿಸುವಂತಿಲ್ಲ.
- ಕಟ್ಟಡ ಕಟ್ಟಲು ಕಟ್ಟಡದ ನೀಲಿನಕ್ಷೆ ಒದಗಿಸಿ ಪಂಚಾಯತಿ ಅನುಮತಿ ಪಡೆಯಬೇಕು.
- ಅರ್ಜಿಯನ್ನು ಸ್ವೀಕರಿಸಿದ 60 ದಿನದೊಳಗೆ ಗ್ರಾಮ ಪಂಚಾಯತಿಯು ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಬೇಕು. ನೀಡದಿದ್ದರೆ ಅದು ಅನುಮತಿ ನೀಡಿದೆ ಎಂದು ಪರಿಗಣಿಸಲಾಗುತ್ತದೆ.
- ಅನುಮತಿಯಿಲ್ಲದೆ ಅಥವಾ ನೀಲಿನಕ್ಷೆ ಪ್ರಕಾರ ಕಟ್ಟಡವನ್ನು ನಿರ್ಮಿಸಿರದಿದ್ದರೆ ಅದನ್ನು ತಡೆಯುವ ಅಧಿಕಾರ ಪಂಚಾಯತಿಗಿದೆ.
- ಅನುಮತಿಯಿಲ್ಲದೇ ಕಟ್ಟಿದ ಕಟ್ಟಡಕ್ಕೆ ದಂಡವನ್ನು (199ದ ಪ್ರಕರಣದಂತೆ) ವಸೂಲಿ ಮಾಡಬೇಕು.
- ಪಂಚಾಯತಿ ಆದೇಶದ ವಿರುದ್ಧ ಮಾಲೀಕನು ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಸಲ್ಲಿಸಬಹುದು.

### ಪ್ರಕರಣ-65: ಅನುಮತಿಯಿಲ್ಲದ ಕಟ್ಟಡಗಳ ನಿರ್ಮಾಣವನ್ನು ನಿಷೇಧಿಸಲು ಸರಕಾರದ ಅಧಿಕಾರ

1) ಅನುಮತಿಯಿಲ್ಲದೆ ನಿರ್ಮಿಸಿರುವ ಕಟ್ಟಡಗಳ ನಿರ್ಮಾಣವನ್ನು ನಿಷೇಧಿಸುವ ಮತ್ತು ನಿಯಂತ್ರಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಯು ಹೊಂದಿದೆ.
2) ಅನುಮತಿ ಪಡೆಯದೆ ಕಟ್ಟಡ ನಿರ್ಮಿಸಿದರೆ '500 ರೂಪಾಯಿ ದಂಡ' ವಿಧಿಸಲಾಗುತ್ತದೆ.

### ಪ್ರಕರಣ-66: ಕಾರ್ಖಾನೆಗಳನ್ನು ನಿರ್ಮಿಸಲು ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲು ಅನುಮತಿ

1) ಉಗಿ ಶಕ್ತಿ, ಜಲಶಕ್ತಿ, ವಿದ್ಯುತ್‌ಶಕ್ತಿ ಅಥವಾ ಇತರ ಯಾಂತ್ರಿಕ ಶಕ್ತಿಗಳಿಂದ ನಡೆಯುವ ಕಾರ್ಖಾನೆಗಳ ಪ್ರಾರಂಭಿಸಲು ಪಂಚಾಯತಿಯ ಅನುಮತಿಬೇಕು
2) ಅನುಮತಿ ಇಲ್ಲದೆ ಪ್ರಾರಂಭಿಸಿದರೆ ಅದನ್ನು ಮುಚ್ಚಿಸುವ ಅಧಿಕಾರ ಪಂಚಾಯತಿಗೆ ಇದೆ
3) ಪಂಚಾಯತಿಯ ಆದೇಶದ ವಿರುದ್ಧ ಮಾಲಿಕರು "ಕಾರ್ಯನಿರ್ವಾಹಕ ಅಧಿಕಾರಿಗೆ" ಅಪೀಲು ಸಲ್ಲಿಸಬಹುದು ಇವರ ಆದೇಶದ ವಿರುದ್ಧ "ಉಪವಿಭಾಗಾಧಿಕಾರಿ"ಮೇಲ್ಮನವಿ ಮಾಡಿಕೊಳ್ಳಬಹುದು

### ಪ್ರಕರಣ-67: ಲೈಸೆನ್ಸ ಇಲ್ಲದ ಉಪದ್ರವಕಾರಿ ಅಥವಾ ಅಪಾಯಕಾರಿ ವ್ಯಾಪಾರದ ನಿಷೇಧ

1) ಪಂಚಾಯತಿಯ ಪರವಾನಗಿ ಇಲ್ಲದೆ ಯಾವುದೇ ಉಪದ್ರವಕಾರಿ ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುವಂತಿಲ್ಲ ಇದನ್ನು ತಡೆಗಟ್ಟುವುದು ಪಂಚಾಯತಿಯ ಕಾರ್ಯವಾಗಿದೆ.

   ಉದಾಹರಣೆ: ಗುಟ್ಕಾ ಮಾರಾಟ, ಗಾಂಜಾ ಮಾರಾಟ, ಪಟಾಕಿ ತಯಾರಿಕೆ ಮತ್ತು ಮಾರಾಟ ಇತ್ಯಾದಿ.

### ಪ್ರಕರಣ-68: ಹೊಟೇಲು ಮುಂತಾದವುಗಳ ನಿಯಂತ್ರಣ

1) ಪಂಚಾಯತಿ ಪ್ರದೇಶದಲ್ಲಿ ಹೊಟೇಲ್, ಖಾನಾವಳಿ, ಉಪಹಾರಗೃಹ, ಕಾಫಿಅಂಗಡಿ, ಬೇಕರಿ, ವಸತಿಗೃಹ ಇತ್ಯಾದಿಗಳನ್ನು ಸ್ಥಾಪಿಸಬೇಕಾದರೆ ಪಂಚಾಯತಿಯ ಅನುಮತಿ ಅಗತ್ಯವಿದೆ
2) ಕೆಲವು ನಿಯಮಗಳನ್ನು ವಿಧಿಸಿ ಪಂಚಾಯತಿಯು ಅನುಮತಿ ನೀಡಬಹುದು.
3) ನಿಯಮಗಳ ಪ್ರಕಾರ ಹೊಟೇಲ್‌ಗಳು ಇರದಿದ್ದರೆ ಮುಚ್ಚಿಸುವ ಅಧಿಕಾರ ಪಂಚಾಯತಿಯಾಗಿದೆ.

### ಪ್ರಕರಣ-69: ಅಂಗಡಿಗಳಿಗೆ ಪರವಾನಗಿ ನೀಡುವುದು

1) ಪಂಚಾಯತಿ ಪ್ರದೇಶದಲ್ಲಿ ಯಾವುದೆ ಅಂಗಡಿಗಳನ್ನು ಸ್ಥಾಪಿಸಲು ಪಂಚಾಯತಿ ಪರವಾನಗಿ ನೀಡಬಹುದು.

### ಪ್ರಕರಣ-70: ಅನುಮತಿ ಮತ್ತು ಪರವಾನಗಿ ಅನ್ವಯಿಸುವ ಉಪಬಂಧಗಳು

1) 66,67,68,69 ಪ್ರಕರಣಗಳ ಅಡಿಯಲ್ಲಿ ಪರವಾನಗಿ ನೀಡುವ ಅಥವಾ ನೀಡಿದ ಪರವಾನಗಿ (ನಿಯಮ ಪಾಲಿಸದಿದ್ದರೆ)ಯನ್ನು ರದ್ದು ಪಡಿಸುವ ಅಧಿಕಾರ ಪಂಚಾಯತಿಗಿದೆ.
2) ಪ್ರತಿವರ್ಷ ಪರವಾನಗಿ ನವೀಕರಿಸಿಕೊಳ್ಳಬೇಕು, ಈ ನವೀಕರಣಕ್ಕಾಗಿ "ಕನಿಷ್ಠ 30 ದಿನ ಗರಿಷ್ಠ 90 ದಿನ" ಕಾಲಾವಕಾಸವಿರುತ್ತದೆ.
3) ಲೈಸೆನ್ಸ್ ಮಂಜೂರಿ ಬಗ್ಗೆ ಗ್ರಾ.ಪಂ. '60 ದಿನದೊಳಗೆ' ಅರ್ಜಿದಾರನಿಗೆ ತನ್ನ ನಿರ್ಣಯ ತಿಳಿಸಬೇಕು.
4) ಪಂಚಾಯತಿಯ ಆದೇಶದ ವಿರುದ್ದ "30 ದಿನದೊಳಗೆ ಕಾರ್ಯನಿರ್ವಾಹಕ ಅಧಿಕಾರಿಗೆ" ಮೇಲ್ಮನವಿ ಸಲ್ಲಿಸಬಹುದು.

### ಪ್ರಕರಣ-71: ಗ್ರಾಮ ಪಂಚಾಯತಿಗಳಿಗೆ ಸಂಸ್ಥೆಗಳು ಅಥವಾ ಕಾಮಗಾರಿಗಳ ನಿರ್ವಹಣೆ

1) ಸರಕರಿ ನಿಯಮಗಳಿಗೆ ಅನುಸಾರವಾಗಿ 'ಜಿಲ್ಲಾಧಿಕಾರಿಯು' ತಾ.ಪಂ/ಜಿ.ಪಂ .ಸರಕಾರದ ಅಥವಾ ಖಾಸಗಿವ್ಯಕ್ತಿಯ ಯಾವುದೇ ಕಾಮಗಾರಿಗಳನ್ನು ಅಥವಾ ಸಂಸ್ಥೆಗಳ ವ್ಯವಸ್ಥಾಪನೆಯನ್ನು ಗ್ರಾ.ಪಂಗೆ ವರ್ಗಾವಣೆ ಮಾಡಬಹುದು.

### ಪ್ರಕರಣ-72: ಸಾರ್ವಜನಿಕ ಬೀದಿಗಳು ಮತ್ತು ಖಾಲಿನಿವೇಶನಗಳ ಮೇಲಿನ ಅಡೆತಡೆ ಮತ್ತು ಒತ್ತುವರಿ

1) ಸಾರ್ವಜನಿಕ ಸ್ಥಳದಲ್ಲಿ ಕಟ್ಟಡ ಕಟ್ಟಿದರೆ, ಸರಕುಗಳನ್ನು ಇಟ್ಟರೆ, ಜಾನವಾರುಗಳನ್ನು ಕಟ್ಟುವುದು, ಎತ್ತಿನಗಾಡಿಯನ್ನು ಬಿಟ್ಟರೆ ಇವುಗಳನ್ನು ತೆರವುಗೊಳಿಸುವುದು ಪಂಚಾಯತಿಯ ಕಾರ್ಯವಾಗಿದೆ.
2) ಒತ್ತುವರಿ ಮಾಡಿಕೊಂಡವರಿಗೆ "100 ರೂಪಾಯಿ ದಂಡ" ವಿಧಿಸಬೇಕು. ನಂತರವು ಹಾಗೇ ಒತ್ತುವರಿ ಮುಂದುವರೆದರೆ ಪ್ರತಿದಿನ್ನಕ್ಕೆ 5ರೂಪಾಯಿ ದಂಡ ವಿದಿಸಬಹುದಾಗಿದೆ

 downloaded from: www.kpscvaani.com

3) ಪಂಚಾಯತಿ ಪ್ರದೇಶದ ಖಾಲಿನಿವೇಸನ ದಿಂದ ಯಾರಾದರೂ ಅಕ್ರಮವಾಗಿ ಮರಳು, ಮಣ್ಣು ತೆಗೆದುಕೊಂಡು ಹೋದರೆ ಅವರಿಗೆ "200 ರೂಪಾಯಿ" ದಂಡ ಹಾಕಬೇಕು

ಈ ಅಪರಾದ ಹಾಗೇ ಮುಂದುವರೆದರೆ "ಪ್ರತಿದಿನಕ್ಕೆ 2 ರೂಪಾಯಿ" ದಂಡವಿಧಿಸಬಹುದಾಗಿದೆ.

4) ಯಾವುದೇ ಧಾರ್ಮಿಕ ಉತ್ಸವ ಅಥವಾ ಸಮಾರಂಭಗಳಿಗಾಗಿ 'ರಸ್ತೆ ಮೇಲೆ 4 ದಿನದ ವರೆಗೆ ಕಟ್ಟಿಗೆ ಮತ್ತು ಕುಳ್ಳು ಇಡುವುದಕ್ಕೆ ಅನುಮತಿ ಕೊಡಬಹುದು.

### ಪ್ರಕರಣ-73: ಬೀದಿಗಳಿಗೆ ಹೆಸರಿಡಲು ಮತ್ತು ಕಟ್ಟಡಗಳಿಗೆ ಸಂಖ್ಯೆಯನ್ನುಕೊಡಲು ಅಧಿಕಾರ

1) ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿನ ಬೀದಿಗಳಿಗೆ, ವೃತ್ತಗಳಿಗೆ, ಹೆಸರು ನೀಡುವ ಮತ್ತು ಕಟ್ಟಡಕ್ಕೆ ಸಂಖ್ಯೆಯನ್ನು ನೀಡುವ ಹಾಗೂ ಬದಲಾಯಿಸುವ ಅಧಿಕಾರ ಹೊಂದಿದೆ.

2) ಯಾವುದೆ ವ್ಯಕ್ತಿಯು ಪಂಚಾಯತಿ ನೀಡಿದ ಹೆಸರನ್ನು ಮತ್ತು ಸಂಖ್ಯೆಯನ್ನು ಬದಲಾಯಿಸುವುದು ಅಥವಾ ನಾಶಪಡಿಸುವಂತಿಲ್ಲ.

3) ಈ ನಿಯಮ ಉಲ್ಲಂಘಿಸಿದವರಿಗೆ "100 ರೂಪಾಯಿ ದಂಡ ವಿಧಿಸಬಹುದಾಗಿದೆ.

### ಪ್ರಕರಣ-74: ಹಾಳುಬಿದ್ದ ಅಥವಾ ಬೀಳುವ ಸಂಭವವಿರುವ ಕಟ್ಟಡಗಳು ಮರಗಳನ್ನು ತೆಗೆದುಹಾಕುವುದು.

1) ಹಾಳುಬಿದ್ದ ಕಟ್ಟಡ ಅಥವಾ ಮರಗಳನ್ನು ತೆಗೆದುಹಾಕುವಂತೆ ಸಂಭಂಧಪಟ್ಟ ಮಾಲಿಕನಿಗೆ ಗ್ರಾ.ಪಂ. ನೋಟಿಸು ನೀಡಬೇಕು. ನೋಟಿಸು ನೀಡಿದ ನಂತರವು ಮಾಲಿಕ ತೆಗೆಯದಿದ್ದರೆ ಪಂಚಾಯತಿಯು ತೆಗೆದುಹಾಕಬಹುದು. ಅದರ ಖರ್ಚನ್ನು ಮಾಲಿಕನಿಂದ ವಸೂಲಿ (199 ಪ್ರಕರಣ) ಮಾಡತಕ್ಕದ್ದು.

### ಪ್ರಕರಣ-75: ನೈರ್ಮಲೀಕರಣ ಮತ್ತು ಚರಂಡಿವ್ಯವಸ್ಥೆಯ ಬಗ್ಗೆ ಅಧಿಕಾರ

* ಶೌಚಾಲಯ, ಚರಂಡಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೆ ಅದನ್ನು ಸ್ವಚ್ಛಗೊಳಿಸಲು ಕ್ರಮಕೈಗೊಳ್ಳುವುದು.
* ಯಾವುದೇ ಅನೈರ್ಮಲ್ಯ ಪ್ರದೇಶವಿದ್ದರೆ ಅದನ್ನು ಯೋಗ್ಯ ಪ್ರದೇಶವಾಗಿ ಮಾರ್ಪಡಿಸುವುದು.
* ಗ್ರಾಮದಲ್ಲಿನ ಕಸ, ಮುಳ್ಳುಕಂಟಿ, ಕಸದಗುಂಡಿ, ಕೊಚ್ಚೆಗುಂಡಿಯನ್ನು ಸ್ವಚ್ಛಮಾಡಿಸುವುದು ಹಾಗೂ ಮುಚ್ಚಿಸುವುದು.

### ಪ್ರಕರಣ-76: ಯಾತ್ರಾ ಸ್ಥಳ ಮುಂತಾದವುಗಳ ಮುಂತಾದವುಗಳ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿಗಳಿಂದ ವಂತಿಗೆ

1) ಗ್ರಾಮದಲ್ಲಿ ಜಾತ್ರೆ,ಉತ್ಸವಗಳು ನಡೆಯುತ್ತಿದ್ದಾಗ ಭಕ್ತರನುಕೂಲಕ್ಕಾಗಿ ಶೌಚಾಲಯದ ವ್ಯವಸ್ಥೆ, ತಂಗುದಾಣ, ಸ್ನಾನದ ಕೋಣೆ ಕುಡಿಯುವನೀರಿನ ವ್ಯವಸ್ಥೆ ಮುಂತಾದ ಸೌಲಭ್ಯಗಳನ್ನು ಗ್ರಾ.ಪಂ ಒದಗಿಸಬೇಕು ಅದರ ಖರ್ಚನ್ನು "ಜಿಲ್ಲಾಧಿಕಾರಿ" ಯ ಆದೇಶದಂತೆ ದೇವಸ್ಥಾನಸಮೀತಿಯಿಂದ ವಸೂಲಿಮಾಡಬೇಕು.

2) ಜಿಲ್ಲಾಧಿಕಾರಿಯ ಆದೇಶದ ವಿರುದ್ಧ ದೇವಸ್ಥಾನ ಕಮಿಟಿಯವರು "ಕಮಿಷನರ್" ಅವರಿಗೆ ಅಪೀಲು ಮಾಡಿಕೊಳ್ಳಬಹುದು

### ಪ್ರಕರಣ-77 ಸಾಕಸ್ಟು ನೀರು ಸರಬರಾಜು ಮಾಡಲು ಅಧಿಕಾರ

1) ಪಂಚಾಯತಿ ಕುಡಿಯುವ ನೀರಿಗಾಗಿ ಕೊಳವೆಬಾವಿ, ತೆರೆದಬಾವಿ. ಕೆರೆ ಮುಂತಾದವುಗಳನ್ನು ನೀರ್ಮಿಸುವುದು ಇವುಗಳಿಂದ ನೀರುಸರಬರಾಜು ಮಾಡಬಹುದು.

### ಪ್ರಕರಣ-78: ನೀರು ಸರಬರಾಜಿನ ವ್ಯವಸ್ಥೆಗಳ ಬಗ್ಗೆ ಉಪವಿಧಿಗಳನ್ನು ರಚಿಸಲು ಗ್ರಾಮ ಪಂಚಾಯತಿಯ ಅಧಿಕಾರ

- ಸರಕಾರದ ನಿಯಮ ಗಳಿಗೆ ಒಳಪಟ್ಟು ಗ್ರಾಮ ಪಂಚಾಯತಿಯು ನೀರುಸರಬರಾಜು ಮೂಲಗಳು ಬಾವಿಗಳು ಮತ್ತು ಕೆರೆಗಳ ಸಂರಕ್ಷಣೆ, ನೀರುಸರಬರಾಜು ಕಾಮಗಾರಿಗಳು, ಸಾಧನಗಳು, ಸಲಕರಣೆಗಳು, ನೀರು ಪೋಲಾಗದಂತೆ ತಡೆಯಲು ಉಪ-ವಿಧಿಗಳನ್ನು ರಚಿಸುವ ಅಧಿಕಾರ ಹೊಂದಿದೆ.

### ಪ್ರಕರಣ-79: ಜಂಟಿ ಸಮಿತಿಗಳ ನೇಮಕ

- ನಿರ್ದಿಷ್ಟ ಉದ್ದೇಶ ಅಥವಾ ಜಂಟಿ ಹಿತಾಸಕ್ತಿ ಹೋಂದಿರುವ ವಿಷಯಗಳ ನಿರ್ವಹಣೆಗಾಗಿ ಒಂದು ತಾಲೂಕಿನೊಳಗಿನ ಎರಡು ಪಂಚಾಯತಿಗಳು ಅಥವಾ ತಾಲೂಕು ಅಥವಾ ಗ್ರಾಮಗಳು ಕೂಡಿಕೊಂಡು ತಾಲೂಕು ಪಂಚಾಯತ್ ಅಥವಾ ಜಿಲ್ಲಾ ಪಂಚಾಯತಿ ಯೊಂದಿಗೆ ಕೂಡಿಕಂಡು ಒಂದು ಜಂಟಿ ಸಮಿತಿಯನ್ನು ರಚಿಸಬಹುದು.
- ಜಂಟಿ ಸಮಿತಿಯಲ್ಲಿ ಹೊರಗಿನವರು **1/3ಕ್ಕಿಂತ** ಹೆಚ್ಚಿಗೆ ಇರಬಾರದು.

### ಪ್ರಕರಣ-80: ಪ್ರವೇಶಾಧಿಕಾರ

- ಪಂಚಾಯತಿಪ್ರದೇಶದಲ್ಲಿನ ಯಾವುದೇ ಕಟ್ಟಡ ಅಥವಾ ಭೂಮಿಯನ್ನು ಪರಿಶೀಲಿಸಲು ಪ್ರವೇಶಿಸುವ ಅಧಿಕಾರ ಪಂಚಾಯತಿಗಿದೆ.
- ಪ್ರವೇಶಿಸುವ ಮುಂಚೆ ಕಟ್ಟಡದ ಮಾಲಿಕನಿಗೆ ನೋಟಿಸು ನೀಡಬೇಕು
- ಪ್ರವೇಶದ ಅವಧಿಯು "ಸುರ್ಯೋದಯದ ನಂತರ" ಹಾಗೂ "ಸೂರ್ಯಸ್ತದ ಒಳಗೆ" ಆಗಿರಬೇಕು.

* ಕಟ್ಟಡದ ಮಾಲಿಕರ ಧಾರ್ಮಿಕ ಭಾವನೆಗಳಿಗೆ ಪಂಚಾಯತಿ ಸಿಬ್ಬಂದಿ ಧಕ್ಕೆ ಮಾಡಬಾರದು

### ಪ್ರಕರಣ-81-ಹೊಲಸು ಕಟ್ಟಡಗಳ ನಿವಾರಣೆ

- ಯಾವುದೇ ಕಟ್ಟಡದ ಮಾಲಿಕ ,ಬಾಡಿಗೆದಾರ ತನ್ನಕಟ್ಟಡವನ್ನು ಹೊಲಸು ಅಥವಾ ಅನಾರೋಗ್ಯಕರವಾಗಿಟ್ಟರೆ ಅದು ನೆರೆ-ಹೊರೆಯವರಿಗೆ ತೊಂದರೆ ಮಾಡುತ್ತಿದ್ದರೆ ಅದನ್ನು ತೆರವುಗೊಳಿಸಲು ಗ್ರಾ.ಪಂ. ನೋಟಿಸ್ ನೀಡಬಹುದು.
- ನೋಟಿಸ್ ನೀಡಿದ ನಂತರವು ತೆರವುಗೊಳಿಸದಿದ್ದರೆ "100 ರೂಪಾಯಿ" ದಂಡ ವಿಧಿಸಬಹುದಾಗಿದೆ ಈಅಪರಾಧ ಹಾಗೇ ಮುಂದುವರುದರೆ ಪ್ರತೀ ದಿನಕ್ಕೆ 5/- ರೂ ದಂಡ ವಿಧಿಸಲಾಗುತ್ತದೆ.

### ಪ್ರಕರಣ-82: ನೀರುಸರಬರಾಜಿನ ಮೂಲಗಳ ಬಗ್ಗೆ ಅಧಿಕಾರಗಳು ಮತ್ತು ಕರ್ತವ್ಯಗಳು

- ಕುಡಿಯುವ ನೀರಿನ ಮೂಲಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು.
- ಕುಡಿಯುವನೀರಿನಲ್ಲಿ ಪಾಚಿ,ಹುಲ್ಲು ಮುಳ್ಳು ಬೆಳೆದಿದ್ದರೆ ಸ್ವಚ್ಛಗೊಳಿಸುವುದು.

downloaded from: www.kpscvaani.com


- ಕುಡಿಯುವ ನೀರಿಗೆ ಚರಂಡಿ ನೀರು ಬಂದು ಸೇರುತ್ತಿದ್ದರೆ ತಡೆಗಟ್ಟುವುದು.
- ಕುಡಿಯುವ ನೀರಿನ ಸ್ವಚ್ಛತೆಗಾಗಿ 'ಖಾಸಗಿ ಮಾಲಿಕರಿಗೂ' ಪಂಚಾಯತಿ ಆದೇಶಿಸ ಬಹುದು.
- ಜನರ ಆರೋಗ್ಯಕ್ಕೆ ಅಪಾಯವಾಗುವ ನೀರಿನಮೂಲಗಳನ್ನು 24 ಗಂಟೆಯೊಳಗೆ ದುರಸ್ತಿಗೊಳಿಸುವುದು.

**ಪ್ರಕರಣ–83:**

**ನೀಡಿದ ನಿರ್ದೇಶನಗಳನ್ನು ಪಾಲಿಸದೆ ಇರುವುದಕ್ಕಾಗಿ ಪರಿಹಾರ**

- ಯಾವುದೇ ವ್ಯಕ್ತಿ ಅಥವಾ ಮಾಲೀಕನು 82ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚಾಯತಿಯ ಆದೇಶಗಳನ್ನು ಪಾಲಿಸದಿದ್ದರೆ ಅವರ ಕಾರ್ಯಗಳನ್ನು ಗ್ರಾ.ಪಂ.ಯು ಮಾಡಿ ಅದಕ್ಕೆ ತಗುಲಿದ ಎಲ್ಲಾ ಖರ್ಚುಗಳನ್ನು ಮಾಲೀಕನಿಂದ "200ನೇ ಪ್ರಕರಣದಂತೆ ವಸೂಲಿ ಮಾಡಬಹೂದು.

**ಪ್ರಕರಣ 84: ಸಾರ್ವಜನಿಕ ಚಿಲುಮೆಗಳು ಮುಂತಾದ ವುಗಳನ್ನು ಕೆಲವು ಉದ್ದೇಶಗಳಿಗಾಗಿ ಪ್ರತ್ಯಕ ವಾಗಿಸಲು ಅಧಿಕಾರ**

- ನೀರನ್ನು ಸ್ವಚ್ಛವಾಗಿಡಲು ಗ್ರಾಮ ಪಂಚಾಯತಿಯು ನೀರಿನ ಮೂಲಗಳನ್ನು ಕುಡಿಯಲು. ಬಟ್ಟೆತೊಳೆಯಲು ಜಾನುವಾರಗಳಿಗೆ. ಹೀಗೆ ಬೇರೆ–ಬೇರೆ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿರುಸುವ ಅಧಿಕಾರ ಹೊಂದಿದೆ.

**ಪ್ರಕರಣ–85: ಕೆಲವು ಮೂಲಗಳಿಂದ ನೀರಿನ ಉಪಂಯೇಗವನ್ನು ನಿಷೇಧಿಸಲು ಅಧಿಕಾರ**

- ಜನರ ಆರೋಗ್ಯದ ಹಿತಕಾಯಲು ಸಾಂಕ್ರಾಮೀಕ ಕೋಗಗಳನ್ನು ತೆಡೆಯಲು. ವೈಧ್ಯಾಧಿಕಾರಿಯ ಸೂಚನೆಯ ಮೇರೆಗೆ ಯಾವುದೇ ನೀರಿನ ಉಪಯೋಗವನ್ನು ಗ್ರಾಮ ಪಂಚಾಯತಿಯು ನಿಷೇದಿಸಬಹುದು
- ನಿಷೇಧದ ಕುರಿತು ನೀರಿನ ಮೂಲಗಳಲ್ಲಿ ನೋಟಿಸು ಅಂಟಿಸಬೇಕು.

**ಪ್ರಕರಣ–86: ಕೆಲವು ಉದ್ದೇಶಗಳಿಗಾಗಿ ನೀರು ಉಪಯೋಗಿಸುವುದಕ್ಕೆ ದಂಡನೆ**

- ಕುಡಿಯುವ ನೀರಿನ ಪ್ರದೇಶದಲ್ಲಿ ಸ್ನಾನ ಮಾಡುವುದು
- ಕುಡಿಯುವ ನೀರಿನಲ್ಲಿ ಬಟ್ಟೆತೊಳೆಯುವದು
- ಕುಡಿಯುವ ನೀರಿನಲ್ಲಿ ಜಾನುವಾರುಗಳ ಮೈತೊಳೆಯುವುದು
- ಕುಡಿಯುವ ನೀರಿಗೆ ತ್ಯಾಜ್ಯ ಸೇರಿಸುವುದು ಇತ್ಯಾದಿಗಳನ್ನು ನಿಷೇದಿಸಲಾಗಿದೆ.
- ಯಾವ ಉದ್ದೇಶಕ್ಕಾಗಿ ನೀರು ಮೀಸಲಾಗಿ ಇಟ್ಟಿರುತ್ತಾರೋ ಅದೇ ಉದ್ದೇಶಕ್ಕೆ ಬಳಸಬೇಕು.
- ಈ ವಿಷಯಗಳಲ್ಲಿ ತಪ್ಪಿತಸ್ಥರಿಗೆ '50 ದಂಡ' ವಿಧಿಸಬಹುದು ನಂತರ ಪ್ರತೀದಿನಕ್ಕೆ "10 ರೂ ದಂಡ" ವಿಧಿಸಬಹುದು.

**ಪ್ರಕರಣ–87:**

**ಹೊಲಸು ನೀರಿನಿಂದಾಗುವ ಉಪದ್ರವ ವನ್ನು ತಡೆಯುವುದು**

- ಕಲುಷಿತನೀರು ಅಥವಾ ನಿಂತ ನೀರಿನಿಂದ ಜನರಿಗೆ ತೊಂದರೆ ಯಾಗುತ್ತಿದ್ದರೆ ಅದನ್ನು ತೆರವುಗೊಳಿಸಲು ಪಿಡಿಒ ನೋಟಿಸು ನೀಡಬಹುದು.

**ಪ್ರಕರಣ–88: ಸ್ಮಶಾನಗಳನ್ನು ಮುಚ್ಚುವುದು**

- ಗ್ರಾ.ಪಂ. ವ್ಯಾಪ್ತಿಯಲ್ಲಿನ ಸ್ಮಶಾನಗಳಿಂದ ಸಾರ್ವಜನಿಕರಿಗೆ ತೊಂದರೆ ಯಾಗಿತ್ತಿದ್ದರೆ ಅದರ ಬಗ್ಗೆ "ಉಪವಿಭಾಗಾಧಿಕಾರಿಗೆ" ತಿಳಿಸತಕ್ಕದ್ದು.
- ಮುಚ್ಚಿದ ಸ್ಮಶಾನವನ್ನು ಬಳಕೆ ಮಾಡಿದರೆ "100 ರೂ. ದಂಡ ವಿಧಿಸಲಾಗುತ್ತದೆ.

**ಪ್ರಕರಣ–89: ಸಾಂಕ್ರಾಮಿಕರೋಗಿಗಳಿರುವ ಕಟ್ಟಡ ಮುಂತಾದವುಗಳ ಒಳಗೆ ಪ್ರವೇಶಿಸುವ ಅಧಿಕಾರ**

- ಯಾವುದೇ ಕಟ್ಟಡ ಅಥವಾ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗ ಹರಡಿದೆ ಎಂದು ತಿಳಿದು ಬಂದಾಗ ಅದರ ಪರಿಶೀಲನೆಗೆ ಪಿ.ಡಿ.ಓ. ಅಥವಾ ಕಾರ್ಯದರ್ಶಿ ಗ್ರಾ.ಪಂ. ಯಾವುದೇ ಅಧಿಕಾರಿ ಪ್ರವೇಶಿಸಬಹುದು.
- ಪ್ರವೇಶಿಸುವ ಕುರಿತು ಮಾಲೀಕರಿಗೆ ನೋಟಿಸು ನೀಡಬೇಕು.
- ಪ್ರವೇಶವು ಸೂರ್ಯೋದಯದಿಂದ ಸೂರ್ಯಾಸ್ತದ ನಡುವಿನ ಅವಧಿ ಯಾಗಿರಬೇಕು.

**ಪ್ರಕರಣ–90: ಕಟ್ಟಡ ಮುಂತಾದವುಗಳ ಸೋಂಕು ನಿವಾರಣೆ**

1) ಪಂಚಾಯತಿ ಪ್ರದೇಶದಲ್ಲಿ ಸೋಂಕ ಹರಡಿರುವ ಅಥವಾ ಹರಡುವ ಸಂಭವವಿರುವ ಯಾವುದೇ ಕಟ್ಟಡ ಅಥವಾ ಪ್ರದೇಶವನ್ನು ಮಾಲೀಕನಿಗೆ ಕಾರ್ಯದರ್ಶಿ/ ಪಿ.ಡಿ.ಓ. ನೋಟೀಸು ನೀಡಬೇಕು.
2) ಪಿ.ಡಿ.ಓ. ಆದೇಶವನ್ನು ಮಾಲೀಕನು ಪಾಲಿಸದಿದ್ದರೆ ಗ್ರಾ.ಪಂ.ಯು ಸ್ವಚ್ಛಗೊಳಿಸಬಹುದು ಅದಕ್ಕೆ ತಗುಲಿದ ವೆಚ್ಚವನ್ನು ಮಾಲೀಕನಿಂದ ವಸೂಲಿ ಮಾಡಬೇಕು.

**ಪ್ರಕರಣ–91: ಸೋಂಕು ತಗುಲಬಹುದಾದ ವಸ್ತುಗಳು**

1) ಸಾಂಕ್ರಮಿಕ ಸೋಂಕು ತಗುಲಬಹುದಾದ ವಸ್ತುಗಳನ್ನು ತೆರವು ಗೊಳಿಸಲು ನಾಶಗೊಳಿಸಲು ಸಂಬಂಧಪಟ್ಟವರಿಗೆ ಕಾರ್ಯದರ್ಶಿ/ ಪಿ.ಡಿ.ಓ. ಸೂಚಿಸಬಹುದು.
2) ಆದೇಶ ಉಲ್ಲಂಘಿಸಿದರೆ 50 ರೂ. ದಂಡ ವಿಧಿಸಲಾಗುತ್ತದೆ.

**ಪ್ರಕರಣ:–92:**

**ಹೂಳುವ ಮತ್ತು ಸುಡುವ ಸ್ಥಳಗಳ ನೋಂದಣಿ**

1) ಶವ ಸಂಸ್ಕಾರ ಮಾಡಲು ಗ್ರಾ.ಪಂ.ಗೆ ಅರ್ಜಿ ಸಲ್ಲಿಸಿ ನೊಂದಾಯಿಸತಕ್ಕದ್ದು.

**ಪ್ರಕರಣ–93:**

**ಮೃತರ ಅಂತ್ಯಕ್ರಿಯೆಗಾಗಿ ಲೈಸನ್ಸು ಕೊಡುವುದು**

1) ಮೃತರ ಅಂತ್ಯಕ್ರಿಯೆಯ ಸ್ಥಳಗಳಿಗಾಗಿ ಗ್ರಾ.ಪಂ.ಯಲ್ಲಿ ಲೈಸನ್ಸು ಪಡೆಯುವುದು ಕಡ್ಡಾಯ.
2) ಗ್ರಾ.ಪಂ.ಯು ಶವ ಸಂಸ್ಕಾರಗಳಿಗೆ ಅನುಮತಿ ನೀಡಬಹುದು ಅಥವಾ ನೀಡದೆ ಇರಬಹುದು.

**ಪ್ರಕರಣ–94: ನೋಂದಾಯಿಸಿದ ಲೈಸನ್ಸು ಕೊಟ್ಟ ಅಥವಾ ಒದಗಿಸಿದ ಸ್ಥಳಗಳ ಬಗ್ಗೆ ಪುಸ್ತಕವನ್ನು ಇಡಬೇಕು.**

1) ಪಂಚಾಯತಿ ಪ್ರದೇಶದಲ್ಲಿರುವ ಸ್ಮಶಾನ ಜಾಗದ ಮಾಹಿತಿ ಶವ ಸಂಸ್ಕಾರಗಳ ವಿವರಕ್ಕಾಗಿ ಪುಸ್ತಕ ಇಡಬೇಕು. ಈ ಪುಸ್ತಕ ನಿರ್ವಹಿಸುವ ಅಧಿಕಾರ ಕಾರ್ಯದರ್ಶಿಗೆ ಸಂಬಂಧಿಸಿದ್ದು.

 downloaded from: www.kpscvaani.com

**ಪ್ರಕರಣ-95: ಅನಧಿಕೃತ ಸ್ಥಳಗಳಲ್ಲಿ ಹೂಳುವುದು ಮತ್ತು ಸುಡುವುದು ನಿಷೇಧ**

* ಕುಡಿಯುವ ನೀರು, ಶಾಲೆ, ಜನವಸತಿ ಪ್ರದೇಶಗಳ=100 ಮೀ. ಒಳಗೆ ಶವಸಂಸ್ಕಾರ ಮಾಡುವಂತಿಲ್ಲ. ಪರವಾನಗಿ ನೀಡಿದ ಸ್ಥಳದಲ್ಲಿಯೇ ಶವಸಂಸ್ಕಾರ ಮಾಡಬೇಕು.

**ಪ್ರಕರಣ-96: ಶವ ಸಂಸ್ಕಾರದ ಬಗ್ಗೆ ಗ್ರಾಮಪಂಚಾಯತಿಗೆ ತಿಳಿಸುವುದು**

* ಗ್ರಾ.ಪಂ. ಪ್ರದೇಶದಲ್ಲಿ ಯಾವುದೇ ಶವ ಸಂಸ್ಕಾರ ನಡೆದರೆ ಅದರ ಬಗ್ಗೆ ಗ್ರಾ.ಪಂ.ಗೆ ಸಂಬಂಧ ಪಟ್ಟವರು ತಿಳಿಸಬೇಕು.

**ಪ್ರಕರಣ-97: ಸಾರ್ವಜನಿಕ ಇಳಿದಾಣಗಳು, ಗಾಡಿ ನಿಲ್ದಾಣಗಳು ಇತ್ಯಾದಿ**

* ಗ್ರಾ.ಪಂ.ಯು. ಸಾರ್ವಜನಿಕ ಇಳಿದಾಣಗಳು, ಗಾಡಿನಿಲ್ದಾಣಗಳು ಇತ್ಯಾದಿಗಳನ್ನು ಒದಗಿಸಬಹುದಾಗಿದೆ. ಅವುಗಳ ಬಳಕೆಗೆ ಶುಲ್ಕ ವಸೂಲಿ ಮಾಡಬಹುದು.

**ಪ್ರಕರಣ-98: ಗುಡಿಸಲು ಮನೆಗಳನ್ನು ಕ್ರಮ ಬದ್ಧಗೊಳಿಸುವುದು**

* ಗುಡಿಸಲುಗಳನ್ನು ನಿರ್ಮಿಸಬೇಕಾದರೆ ಪಂಚಾಯ್ತಿಯಿಂದ ಅನುಮತಿ ಪಡೆಯಬೇಕು.
* ಗುಡಿಸಲುಗಳ ಎರಡು ಸಾಲಿನ ನಡುವೆ ಮತ್ತು ಮುಂದುಗಡೆ ಸಾಕಷ್ಟು ಜಾಗ ಇರಬೇಕು. ಗಾಳಿ ಬೆಳಕಿನ ವ್ಯವಸ್ಥೆ ಇರಬೇಕು.
* ಗುಡಿಸಲುಗಳಿಗೆ ಚರಂಡಿವ್ಯವಸ್ಥೆ, ರಸ್ತೆ, ಶೌಚಾಲಯ ವ್ಯವಸ್ಥೆ ಮಾಡಬೇಕು.
* ಅಕ್ರಮ ಗುಡಿಸಲುಗಳನ್ನು ತೆರವುಗೊಳಿಸಬೇಕು.

**ಪ್ರಕರಣ-99: ಚರಂಡಿಗಳನ್ನು ನಿರ್ಮಿಸುವ ಅಧಿಕಾರ**

* ಗ್ರಾಮದ ಜನರ ಅನೂಕೂಲಕ್ಕಾಗಿ ಚರಂಡಿ ನಿರ್ಮಾಣ ಮಾಡಬೇಕು.
* ಚರಂಡಿ ನಿರ್ಮಾಣಕ್ಕೆ ಖಾಸಗಿ ಸ್ಥಳದ ಅಗತ್ಯವಿದ್ದರೆ ಸಂಬಂಧಿಸಿದವರಿಗೆ ನೋಟಿಸು ನೀಡಿ ಅದನ್ನು ಉಪಯೋಗಿಸಬೇಕು.
* ಚರಂಡಿ ನಿರ್ಮಾಣದಿಂದ ಖಾಸಗಿ ವ್ಯಕ್ತಿಗಳ ಕಟ್ಟಡಕ್ಕೆ ಹಾನಿಯಾದರೆ ಅದನ್ನು ಪಂಚಾಯತಿ ತುಂಬಿಕೊಡಬೇಕು.

**ಪ್ರಕರಣ-100: ಮನೆಗಳ ಸಮರ್ಪಕ ಚರಂಡಿ ಒದಗಿಸುವುದು**

* ಪ್ರತಿ ಮನೆಗೂ ಚರಂಡಿ ನಿರ್ಮಿಸಿಕೊಳ್ಳುವಂತೆ ಸೂಚಿಸಬೇಕು.
* ಮನೆಯಿಂದ 16 ಮೀ. ಒಳಗಡೆ ಪಂಚಾಯತಿ ಚರಂಡಿ ಇದ್ದರೆ. ಅದಕ್ಕೆ ಕಲುಷಿತ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡಬೇಕು.

**ಪ್ರಕರಣ-101: ಚರಂಡಿ ನೀರನ್ನು ಗ್ರಾ.ಪಂ. ಚರಂಡಿಗೆ ಹರಿಬಿಡಲು ಕಟ್ಟಡ ಅಥವಾ ಭೂಮಿಗಳ ಮಾಲೀಕರ ಅಧಿಕಾರ**

* ಮನೆಯ ಮಾಲೀಕನು ತನ್ನ ಚರಂಡಿ ನೀರನ್ನು ಗ್ರಾಮ ಪಂಚಾಯತಿ ಚರಂಡಿಗೆ ಸೇರಿಸುವ ಹಕ್ಕು ಹೊಂದಿದ್ದಾನೆ. ಇದಕ್ಕೆ ಪಂಚಾಯತಿಯಿಂದ ಅನುಮತಿ ಪಡೆದಿರಬೇಕು.

**ಪ್ರಕರಣ-102: ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಗೆ / ಚರಂಡಿಗೆ ಚರಂಡಿ ನೀರನ್ನು ಸೇರಿಸುವ ಹಕ್ಕು**

* ಯಾವುದೇ ವ್ಯಕ್ತಿಯು ಬೇರೆಯವರ ಜಾಗದಲ್ಲಿ ಚರಂಡಿ ನಿರ್ಮಿಸಿದರೆ. ಅವನ ಒಪ್ಪಿಗೆ ಪಡೆದು ನಂತರ ಪಂಚಾಯತಿಯ ಒಪ್ಪಿಗೆ ಪಡೆದುಕೊಳ್ಳಬೇಕು.
* ಚರಂಡಿ ನಿರ್ಮಾಣ ಸಂದರ್ಭದಲ್ಲಿ ಜಾಗಕ್ಕೆ ಹಾನಿಯಾದರೆ ನಷ್ಟಪರಿಹಾರ ನೀಡಬೇಕು.

**ಪ್ರಕರಣ-103: ಯಾವ ಭೂಮಿಯ ಮೇಲೆ ಚರಂಡಿಯನ್ನು ಹಾಕಲಾಗಿದೆಯೋ ಅಂಥ ಭೂಮಿಯ ಮೇಲೆ ಕಟ್ಟಡ ಕಟ್ಟುವ ಬಗ್ಗೆ ಮಾಲೀಕನ ಹಕ್ಕು**

* 102ನೇ ಪ್ರಕರಣದ ಅಡಿಯಲ್ಲಿ ಯಾವುದೇ ಭೂಮಿಯ ಮೂಲಕ ಚರಂಡಿ ಹಾದು ಹೋಗಿದ್ದರೆ ಅಂತಹ ಜಮೀನಿನ ಮಾಲೀಕನು ತಾನು ಕಟ್ಟಡ ಕಟ್ಟುವುದಕ್ಕಾಗಿ ಗ್ರಾಮ ಪಂಚಾಯತಿಯಿಂದ ನೋಟೀಸು ಪಡೆದು ನಿರ್ಮಿಸಬೇಕು.(ಮಾಲೀಕನು ಮೊದಲಿನ ಸ್ಥಿತಿಗೆ ತರಲು ಮನವಿ ಮಾಡಬಹುದು.)

**ಪ್ರಕರಣ-104: ಶೌಚಗೃಹ ಮುಂತಾದವುಗಳನ್ನು ಒದಗಿಸುವುದು**

* 30ಕ್ಕಿಂತ ಹೆಚ್ಚು ಜನರು ಕೆಲಸ ಮಾಡುವ ಕಟ್ಟಡಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ, ಚಿತ್ರ-ಮಂದಿರಗಳಲ್ಲಿ, ಶೌಚಗೃಹ ಒದಗಿಸಬೇಕೆಂದು ಪಂಚಾಯತಿಯು ನಿರ್ದೇಶಿಸಬಹುದು.

**ಪ್ರಕರಣ-105: ಶೌಚಗೃಹ ಮೊದಲಾದವುಗಳನ್ನು ಮಾರ್ಪಾಡಿಸುವ ದುರಸ್ತಿ ಮಾಡುವ ಮತ್ತು ಸುಸ್ಥಿಯಲ್ಲಿಡುವ ವೆಚ್ಚ**

* ಪಂಚಾಯತಿ ವ್ಯಾಪ್ತಿಯ ಎಲ್ಲ ಮೋರಿ, ಚರಂಡಿ, ಶೌಚಗೃಹಗಳನ್ನು ಸುಸ್ಥಿಯಲ್ಲಿಡಬೇಕೆಂದು ಮತ್ತು ತಮ್ಮ ಸ್ವಂತ ಖರ್ಚಿನಿಂದ ದುರಸ್ಥಿ ಮಾಡಿಕೊಳ್ಳಬೇಕೆಂದು ಕಾರ್ಯದರ್ಶಿಯು ಸಾರ್ವಜನಿಕರಿಗೆ ನೋಟಿಸು ನೀಡಬಹುದು.

**ಪ್ರಕರಣ-106: ಚರಂಡಿ ಮೊದಲಾದವುಗಳ ಪರಿವೀಕ್ಷಣೆ**

* ಗ್ರಾ.ಪಂ ಅಧಿಕಾರಗಳು ಯಾವುದೇ ಮೋರಿ ಶೌಚಗೃಹ ಚರಂಡಿ ಇತ್ಯಾದಿಗಳನ್ನು ಪರಿವಿಕ್ಷಸಬಹುದು. ಈ ಪರಿವಿಕ್ಷಣೆಯು 'ಸೂರ್ಯೋದಯ ದಿಂದ ಸೂರ್ಯಾಸ್ತಗಳ' ಮಧ್ಯದ ಅವಧಿಯಾಗಿರತಕ್ಕದ್ದು.

**ಪ್ರಕರಣ-107: ಅಪಾಯಕಾರಿ ಕಲ್ಲು ಗಣಿ ಕೆಲಸ**

* ಭೂಮಿಯಿಂದ ಮಣ್ಣು, ಕಲ್ಲು ಇತರೆ ಯಾವುದೇ ವಸ್ತುವನ್ನು ತೆಗೆಯುವುದನ್ನು ಗಣಿಗಾರಿಕೆ ಎನ್ನುವರು.
* ಗಣಿಗಾರಿಕೆಯಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದರೆ ಸುರಕ್ಷಿತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಮಾಲೀಕರಿಗೆ ನೋಟಿಸ್ ನೀಡಬೇಕು.
* ಮಾಲೀಕರು ವಿಫಲರಾದರೆ ಪಂಚಾಯ್ತಿ ಕ್ರಮ ಕೈಗೊಳ್ಳಬೇಕು. ಅದಕ್ಕೆ ತಗಲುವ ವೆಚ್ಚವನ್ನು ಮಾಲೀಕರಿಂದ ವಸೂಲಿ ಮಾಡಬೇಕು.
* ಆ ಪ್ರದೇಶದಲ್ಲಿ ಗಣಿಗಾರಿಕೆ ನಿಷೇಧ ಮಾಡಬೇಕಾದರೆ ಪಂಚಾಯ್ತಿಯು ಗಣಿ ಭೂ ವಿಜ್ಞಾನ ಇಲಾಖೆಗೆ ಮನವಿ ಮಾಡಿಕೊಳ್ಳಬೇಕು. ಅದರ ಶಿಫಾರಸ್ಸಿನಂತೆ ಮುಂದಿನ ಕ್ರಮ ಕೈಗೊಳ್ಳಬೇಕು.

downloaded from: www.kpscvaani.com


### ಪ್ರಕರಣ-108: ಅಸಹ್ಯಕರ ಪದಾರ್ಥ ಇತ್ಯಾಧಿಗಳು

1] ಅಸಹ್ಯಕರ ಗೊಬ್ಬರ, ಮಲ ಇತರ ಪದಾರ್ಥಗಳನ್ನು ಸಂಗ್ರಹಿಸುವುದನ್ನು ಉಪಯೋಗಿಸುವುದನ್ನು ಗ್ರಾ.ಪಂ. ನಿಷೇಧಿಸಬಹುದು.

2] ಈ ನಿಯಮ ಉಲ್ಲಂಘಿಸಿದವರಿಗೆ '100 ರೂಪಾಯಿ ದಂಡ' ವಿಧಿಸಬಹುದಾಗಿದೆ.

### ಪ್ರಕರಣ-109: ಹೊಗೆ ಹೊರಸೂಸುವಿಕೆ

* ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಯಾವುದೇ ವ್ಯಾಪಾರ ತಯಾರಿಕಾ ಘಟಕದಿಂದ ಹೊರಸೂಸುವ ಹೊಗೆ ಜನರಿಗೆ ತೊಂದರೆ ನೀಡುತ್ತಿದ್ದರೆ ಅದನ್ನು ತಡೆಗಟ್ಟಲು ಮಾಲಿಕನಿಗೆ ನೋಟಿಸು ನೀಡಬಹುದು.
* ಹೊಗೆ ನಿಯಂತ್ರಣ ಮಾಡದಿದ್ದರೆ ಮಾಲೀಕರಿಗೆ '100 ರೂ.ದಂಡ' ವಿಧಿಸಬಹುದಾಗಿದೆ.

### ಪ್ರಕರಣ-110: ಉಪದ್ರವಕಾರಿ ಕೆಲಸಗಳ ನಿಷೇಧ

* ಮಲಮೂತ್ರ ವಿಸರ್ಜನೆ.
* ಭಿಕ್ಷೆ ಬೇಡುತ್ತಿದ್ದರೆ ಅವರ ಮೇಲೆ ನಿಯಂತ್ರಣ ಹೇರುವುದು.
* ಅನುಕಂಪ ಪಡೆಯುವುದಕ್ಕಾಗಿ ದೇಹದ ಮೇಲಿನ ಗಾಯಗಳನ್ನು ತೋರಿಸುತ್ತಾ ತಿರುಗಾಡುತ್ತಿರುವರನ್ನು ನಿಯಂತ್ರಿಸುವುದು.
* ಸಾರ್ವಜನಿಕರಿಗೆ ಕಾಣುವಂತೆ ಮಾಂಸ ಒಯ್ಯುವುದು ನಿಷೇಧ.
* ಅನುಮತಿ ಇಲ್ಲದೇ ಯಾವುದೇ ಕಟ್ಟಡ. ಸ್ಮಾರಕಗಳ ಮೇಲೆ ನೋಟಿಸ್ ಪೋಸ್ಟರ್ ಹಚ್ಚುವುದು ನಿಷೇಧ.
* ಸಾರ್ವಜನಿಕ ಕಟ್ಟಡದ ಮೇಲಿನ ಹೆಸರು ಮತ್ತು ನೋಟಿಸು ಅನ್ನು ವಿರೂಪಗೊಳಿಸಬಾರದು.
* ಗ್ರಾಮ ಪ್ರದರ್ಶಿಸಿದ ಫಲಕಗಳನ್ನು ಮತ್ತು ನೋಟಿಸ್ ಗಳನ್ನು ಅನುಮತಿಯಿಲ್ಲದೇ ತೆಗೆದು ಹಾಕುವಂತಿಲ್ಲ ಹಾಗೆಯೇ ಅವುಗಳನ್ನು ನಾಶಮಾಡುವಂತಿಲ್ಲ.
* ಗ್ರಾಮ ಪಂಚಾಯ್ತಿ ನಿಷೇಧಿಸಿದ ಸ್ಥಳದಲ್ಲಿ ಅಥವಾ ಸಮಯದಲ್ಲಿ ಡಂಗೂರ, ಡೋಲು,ಕಹಳೆ ಇತರೆ ಅಪ್ಪಳವನ್ನು ನಿಷೇಧಿಸುದು.
* ಅನುಮತಿಯಿಲ್ಲದೇ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ.
* ಭಯವುಂಟು ಮಾಡುವುದಕ್ಕಾಗಿ ಪ್ರಾಣಿಗಳನ್ನು ಛೂ ಬೀಡುವುದು ನಿಷೇಧ.

ಇವೆಲ್ಲವುಗಳನ್ನು ನಿಷೇಧಿಸಲಾಗಿದೆ. ಇವುಗಳ್ನು ಉಲ್ಲಂಘಿಸಿದವರಿಗೆ 100 ರೂಪಾಯಿ ದಂಡ ಹಾಕಲಾಗುತ್ತದೆ.

### ಪ್ರಕರಣ-110(ಎ):

### ಪಂಚಾಯತ್ ಸದಸ್ಯರ ಕರ್ತವ್ಯಗಳು ಜವಾಬ್ದಾರಿಗಳು

* ಪಂಚಾಯಿತಿಯ ಪ್ರತಿಯೊಂದು ವರ್ಗ ಮತ್ತು ಸ್ಥಳೀಯ ಮತದಾನ ಕ್ಷೇತ್ರಗಳ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವುದು.
* ಪಂಚಾಯಿತಿಯ ನಿವಾಸಿಯು ಮಾಡಿದ ವಿಚಾರಣೆಗಳಿಗೆ ಮತ್ತು ಮನವಿಗಳಿಗೆ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಪ್ರತಿಕ್ರಿಯಿಸುವುದು.
* ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸುವ ಮೂಲಕ ಸಮುದಾಯ ಮುಂದಾಳತ್ವವನ್ನು ಕಲ್ಪಿಸುವುದು.
* ನಡತೆ ಮತ್ತು ನೈತಿಕತೆಯ ಗರಿಷ್ಠ ಗುಣಮಟ್ಟವನ್ನು ನಿರ್ವಹಿಸುವುದು.
* ಸಾರ್ವಜನಿಕ ಹಿತಾಸಕ್ತಿಯಲ್ಲಿ ಮಾತ್ರವೇ ಸೇವೆ ಮಾಡುವುದು ಮತ್ತು ಯಾವುದೇ ವ್ಯಕ್ತಿಯ ಅನುಕೂಲ ಅಥವಾ ಅನಾನುಕೂಲವನ್ನು ಪ್ರದಾನ ಮಾಡವಲ್ಲಿ ಬೇಧಭಾವ ತೋರಿಸಬಾರದು.
* ಯಾವುದೇ ವ್ಯಕ್ತಿಯ ವಿರುದ್ಧ ಬೇಧಭಾವ ತೋರದೇ ಸಮಾನತೆಯನ್ನು ಪ್ರೋತ್ಸಾಹಿಸುವುದು ಮತ್ತು ಅವರ ಮತ, ವಯಸ್ಸು, ಧರ್ಮ, ಲಿಂಗ ಅಥವಾ ಅಸಮರ್ಥತೆಯನ್ನು ಪರಿಗಣಿಸದೆ ಅವರನ್ನು ಗೌರವದಿಂದ ಕಾಣುವುದು.
* ಜನರಿಗೆ ಅವರು ಅರ್ಹನಾಗಿರುವ ಮಾಹಿತಿ ಪಡೆಯುವುದಕ್ಕೆ ಅವಕಾಶ ಕಲ್ಪಿಸುವುದು.
* ಯಾವುದೇ ವಿಷಯದಲ್ಲಿ ಆತನು ಹಣಕಾಸಿನ ಆಸಕ್ತಿಯನ್ನು ಹೊಂದಿರುವಾಗ ಆತನನ್ನು ಯಾವುದೇ ಚರ್ಚೆ ಅಥವಾ ಮತದಾನದಲ್ಲಿ ಭಾಗವಹಿಸುವುದರಿಂದ ಅಂಥ ವಿಷಯದ ಪರಿಗಣನೆಯಲ್ಲಿ ಸಭೆಯಿಂದ ಹಿಂತೆಗೆದುಳ್ಳುವಲ್ಲಿ ಸ್ವಯಂ ನಿಯಂತ್ರಣ ಹೊಂದುವುದು.
* ಆದ್ಯತೆಗಳು ಮತ್ತು ಗುರಿಗಳನ್ನು ಸಾಧಿಸುವಲ್ಲಿ ಪಂಚಾಯತ್ ನ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸುವುದು.
* ಸರ್ಕಾರವು ಮಾಡಿದ ಆದ್ಯತೆಗಳನ್ನು ನಿರ್ವಹಿಸುವುದು ಮತ್ತು ಸ್ಥಳೀಯ ಸಂಧರ್ಭದಲ್ಲಿ ಆ ಆದ್ಯತೆಗಳನ್ನು ಎಷ್ಟು ಅತ್ಯುತ್ತಮವಾಗಿ ನೀಡಬಹುದು ಎಂಬುದನ್ನು ತೀರ್ಮಾನಿಸುವುದು.
* ಪ್ರದೇಶದ ಉತ್ತಮ ಆಡಳಿತದಲ್ಲಿ ಭಾಗವಹಿಸುವುದು ಮತ್ತು ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಪಂಚಾಯಿತಿ ನಿವಾಸಿಗಳ ಪಾಲ್ಗೊಳ್ಳುವಿಕೆಯನ್ನು ಸಕ್ರೀಯವಾಗಿ ಪ್ರೋತ್ಸಾಹಿಸುವುದು.

downloaded from: www.kpscvaani.com

# ಅಧ್ಯಾಯ 5 ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ

## ಪ್ರಕರಣ–111:

### ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಇತರ ಅಧಿಕಾರಿಗಳು

1. ಪ್ರತಿಯೊಂದು ಗ್ರಾಮ ಪಂಚಾಯಿತಿಯ "ಪಿಡಿಒ"(ಕಆಔ), ಕಾರ್ಯದರ್ಶಿ, ಖಅಂಂ, ಇವರ ವೇತನ ಮತು ಭತ್ಯಗಳನ್ನು ಸರಕಾರವು ಗ್ರಾಮಪಂಚಾಯತಿನಿಧಿಗೆ ಜಮಾಮಾಡಿದ ತರುವಾಯ ಗ್ರಾಮಪಂಚಾಯತಿ ನಿಧಿಯಿಂದ ಪಡೆಯಬೇಕು.

**ಪಿ.ಡಿ.ಓ. ರವರ ಕರ್ತವ್ಯಗಳು:**

- ಪ್ರತಿತಿಂಗಳ 10ನೇ ತಾರೀಕಿನೊಳಗೆ ಪಂಚಾಯತಿ ವೆಚ್ಚದ ಪಟ್ಟಿಯನ್ನು ತಯಾರಿಸುವುದು.
- ಸರಕಾರ ಮತ್ತು ಲೆಕ್ಕಪರಿಶೋಧಕರು ಕೇಳಿದ ಮಾಹಿತಿ ನೀಡುವುದು.
- ಪಂಚಾಯತಿ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ.
- ವಾರ್ಡಸಭಾ, ಗ್ರಾಮಸಭಾ, ಪಂಚಾಯತಿ ಸಭೆ, ಸ್ಥಾಯಿ ಸಮಿತಿಗಳ ದಾಖಲೆಗಳನ್ನು ಇಡುವುದು.
- ಬ್ಯಾಂಕಿನಿಂದ ಹಣ ತೆಗೆಯುವುದು ಮತ್ತು ಬಟವಾಡೆ ಮಾಡುವುದು.
- ಸಿಬ್ಬಂದಿ ಮೇಲ್ವಿಚಾರಣೆ ಮತ್ತು ನಿರ್ವಹಣೆ.
- ಕ್ರಿಯಾ ಯೋಜನೆ ರೂಪಿಸುವುದು.

**ಪಂಚಾಯತಿ ಕಾರ್ಯದರ್ಶಿ ಕಾರ್ಯಗಳು:**

- ತೆರಿಗೆ ವಸೂಲಿಯ ಮೇಲ್ವಿಚಾರಣೆ.
- ಬರಬೇಕಾದ ಬಿಲ್‌ಗಳ ಪರಿಶೀಲನೆ ಮತ್ತು ವಸೂಲಿ.
- ವಾರ್ಡಸಭೆ, ಗ್ರಾಮಸಭೆ, ಸ್ಥಾಯಿ ಸಮಿತಿಯ ಸಭೆ ನಡೆಸುವುದು ಮತ್ತು ದಾಖಲಿಸುವುದು.
- ವಿವಿಧ ರಿಜಿಸ್ಟರ್ ಪುಸ್ತಕಗಳನ್ನು ನಿರ್ವಹಿಸುವುದು.
- ಜಮಾಬಂದಿ ಕಾರ್ಯಕ್ರಮ ಮತ್ತು ನಿರ್ವಹಣೆ.
- ಸಾರ್ವಜನಿಕರ ದೂರುಗಳನ್ನು ಸ್ವೀಕರಿಸುವುದು ಮತ್ತು ಪರಿಹರಿಸುವುದು.
- ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಮತ್ತು ವಹಿಸಿಕೊಟ್ಟ ಇತರ ಕಾರ್ಯಗಳನ್ನು ಮಾಡುವುದು.

**ದ್ವಿತೀಯ ದರ್ಜೆ ಲೆಕ್ಕಸಹಾಯಕರ ಕಾರ್ಯಗಳು:**

- ಲೆಕ್ಕಪತ್ರ ಮತ್ತು ಬಜೆಟ್ ಮಂಡನೆಯಲ್ಲಿ ಪಿ.ಡಿ.ಓ. ಗೆ ನೆರವಾಗುವುದು.
- ಕ್ರಿಯಾ ಯೋಜನೆ ತಯಾರಿಸಲು ಪಿ.ಡಿ.ಓ ಮತ್ತು ಕಾರ್ಯದರ್ಶಿಗೆ ನೆರವು ನೀಡುವುದು.
- ಪಂಚಾಯತಿಗೆ ಬರಬೇಕಾದ ಬಾಕಿಗಳ ಪಟ್ಟಿ ತಯಾರಿಸುವದು.
- ಪಂಚಾಯ್ತಿಗೆ ಬಂದ ಚೆಕ್ಕು ಮತ್ತು ನಗದು ಹಣವನ್ನು ಬ್ಯಾಂಕಿಗೆ ಜಮಾ ಮಾಡುವುದು.
- ಬ್ಯಾಂಕಿನ ಪಾಸ್‌ಬುಕ್ ಮತ್ತು ಚೆಕ್ ಪುಸ್ತಕಗಳ ನಿರ್ವಹಣೆ ಮತ್ತು ಎಲ್ಲಾ ಲೆಕ್ಕಪತ್ರಗಳ ನಿರ್ವಹಣೆ.
- ನೌಕರರ ವೇತನ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳ ತಯಾರಿಕೆ.
- ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರ ಗೌರವಧನ, ಪ್ರಯಾಣಭತ್ಯೆ, ಸಭಾಭತ್ಯೆ ತಯಾರಿಸುವುದು.

## ಪ್ರಕರಣ–112: ಸಿಬ್ಬಂದಿ ಸ್ವರೂಪ ಮತ್ತು ಉದ್ಯೋಗಿಗಳ ಪಟ್ಟಿ

1) ಸರಕಾರವು ಗ್ರಾಮ ಪಂಚಾಯತಿಗಳಿಗೆ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ಮತ್ತು ನೇಮಕಾತಿ ವಿಧಾನವನ್ನು ನಿಗಧಿಪಡಿಸಬಹುದು.
2) ನೇಮಕಾತಿ ಸಿಬ್ಬಂದಿಯ ಪಟ್ಟಿಯನ್ನು ಅನುಬೋಧನೆಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಬೇಕು.

## ಪ್ರಕರಣ–113:

### ಗ್ರಾಮ ಪಂಚಾಯತಿ ನೌಕರರ ನೇಮಕಾತಿ ಮತ್ತು ನಿಯಂತ್ರಣ

ಪಂಚಾಯ್ತಿಗೆ ಅಗತ್ಯವಾಗಿರುವ ಬಿಲ್‌ಕಲೆಕ್ಟರ್, ವಾಟರ್‌ಮ್ಯಾನ್, ಜವಾನರು, ಕಸಗುಡಿಸುವವರು ಹೀಗೆ ಬೇರೆ–ಬೇರೆ ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಇದರ ನಿಯಮಗಳು ಈ ಕೆಳಗಿನಂತಿವೆ:

- ಪಂಚಾಯ್ತಿಗೆ ಅಗತ್ಯವಿರುವ ಸಿಬ್ಬಂದಿ ಪಟ್ಟಿಯನ್ನು ತಯಾರಿಸುವುದು.
- ಮೀಸಲಾತಿ ಮತ್ತು ಸಾಮಾಜಿಕ ನ್ಯಾಯದ ಪ್ರಕಾರ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು.
- ಆ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಕಳಿಸಿ ಅವರ ಒಪ್ಪಿಗೆ ಮೂಲಕ ನೇಮಕ ಮಾಡಿಕೊಳ್ಳಬೇಕು.
- ಸಿಬ್ಬಂದಿಯ ಸಂಬಳವನ್ನು ಪಂಚಾಯ್ತಿ ನಿಧಿಯಿಂದ ಕೊಡಬೇಕು.
- ಈ ಸಿಬ್ಬಂದಿ ತಪ್ಪು ಮಾಡಿದರೆ ಅಥವಾ ಕರ್ತವ್ಯದಲ್ಲಿ ನಿರ್ಲಕ್ಷ ತೋರಿದರೆ ಅವರಿಗೆ ದಂಡ ಹಾಕುವುದು, ಇಲ್ಲವೇ ವಾರ್ಷಿಕ ಬಡ್ತಿಯನ್ನು ತಡೆಯುವ ಅಧಿಕಾರ ಪಿಡಿಒಗೆ ಇದೆ. ಈ ಆದೇಶವನ್ನು ಪ್ರಶ್ನಿಸಿ ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಮಾಡಿಕೊಳ್ಳಬೇಕು.
- ಪಂಚಾಯ್ತಿ ಸಿಬ್ಬಂದಿಯನ್ನು ವಜಾ ಮಾಡುವ, ದರ್ಜೆಯಿಂದ ಕೆಳಗಿಳಿಸುವ ಅಧಿಕಾರ ಪಂಚಾಯ್ತಿಗಿದೆ. ಈ ಪಂಚಾಯ್ತಿಯ ಆದೇಶ ವನ್ನು ಪ್ರಶ್ನಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಮಾಡಿಕೊಳ್ಳಲು ಅವಕಾಶವಿದೆ.

## ಪ್ರಕರಣ–113(ಎ):

### ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿ ವ್ಯವಸ್ಥೆ

* ಸರಕಾರವು ಅಗತ್ಯವಿದ್ದಲ್ಲಿ ಇಂಜಿನಿಯರಿಂಗ್ ಅಥವಾ ತಾಂತ್ರಿಕ ಸಿಬ್ಬಂದಿ ಒಳಗೊಂಡಂತೆ ರಾಜ್ಯ ಸಿವಿಲ್ ಸೇವೆಗಳ ಅಧಿಕಾರಿಗಳು ಮತ್ತು ನೌಕರರನ್ನು ಗ್ರಾ.ಪಂ.ಗೆ ನಿಯೋಜಿಸಬಹುದು.
* ಗ್ರಾ.ಪಂ.ಗೆ ನಿಯೋಜನೆಗೊಂಡ ಅಧಿಕಾರಿಗಳು / ನೌಕರರು ಸರಕಾರದ ಯಾವುದೇ ಸ್ಕೀಮು/ ಪ್ರಾಜೆಕ್ಟನ್ನು ಯೋಜನೆಗಳು ಮತ್ತು ಕಾಮಗಾರಿಗಳನ್ನು ಕೈಗೊಳ್ಳುವುದು.

downloaded from: www.kpscvaani.com


# ಅಧ್ಯಾಯ 6

# ಚಿಕ್ಕನಗರ ಪ್ರದೇಶ /ಪರಿವರ್ತಿತವಾಗಲಿರುವ ಪ್ರದೇಶದ ಪರಿವರ್ತನೆ ಮತ್ತು ಸಂಯೋಜನೆ

## ಪ್ರಕರಣ-114: ಅರ್ಥವಿವರಣೆ

1) **ಮುನ್ಸಿಫಲ್ ಕೌನ್ಸಿಲ್:** ಪುರಸಭೆಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ನೇಮಕಗೊಂಡ ಜನ ಪ್ರತಿನಿಧಿಗಳಿಂದ ಕೂಡಿದೆ.
2) **ಪಟ್ಟಣ ಪಂಚಾಯತಿ:** ಕರ್ನಾಟಕ ಪುರಸಭೆಗಳ ಅಧಿನಿಯಮ-1964ರ 350ನೇ ನಿಯಮದಡಿ ರಚಿತವಾದ ಪಟ್ಟಣ ಪಂಚಾಯತಿ.
3) **ಗ್ರಾ.ಪಂಚಾಯತಿ:-** 8ನೇ ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯತಿಯ ಅಧಿಕಾರಗಳನ್ನು ಚಲಾಯಿಸಲು ನೇಮಕಗೊಂಡ ವ್ಯಕ್ತಿಗಳನ್ನು ಒಳಗೊಂಡಿದೆ.

## ಪ್ರಕರಣ-115:

## ಚಿಕ್ಕನಗರ ಪ್ರದೇಶ /ಪರಿವರ್ತಿತವಾಗಲಿರುವ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸುವುದರ ಪರಿಣಾಮ

1) ಸರಕಾರವು ಅಧಿಸೂಚನೆಯ ಮೂಲಕ ಯಾವುದೇ ಚಿಕ್ಕನಗರ ಪ್ರದೇಶಕ್ಕೆ ಸೇರಿರುವ ಪ್ರದೇಶವನ್ನು ಪಂಚಾಯತಿ ಪ್ರದೇಶ ಎಂದು ಘೋಷಿಸಬಹುದು ಈ ಪಂಚಾಯತಿಗಳನ್ನು ಮಧ್ಯಕಾಲೀನ ಗ್ರಾಮಪಂಚಾಯತಿಗಳು ಎಂದು ಕರೆಯುವರು.

**ಪಂಚಾಯ್ತಿಯಾಗಿ ಪರಿವರ್ತಿಸುವುದು:-**

- ಅಸ್ತಿತ್ವದಲ್ಲಿರುವ ನಗರ ಪ್ರದೇಶವನ್ನು ಪಂಚಾಯ್ತಿ ಪ್ರದೇಶವನ್ನಾಗಿ ಪರಿವರ್ತಿಸಿದಾಗ ಕೆಲ ಬದಲಾವಣೆಗಳು ಉಂಟಾಗುತ್ತವೆ, ಅವೆಂದರೆ?
- ಆ ಪ್ರದೇಶದಲ್ಲಿ ನಗರಸಭೆ ಅಸ್ತಿತ್ವ ಕಳೆದುಕೊಳ್ಳುತ್ತದೆ.
- ನಗರಸಭೆ ಸ್ಥಾನದಲ್ಲಿ ಹೊಸ ಪಂಚಾಯ್ತಿ ಅಸ್ತಿತ್ವಕ್ಕೆ ಬರುತ್ತದೆ.
- ನಗರಸಭೆ ಸದಸ್ಯರ ಸದಸ್ಯತ್ವ ರದ್ದಾಗುತ್ತದೆ.
- ಹೊಸ ಪಂಚಾಯ್ತಿಗೆ ಹೊಸ ಆಡಳಿತ ಮಂಡಳಿ ರಚಿಸಲಾಗುತ್ತದೆ. ಈ ಮಂಡಳಿಯಲ್ಲಿ ನಗರಸಭೆಯ ಸದಸ್ಯರನ್ನು ಮುಂದುವರಿಸಲಾಗುತ್ತದೆ.
- ನಗರಸಭಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಹೊಸ ಪಂಚಾಯ್ತಿ ಅಧ್ಯಕ್ಷ, ಉಪಾಧ್ಯಕ್ಷರಾಗುತ್ತಾರೆ.
- ನಗರಸಭೆ ಹೆಸರಿನಲ್ಲಿದ್ದ ಎಲ್ಲಾ ದಾಖಲೆಪತ್ರಗಳು, ಲೆಕ್ಕ ಪುಸ್ತಕಗಳು, ಪಂಚಾಯ್ತಿ ಹೆಸರಿನಲ್ಲಿ ಮುಂದುವರಿಸಲಾಗುತ್ತದೆ.
- ನಗರಸಭೆಯ ಹೆಸರಿನಲ್ಲಿದ್ದ ಎಲ್ಲಾ ಆಸ್ತಿಗಳು ಮತ್ತು ನಿಧಿಗಳು ಪಂಚಾಯ್ತಿಯಲ್ಲಿ ಸೇರಿಸಲಾಗುತ್ತದೆ.
- ನಗರಸಭೆ ಕೊಡಬೇಕಾದ ಎಲ್ಲ ಸಾಲಗಳು ಮತ್ತು ಹೊಣೆಗಾರಿಕೆಗಳನ್ನು ಪಂಚಾಯ್ತಿಗೆ ವರ್ಗಾಯಿಸಲಾಗುತ್ತದೆ.
- ನಗರಸಭೆ ಹೆಸರಿನಲ್ಲಿದ್ದ ಎಲ್ಲಾ ನ್ಯಾಯಾಲಯದ ಪ್ರಕರಣಗಳು ಹೊಸ ಪಂಚಾಯ್ತಿಗೆ ವರ್ಗಾಯಿಸಲಾಗುತ್ತದೆ.
- ನಗರಸಭೆಯಲ್ಲಿದ್ದ ಸಿಬ್ಬಂದಿ ಪಂಚಾಯ್ತಿಗೆ ವರ್ಗಾಯಿಸಲಾಗುತ್ತದೆ. ಸಿಬ್ಬಂದಿ ಅಗತ್ಯವಾದರೆ ನಿಯೋಜನೆ ಮೇರೆಗೆ ಕಳುಹಿಸಲಾಗುತ್ತದೆ.

## ಪ್ರಕರಣ-116: ಮಧ್ಯಕಾಲೀನ ಗ್ರಾಮ ಪಂಚಾಯತಿ ಸದಸ್ಯರ ಅವಧಿ ಮತ್ತು ಅಧಿಕಾರಗಳು

1) ಮಧ್ಯಕಾಲಿನ ಗ್ರಾಮ ಪಂಚಾಯತಿ ಸದಸ್ಯರ ಅಧಿಕಾರ ಅವಧಿ: 5 ವರ್ಷ.
2) 5ವರ್ಷ ಮೀರದಂತೆ ಹೊಸಗ್ರಾಮ ಪಂಚಾಯತಿಗೆ ಚುನಾವಣೆ ನಡೆಸಬೇಕು.
3) ಹಿಂದೆ ಜಾರಿಯಲ್ಲಿದ್ದ ತೆರಿಗೆಗಳು, ದರಗಳು, ಶುಲ್ಕಗಳ ಬಾಕಿಗಳನ್ನು 3 ವರ್ಷದೊಳಗೆ ವಸೂಲಿ ಮಾಡಬೇಕು.
4) ಮಧ್ಯಕಾಲಿನ ಗ್ರಾಮ ಪಂಚಾಯತಿಯ ಖಾಲಿಸ್ಥಾನಗಳನ್ನು ಜಿಲ್ಲಾಧಿಕಾರಿ ನೇಮಕ ಮಾಡಬೇಕು.

## ಪ್ರಕರಣ-117:

## ಪಂಚಾಯತಿ ಪ್ರದೇಶಗಳ ಸಂಯೋಜನೆಯ ಪರಿಣಾಮ

ಎರಡು ಗ್ರಾಮ ಪಂಚಾಯ್ತಿಗಳನ್ನು ಕೂಡಿಸಿ ಒಂದೇ ಗ್ರಾಮ ಪಂಚಯ್ತಿಯನ್ನಾಗಿ ಮಾಡುವುದಕ್ಕಾಗಿ ಗ್ರಾಮ ಪಂಚಾಯ್ತಿ ಸಂಯೋಜನೆ ಎನ್ನುತ್ತಾರೆ. ಸಂಯೋಜನೆ ಆದಾಗ ಈ ಕೆಳಗಿನ ಬದಲಾವಣೆಗಳಾಗುತ್ತವೆ.

- ಹಳೆಯ ಪಂಚಾಯ್ತಿಗಳನ್ನು ರದ್ದು ಮಾಡಲಾಗುತ್ತದೆ.
- ಹಳೆಯ ಪಂಚಾಯ್ತಿಗಳ ಸ್ಥಾನದಲ್ಲಿ ಹೊಸ ಪಂಚಾಯ್ತಿ ಸ್ಥಾಪನೆ ಮಾಡಲಾಗುತ್ತದೆ.
- ಹಳೆ ಪಂಚಾಯ್ತಿಗಳ ಸದಸ್ಯರ ಸದಸ್ಯತ್ವ ರದ್ದಾಗುತ್ತದೆ.
- ಹೊಸ ಪಂಚಾಯ್ತಿಗೆ ಹೊಸ ಆಡಳಿತ ಮಂಡಳಿಯನ್ನು ರಚಿಸಲಾಗುತ್ತದೆ.
- ಈ ಆಡಳಿತ ಮಂಡಳಿಯಲ್ಲಿ ರದ್ದಾಗಿರುವ ಪಂಚಾಯ್ತಿಗಳ ಸದಸ್ಯರನ್ನೇ ಮುಂದುವರಿಸಲಾಗುತ್ತದೆ.
- ಹೊಸ ಪಂಚಾಯ್ತಿ ಸದಸ್ಯರ ಅವಧಿ ಉಳಿದ ಅವಧಿಯವರೆಗೆ ಮುಂದುವರಿಸಲಾಗುತ್ತದೆ.
- ಅಧ್ಯಕ್ಷ, ಉಪಾಧ್ಯಕ್ಷ, ಪಂಚಾಯ್ತಿ ಸದಸ್ಯರ, ಅವಧಿ ಉಳಿದ ಅವಧೀಯವರೆಗೆ ಮುಂದುವರಿಸಲಾಗುತ್ತದೆ. ಇಲ್ಲಿ ಪಂಚಾಯ್ತಿ ಅಸ್ತಿತ್ವಕ್ಕೆ ಬಂದ ಅವಧಿ ಬೇರೆ-ಬೇರೆ ಆಗಿದ್ದರೆ, ಕೊನೆಯದಾಗಿ ಅಸ್ತಿತ್ವಕ್ಕೆ ಬಂದ ಪಂಚಾಯ್ತಿ ಅಸ್ತಿತ್ವಕ್ಕೆ ಬಂದ ಅವಧಿಯನ್ನು ಪರಿಗಣಿಸಲಾಗುತ್ತದೆ.
- ಹಳೆ ಪಂಚಾಯ್ತಿ ಹೆಸರಿನಲ್ಲಿದ್ದ ಎಲ್ಲಾ ಕಾಗದ ಪತ್ರ ದಾಖಲೆಗಳು, ಅಧಿಸೂಚನೆಗಳು, ಪತ್ರಗಳು, ಹೊಸ ಪಂಚಾಯ್ತಿಗೆ ವರ್ಗಾಯಿಸಲಾಗುತ್ತದೆ.
- ಹಳೆ ಪಂಚಾಯ್ತಿ ಹೆಸರಿನಲ್ಲಿದ್ದ ಎಲ್ಲಾ ಆಸ್ತಿಗಳು ಮತ್ತು ನಿಧಿಗಳು ಹೊಸ ಪಂಚಾಯಿತಿಗೆ ವರ್ಗಾಯಿಸಲಾಗುತ್ತದೆ.

## ಪ್ರಕರಣ-118: ಪಂಚಾಯತಿ ಪ್ರದೇಶದ ವಿಭಜನೆಯ ಪರಿಣಾಮ

downloaded from: www.kpscvaani.com

ಅಧ್ಯಾಯ 7

# ತಾಲೂಕ ಪಂಚಾಯತಿ ರಚನೆ

**ಪ್ರಕರಣ-119:**

**ತಾಲೂಕು ಪಂಚಾಯತಿ ಸ್ಥಾಪನೆ ಮತ್ತು ಅದರ ನಿರ್ಗಮನ**

ಉ.ಪ್ರ 1) ಪೌರಸಭೇಗಳು, ಕೈಗಾರಿಕಾ ಉಪನಗದ ಭಾಗಗಳನ್ನು ಹೊರತುಪಡಿಸಿ ಇಡೀ ತಾಲೂಕಿನ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಒಂದು ತಾಲೂಕು ಪಂಚಾಯತಿಯನ್ನು ಸ್ಥಾಪಿಸಬೇಕು.

ಉ.ಪ್ರ 2) ಪ್ರತಿಯೊಂದು ತಾಲೂಕು ಪಂಚಾಯತಿಯು ------- ತಾಲೂಕು ಪಂಚಾಯತಿ ಎಂಬ ಹೆಸರಿನಲ್ಲಿ ನಿಗಮಿತ ನಿಕಾಯವಾಗಿರುತ್ತದೆ. ಹಾಗೂ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರು ಹೊಂದಿರುತ್ತದೆ.

ಉ.ಪ್ರ 3) ತಾ.ಪಂ ಆಡಳಿತ ಕಛೇರಿಯ ತಾಲೂಕಿನ ವ್ಯಾಪ್ತಿಯ ಯಾವುದೇ ಪ್ರದೇಶದಲ್ಲಿ ಸ್ಥಾಪಿಸಬಹುದು.

**ಪ್ರಕರಣ-120-ತಾಲೂಕು ಪಂಚಾಯತಿಯ ರಚನೆ**

ಉ.ಪ್ರ 1) ಪ್ರತಿಯೊಂದು ತಾಲೂಕು ಪಂಚಾಯತಿಯು ಈ ಕೆಳಗಿನವರಿಂದ ಕೂಡಿರುತ್ತದೆ.

1. ಚುನಾಯಿತ ಸದಸ್ಯರು
2. ತಾಲೂಕಿನ ಬಹುತೇಕ ಭಾಗವನ್ನು ಪ್ರತಿನಿಧಿಸುವ ಒಐಂ,ಮತ್ತು ಒಕ
3. ತಾಲೂಕಿನ ಮತದಾರರ ಪಟ್ಟಿಯಲ್ಲಿ ಹೆಸರಿರುವ ರಾಜ್ಯಸಭಾ ಮತ್ತು ವಿಧಾನಪರಿಷತ್ ಸದಸ್ಯರು
4. ತಾ.ಪಂ ಅಧ್ಯಕ್ಷನು ಚಿಟಿ ಎತ್ತುವ ಮೂಲಕ ನಿರ್ಧರಿಸುವಂತೆ 1 ವರ್ಷದ ಅವಧಿಗೆ ಸರಧಿ ಪ್ರಕಾರ ತಾಲೂಕಿನ ಗ್ರಾಮ ಪಂಚಾಯತಿಗಳ 1/5 ರಷ್ಟು ಅಧ್ಯಕ್ಷರಗಳನ್ನು ಒಳಗೊಂಡಿರುತ್ತದೆ.ಇದರಲ್ಲಿ ಒಬ್ಬ ಮಹಿಳೆ ಮತ್ತು ಖಅ.ಖಖಿ ಗಳಿಂದ ಒಬ್ಬರಿರಬೇಕು.

2) ತಾಲೂಕು ಪಂಚಾಯತಿಯ ಸದಸ್ಯರಾಗಿರುವ ಒಕ,ಒಐಂ,ಒಐಅ. ಗಳು ಮತ್ತು ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳು ತಾಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ಹಾಗೂ ಅವರ ವಿರುದ್ಧದ ಅವಿಶ್ವಾಸ ನಿರ್ಣಯಕ್ಕಾಗಿ ಕರೆದ ವಿಶೇಷ ಸಭೆಗಳನ್ನು ಹೊರತುಪಡಿಸಿ ತಾ.ಪಂ ಯ ಯಾವುದೇ ಸಭೆಗಳಲ್ಲಿ ಬಾಗವಹಿಸುವ ಮತ್ತು ಮತದಾನ ಮಾಡಬಹುದಾಗಿದೆ.

**ಪ್ರಕರಣ-121: ಚುನಾಯಿತ ಸದಸ್ಯರು**

* ತಾ.ಪಂ ಸದಸ್ಯರು ಪ್ರತಿ 12.500 ರಿಂದ 15.000 ಜನಸಂಖ್ಯೆಗೆ ಒಬ್ಬರಂತೆ ಆಯ್ಕೆಯಾಗುತ್ತಾರೆ
* 1 ಲಕ್ಷಕಿಂತ ಕಡಿಮೆ ಜನಸಂಖ್ಯೆ ಇರುವ ತಾಲೂಕುಗಳಿಗೆ ಕನಿಷ್ಠ 11 ಸದಸ್ಯರಿರತಕ್ಕದ್ದು.

**ಪ್ರಕರಣ-122: ಪ್ರತಿಯೊಂದು ಜನಗಣತಿಯ ನಂತರ ಚುನಾವಣೆಯ ಸದಸ್ಯರುಗಳ ಬಗ್ಗೆ**

ಪ್ರತಿ ಜನಗಣತಿಯ ನಂತರ ಜನಸಂಖ್ಯೆಯ ಅಂಕಿ ಅಂಶಗಳನ್ನು ಆಧರಿಸಿ ರಾಜ್ಯ ಚುನಾವಣಾ ಆಯೋಗವು ತಾಲೂಕು ಪಂಚಾಯತಿ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುತ್ತದೆ.

**ಪ್ರಕರಣ-123: ಸ್ಥಾನಗಳ ಮೀಸಲಾತಿ**

ತಾಲೂಕು ಪಂಚಾಯ್ತಿ ಮೀಸಲಾತಿ ವಿಧಾನ

**ಉ.ಪ್ರ-1**

* ತಾಲೂಕು ಪಂಚಾಯ್ತಿ ಮೀಸಲಾತಿಯನ್ನು ರಾಜ್ಯ ಚುನಾವಣಾ ಆಯೋಗವು ನಿರ್ಧರಿಸುತ್ತದೆ.
* ಆ ತಾಲೂಕಿನ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡಬೇಕು.
* ಕನಿಷ್ಠ ಒಂದು ಸ್ಥಾನವನ್ನಾದರೂ ಪರಿಶಷ್ಠ ಜಾತಿ/ಪರಿಶಿಷ್ಟ ಪಮಗಡಕ್ಕೆ ಮೀಸಲಿಡಬೇಕು.
* ಪರಿಶಿಷ್ಟ ಜಾತಿ ಅಭ್ಯರ್ಥಿ ಇಲ್ಲದಿದ್ದರೆ ಪರಿಶಿಷ್ಟ ಪಂಗಡಕ್ಕೆ ಆ ಸ್ಥಾನ ನೀಡಬೇಕು.
* ಪರಿಶಿಷ್ಟ ಪಂಗಡದ ಅಭ್ಯರ್ಥಿ ಇಲ್ಲದಿದ್ದರೆ ಪರಿಶಿಷ್ಟ ಜಾತಿಗೆ ಆ ಸ್ಥಾನ ನೀಡಬೇಕು.

**ಉ.ಪ್ರ-2**

* ಹಿಂದುಳಿದ ವರ್ಗದವರಿಗೆ 1/3 ಸ್ಥಾನ ಮೀಸಲಿಡಬೇಕು.
* ಇದರಲ್ಲಿ ಅ ವರ್ಗಕ್ಕೆ ಶೇ.80 ಸ್ಥಾನಗಳು 'ಬ' ವರ್ಗಕ್ಕೆ ಶೇ.20 ಸ್ಥಾನಗಳು ಮೀಸಲಿಡಬೇಕು.

**ಉ.ಪ್ರ-3**

* ಮಹಿಳೆಯರಿಗೆ ಶೇ 50 ಮೀಸಲಾತಿ ಕಲ್ಪಿಸಬೇಕು.
* ಮೀಸಲಾತಿ 10 ವರ್ಷದವರೆಗೂ ಮುಂದುವರೆಸಿ ನಂತರ ಪರಿಷ್ಕರಿಸಬೇಕು.

**ಪ್ರಕರಣ-124:**

**ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ**

* ರಾಜ್ಯ ಚುನಾವಣಾ ಆಯೋಗವು ತಾಲೂಕು ಪಂಚಾಯತಿ ಚುನಾವಣ ಕ್ಷೇತ್ರದ ವಿಂಗಡಣೆ. ಕ್ಷೇತ್ರದ ವ್ಯಾಪ್ತಿ ಮತ್ತು ವಿವಿಧ ಮೀಸಲು ಕ್ಷೇತ್ರಗಳನ್ನು ನಿರ್ಧರಿಸುತ್ತದೆ..

**ಪ್ರಕರಣ-125: ಮತದಾನದ ಹಕ್ಕು**

1) ತಾಲೂಕು ಪಂಚಾಯತಿ ಚುನಾವಣೆ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯ ಮತದಾನ ಮಾಡು ಹಕ್ಕು ಹೊಂದಿರುತ್ತಾರೆ.
2) ಒಬ್ಬ ಮತದಾರ ಒಂದಕ್ಕಿಂತ ಹೆಚ್ಚು ಬಾರಿ ಮತದಾನ ಮಾಡುವಂತಿಲ್ಲ.

**ಪ್ರಕರಣ-126: ಮತದಾರರ ಪಟ್ಟಿ**

1) ಜಿ.ಪಂ. ಮತದಾರರ ಪಟ್ಟಿಯು ತಾ.ಪಂ ಮತದಾರರ ಪಟ್ಟಿಯಾಗಿರುತ್ತಾರೆ.
2) ತಾ.ಪಂ ಮತದಾರರ ಪಟ್ಟಿಯನ್ನು ತಹಸೀಲ್ದಾರ್ ತಯಾರಿಸುತ್ತಾರೆ.
3) ತಾ.ಪಂ ಮತದಾರರ ಪಟ್ಟಿಯ ಪ್ರತಿಯನ್ನು ಕಾರ್ಯನಿರ್ವಾಹಕ ಅಧಿಕಾರಿ ಇಟ್ಟುಕೊಂಡಿರಬೇಕು.

downloaded from: www.kpscvaani.com


## ಪ್ರಕರಣ-127: ಅಭ್ಯರ್ಥಿಯ ಅರ್ಹತೆಗಳು

1) ಭಾರತೀಯ ನಾಗರೀಕನಾಗಿರಬೇಕು.
2) ಕನಿಷ್ಠ 21 ವರ್ಷ ವಯಸ್ಸಾಗಿರಬೇಕು.
3) ತಾಲೂಕು ಪಂಚಾಯತಿ ಮತದಾರರ ಪಟ್ಟಿಯಲ್ಲಿ ಹೆಸರಿರಬೇಕು.
4) ಮೀಸಲು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮೀಸಲಾತಿ ಹೊಂದಿರಬೇಕು.

## ಪ್ರಕರಣ-128: ಸದಸ್ಯನಾಗಲು ಅನರ್ಹತೆ

**ಉ.ಪ್ರ-1**

1) ರಾಜ್ಯವಿಧಾನಮಂಡಲ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗಿದ್ದಾರೆ.
2) 1987ರ ಸ್ಥಳೀಯ ಪ್ರಾಧಿಕಾರದ ಅಧಿನಿಯಮದ ಅಡಿಯಲ್ಲಿ ಅನರ್ಹನಾಗಿದ್ದರೆ.
3) 1965ರ ಕರ್ನಾಟಕ ಅಬಕಾರಿ ಕಾಯ್ದೆಯಡಿ 3ತಿಂಗಳಿಗೂ ಹೆಚ್ಚು ಜೈಲು ಶಿಕ್ಷೆ ಅನುಭವಿಸಿದ್ದರೆ.
4) ಸ್ಥಳೀಯ ಪ್ರಾಧಿಕಾರದ ಸೇವೆಯಿಂದ ವಜಾಗೊಂಡಿದ್ದರೆ.
5) ಲೀಗಲ್ / ಮೆಡಿಕಲ್ ಪ್ರಾಕ್ಟೀಷನರ್ಸ್ / ಸಿ.ಎ. ಆಗಿದ್ದು ಸಕ್ಷೇಮ ಪ್ರಾಧಿಕಾರದಿಂದ ಅಮಾನತಿನಲ್ಲಿದ್ದರೆ.
6) ಕೇಂದ್ರ ಸರಕಾರ / ರಾಜ್ಯಸರಕಾರದ ಲಾಭದಾಯಕ ಹುದ್ದೆ ಹೊಂದಿದ್ದರೆ.
7) ತನ್ನ ಕುಟುಂಬ ಸದಸ್ಯರ ಉಪಯೋಗಕ್ಕಾಗಿ ಶೌಚಗೃಹ ಒದಗಿಸದಿದ್ದರೆ(1ವರ್ಷದೊಳಗೆ ಒದಗಿಸತಕ್ಕದ್ದು)

**ಉ.ಪ್ರ.2.** ತಾ.ಪಂ. ಸದಸ್ಯನಾಗಿರುವ ವ್ಯಕ್ತಿಯು ಲೋಕಸಭೆ , ರಾಜ್ಯಸಭೆ, ವಿಧಾನ ಪರಿಷತ್ತು / ಯಾವುದೇ ಸ್ಥಳೀಯ ಸರಕಾರದ ಸದಸ್ಯನಾಗಿದ್ದರೆ ಅವನು ತನ್ನ ಹೆಸರು ಪ್ರಕಟವಾದ 15ದಿನದೊಳಗೆ ಮೇಲಿನ ಸ್ಥಾನಗಳಿಗೆ ರಾಜಿನಾಮ ಸಲ್ಲಿಸದಿದ್ದರೆ ಅವನ ತಾ.ಪಂ.ಸ್ಥಾನ ಖಾಲಿಯಾಗುವುದು.

## ಪ್ರಕರಣ-129: ಸ್ಥಾನವು ಖಾಲಿಯಾಗುವುದು

1. 128ನೇ ಪ್ರಕರಣದ ಅಡಿ ಅನರ್ಹನಾಗಿದ್ದರೆ.
2. ಪಂಚಾಯತಿ ಸಭೆಗೆ ನಿಷೇಧಿಸಿದಾಗಲೂ ಚರ್ಚೆಯಲ್ಲಿ ಪಾಲ್ಗೊಂಡು ಮತ ಚಲಾಯಿಸಿದರೆ.
3. ಅನುಮತಿ ಪಡೆಯದೆ ತಾಲೂಕು ಪಂಚಾಯತಿ ಕ್ಷೇತ್ರದಿಂದ 6 ತಿಂಗಳ ಕಾಲ ಹೊರಗಿದ್ದರೆ.
4. ತಾ.ಪಂ. ಯ ಸತತ 3 ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ.

* ಗೈರು ಹಾಜರಾಗಲು ಅನುಮತಿಗಾಗಿ ಸದಸ್ಯನು ತಾ.ಪಂ.ಗೆ ಲಿಖಿತವಾಗಿ ಅರ್ಜಿಸಲ್ಲಿಸಬಹುದು. ಅರ್ಜಿಸಲ್ಲಿಸಿದ ದಿನದಿಂದ 1 ತಿಂಗಳೊಳಗೆ ತಾ.ಪಂ. ತನ್ನ ನಿರ್ಣಯವನ್ನು ತಿಳಿಸತಕ್ಕದ್ದು ಇಲ್ಲದಿದ್ದರೆ ಅನುಮತಿ ನೀಡಲಾಗಿದೆ ಎಂದು ಪರಿಗಣಿಸಲಾಗುವುದು.
* ತಾ.ಪಂ.ಸ್ಥಾನವು ಖಾಲಿ ಇದೆ ಎಂದು ಘೋಷಣೆ ಮಾಡುವ ಅಧಿಕಾರ ರಾಜ್ಯ ಚುನಾವಣಾ ಆಯೋಗಕ್ಕೆ ಇದೆ.

## ಪ್ರಕರಣ-130:
## ಮತದಾನದ ವಿಧಾನ ಮತ್ತು ಚುನಾವಣಾ ಪ್ರಕ್ರಿಯೆ

1) ಒಬ್ಬ ಮತದಾನ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತ ನೀಡುವಂತಿಲ್ಲ.
2) ಈ ಚುನಾವಣೆಗಳು ಪಕ್ಷ ಆಧಾರಿತ ಚುನಾವಣೇಗಳಾಗಿದ್ದು ಮತಗಳನ್ನು ವಿದ್ಯುನ್ಮಾನ ಮತಯಂತ್ರಗಳ ಮೂಲಕ ದಾಖಲಿಸಲಾಗುತ್ತದೆ.
3) ಗ್ರಾ.ಪಂ ಚುನಾವಣೆಗೆ ಅನ್ವಯ ವಾಗುವ 26 ರಿಂದ 40 ರ ವರೆಗಿನ ಪ್ರಕರಣಗಳು ತಾಲೂಕು ಪಂಚಾಯತಿ ಚುನಾವಣೆಗೂ ಅನ್ವಯಿಸುತ್ತವೆ.

## ಪ್ರಕರಣ-131: ಏಕಕಾಲದಲ್ಲಿ ಸದಸ್ಯತ್ವದ ನಿಷೇಧ

**ಉ.ಪ್ರ 1:** ಒಬ್ಬ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಚುನಾಯಿತನಾಗಿದ್ದರೆ ಲಿಖಿತ ಪತ್ರವನ್ನು ಜಿಲ್ಲಾಧಿಕಾರಿಗೆ ನೀಡಿ ಒಂದು ಕ್ಷೇತ್ರವನ್ನು ಆಯ್ಕೆಮಾಡಿಕೊಳ್ಳಬೇಕು.

**ಉ.ಪ್ರ 2:** ಒಂದು ವೇಳೆ ಆಯ್ಕೆಮಾಡಿಕೊಳ್ಳದಿದ್ದರೆ ಜಿಲ್ಲಾಧಿಕಾರಿಯು ಚೀಟಿ ಎತ್ತುವ ಮೂಲಕ ಒಂದು ಕ್ಷೇತ್ರವನ್ನು ನಿಗಧಿ ಮಾಡುತ್ತಾರೆ.

**ಉ.ಪ್ರ 3:** ಹೀಗೆ ಖಾಲಿಯಾದ ಸ್ಥಾನಗಳನ್ನು ಚುನಾವಣೆಯ ಮೂಲಕ ಭರ್ತಿಮಾಡತಕ್ಕದ್ದು.

## ಪ್ರಕರಣ-132: ಚುನಾವಣೆಗೆ ಸಂಭಂದಪಟ್ಟಂತೆ ಕೆಲವು ಪ್ರಕರಣಗಳು ಅನ್ವಯಿಸುವಿಕೆ

**ಉ.ಪ್ರ-1:**

* ಗ್ರಾಮ ಪಂಚಾಯತಿಗೆ ಸಂಬಂಧಿಸಿದ 15 ರಿಂದ 24 ರವರೆಗಿನ ಪ್ರಕರಣಗಳು ತಾ.ಪಂ ಚುನಾವಣೆಗೆ ಸಂಬಂಧಿಸಿದಂತೆ ಅನ್ವಯಿಸುತ್ತದೆ.
* ತಾ.ಪಂ ಚುನಾವಣೆಗೆ ಸಂಬಂದಿಸಿದ ತಕರಾರು ಅರ್ಜಿಗಳನ್ನು ಹಿರಿಯ ಸಿವಿಲ್ ಜಡ್ಜ್ ಇವರಿಗೆ ಸಲ್ಲಿಸತಕ್ಕದ್ದು ಖರ್ಚಿಗಾಗ ಭದ್ರತೆ ಎಂದು 1000 ರೂ ಠೇವಣಿ ಇಡತಕ್ಕದ್ದು

**ಉ.ಪ್ರ 2:**

* ಹಿರಿಯ ಸಿವಿಲ್ ನ್ಯಾಯಧೀಶರ ಆದೇಶದ ಮೇಲ್ಮನವಿಯನ್ನು 30 ದಿನದೊಳಗೆ ಜಿಲ್ಲಾನ್ಯಾಯಾಧೀಶರಿಗೆ ಸಲ್ಲಿಸತಕ್ಕದ್ದು. ಇವರ ತೀರ್ಮಾನವು ಅಂತಿಮ ವಾಗಿರುತ್ತದೆ.

## ಪ್ರಕರಣ-133-ಸದಸ್ಯರುಗಳ ಹೆಸರು ಪ್ರಕರಣೆ

1) ಚುನಾಯಿತ ಸದಸ್ಯರ ಹೆಸರುಗಳನ್ನು ಕಮಿಷನರ್‌ಗೆ ವರಧಿ ಮಾಡತಕ್ಕದ್ದು ಕಮಿಷನರ್ ಅವರು ಸದಸ್ಯರ ಹೆಸರುಗಳನ್ನು ಸರಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸುತ್ತಾರೆ.

## ಪ್ರಕರಣ-134:
## ಸದಸ್ಯರ ಹುದ್ದೆಯ ಪ್ರಾರಂಭ ಮತ್ತು ಅಧಿಕಾರವಧಿ

**ಉ.ಪ್ರ 1:** ತಾಲೂಕು ಪಂಚಾಯತ್ ಸದಸ್ಯರ ಅಧಿಕಾರವಧಿ 5 ವರ್ಷಗಳು

**ಉ.ಪ್ರ 2:** ತಾ.ಪಂ ಸದಸ್ಯರ ಹುದ್ದೆಯ ಅವಧಿಯು ತಾ.ಪಂ ಪ್ರಥಮಸಭೆ ದಿನದಿಂದ ಆರಂಭವಾಯಿತು.

## ಪ್ರಕರಣ-135-ಸದಸ್ಯರ ರಾಜೀನಾಮೆ

1) ತಾ.ಪಂ ಸದಸ್ಯರು ತಮ್ಮ ರಾಜೀನಾಮೆಯನ್ನು ತಾ.ಪಂ ಅಧ್ಯಕ್ಷರಿಗೆ ಸಲ್ಲಿಸುತ್ತಾರೆ.
2) ರಾಜೀನಾಮೆಯನ್ನು ಹಿಂಪಡೆಯಲು 15 ದಿನಗಳ ಕಾಲವಕಾಶವಿರುತ್ತದೆ.

downloaded from: www.kpscvaani.com

## ಪ್ರಕರಣ-136:
## ದುರ್ನಡತೆಗಾಗಿ ಸದಸ್ಯರನ್ನು ತೆಗೆದು ಹಾಕುವುದು.

1) ಸದಸ್ಯತ್ವದಿಂದ ವಜಾ ಮಾಡುವುದು :

- ದುರ್ನಡತೆ ತೋರಿದರೆ ಮತ್ತು ದಿವಾಳಿ ಕೋರನಾದರೆ.
- ನಿರಂತರ 4 ಪಂಚಾಯ್ತಿ ಸಭೆಗಳಿಗೆ ಗೈರು ಹಾಜರಾದರೆ
- ಸಭೆ ಕರೆಯುವ ಅಧಿಕಾರವಿದ್ದಾಗ ಸತತ 2 ಸಭೆ ಕರೆಯದಿದ್ದರೆ(ಅಧ್ಯಕ್ಷ / ಉಪಧ್ಯಕ್ಷರು)
- ಕರ್ತವ್ಯ ನಿರ್ವಹಿಸಲು ಅಸಮರ್ಥನಾದರೆ ಮತ್ತು ಮತಿ ಭ್ರಮಣೆಗೊಂಡರೆ.
- ಯಾವುದೆ ಸದಸ್ಯ ಹಾಗೂ ಮತದಾರನನ್ನು ಸೆಳೆಯಲು ಅಕ್ರಮ ಎಸಗಿದ್ದರೆ.
- ಕಾಮಾಗಾರಿ ನಿರ್ವಹಣೆಯಲ್ಲಿ ತನ್ನ ಕುಟುಂಬದ ನಿಕಟ ಸಂಬಂಧಿಯಾಗಿರುವ ಯಾವುದೇ ವ್ಯಕ್ತಿಯೊಂದಿಗೆ ಸಹವರ್ತಿ ಹಾಗೂ ಪಾಲುದಾರಾಗಿರುವುದು ಕಂಡುಬಂದರೆ.
- ತಾ.ಪಂ ಶಿಫಾರಸ್ಸಿನ ಮೇರೆಗೆ ಜಿ ಪಂ ವರಧಿಯನ್ನಾದರಿಸಿ ಕರ್ತವ್ಯಲೋಪ ಎಸಗಿದ ಸದಸ್ಯರನನ್ನು ರಾಜ್ಯ ಸರಕಾರ ವಜಾಮಾಡುವುದು.

2) ಈ ಮೇಲಿನ ಆಧಾರಗಳನ್ವಯ ಸದಸ್ಯರನನ್ನು ತೆಗೆದು ಹಾಕಲಾಗಿದ್ದರೆ ಅವನು ಮುಂದಿನ 5 ವರ್ಷಗಳವರೆಗೆ ಯಾವುದೇ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗಿರುತ್ತಾನೆ.

## ಪ್ರಕರಣ-136 (A)
## ಸದಸ್ಯರ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ

- ಪ್ರತಿಯೊಬ್ಬ ಸದಸ್ಯರನ್ನು ತನ್ನ ಅಧಿಕಾರಾವಧಿ ಪ್ರಾರಂಭವಾದ ದಿನಾಂಕದಿಂದ 3 ತಿಂಗಳೊಳಿಗೆ ನಂತರ ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ 1 ತಿಂಗಳೊಳಗೆ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಯ ಮೂಲಕ ರಾಜ್ಯ ಚುನಾವಣಾ ಆಯೋಗಕ್ಕೆ ತನ್ನ ಹಾಗೂ ತನ್ನ ಕುಟುಂಬದ ಸದಸ್ಯರ 2 ಲಕ್ಷಕ್ಕಿಂತ ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯ ಘೋಷಣಾ ಪತ್ರವನ್ನು ಸಲ್ಲಿಸತಕ್ಕದ್ದು.
- ಎಲ್ಲಾ ಸದಸ್ಯರ ಆಸ್ತಿಯ ವಿವರವನ್ನು ಕಾರ್ಯನಿರ್ವಾಹಕ ಅಧಿಕಾರಿಯು ಮೇ-ಮೊದಲ ವಾರದಲ್ಲಿ ಮತ್ತು ಒಂದುವೇಳೆ ಸದಸ್ಯರು ಆಸ್ತಿ ವಿವರವನ್ನು ತಡವಾಗಿ ಸಲ್ಲಿಸಿದರೆ ಜುಲೈ ಮೊದಲ ವಾರದಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.
- ಆಸ್ತಿ ವಿವರ ಸಲ್ಲಿಸಿದ ನಂತರ ಯಾವುದೇ ಸದಸ್ಯನು ಸ್ವತ್ತನ್ನು ಅರ್ಜಿಸಿದರೆ ಹಾಗು ಧಾರಣ ಮಾಡಿದರೆ ಅದರ ವಿವರವನ್ನು 45 ದಿನಗಳೊಳಗೆ ಸಲ್ಲಿಸತಕ್ಕದ್ದು.

## ಪ್ರಕರಣ-136(B) : ಸದಸ್ಯತ್ವವು ನಿಂತು ಹೋಗುವುದು.

* ಸದಸ್ಯನು ಆಸ್ತಿ ಘೋಷಣೆ ಮಾಡದಿದ್ದರೆ ಅಥವಾ ಸುಳ್ಳು ಘೋಷಣೆ ದಾಖಲು ಮಾಡಿದ್ದರೆ ದುರ್ನಡತೆಯ ಆಧಾರದಲ್ಲಿ ರಾಜ್ಯ ಚುನಾವಣಾ ಆಯುಕರು ಅವನನ್ನು ಸದಸ್ಯತ್ವದಿಂದ ತೆಗೆದು ಹಾಕಬಹುದು.
* ರಾಜಕೀಯ ಪಕ್ಷದ ಪ್ರತಿನಿಧಿಯಾಗಿರುವ ಸದಸ್ಯನು ತನ್ನ ಪಕ್ಷವು ನೀಡಿದ 'ವಿಪ್'ನ್ನು ಉಲ್ಲಂಘಿಸಿ ಮತ ಚಲಾಯಿಸಿದ್ದರೆ.
* ರಾಜ್ಯ ಚುನಾವಣಾ ಆಯೋಗವು ಈ ಮೇಲಿನ ಕಾರಣಗಳಲ್ಲಿ ಸದಸ್ಯತ್ವವು ನಿಂತುಹೋಗಿದೆ ಎಂದು ಘೋಷಿಸತಕ್ಕದ್ದು.

## ಪ್ರಕರಣ-137:
## ಆಕಸ್ಮಿಕ ಖಾಲಿ ಸ್ಥಾನಗಳನ್ನು ತುಂಬುವ ವಿಧಾನ

1) ಆಕಸ್ಮಿಕ ಖಾಲಿಯಾದ ಸ್ಥಾನಗಳನ್ನು ಉಪಚುನಾವಣೆಯ ಮೂಲಕ ಭರ್ತಿ ಮಾಡತಕ್ಕದ್ದು.

## ಪ್ರಕರಣ-138:
## ಅಧ್ಯಕ್ಷ-ಉಪಾಧ್ಯಕ್ಷನ ಚುನಾವಣೆ ಮತ್ತು ಹುದ್ದೆಯ ಅವಧಿ

**ಉ.ಪ್ರ-1:**

* ಪ್ರತಿ ತಾಲ್ಲೂಕು ಪಂಚಾಯ್ತಿಯು ಒಬ್ಬ ಅಧ್ಯಕ್ಷ ಹಾಗೂ ಒಬ್ಬ ಉಪಾಧ್ಯಕ್ಷರನ್ನು ಹೊಂದಿರುತ್ತಾದೆ.
* ಪಂಚಾಯ್ತಿ ಚುನಾವಣೆ ಮುಕ್ತಾಯವಾದ ಒಂದು ತಿಂಗಳ ಒಳಗೆ ಇವರನ್ನು ಆಯ್ಕೆ ಮಾಡಲಾಗುತ್ತದೆ.
* ಈ ಆಯ್ಕೆ ಅವಿರೋಧವಾಗಿ ಇಲ್ಲದೆ ಚುನಾವಣೆ ಮೂಲಕ ನಡೆಯತ್ತದೆ.

**ಉ.ಪ್ರ-2: ಮಿಸಲಾತಿ**

* ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ನೀಡಬೇಕು.
* ಹಿಂದುಳಿದ ವರ್ಗದವರಿಗೆ 1/3 ಸ್ಥಾನ ಮೀಸಲಿಡಬೇಕು ಅದರಲ್ಲಿ 'ಅ' ವರ್ಗಕ್ಕೆ ಶೇ 80, 'ಬ' ವರ್ಗಕ್ಕೆ ಶೇ 20 ಮೀಸಲು ನೀಡಬೇಕು.
* ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿ ಒದಗಿಸಬೇಕು.ಯಾವುದೇ ಕಾರಣಕ್ಕೂ ಒಟ್ಟಾರೆ ಮೀಸಲಾತಿಯ ಪ್ರಮಾಣ ಶೇ.50 ದಾಟಬಾರದು.
* ಈ ಮಿಸಲಾತಿ 10 ವರ್ಷದವರೆಗೆ ಇರಬೇಕು.

**ಉ.ಪ್ರ-3: ಅವಧಿ**

* ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಅವಧಿ 5 ವರ್ಷ
* ಮಧ್ಯಂತರ ಅವಧಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರೆ, ಪಂಚಾಯ್ತಿ ಉಳಿದ ಅವಧಿಗೆ ಮಾತ್ರ ಅವರ ಅಧಿಕಾರಾವಧಿ ಇರುತ್ತದೆ.

## ಪ್ರಕರಣ-139: ಅಧ್ಯಕ್ಷ ಉಪಾಧ್ಯಕ್ಷರ ಹಾಗೂ ಇತರ ಸದಸ್ಯರ ವೇತನ ಮತ್ತು ಭತ್ಯಗಳು

ಉ.ಪ್ರ 1) ತಾಲೂಕು ಪಂಚಾಯತಿ ಅಧ್ಯಕ್ಷ-ಉಪಾಧ್ಯಕ್ಷರ ವೇತನ ಮತ್ತು ಭತ್ಯಗಳು ಸರಕಾರವು ನಿಗಧಿ ಪಡಿಸಿದ ರೀತಿಯಲ್ಲಿ ಇರುತ್ತವೆ.

2) ಅಧ್ಯಕ್ಷ-ಉಪಾಧ್ಯಕ್ಷರನ್ನು ಹೊರತುಪಡಿಸಿ ತಾ.ಪಂ. ಸದಸ್ಯರು ನಿಗದಿಪಡಿಸಿದ ಉಪವೇಶನ ಶುಲ್ಕ ಮತ್ತು ಇತರ ಭತ್ಯಗಳನ್ನು ಪಡೆಯುವ ಹಕ್ಕು ಹೊಂದಿರುತ್ತಾರೆ.

## ಪ್ರಕರಣ-140: ಅಧ್ಯಕ್ಷ-ಉಪಾಧ್ಯಕ್ಷರ ರಾಜೀನಾಮೆ ಹಾಗೂ ತೆಗೆದು ಹಾಕುವುದು

**ರಾಜೀನಾಮೆ:**

- ಅಧ್ಯಕ್ಷ ಉಪಾಧ್ಯಕ್ಷ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಅವಕಾಶವಿದೆ.
- ಅಧ್ಯಕ್ಷ ತನ್ನ ರಾಜೀನಾಮೆ ಪತ್ರವನ್ನು ಜಿಲ್ಲಾಧಿಕಾರಿಗೆ ಕೊಡಬೇಕು. ಉಪಾಧ್ಯಕ್ಷ ತನ್ನ ರಾಜೀನಾಮೆ ಪತ್ರವನ್ನು ಅಧ್ಯಕ್ಷರಿಗೆ ಸಲ್ಲಿಸಬೇಕು.
- ರಾಜೀನಾಮೆ ನೀಡಿದ 15 ದಿನದೊಳಗೆ ಅದನ್ನು ಹಿಂಪಡೆಯಲು ಅವಕಾಶವಿದೆ.

downloaded from: www.kpscvaani.com 

**ವಜಾ ಮಾಡುವುದು:**

- ಅಧ್ಯಕ್ಷ, ಉಪಾಧ್ಯಕ್ಷ ಕರ್ತವ್ಯ ನಿರ್ವಹಿಸುವಲ್ಲಿ ಸತತವಾಗಿ ವಿಫಲರಾದರೆ ಸರ್ಕಾರ ಅವರನ್ನು ಆ ಸ್ಥಾನಗಳಿಂದ ವಜಾ ಮಾಡುತ್ತದೆ. ಇದಕ್ಕೂ ಮುನ್ನ ಸರ್ಕಾರ ಜಿಲ್ಲಾ ಪಂಚಾಯ್ತಿಯಿಂದ ವರದಿಯನ್ನು ತರಿಸಿಕೊಳ್ಳಬೇಕು.

**ಅವಿಶ್ವಾಸ ಗೊತ್ತುವಳಿ:**

- ಅಧ್ಯಕ್ಷ,ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಗೊತ್ತುವಳಿ ತರಲು ಸದಸ್ಯರಿಗೆ ಅವಕಾಶವಿದೆ.ಅದರ ನಿಯಮಗಳು ಯಾವುವೆಂದರೆ–
- ಅವಿಶ್ವಾಸ ಕುರಿತು ಮನವಿ ಪತ್ರ ತಯಾರಿಸಬೇಕು.
- ಆ ಮನವಿ ಪತ್ರಕ್ಕೆ ಶೇ 50 ರಷ್ಟು ಸದಸ್ಯರು ಸಹಿ ಹಾಕಬೇಕು.
- ಆವಿಶ್ವಾಸ ಮಂಡನೆಗಾಗಿ ಸಭೆ ಕರೆಯಬೇಕು.
- ಆದರೆ ಅಧ್ಯಕ್ಷ, ಉಪಾಧ್ಯಕ್ಷರು ಆಯ್ಕೆಯಾದ 30 ತಿಂಗಳೊಳಗೆ ಅವಿಶ್ವಸ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ.
- ಅವಿಶ್ವಾಸ ಗೊತ್ತುವಳಿಗೆ ಸೋಲುಂಟಾದರೆ 2 ವರ್ಷದ ಒಳಗೆ ಮತ್ತೆ ಅವಿಶ್ವಾಸ ಗೊತ್ತುವಳಿ ಮಂಡಿಸಲು ಬರುವುದಿಲ್ಲ.

## ಪ್ರಕರಣ–141: ತಾಲೂಕು ಪಂಚಾಯತಿ ಸಭೆಗಳು

1) ತಾ.ಪಂ.ಯು ಕನಿಷ್ಠ 2 ತಿಂಗಳಿಗೊಮ್ಮೆ ಯಾದರು ಸಭೆ ಸೇರತಕ್ಕದ್ದು.
2) ತಾ.ಪಂ ಸಭೆಗಳು ತಾಲೂಕು ಪಂಚಾಯಿ ಕೇಂದ್ರ ಸ್ಥಾನದಲ್ಲಿ ನಡೆಯಬೇಕು.
3) ತಾಲೂಕು ಪಂಚಾಯತಿ ಪ್ರಥಮ ಸಭೆಯನ್ನು (ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಗಾಗಿ) ಉಪ–ವಿಭಾಗಾಧಿಕಾರಿ(AC) ಕರೆಯುತ್ತಾರೆ ಹಾಗು ಆ ಸಬೆಯ ಅಧ್ಯಕ್ಷತೆ ವಹಿಸುತ್ತಾರೆ.

**1) ಸಾಮನ್ಯ ಸಭೆ :**

- ಕನಿಷ್ಠ 2 ತಿಂಗಳಿಗೊಮ್ಮೆ ಸಭೇ ನಡೆಯಬೇಕು.
- ಸಾಮಾನ್ಯ ಸಭೆಗೆ 10 ದಿನ ಮುಂಚಿತ ನೋಟಿಸು ನೀಡಬೇಕು.
- ಪ್ರತಿ ಸಾಮಾನ್ಯ ಸಭೆಯ ದಿನಾಂಕವನ್ನು ಹಿಂದಿನ ಸಭೆಯಲ್ಲಿ ನಿರ್ಧರಿಸಬೇಕು.

**2) ವಿಶೇಷ ಸಭೆ**

- ಅಧ್ಯಕ್ಷ ಬಯಸಿದರೆ ಅಥವಾ 1/3 ರಷ್ಟು ಸದಸ್ಯರ ಬೇಡಿಕೆ ಇಟ್ಟರೆ 15 ದಿನಗಳಿಗೊಮ್ಮೆ ವಿಶೇಷ ಸಭೆ ನಡೆಸಬಹುದು.
- ವಿಶೇಷ ಸಭೆಗೆ 7 ದಿನ ಮುಂಚಿತವಾಗಿ ನೋಟಿಸು ನೀಡಬೇಕು
- ಅಧ್ಯಕ್ಷ ಸಭೆ ಕರೆಯಲು ವಿಫಲನಾದರೆ ಉಪಾಧ್ಯಕ್ಷ ಕರೆಯಬೇಕು.

**3) ಸಭೆಯ ಕೋರಂ**

- ಒಟ್ಟು ಸದಸ್ಯರ ಅರ್ಧದಷ್ಟು (ಶೇ.50) ಸಭೆಯ ಕೋರಂ ಆಗಿದೆ
- ಸಭೆಗೆ ಕೋರಂ ಇಲ್ಲದಿದ್ದರೆ 30 ನಿಮಿಷ ಕಾಯಬೇಕು ಅಷ್ಟರಲ್ಲಿ ಕೋರಂ ಭರ್ತಿಯಾಗದಿದ್ದರೆ ಸಭೆಯನ್ನು ಮುಂದೂಡಬೇಕು

**4) ಅಧ್ಯಕ್ಷತೆ**

- ತಾ.ಪಂ ಸಭೆಗಳ ಅಧ್ಯಕ್ಷತೆಯನ್ನು ಅಧ್ಯಕ್ಷ/ಉಪಾಧ್ಯಕ್ಷ/ಸದಸ್ಯರಲ್ಲಿ ಒಬ್ಬರು ವಹಿಸತಕ್ಕದ್ದು

**5) ನಡವಳಿಕೆ ಪುಸ್ತಕ**

- ಸಭೆಯಲ್ಲಿ ಚರ್ಚಿಸಿದ ವಿಷಯಗಳು ಮತ್ತು ಅಂಗೀಕರಿಸಿದ ನಿರ್ಣಯಗಳ ವಿವರವನ್ನು ನಡವಳಿಕೆ ಪುಸ್ತಕದಲ್ಲಿ ದಾಖಲಿಸತಕ್ಕದ್ದು.
- ನಡವಳಿಕೆ ಪುಸ್ಕದಲ್ಲಿ ದಾಖಲಿಸತಕ್ಕದ್ದು.
- ನಡವಳಿಕೆ ಪುಸ್ತಕವು ಕಾರ್ಯನಿರ್ವಾಹಕ ಅಧಿಕಾರಿಯ ಸುಪರ್ಧಿ ನಲ್ಲಿರಬೇಕು ತಾಲೂಕು ಪಂಚಾಯತಿ ಸಭೆಯ ವಿವರದ ಪ್ರತಿಯನ್ನು ಸಭೆ ನಡೆದ ದಿನದಿಂಧ 10 ದಿನದ ಒಳಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸತಕ್ಕದ್ದು.
- ಸಭೆಯಲ್ಲಿ ನಿರ್ಣಯಗಳನ್ನು ಬಹುಮತದ ಮೂಲಕವೇ ಕೈಗೊಳ್ಳಬೇಕು.

## ಪ್ರಕರಣ–142: ಅಡ್ಡಪ್ರಶ್ನೆಗಳು ಮತ್ತು ನಿರ್ಣಯಗಳು

1) ತಾಲುಕು ಪಂಚಾಯತಿ ಆಡಳಿತಕ್ಕೆ ಸಂಭಂಧಿಸಿದ ವಿಷಯಗಳ ಕುರಿತು ಸದಸ್ಯರು ಅಧ್ಯಕ್ಷನಿಗೆ ಅಡ್ಡಪ್ರಶ್ನೆಗಳನ್ನು ಕೇಳಬಹುದು ಮತ್ತು ಸಲಹೆ ನೀಡಬಹುದು.

## ಪ್ರಕರಣ–143: ತಾ.ಪಂ. ಸಭೆಗಳಲ್ಲಿ ಸರಕಾರಿ ಅಧಿಕಾರಿಗಳ ಹಾಜರಾತಿಯನ್ನು ಅಗತ್ಯ ಪಡಿಸುವುದು.

1) ತಾಲೂಕು ಪಂಚಾಯತಿ ಸಭೆಗಳಲ್ಲಿ ಜಿಲ್ಲಾ ಮಟ್ಟದ/ತಾಲೂಕು ಮಟ್ಟದ ಅಧಿಕಾರಿಗಳು ಪಾಲ್ಗೋಳ್ಳುವುದು. ಅಗತ್ಯ ವೆನಿಸಿದರೆ ಅವರಿಗೆ 15 ದಿನ ಮುಂಚೆ ನೋಟಿಸು ನೀಡಿ ಸಬೇಗಳಲ್ಲಿ ಪಾಲ್ಗೋಳ್ಳಲು ಅವಕಾಶ ಕಲ್ಪಿಸಬೇಕು.

## ಪ್ರಕರಣ–144: ವ್ಯವಹಣೆಗಳ ವಿಧಿ ಮಾನ್ಯತೆ

* ತಾ.ಪಂ.ಯ ಸಭೆಗಳಲ್ಲಿ ಅಥವಾ ಸ್ಥಾಯಿ ಸಮಿತಿಗಳ ಸಭೆಗಳಲ್ಲಿ ಯಾವುದೇ ನಿರ್ಣಯಗಳನ್ನು ಅಂಗೀಕರಿಸುವ ಸಮಯದಲ್ಲಿ ಸದಸ್ಯರು ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಮತವನ್ನು ನೀಡುತ್ತಾರೆ.
* ನಿರ್ಣಯದ ನಂತರ ಸದಸ್ಯರ ಸದಸ್ಯತ್ವ ನಿಂತು ಹೋದರೆ ತೆಗೆದುಕೊಂಡ ನಿರ್ಣಯವನ್ನು ಅಸಿಂಧು ಎಂದು ಭಾವಿಸಬಾರದು.
* ಬಹುಸಂಖ್ಯಾತ ಸದಸ್ಯರು ಭಾಗವಹಿಸಿ ತೆಗೆದುಕೊಂಡ ನಿರ್ಣಯ ಗಳಿಗೆ ವಿಧಿ ಮಾನ್ಯತೆ ನೀಡತಕ್ಕದ್ದು

downloaded from: www.kpscvaani.com

# ಅಧ್ಯಾಯ 8
# ತಾಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಪ್ರಕಾರ್ಯಗಳು ಕರ್ತವ್ಯಗಳು ಮತ್ತು ಅಧಿಕಾರಗಳು

**ಪ್ರಕರಣ-145: ತಾಲ್ಲೂಕು ಪಂಚಾಯಿತಿಯ ಪ್ರಕಾರ್ಯಗಳು**

**ತಾಲ್ಲೂಕು ಪಂಚಾಯಿತಿಯ ಕಾರ್ಯಗಳು:**

- ದಿನಕ್ಕೆ ಪ್ರತಿ ವ್ಯಕ್ತಿಗೆ ಕನಿಷ್ಠ 40 ಲೀಟರ್ ನೀರು ಪೂರೈಸುವುದು.
- ನೀರು ಪೂರೈಕೆ ಕಾಮಾಗಾರಿಗಳ ನಿರ್ವಹಣೆ.
- ತೆರಿಗೆ ಮತ್ತು ಶುಲ್ಕ ವಸೂಲಿ ಮಾಡುವುದು ಮತ್ತು ಅವುಗಳ ಪರಿಷ್ಕರಣೆ.
- ವಿದ್ಯುತ್ ಶುಲ್ಕ ಸಂದಾಯ ಮಾಡುವುದು.
- ರೋಗ ನಿರೋಧಕ ಚುಚ್ಚುಮದ್ದುಗಳನ್ನು ನೀಡುವುದು.
- ಪ್ರಾಥಮಿಕ ಶಾಲಾ ಕಟ್ಟಡಗಳನ್ನು ನಿರ್ವಹಣೆ ಮಾಡುವುದು.
- ಗ್ರಾಮ ಸಭೆಗಳನ್ನು ನಡೆಸುವುದು.
- ಶೌಚಾಯ ನಿರ್ಮಿಸುವುದು.
- ತಿಪ್ಪೆಗುಂಡಿಗಳಿಗೆ ಜಾಗ ನೀಡುವುದು.

**ಅನುಸೂಚಿ-2 ರಲ್ಲಿರುವ ಈ ಕೆಳಗಿನ ಕಾರ್ಯಗಳನ್ನು ನೋಡಿಕೊಳ್ಳುವುದು**

- ಎಲ್ಲಾ ನಾಗರಿಕರಿಗೆ ಸುರಕ್ಷತೆ ಒದಗಿಸುವುದು ಮತ್ತು ಅವರ ರಕ್ಷಣೆಗಾಗಿ ಗ್ರಾಮಪಂಚಾಯ್ತಿಗೆ ನೆರವಾಗುವುದು.
- ಪ್ರತಿ ಗ್ರಾಮ ಪಂಚಾಯ್ತಿಯ ಅಂಕಿ-ಅಂಶಗಳನ್ನು ಸಂಗ್ರಹಿಸುವುದು.
- ಆರೋಗ್ಯದ ಕಾಳಜಿಗಾಗಿ ತಾಲ್ಲೂಕು ಆರೋಗ್ಯ ಕೇಂದ್ರಗಳ ಮೇಲ್ವಿಚಾರಣೆ ಮಾಡುವುದು.
- ಸರ್ಕಾರಿ ಶಾಲೆ, ವಿದ್ಯಾರ್ಥಿನಿಲಯ, ಅನಾಥಾಶ್ರಮ, ಸರ್ಕಾರಿ ಕೈಗಾರಿಕೆ, ಇಂಟರನೇಟ್ ಬಳಕೆಗೆ ಪ್ರೋತ್ಸಾಹ, ಗ್ರಂಥಾಲಯಗಳಿಗೆ ಬೆಂಬಲ.
- ಪ್ರವಾಸಿ ತಾಣಗಳು,ಗ್ರಾಮ ಕೈಗಾರಿಕೆಗಳು,ಆಹಾರ ದಾಸ್ತಾನು ಆಹಾರ ಸಂಸ್ಕರಣೆ ಚಿಲ್ಲರೆ ವ್ಯಾಪಾರ ಮಳಿಗೆಗಳ ಸ್ಥಾಪನೆಗೆ ಬೆಂಬಲ ನೀಡಿ ಬಡತನ ನಿವಾರಿಸುವುದು.
- ಮಹಿಳಾ ಸಹಕಾರಿ ಬ್ಯಾಂಕ್‌ಗಳ ಆರ್ಥಿಕ ಶಕ್ತಿ ವೃದ್ಧಿಸಲು ನೆರವು ನೀಡುವುದು.
- ಜೈವಿಕ ವೈವಿದ್ಯತೆ ಪರಿಸರ ರಕ್ಷಣೆ ಸಾಮಾಜಿಕ ಅರಣ್ಯ ಇವುಗಳಿಗೆ ಬೆಂಬಲ
- ಜಾನುವಾರು, ಜಾತ್ರೆಗಳು ವಸ್ತುಪ್ರದರ್ಶನ ಗ್ರಾಮೀಣ ಉತ್ಪನ್ನಗಳ ಮಾರಾಟ ಇವುಗಳಿಗೆ ಬೆಂಬಲ ನೀಡುವುದು. ಕುಡಿಯುವ ನೀರಿಗಾಗಿ ಮೂಲ ಸೌಕರ್ಯ ಒದಗಿಸುವುದು.
- ಪ್ರಕೃತಿ ವಿಕೋಪಗಳು ಉಂಟಾದಾಗ ಪರಹಾರ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು ಮುಂಜಾಗ್ರತೆ ವಹಿಸುವುದು. ಸಾಂಸ್ಕೃತಿಕ, ಕ್ರೀಡೆ, ಕುಶಲ, ಕಲೆಗೆ ಬೆಂಬಲ ನೀಡುವುದು.
- ಗ್ರಾಮ ಪಂಚಾಯ್ತಿ ಕೋರಿಕೆಗಳಿಗೆ ಬೇಂಬಲ ನೀಡುವುದು.
- ಪ್ರತಿ 5 ವರ್ಷಕ್ಕೊಮ್ಮೆ ಆರ್ಥಿಕ,ಸಾಮಾಜಿಕ ಅಂಕಿ-ಸಂಖ್ಯೆಯನ್ನು ಸಂಗ್ರಹಿಸುವುದು.
- ತಾವು ನಡೆಸಿದ ಸಮೀಕ್ಷೆ ಆಧಾರವಾಗಿಟ್ಟುಕೊಂಡು ದೂರದೃಷ್ಟಿ ಯೋಜನೆ ರೂಪಿಸುವುದು.
- ಗ್ರಾಮ ಪಂಚಾಯ್ತಿಯಿಂದ ಸಾಧ್ಯ ಇಲ್ಲದೆ ರಸ್ತೆ ಸೇತುವೆ ಕಾಲುವೆ ಏತ ನೀರಾರಿ ಸಣ್ಣ ನೀರಾವರಿಗೆ ಹಣಾಕಾಸಿನ ಬೆಂಬಲ ನೀಡುವುದು ಮತ್ತು ಮೇಲ್ವಿಚಾರಣೆ ಮಾಡುವುದು.
- ಶಶಶಪರಿಸರ ರಕ್ಷಣೆಗೆ ಪೂರಕವಾದ ಕಾಮಾಗಾರಿಗಳನ್ನು ಕೈಗೊಳ್ಳುವುದು.
- ಗ್ರಾಮ ಪಂಚಾಯ್ತಿಯ ಯೋಜನೆಗಳನ್ನು ಕ್ರೋಡಿಕರಿಸಿ ಅವುಗಳನ್ನು ಆದ್ಯತೆಗೆ ಅನುಗುಣವಾಗಿ ಜಾರಿಗೊಳಿಸುವುದು

**ಪ್ರಕರಣ-145(A):**
**ಯೋಜನೆಗಳ ಕ್ರೂಢೀಕರಣ ಮತ್ತು ಸಮಗ್ರಗೊಳಿಸುವಿಕೆ**

1) ತಾಲೂಕು ಪಂಚಾಯತಿಯಲ್ಲಿನ ನಿಧಿಗಳ ಲಭ್ಯತೆಗೆ ಒಳಪಟ್ಟು ದೂರದೃಷ್ಠಿಯೋಜನೆಯನ್ನು ಮತ್ತು ವಾರ್ಷಿಕ ಯೋಜನೆಗಳನ್ನು ಸಿದ್ದಪಡಿಸ ತಕ್ಕದ್ದು ಹಾಗು ಅದರ ಒಂದು ಪ್ರತಿಯನ್ನು ಜಿಲ್ಲಾ ಪಂಚಾಯತಿಗೆ ಸಲ್ಲಿಸಬೇಕು ಮತ್ತು ತಾಲೂಕು ಯೋಜನೆ ಮತ್ತು ಅಭಿವೃದ್ದಿ ಸಮಿತಿಗೆ ಅದನ್ನು ಹಾಜರು ಪಡಿಸತಕ್ಕದ್ದು.

**ಪ್ರಕರಣ-145(B): ಅಪಾಯಕಾರಿ ಕಲ್ಲುಗಣಿಗಾರಿಕೆ**
**ಕೊಳವೆ ಬಾವಿಗಳು ತೆರೆದ ಬಾವಿಗಳು ಮತ್ತು ಗುಂಡಿಗಳು**

- ಜನರಿಗೆ ಅಪಾಯವನ್ನುಂಟು ಮಾಡುವ ಕಾನೂನು ಬಾಹಿರ ಕಲ್ಲುಗಣಿಗಾರಿಕೆ, ಕೊಳವೆ ಬಾವಿ ಕೊರೆಯುವಿಕೆ, ತೆರೆದ ಬಾವಿ ತೋಡುವಿಕೆ, ಮುಂತಾದ ಕಾರ್ಯಗಳನ್ನು ತಡೆಯುವ ಅಧಿಕಾರ ತಾ.ಪಂ.ಹೊಂದಿದೆ
- ಅವುಗಳಿಗೆ ಬೇಲಿ ನಿರ್ಮಿಸಿ ಭದ್ರತೆ ಒದಗಿಸುವಂತೆ ಸಂಬಂಧಿಸಿದ ವರಿಗೆ ಸೂಚಿಸಬಹುದು.

**ಪ್ರಕರಣ-145(C):**
**ಜೀವ ವೈವಿರ್ಧಯತೆ ಸಾಮಾಜಿಕ ಅರಣ್ಯ ಮತ್ತು ಪರಿಸರ**

1) ಸ್ಥಳೀಯ ಜೀವ ವೈವಿಧ್ಯತೆಯನ್ನು ಮತ್ತು ಪರಿಸರವನ್ನು ಸಂರಕ್ಷಿಸಲು ಗ್ರಾ.ಪಂ.ಗಳಿಗೆ ಎಲ್ಲಾರೀತಿಯಲ್ಲಿ ನೆರವು ನೀಡುವುದು.
2) ಬಹುಗ್ರಾಮ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವುದು.

**ಪ್ರಕರಣ-145(D): ಮಾಹಿತಿ ನಿರ್ವಹಣೆ**

* ತಾ.ಪಂ.ಯು ತನ್ನ ಪ್ರದೇಶದೊಳಗಿನ ಎಲ್ಲಾ ಸಾಮಾಜಿಕ, ಆರ್ಥಿಕ ಮಾಹಿತಿ ಮತ್ತು ನೈಸರ್ಗಿಕ ಮತ್ತು ಇತರ ಸಂಪನ್ಮೂಲಗಳ ನಕಾಶೆಯ ದತ್ತಾಂಶಗಳನ್ನು ಕ್ರೂಢೀಕರಿಸಿ ನಿರ್ವಹಿಸತಕ್ಕದ್ದು.

**ಪ್ರಕರಣ-146: ಪ್ರಕಾರ್ಯಗಳನ್ನು ವಹಿಸಿಕೊಡುವುದು**

1. ಸರಕಾರವು ತನ್ನ ಕಾರ್ಯಗಳನ್ನು ತಾ.ಪಂ.ಗೆ ವಹಿಸಿಕೊಡಬಹುದು.
2. ಸರಕಾರವು ತಾ.ಪಂ.ಗೆ ವಹಿಸಿದ ಕಾರ್ಯಗಳನ್ನು ಅಧೀಸೂಚನೆಯ ಮೂಲಕ ಹಿಂಪಡೆಯಬಹುದು / ಮಾರ್ಪಾಡು ಮಾಡಬಹುದು.

downloaded from: www.kpscvaani.com


**ಪ್ರಕರಣ–147:**

**ತಾಲೂಕು ಪಂಚಾಯತಿಯ ಸಾಮಾನ್ಯ ಅಧಿಕಾರಗಳು**

- ತಾ.ಪಂ.ಯು ತನಗೆ ವಹಿಸಿಕೊಟ್ಟ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರ ಹೊಂದಿದೆ.

**ಪ್ರಕರಣ–148: ತಾಲೂಕು ಪಂಚಾಯತಿ ಸ್ಥಾಯಿ ಸಮಿತಿಗಳು**

ಪ್ರತಿಯೊಂದು ತಾಲೂಕು ಪಂಚಾಯತಿಯು ಈ ಕೆಳಗಿನ 3 ಸ್ಥಾಯಿ ಸಮಿತಿಗಳಿಂದ ಕೂಡಿರುತ್ತದೆ:

1) **ಸಾಮಾನ್ಯ ಸ್ಥಾಯಿ ಸಮಿತಿ:** ಇದರ ಅಧ್ಯಕ್ಷರು–ತಾ.ಪಂ. ಉಪಾಧ್ಯಕ್ಷರಾಗಿರುತ್ತಾರೆ.
2) **ಹಣ ಕಾಸು ಲೆಕ್ಕಪರಿಶೋಧನೆ ಹಾಗೂ ಯೋಜನಾ ಸಮಿತಿ:** ತಾ.ಪಂ. ಅಧ್ಯಕ್ಷರಾಗಿರುತ್ತಾರೆ.
3) **ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ:** ಸದಸ್ಯರಲ್ಲಿ ಒಬ್ಬರು.

- ಪ್ರತಿ ಸ್ಥಾಯಿ ಸಮಿತಿಗಳ ಸದಸ್ಯರ ಅಧಿಕಾರಾವಧಿ 20 ತಿಂಗಳು / ಸದಸ್ಯತ್ವ ನಿಂತು ಹೋಗುವವರೆಗೆ.
- ಪ್ರತಿ ಸಮಿತಿ ಅಧ್ಯಕ್ಷರು ಸೇರಿ 6 ಜನರನ್ನು ಒಳಗೊಂಡಿರುತ್ತದೆ.
- ಕಾರ್ಯನಿರ್ವಾಹಕ ಅಧಿಕಾರಿ ಎಲ್ಲಾ ಸಮಿತಿಗಳಿಗೆ ಪದನಿಮಿತ್ಯ ಕಾರ್ಯದರ್ಶಿಯಾಗಿರುತ್ತಾರೆ.
- ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಒಬ್ಬ ಮಹಿಳಾಸದಸ್ಯ. ಎಸ್.ಸಿ/ ಎಸ್.ಟಿ ಸದಸ್ಯರಿರಬೇಕು.

**ಪ್ರಕರಣ–149: ಸ್ಥಾಯಿ ಸಮಿತಿಗಳ ಪ್ರಕಾರ್ಯಗಳು**

**1. ಸಾಮಾನ್ಯ ಸ್ಥಾಯಿ ಸಮಿತಿ:–**

1) ಸಿಬ್ಬಂದಿ ವಿಷಯಗಳು
2) ಗ್ರಾಮೀಣ ಗೃಹನಿರ್ಮಾಣ
3) ನೈಸರ್ಗಿಕ ವಿಪತ್ತುಗಳ ಪರಿಹಾರ
4) ಸಾರಿಗೆ–ಸಂಪರ್ಕಗಳು.
5) ಕಟ್ಟಡಗಳು.
6) ನೀರು ಸರಬರಾಜು.

**2. ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ:–**

1) ತಾ.ಪಂ.ಹಣಕಾಸು
2) ಬಜೆಟ್ ರೂಪಿಸುವುದು.
3) ಜಮಾ ಮತ್ತು ಖರ್ಚುಗಳ ವಿವರಣೆಯ ಪರಿಶೀಲನೆ.
4) ಆದಾಯ ಹೆಚ್ಚಳಕ್ಕಾಗಿ ಪ್ರಸ್ತಾವನೆಗಳ ಪರಿಶೀಲನೆ
5) ಆದಾಯ ಮತ್ತು ವೆಚ್ಚದ ಮೇಲಿನ ಮೇಲ್ವಿಚಾರಣೆ.

**3. ಸಾಮಾಜಿಕ ನ್ಯಾಯ ಸಮಿತಿ:–**

1. SC, ST, OBC, ರವರ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಹಿತವನ್ನು ಕಾಪಾಡುವುದು.
2. ಸಾಮಾಜಿಕ ಅನ್ಯಾಯ ಮತ್ತು ಶೋಷಣೆಯನ್ನು ತಡೆಗಟ್ಟುವುದು.
3. ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದು.

**ಪ್ರಕರಣ–150: ಸಮಿತಿಗಳ ಕಾರ್ಯವಿಧಾನ**

1) ಸ್ಥಾಯಿ ಸಮಿತಿಗಳ ಚುನಾವಣೆ ಅವುಗಳ ಕಾರ್ಯ ಕಲಾಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ನಿಯಮಗಳನ್ನು ತಾ.ಪಂ.ಯು ರೂಪಿಸಬಹುದು.
2) ಪ್ರತಿಯೊಂದು ಸ್ಥಾಯಿ ಸಮಿತಿಯು ತನ್ನ ಕೆಲಸಕ್ಕೆ ಸಂಬಂಧಿಸಿದ ಮಾಹಿತಿ, ವಿವರಣ ಪಟ್ಟಿ, ವಿವರ ಪತ್ರ, ಲೆಕ್ಕಪತ್ರ ವರಧಿಯನ್ನು ತಾ.ಪಂ.ಯಿಂದ ತರಿಸಿಕೊಳ್ಳುವ ಅಧಿಕಾರ ಹೊಂದಿದೆ.
3) ತಾ.ಪಂ.ಯ ಕಾಮಗಾರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರುತ್ತದೆ.

**ಪ್ರಕರಣ–151– ಅಧಿಕಾರಗಳನ್ನು ವಹಿಸಿಕೊಡುವುದು**

ತಾಲೂಕ ಪಂಚಾಯತಿಯು ಅಧಿಸೂಚನೆಯ ಮೂಲಕ ತನ್ನ ಯಾವುದೇ ಅಧಿಕಾರಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ವಹಿಸಿಕೊಡಬಹುದು.

**ಪ್ರಕರಣ–152:**

**ತಾ.ಪಂ.ಅಧ್ಯಕ್ಷರ ಅಧಿಕಾರಗಳ ಮತ್ತು ಕರ್ತವ್ಯಗಳು:–**

1. ತಾಲ್ಲೂಕು ಪಂಚಾಯ್ತಿಯ ಸಭೆಗಳನ್ನು ಕರೆಸುವುದು ಮತ್ತು ಅದರ ಅಧ್ಯಕ್ಷತೆ ವಹಿಸಿಕೊಳ್ಳವುದು.
2. ಅನುಸೂಚಿ–2ರಲ್ಲಿ ಇರುವ ಕಾರ್ಯಗಳನ್ನು ಈಡೇರುಸುವುದಾಕ್ಕಾಗಿ ಕಾರ್ಯನಿರ್ವಾಹಕ ಅಧಿಕಾರಿ ಮೇಲೆ ನಿಯಂತ್ರಣ ಹೊಂದುವುದು.
3. ತಾಲ್ಲೂಕು ಪಂಚಾಯ್ತಿ ಕಾರ್ಯಗಳು/ಕಾಮಗಾರಿಯನ್ನು ಪರಿಶೀಲನೆ ಮಾಡುವುದು.
4. ಪಂಚಾಯ್ತಿಗೆ ಸಂಬಂಧಪಟ್ಟ ದಾಖಲೆಗಳ ಪರಿಶೀಲನೆ.
5. ಪ್ರಕೃತಿ ವಿಕೋಪದಿಂದ ಮರಣ ಹೊಂದಿದವರಿಗೆ ವರ್ಷದಲ್ಲಿ 1 ಲಕ್ಷ ರೂಪಾಯಿ ಪರಹಾರ ಧನ ನೀಡುವುದು.
6. ಸಾರ್ವಜನಿಕ ಮತ್ತು ಸರ್ಕಾರದ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುವುದು.
7. ಸರ್ಕಾರ ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸುವುದು.
8. ಪಂಚಾಯ್ತಿಯ ಸದಸ್ಯರಿಗೆ ಮತ್ತು ಸಿಬ್ಬಂದಿಗೆ ಮಾರ್ಗದರ್ಶನ ಮಾಡುವುದು.

**ಪ್ರಕರಣ– 153:**

**ಉಪಾಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು**

1. ಅಧ್ಯಕ್ಷರ ಗೈರು ಹಾಜರಿಯಲ್ಲಿದ್ದಾಗ ಅವರ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಸಭೆಗಳ ಅಧ್ಯಕ್ಷತೆ ವಹಿಸುವುದು.
2. ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷತೆ ವಹಿಸುವುದು.

**ಪ್ರಕರಣ–154: ಕರಾರುಗಳನ್ನು ಮಾಡಿಕೋಳ್ಳುವ ವಿಧಾನ**

1) ತಾಲೂಕು ಪಂಚಾತಿ ಪರವಾಗಿ ಮಾಡಿಕೊಳ್ಳುವ ಯಾವುದೇ ಒಪ್ಪಂದ ಹಾಗು ಕರಾರು ಕರ್ನಾಟಕ ಸಾರ್ವಜನಿಕ ಪಾರದರ್ಶಕತೆಯ ಅಧಿನಿಯಮ–1999 ಅನುಸಾರವಾಗಿರಬೇಕು
2) ತಾ.ಪಂ.ಯ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಯ ಯಾವುದೇ ಒಪ್ಪಂದ ಹಾಗು ಕರಾರುಗಳನ್ನು ಮಾಡಿಕೊಳ್ಳುಬವುದು.

downloaded from: www.kpscvaani.com

# ಅಧ್ಯಾಯ 9

# ತಾಲೂಕು ಪಂಚಾಯತಿ ಸಿಬ್ಬಂದಿ

**ಪ್ರಕರಣ–155:**

**ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಸಿಬ್ಬಂದಿ**

1) ಸರಕಾರವು " ಉಪ–ವಿಭಾಗಾಧಿಕಾರಿ (೦ಅ) ದರ್ಜೆಯ ಹಾಗೂ ಅದಕ್ಕೆ ಸಮನಾದ ರಾಜ್ಯ ಸರಕಾರಿ ಸೇವೆ ಗ್ರೂಪ್– ಎ ಅಧಿಕಾರಿಯನ್ನು ತಾ.ಪಂ ಕಾರ್ಯನಿರ್ವಾಹ ಅಧಿಕಾರಿಯನ್ನಾಗಿ ನೇಮಕ ಮಾಡುತ್ತದೆ.

2) ಸರಕಾರವು ತಾಲೂಕು ಪಂಚಾಯತಿ ಅಧೀನದಲ್ಲಿ ಕೆಲಸ ಮಾಡಲು ೦.ಃ.ಅ.ಆ ಗುಂಪಿನ ಅಧಿಕಾರಿಗಳು ಮತ್ತು ನೌಕರರನ್ನು ನೇಮಿಸಬಹುದು.

3) ನೇಮಕ ಮಾಡಿದ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ಅಧಿಕಾರ ಸರಕಾರಕ್ಕಿದೆ.

**ಪ್ರಕರಣ–156–ಕಾರ್ಯನಿರ್ವಾಹಕ ಅಧಿಕಾರಿಯ ಮತ್ತು ಇತರ ಅಧಿಕಾರಿಗಳ ಹಾಗೂ ಸಿಬ್ಬಂಧಿಯ ಪ್ರಕಾರ್ಯಗಳು**

**ತಾಲ್ಲೂಕು ಪಂಚಾಯ್ತಿಯ ಸಿಬ್ಬಂದಿ**

- ಕಾರ್ಯನಿರ್ವಾಹಕ ಅಧಿಕಾರಿ: ತಾಲೂಕು ಪಂಚಾಯ್ತಿಯ ಮುಖ್ಯಸ್ಥ.ಇವನು ಕೆಎಎಸ್ ದರ್ಜೆಯ "ಎ" ಶ್ರೇಣಿಯ ಅಧಿಕಾರಿಯಾಗಿರುತ್ತಾರೆ.ಇವರು ನಿರ್ವಹಿಸುವ ಕಾರ್ಯಗಳು ಈ ಕೆಳಗಿನಂತಿವೆ.
- ಅನುಸೂಚಿ–2ರ ಕಾರ್ಯಗಳನ್ನು ನಿರ್ವಹಿಸುವುದು.
- ಅಧ್ಯಕ್ಷ ನಿರ್ವಹಿಸಬೇಕಾದ ಕಾರ್ಯಗಳಿಗೆ ಸಹಾಯ ಮಾಡುವುದು.
- ಎಲ್ಲಾ ಸಿಬ್ಬಂದಿಯ ಮೇಲ್ವಿಚಾರಣೆ ಮತ್ತು ನಿಯಂತ್ರಣ
- ತಾಲ್ಲೂಕು ಪಂಚಾಯ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ರಕ್ಷಣೆ ಮಾಡುವುದು.
- ತಾಲ್ಲೂಕು ಪಂಚಾಯ್ತಿಯ ಕ್ರಿಯಾ ಯೋಜನೆಯನ್ನು ರೂಪಿಸುವುದು.
- ಹಣಕಾಸಿನ ಚಟುವಟಿಕೆಗಳ ಮೇಲೆ ನಿಯಂತ್ರಣ.
- ತಾಲ್ಲೂಕು ಪಂಚಾಯ್ತಿಯ ಕಾಮಗಾರಿಗಳ ಮೇಲ್ವಿಚಾರಣೆ
- ಗ್ರಾಮ ಪಂಚಾಯತ್ತಿಗಳಿಂದ ದಾಖಲೆಗಳನ್ನು ತರಿಸಿಕೊಳ್ಳುವುದು ಮತ್ತು ಅವುಗಳನ್ನು ಪರಿಶೀಲನೆ ಮಾಡುವುದು.
- ಗ್ರಾಮ ಪಂಚಾಯ್ತಿಯ ಮತ್ತು ಜಿಲ್ಲಾ ಪಂಚಾಯ್ತಿಗಳ ನಡುವೆ ಮಧ್ಯವರ್ತಿಯಾಗಿ ವರ್ತಿಸುವುದು.
- ಖಾಜಾನೆಯಿಂದ ಹಣವನ್ನು ತೆಗೆಯುವುದು ಮತ್ತು ಬಟವಾಡೆ ಮಾಡುವುದು.
- ಮುಂಗಡ ಪತ್ರ ತಯಾರಿಸುವುದು.
- ತಾಲ್ಲೂಕು ಪಂಚಾಯ್ತಿಯ ಸಭೆಯಲ್ಲಿ ಪಾಲ್ಗೋಳ್ಳುವುದು ಮತ್ತು ಸಲಹೆಗಳನ್ನು ನೀಡುವುದು.ಆದರೆ ನಿರ್ಣಯವನ್ನು ಮಂಡಿಸಲು ಅಧಿಕಾರ ಮತ್ತು ಮತ ಚಲಾಯಿಸುವ ಅಧಿಕಾರ ಇರುವುದಿಲ್ಲ.

**ಪ್ರಕರಣ–157: ದಾಖಲೆ ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರಲು ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು**

ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಕಾರ್ಯನಿರ್ವಾಹಕ ಅಧಿಕಾರಿಯು ಕೋರಿದಾಗ ಸಂಬಂಧಪಟ್ಟವರು ದಾಖಲೆಗಳನ್ನು ಒಪ್ಪಿಸಬೇಕು.

downloaded from: www.kpscvaani.com


# ಅಧ್ಯಾಯ 10

# ಜಿಲ್ಲಾ ಪಂಚಾಯತಿ ರಚನೆ

### ಪ್ರಕರಣ-158:
### ಜಿಲ್ಲಾ ಪಂಚಾಯತಿಯ ಸ್ಥಾಪನೆ ಮತ್ತು ಅದರ ನಿರ್ಗಮನ

* ಜಿಲ್ಲೆಯಲ್ಲಿನ ಪೌರ ಸಭೆಗಳನ್ನು ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳನ್ನು ಹೊರತು ಪಡಿಸಿ ಇಡೀ ಜಿಲ್ಲೆಯ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಒಂದು ಜಿಲ್ಲೆ ಪಂಚಾಯತಿಯನ್ನು ರಚಿಸಬೇಕು.
* ಪ್ರತಿ ಜಿ.ಪಂ ಯು______ಜಿಲ್ಲಾ ಪಂಚಾಯತಿ ಎಂಬ ಹೆಸರಿನಿಂದ ನಿಗಮಿತ ನಿಕಾಯವಾಗಿರುತ್ತದೆ ಮತ್ತು ತನ್ನ ಹೆಸರಿನ ಮೊಹರು ಹೊಂದಿರತಕ್ಕದ್ದು.
* ಜಿ.ಪಂ.ಯ ಕೇಂದ್ರ ಕಚೇರಿಯು ಜಿಲ್ಲೆಯ ಯಾವುದೇ ಭಾಗದಲ್ಲಿಯಾದರು ಸ್ಥಾಪಿಸಬಹುದು.

### ಪ್ರಕರಣ-159: ಜಿಲ್ಲಾ ಪಂಚಾಯತಿ ರಚನೆ

1) ಪ್ರತಿಯೊಂದು ಜಿಲ್ಲಾ ಪಂಚಾಯತಿಯು ಚುನಾಯಿತ ಸದಸ್ಯರು, ಸಂಸತ್ತು ಸದಸ್ಯರು, ರಾಜ್ಯವಿಧಾನ ಸಭೆಯ ಸದಸ್ಯರು, ಮತ್ತು ವಿಧಾನ ಪರಿಷತ್ತು ಸದಸ್ಯರು ತಾ.ಪಂ.ಅಧ್ಯಕ್ಷರನ್ನು ಒಳಗೊಂಡಿರುತ್ತದೆ.
2) ಪದನಿಮಿತ್ಯ ಸದಸ್ಯರಿಗೆ ಜಿ.ಪಂ.ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸಲು ಮತ್ತು ಅವಿಶ್ವಾಸ ನಿರ್ಣಯ ಮಂಡಿಸಲು ಕರೆದ ವಿಶೇಷ ಸಭೆಯನ್ನು ಹೊರತು ಪಡಿಸಿ ಜಿ.ಪಂ.ಯ ಯಾವುದೇ ಸಭೆಗಳಲ್ಲಿ ಭಾಗವಹಿಸುವ ಮತ್ತು ಮತ ನೀಡಲು ಹಕ್ಕು ಹೊಂದಿದ್ದಾರೆ.

### ಪ್ರಕರಣ-160: ಚುನಾಯಿತ ಸದಸ್ಯರು

* ಪ್ರತಿ ಜಿಲ್ಲಾ ಪಂಚಾಯತಿಯು ಕನಿಷ್ಠ 20 ಚುನಾಯಿತ ಸದಸ್ಯರಿಂದ ಕೂಡಿರಬೇಕು.
* 35,000 ದಿಂದ 45.000ಜನಸಂಖ್ಯೆಗೆ ಒಬ್ಬ ಸದಸ್ಯನನ್ನು ಚುನಾಯಿಸತಕ್ಕದ್ದು.
* ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ 30.000 ಜನಸಂಖ್ಯೆಗೆ ಒಬ್ಬ ಸದಸ್ಯನನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ 30,000 ಜನಸಂಖ್ಯೆಗೆ ಒಬ್ಬ ಸದಸ್ಯನನ್ನು ಹಾಗೂ ಕೊಡಗು ಜಿಲ್ಲೆಯಲ್ಲಿ 18,000 ಜನಸಂಖ್ಯೆಗೆ ಒಬ್ಬ ಸದಸ್ಯನನ್ನು ಆಯ್ಕೆ ಮಾಡತಕ್ಕದ್ದು.

### ಪ್ರಕರಣ-161: ಜನಗಣತಿಯ ತರುವಾಯ ಚುನಾಯಿತ ಸದಸ್ಯರುಗಳ ಸಂಖ್ಯೆಯನ್ನು ನಿರ್ಧರಿಸುವುದು

ಪ್ರತಿ ಜನಗಣತಿಯ ನಂತರ ಜನಸಂಖ್ಯೆಯ ಅಂಕಿ ಅಂಶಗಳನ್ನು ಆದರಿಸಿ ರಾಜ್ಯ ಚುನಾವಣಾ ಆಯೋಗವು ಜಿಲ್ಲಾ ಪಂಚಾಯಿತಿಯ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುತ್ತದೆ.

### ಪ್ರಕರಣ-162: ಸ್ಥಾನಗಳ ಮೀಸಲಾತಿ

**ಜಿಲ್ಲಾ ಪಂಚಾಯತಿ ಮೀಸಲಾತಿ ವಿಧಾನ**

**ಉ.ಪ್ರ-1:** ಜಿಲ್ಲಾ ಪಂಚಾಯ್ತಿ ಮೀಸಲಾತಿಯನ್ನು ರಾಜ್ಯ ಚುನಾವಣಾ ಆಯೋಗವು ನಿರ್ಧರಿಸುತ್ತದೆ.

* ಆಯಾ ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡಬೇಕು.
* ಕನಿಷ್ಟ ಒಂದು ಸ್ಥಾನವನ್ನಾದರೂ ಪರಿಶಷ್ಠ ಜಾತಿ/ಪರಿಶಿಷ್ಟ ಪಂಗಡ-ಕ್ಕೆ ಮೀಸಲಿಡಬೇಕು.
* ಪರಿಶಿಷ್ಟ ಜಾತಿ ಅಭ್ಯರ್ಥಿ ಇಲ್ಲದಿದ್ದರೆ ಪರಿಶಿಷ್ಟ ಪಂಗಡಕ್ಕೆ ಆ ಸ್ಥಾನ ನೀಡಬೇಕು.
* ಪರಿಶಿಷ್ಟ ಪಂಗಡದ ಅಭ್ಯರ್ಥಿ ಇಲ್ಲದಿದ್ದರೆ ಪರಿಶಿಷ್ಟ ಜಾತಿಗೆ ಆ ಸ್ಥಾನ ನೀಡಬೇಕು.

**ಉ.ಪ್ರ.-2:** ಹಿಂದುಳಿದ ವರ್ಗದವರಿಗೆ 1/3 ಸ್ಥಾನ ಮೀಸಲಿಡಬೇಕು

* ಇದರಲ್ಲಿ ಅ ವರ್ಗಕ್ಕೆ ಶೇ.80 ಸ್ಥಾನಗಳು 'ಬ' ವರ್ಗಕ್ಕೆ ಶೇ.20 ಸ್ಥಾನಗಳು ಮೀಸಲಿಡಬೇಕು.

**ಉ.ಪ್ರ-3:** ಮಹಿಳೆಯರಿಗೆ ಶೇ 50 ಮೀಸಲಾತಿ ಕಲ್ಪಿಸಬೇಕು.

* ಮೀಸಲಾತಿ 10 ವರ್ಷದವರೆಗೂ ಮುಂದುವರೆಸಿ ನಂತರ ಪರಿಷ್ಕರಿಸಬೇಕು.

### ಪ್ರಕರಣ-163:
### ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ

ರಾಜ್ಯ ಚುನಾವಣಾ ಆಯೋಗವು ಜಿಲ್ಲಾ ಪಂಚಾಯತಿ ಚುನಾವಣ ಕ್ಷೇತ್ರದ ವಿಂಗಡಣೆ. ಕ್ಷೇತ್ರದ ವ್ಯಾಪ್ತಿ ಮತ್ತು ವಿವಿಧ ಮೀಸಲು ಕ್ಷೇತ್ರಗಳನ್ನು ನಿರ್ಧರಿಸುತ್ತದೆ..

### ಪ್ರಕರಣ:-164: ಮತದಾನದ ಹಕ್ಕು

1) ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು ಜಿ.ಪಂ.ಯ ಚುನಾವಣೆಗಳಲ್ಲಿ ಮತದಾನ ಮಾಡುವ ಹಕ್ಕು ಹೊಂದಿದ್ದಾರೆ.
2) ಒಬ್ಬ ಮತದಾರ ಒಂದಕ್ಕಿಂತ ಹೆಚ್ಚುಬಾರಿ ಮತದಾನ ಮಾಡುವಂತಿಲ್ಲ.
3) ಮತದಾನ ಮಾಡುವುದು ಕರ್ತವ್ಯ ಮತ್ತು ಕಡ್ಡಾಯವಾಗಿದೆ.
4) ಯಾವುದೇ ಅಭ್ಯರ್ಥಿಗೆ ಮತ ನೀಡದೆ (NOTA) ಮತ ಚಲಾಯಿಸಬಹುದು.

### ಪ್ರಕರಣ:-165: ಮತದಾರರ ಪಟ್ಟಿ

* ರಾಜ್ಯ ವಿಧಾನ ಸಭೆಯ ಮತದಾರರ ಪಟ್ಟಿಯೇ ಜಿಲ್ಲಾ ಪಂಚಾಯತಿ ಚುನಾವಣೆಯ ಮತದಾರರ ಪಟ್ಟಿಯಾಗಿರುತ್ತದೆ.
* ಜಿ.ಪಂ. ಚುನಾವಣೆಯ ಮತದಾರರ ಪಟ್ಟಿಯನ್ನು ಉಪ-ವಿಭಾಗಾಧಿಕಾರಿ ತಯಾರಿಸುತ್ತಾರೆ.

### ಪ್ರಕರಣ-166: ಅಭ್ಯರ್ಥಿಯ ಅರ್ಹತೆ

1) ಭಾರತೀಯ ನಾಗರೀಕನಾಗಿರಬೇಕು.
2) ಕನಿಷ್ಠ 21 ವರ್ಷ ವಯಸ್ಸಾಗಿರಬೇಕು.
3) ಜಿಲ್ಲಾ ಪಂಚಾಯತಿ ಮತದಾರರ ಪಟ್ಟಿಯಲ್ಲಿ ಹೆಸರಿರಬೇಕು.

downloaded from: www.kpscvaani.com

4) ಮೀಸಲು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮೀಸಲಾತಿ ಹೊಂದಿರಬೇಕು.

### ಪ್ರಕರಣ 167: ಸದಸ್ಯರಾಗಲು ಅನರ್ಹತೆ

**ಉ.ಪ್ರ–1:**

1) ರಾಜ್ಯ ವಿಧಾನಮಂಡಲ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗಿದ್ದಾರೆ.
2) 1987ರ ಸ್ಥಳೀಯ ಪ್ರಾಧಿಕಾರದ ಅಧಿನಿಯಮದ ಅಡಿಯಲ್ಲಿ ಅನರ್ಹನಾಗಿದ್ದರೆ.
3) 1965ರ ಕರ್ನಾಟಕ ಅಬಕಾರಿ ಕಾಯ್ದೆಯಡಿ 3ತಿಂಗಳಿಗೂ ವಿವಿಧ ಜೈಲು ಶಿಕ್ಷೆ ಅನುಭವಿಸಿದ್ದರೆ.
4) ಸ್ಥಳೀಯ ಪ್ರಾಧಿಕಾರದ ಸೇವೆಯಿಂದ ವಜಾಗೊಂಡಿದ್ದರೆ.
5) ಲೀಗಲ್ / ಮೆಡಿಕಲ್ ಪ್ರಾಕ್ಟಿಷನರ್ಸ್ / ಸಿ.ಎ. ಆಗಿದ್ದು ಸಕ್ಷೇಮ ಪ್ರಾಧಿಕಾರದಿಂದ ಅಮಾನತಿನಲ್ಲಿದ್ದರೆ.
6) ಕೇಂದ್ರ ಸರಕಾರ / ರಾಜ್ಯಸರಕಾರದ ಲಾಭದಾಯಕ ಹುದ್ದೆ ಹೊಂದಿದ್ದರೆ.
7) ತನ್ನ ಕುಟುಂಬ ಸದಸ್ಯರ ಉಪಯೋಗಕ್ಕಾಗಿ ಶೌಚಗೃಹ ಒದಗಿಸದಿದ್ದರೆ(1ವರ್ಷದೊಳಗೆ)

**ಉ.ಪ್ರ–2:** ಜಿ..ಪಂ. ಸದಸ್ಯನಾಗಿರುವ ವ್ಯಕ್ತಿಯು ಲೋಕಸಭೆ, ರಾಜ್ಯಸಭೆ, ವಿಧಾನ ಪರಿಷತ್ತು / ಯಾವುದೇ ಸ್ಥಳೀಯ ಸರಕಾರದ ಸದಸ್ಯನಾಗಿದ್ದರೆ ಅವನು ತನ್ನ ಹೆಸರು ಪ್ರಕಟವಾದ 15ದಿನದೊಳಗೆ ಮೇಲಿನ ಸ್ಥಾನಗಳಿಗೆ ರಾಜಿನಾಮ ಸಲ್ಲಿಸದಿದ್ದರೆ ಅವನ ಜಿ.ಪಂ.ಸ್ಥಾನ ಖಾಲಿಯಾಗುವುದು.

### ಪ್ರಕರಣ:–168: ಸ್ಥಾನವು ಖಾಲಿಯಾಗುವುದು

1) 167ನೇ ಪ್ರಕರಣದಡಿ ಅನರ್ಹತೆಗೆ ಒಳಗಾಗಿದ್ದರೆ.
2) ಜಿ.ಪಂ.ಅನುಮತಿಯಿಲ್ಲದೆ 6 ತಿಂಗಳಿಗೂ ಹೆಚ್ಚುಕಾಲ / ಸತತ 3ಕ್ಕು ಹೆಚ್ಚು ಜಿಲ್ಲಾ ಪಂಚಾಯತಿ ಸಭೆಗಳಿಗೆ ಗೈರು ಹಾಜರಾದರೆ ಸದಸ್ಯ ಸ್ಥಾನವು ಖಾಲಿಯಾಗುವುದು.

### ಪ್ರಕರಣ:–169:

### ಮತ ನೀಡುವ ವಿಧಾನ ಮತ್ತು ಚುನಾವಣಾ ಕಾರ್ಯ ವಿಧಾನ

1) ಒಬ್ಬ ಮತದಾರ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತ ನೀಡುವಂತಿಲ್ಲ.
2) ಜಿ.ಪಂ. ಚುನಾವಣೆಗಳು ಪಕ್ಷ ಆಧಾರಿತವಾಗಿದ್ದು ಮತದಾನ ಯಂತ್ರಗಳ ಮೂಲಕ ಮತವನ್ನು ದಾಖಲು ಮಾಡಲಾಗುವುದು.
3) ಗ್ರಾ.ಪಂ. ಚುನಾವಣೆಗೆ ಅನ್ವಯವಾಗುವ 26 ರಿಂದ 40ರವರೆಗಿನ ಪ್ರಕರಣಗಳು ಜಿ.ಪಂ.ಚುನಾವಣೆಗೂ ಅನ್ವಯವಾಗುತ್ತದೆ.

### ಪ್ರಕರಣ–170: ಏಕಕಾಲದ ಸದಸ್ಯತ್ವದ ನಿಷೇಧ

1) ಒಬ್ಬ ವ್ಯಕ್ತಿ ಜಿ.ಪಂ.ಯ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಚುನಾಯಿತನಾಗಿದ್ದರೆ ಲಿಖಿತ ನೋಟಿಸನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿ ಒಂದು ಕ್ಷೇತ್ರವನ್ನು ಆಯ್ಕೆಮಾಡಿಕೊಳ್ಳಬಹುದು.
2) ಒಂದು ಕ್ಷೇತ್ರವನ್ನು ಆಯ್ಕೆ ಮಾಡದಿದ್ದರೆ ಜಿಲ್ಲಾಧಿಕಾರಿಯು ಚೀಟಿ ಎತ್ತುವ ಮೂಲಕ ಒಂದು ಕ್ಷೇತ್ರವನ್ನು ಅಧಿಸೂಚಿಸತಕ್ಕದ್ದು ಇದು ಅಂತಿಮವಾಗಿರುತ್ತದೆ.

### ಪ್ರಕರಣ–171:

### ಚುನಾವಣೆಗೆ ಸಂಬಂಧ ಪಟ್ಟಂತೆ ಕೆಲವು ಪ್ರಕರಣಗಳ ಅನ್ವಯ

1) ಗ್ರಾಮ ಪಂಚಾಯತಿ ಚುನಾವಣೆಗೆ ಅನ್ವಯವಾಗುವ 15ರಿಂದ 24ರ ವರೆಗೆ ಪ್ರಕರಣಗಳು ಜಿಲ್ಲಾ ಪಂಚಾಯತ್ ಚುನಾವಣೆಗಳಿಗೂ ಅನ್ವಯವಾಗುತ್ತದೆ.
2) ಜಿ.ಪಂ.ಚುನಾವಣೆಗೆ ಸಂಬಂಧಿಸಿದ ತಕರಾರು ಅರ್ಜಿಯನ್ನು ಗೊತ್ತು ಪಡಿಸಿದ ನ್ಯಾಯಾಲಯದಲ್ಲಿ ಸಲ್ಲಿಸಕ್ಕದ್ದು ಭದ್ರತೆಗಾಗಿ 2,000 ರೂ. ಠೇವಣೆ ಇಡತಕ್ಕದ್ದು.
3) ಮೇಲ್ಮನವಿಯನ್ನು 30 ದಿನದೊಳಗೆ ಜಿಲ್ಲಾನ್ಯಾಯಾಧೀಶರಿಗೆ ಸಲ್ಲಿಸತಕ್ಕದ್ದು.
4) ಜಿಲ್ಲಾ ನ್ಯಾಯಾಧೀಶರ ತೀರ್ಮಾನ ಅಂತಿಮವಾಗಿರುತ್ತದೆ.

### ಪ್ರಕರಣ–172: ಸದಸ್ಯರ ಹೆಸರುಗಳ ಪ್ರಕಟಣೆ

1) ಜಿಲ್ಲಾ ಪಂಚಾಯಿತಿಗೆ ಚುನಾಯಿತರಾದ ಹೆಸರುಗಳನ್ನು ಸರಕಾರಕ್ಕೆ ವರಧಿ ಮಾಡತಕ್ಕದ್ದು.
2) ಸರಕಾರವು ಸದಸ್ಯರ ಹೆಸರುಗಳನ್ನು ರಾಜ್ಯಪತ್ರದಲ್ಲಿ ಪ್ರಕಟಿಸುತ್ತದೆ.

### ಪ್ರಕರಣ–173:

### ಸದಸ್ಯರ ಹುದ್ದೆಯ ಪ್ರಾರಂಭ ಮತ್ತು ಅಧಿಕಾರಾವಧಿ

1) ಜಿಲ್ಲಾ ಪಂಚಾಯತಿ ಸದಸ್ಯರ ಅಧಿಕಾರಾವಧಿ–5ವರ್ಷಗಳು
2) ಸದಸ್ಯರ ಹುದ್ದೆಯ ಅವಧಿಯು ಜಿ.ಪಂ.ಯ ಪ್ರಥಮ ಸಭೆಯ ದಿನದಿಂದ ಆರಂಭವಾಗುತ್ತದೆ.
3) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬಲು ಚುನಾಯಿತನಾದ ಸದಸ್ಯನ ಹುದ್ದೆಯ ಅವಧಿಯು ಅವನ ಹೆಸರು ಪ್ರಕಟವಾದ ದಿನಾಂಕದಿಂದ ಪ್ರಾರಂಭವಾಗುತ್ತದೆ.

### ಪ್ರಕರಣ–174: ಸದಸ್ಯರ ರಾಜೀನಾಮೆ

1) ಜಿ.ಪಂ. ಸದಸ್ಯರು ತಮ್ಮ ರಾಜೀನಾಮೆಯನ್ನು ಜಿ.ಪಂ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು
2) 15 ದಿನದೊಳಗೆ ರಾಜೀನಾಮೆಯನ್ನು ಹಿಂಪಡೆಯಲು ಅವಕಾಶವಿರುತ್ತದೆ.

### ಪ್ರಕರಣ–175:

### ದುರ್ನಡತೆಗಾಗಿ ಸದಸ್ಯರನ್ನು ತೆಗೆದು ಹಾಕುವುದು.

ಸರಕಾರವು ಈ ಕೆಳಗಿನ ಕಾರಣಗಳಿಂಧ ಸದಸ್ಯರನ್ನು ತೆಗೆದು ಹಾಕಬಹುದು.

1) ಆಯ್ಕೆಯಾದ ನಂತರ ಅನರ್ಹರೆಂದು ಸಾಬೀತಾದರೆ
2) ತಮ್ಮ ಕರ್ತವ್ಯ ನಿರ್ವಹಿಸಿದೆ ದುರ್ನಡತೆ ತೋರಿದರೆ
3) ಮತಿಭ್ರಮಣೆಗೊಂಡರೆ ಹಾಗೂ ಧಿವಾಳಿಯಾದರೆ.
4) ಕಾರ್ಯನಿರ್ವಹಿಸಲು ಅಸಮರ್ಥರೆಂದು ಜಿಲ್ಲಾ ವೈದ್ಯಾಧಿಕಾರಿಗಳು ಪ್ರಮಾಣ ಪತ್ರ ನೀಡಿದರೆ.
5) ಪಂಚಾಯತಿಯ ಯಾವುದೇ ಕಾಮಗಾರಿಯನ್ನು ಕಾರ್ಯತಗೊಳಿಸುವಾಗ ಕರಾರು ಸಂಬಂಧ ವ್ಯವಹಾರದಲ್ಲಿ ತನ್ನ ಕುಟುಂಬದ ಸಂಬಂಧಿಯೊಂದಿಗೆ ಬಾಗಿಯಾಗಿದ್ದರೆ
6) ಸತತ 4 ಜಿ.ಪಂ ಸಭೆಗಳಿಗೆ ಹಾಜರಾಗದಿದ್ದರೆ ಹಾಗೂ ಸಭೆ ಕರೆಯಬೇಕಾದವರು ಸತತ 2 ಸಭೆಗಳನ್ನು ಕರೆಯಲು ತಪ್ಪಿದರೆ ಅವರ ಸದಸ್ಯತ್ವವು ನಿಂತುಹೋಗುವುದು.

downloaded from: www.kpscvaani.com 

### ಪ್ರಕರಣ–175A: ಸದಸ್ಯರ ಆಸ್ತಿ ಘೋಷಣೆ

1) ಜಿ.ಪಂ. ಸದಸ್ಯನು ತನ್ನ ಅವಧಿ ಪ್ರಾರಂಭವಾದ 3 ತಿಂಗಳೊಳಗೆ ಮತ್ತು ನಂತರ ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ 1 ತಿಂಗಳೊಳಗೆ ತನ್ನ ಮತ್ತು ತನ್ನ ಕುಟುಂಬದ ಎಲ್ಲಾ ರೀತಿಯ ಆಸ್ತಿಯ ವಿವರವನ್ನು ಜಿ.ಪಂ ಅಇಔ ಮೂಲಕ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.
2) ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಎಲ್ಲಾ ಸದಸ್ಯರು ಘೋಷಣೆ ಮಾಡಿದ ಆಸ್ತಿಯ ವಿವರವನ್ನು ಮೇ ಮೊದಲ ವಾರದಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.
3) ಸದಸ್ಯರು ಆಸ್ತಿ ವಿವರವನ್ನು ತಡವಾಗಿ ಸಲ್ಲಿಸಿದರೆ ಜುಲೈ ಮೊದಲ ವಾರದಲ್ಲಿ ಸಲ್ಲಿಸತಕ್ಕದ್ದು
4) ಆಸ್ತಿ ಘೋಷಣೆ ಮಾಡಿದನಂತರ ಸದಸ್ಯನು ಆಸ್ತಿಯನ್ನು ಅರ್ಜಿಸಿದರೆ ಹಾಗೂ ದಾರಣ ಮಾಡಿದರೆ ಅದರ ವಿವರವನ್ನು 45 ದಿನದೊಳಗೆ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.

### ಪ್ರಕರಣ–175: ಸದಸ್ಯತ್ವವು ನಿಂತು ಹೋಗುವುದು

1) ಸದಸ್ಯನು ಆಸ್ತಿ ವಿವರವನ್ನು ಘೋಷಣೆ ಮಾಡದಿದ್ದರೆ ಅಥವಾ ಸುಳ್ಳು ದಾಖಲು ಮಾಡಿದ್ದರೆ
2) ರಾಜಕೀಯ ಪಕ್ಷದ ಪ್ರತಿನಿಧಿಯಾಗಿರುವ ಸದಸ್ಯನು ತನ್ನ ಪಕ್ಷ ನೀಡಿದ ಟಿಫನ್ ಉಲ್ಲಂಘಿಸಿ ಮತ ಚಲಾಯಿಸಿದ್ದರೆ
3) ಈ ಮೇಲಿನ ಕಾರಣಗಳಿಂದಾಗಿ ರಾಜ್ಯ ಚುನಾವಣಾ ಆಯೋಗವು ಸದಸ್ಯತ್ವ ನಿಂತು ಹೋಗಿದೆ ಎಂದು ಘೋಷಿಸತಕ್ಕದ್ದು.

### ಪ್ರಕರಣ–176: ಆಕಸ್ಮಿಕ ಖಾಲಿ ಸ್ಥಾನಗಳನ್ನು ತುಂಬುವುದು.

ಆಕಸ್ಮಿಕವಾಗಿ ಖಾಲಿಯಾದ ಸ್ಥಾನಗಳನ್ನು ಉಪ ಚುನಾವಣೆಯ ಮೂಲಕ ತುಂಬತಕ್ಕದ್ದು.

### ಪ್ರಕರಣ–177:
### ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಮತ್ತು ಹುದ್ದೆಯ ಅವಧಿ

1) ಜಿಲ್ಲಾ ಪಂಚಾಯತಿ ಸದಸ್ಯರ ಹೆಸರು ಪ್ರಕಟಿಸಿದ 1 ತಿಂಗಳೊಳಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಸಬೇಕು
2) ಮೀಸಲಾತಿ :–
   * ರಾಜ್ಯದ ಒಟ್ಟು ಜನಸಂಖೆಯ ಅನುಗುಣವಾಗಿ ಖಅ,ಖಖ. ಗೆ ಮೀಸಲಾತಿ ನೀಡಬೇಕು
   * ಹಿಂದುಳಿದ ವರ್ಗಗಳಿಗೆ 1/3 ರಷ್ಟು ಮೀಸಳಾತಿ ನೀಡಬೇಕು. ಅದರಲ್ಲಿ ಪ್ರವರ್ಗ–A ಗೆ ಶೇ.80 ಮತ್ತು ಪ್ರವರ್ಗ–B ಗೆ ಶೇ.20 ರಷ್ಟು ಮೀಸಲು ನೀಡಬೇಕು.
   * ಮಹಿಳೆಯರಿಗೆ ಶೇ.50 ರಷ್ಟು ಸ್ಥಾನ ಮೀಸಲಾತಿ ಒದಗಿಸಬೇಕು.
   * ಯಾವುದೇ ಕಾರಣಕ್ಕೂ ಒಟ್ಟಾರೆ ಮೀಸಲಾತಿಯ ಪ್ರಮಾಣ ಶೇ.50 ರಷ್ಟು ದಾಟಬಾರದು.
3) ಜಿ.ಪಂ ಅಧ್ಯಕ್ಷ–ಉಪಾಧ್ಯಕ್ಷರ ಹುದ್ದೆಯ ಅವಧಿಯು 5 ವರ್ಷಗಳು ಹಾಗೂ ಅವರ ಸದಸ್ಯತ್ವ ನಿಂತು ಹೋಗುವರೆಗೂ. ಇದರಲ್ಲಿ ಯಾವುದು ಮೊದಲು ಅದು ಅವಧಿಯಾಗಿರುತ್ತದೆ.

### ಪ್ರಕರಣ–178: ಅಧ್ಯಕ್ಷ–ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಸಂಬಳ ಮತ್ತು ಭತ್ಯೆಗಳು

1) ಜಿಲ್ಲಾ ಪಂಚಾಯತ ಅಧ್ಯಕ್ಷ, ಉಪಾಧ್ಯಕ್ಷರು ಸರಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದ ವೇತನ ಮತ್ತು ಭತ್ಯೆಗಳನ್ನು ಪಡೆಯುತ್ತಾರೆ.
2) ಜಿಲ್ಲಾ ಪಂಚಾಯತಿ ಅಧ್ಯಕ್ಷರು ರಾಜ್ಯ ಸಚಿವರ ಸ್ಥಾನಮಾನ ಹೊಂದಿದ್ದಾರೆ.
3) ಅಧ್ಯಕ್ಷ ಉಪಾಧ್ಯಕ್ಷರನ್ನು ಹೊರತುಪಡಿಸಿ ಜಿ.ಪಂ.ಯ ಪ್ರತಿಯೊಬ್ಬ ಸದಸ್ಯನು ಗೊತ್ತುಪಡಿಸಿದ ಉಪವೇಶನ ಶುಲ್ಕ ಮತ್ತು ಇತರ ಭತ್ಯಗಳನ್ನು ಪಡೆಯಲು ಹಕ್ಕು ಹೊಂದಿದ್ದಾರೆ.

### ಪ್ರಕರಣ–179:
### ಅಧ್ಯಕ್ಷ–ಉಪಾಧ್ಯಕ್ಷರ ರಾಜೀನಾಮೆ ಮತ್ತು ತೆಗೆದು ಹಾಕುವುದು

1) ಜಿಲ್ಲಾ ಪಂಚಾಯತಿ ಅಧ್ಯಕ್ಷನು ತನ್ನ ರಾಜೀನಾಮೆಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಬೇಕು.
2) ಉಪಾಧ್ಯಕ್ಷರು–ಅಧ್ಯಕ್ಷರಿಗೆ ತಮ್ಮ ರಾಜೀನಾಮೆ ಸಲ್ಲಿಸಬೇಕು ಅಧ್ಯಕ್ಷರ ಗೈರು ಹಾಜರಿಯಲ್ಲಿ ರಾಜ್ಯಸರಕಾರಕ್ಕೆ ಸಲ್ಲಿಸಬಹುದು.
3) ರಾಜೀನಾಮೆ ಹಿಂಪಡೆಯಲು 15ದಿನಗಳ ಕಾಲಾವಕಾಶವಿರುತ್ತದೆ.
4) ಪ್ರತಿಯೊಬ್ಬ ಅಧ್ಯಕ್ಷ–ಉಪಾಧ್ಯಕ್ಷನು ತನ್ನ ಸದಸ್ಯ ಸ್ಥಾನವು ನಿಂತು ಹೋದಾಗ ತಮ್ಮ ಹುದ್ದೆಯನ್ನು ತೆರವು ಮಾಡತಕ್ಕದ್ದು.
5) ಜಿಲ್ಲಾ ಪಂಚಾಯತ್ ಅಧ್ಯಕ್ಷ–ಉಪಾಧ್ಯಕ್ಷರನ್ನು ಅವಿಶ್ವಾಸ ನಿರ್ಣಯದ ಮೂಲಕ ತೆಗೆದು ಹಾಕಬಹುದು.

**ಅವಿಶ್ವಾಸ ನಿರ್ಣಯದ ನಿಯಮಗಳು:**

1. ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ 30 ತಿಂಗಳಾಗಿರಬೇಕು.
2. ಅಧ್ಯಕ್ಷ–ಉಪಾಧ್ಯಕ್ಷರಿಗೆ 10ದಿನ ಮುಂಚಿತ ನೋಟಿಸು ನೀಡಬೇಕು.
3. ಅವಿಶ್ವಾಸ ನಿರ್ಣಯವನ್ನು ಒಟ್ಟು ಚುನಾಯಿತ ಸದಸ್ಯರ ಪೈಕಿ ಮೂರನೇ ಎರಡರಷ್ಟು (2/3) ಬಹುಮತದಿಂದ ಪಾಸಾಗಬೇಕು. ಆಗ ಅವರು ಅಧಿಕಾರ ಕಳೆದುಕೊಳ್ಳುತ್ತಾರೆ.
4. ಒಮ್ಮೆ ಅವಿಶ್ವಾಸ ನಿರ್ಣಯಕ್ಕೆ ಸೋಲಾದರೆ ಮುಂದಿನ 2 ವರ್ಷಗಳವರೆಗೆ ಮತ್ತು ಅವಿಶ್ವಾಸ ನಿರ್ಣಯ ಮಂಡಿಸುವಂತಿಲ್ಲ.
5. ಜಿಲ್ಲಾ ಪಂಚಾಯತಿ ಅಧ್ಯಕ್ಷ–ಉಪಾಧ್ಯಕ್ಷ ಕರ್ತವ್ಯ ಲೋಪ ಎಸಗಿದಾಗ ದುರ್ವರ್ತನೆಯ ಆಧಾರದ ಮೇಲೆ ಸರಕಾರವು ಅವರನ್ನು ತೆಗೆದು ಹಾಕಬಹುದು.
6. ನಂತರ ಅವರನ್ನು ಸದಸ್ಯತ್ವದಿಂದಲೂ ಸರಕಾರ ತೆಗೆದು ಹಾಕಬಹುದು.
7. ಅಧ್ಯಕ್ಷ–ಉಪಾಧ್ಯಕ್ಷ 2 ಹುದ್ದೆಗಳು ಖಾಲಿ ಇದ್ದಾಗ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸುತ್ತಾರೆ.

### ಪ್ರಕರಣ–180: ಜಿಲ್ಲಾ ಪಂಚಾಯತಿ ಸಭೆಗಳು

**1) ಸಾಮಾನ್ಯ ಸಭೆ:**

1. 2 ತಿಂಗಳಿಗೊಮ್ಮೆ ನಡೆಯಬೇಕು.
2. ಪ್ರತಿ ಸಭೆಯು ಜಿ.ಪಂ.ಕೇಂದ್ರಸ್ಥಾನದಲ್ಲಿ ನಡೆಯತಕ್ಕದ್ದು.
3. ಜಿ.ಪಂ.ಪ್ರಥಮ ಸಭೆಯನ್ನು ಕಮಿಷನರ್ ಕರೆಯತಕ್ಕದ್ದು ಮತ್ತು ಆ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.
4. ಸಾಮಾನ್ಯ ಸಭೆಗೆ 10ದಿನಗಳ ಮುಂಚಿತ ನೋಟಿಸು ನೀಡತಕ್ಕದ್ದು.

**2) ವಿಶೇಷ ಸಭೆ:**

* ಅಧ್ಯಕ್ಷನು ತಾನು ಸೂಕ್ತವೆಂದು ಯೋಚಿಸಿದಾಗ ಮತ್ತು ಒಟ್ಟು

downloaded from: www.kpscvaani.com

ಸದಸ್ಯರ 1/3 ರಷ್ಟು ಸದಸ್ಯರು ಲಿಖಿತ ಕೋರಿಕೆ ಸಲ್ಲಿಸಿದರೆ. 15ದಿನದೊಳಗೆ ವಿಶೇಷ ಸಭೆಯನ್ನು ಕರೆಯತಕ್ಕದ್ದು.

* ವಿಶೇಷ ಸಭೆಗೆ 7ದಿನ ಮುಂಚಿತ ನೋಟಿಸು ನೀಡಬೇಕು.

3) **ಸಭೆಗಳ ಅಧ್ಯಕ್ಷತೆ:** ಜಿ.ಪಂ.ಅಧ್ಯಕ್ಷ/ಉಪಾಧ್ಯಕ್ಷ/ಸದಸ್ಯರಲ್ಲಿ ಒಬ್ಬರು ವಹಿಸತಕ್ಕದ್ದು.

4) **ಸಭೆಯ ಕೋರಂ:** ಒಟ್ಟು ಸದಸ್ಯರ ಅರ್ಧದಷ್ಟು ಜಿ.ಪಂ.ಸಭೆಯಕೋರಂ ಆಗಿದೆ ಕೋರಂ ಇಲ್ಲದಿದ್ದರೆ 30ನಿಮಿಷ ಕಾಯತಕ್ಕದ್ದು ನಂತರವು ಇಲ್ಲದಿದ್ದರೆ ಸಭೆಯನ್ನು ಮುಂದೂಡತಕ್ಕದ್ದು.

5) **ಸಭಾನಿರ್ಣಯಗಳು:**

1. ಸದಸ್ಯರ ಬಹುಮತದ ಮೂಲಕ ತೀಮಾನಿಸತಕ್ಕದ್ದು.
2. ಸಮಾನ ಮತಗಳು ಬಂದಾಗ ಸಭಾಧ್ಯಕ್ಷರು ನಿರ್ಣಾಯಕ ಮತ ನೀಡಬಹುದು.
3. ಪ್ರತಿಯೊಂದು ಸಭೆಯ ವಿವರಣೆಯನ್ನು ನಡಾವಳಿ ಪುಸ್ತಕದಲ್ಲಿ ದಾಖಲಿಸಬೇಕು.
4. ನಡವಳಿಕೆ ಪುಸ್ತಕಗವು ಮುಖ್ಯಕಾರ್ಯನಿರ್ವಹಣಾ ಅಧಿಕಾರಿಯ ವಶದಲ್ಲಿರತಕ್ಕದ್ದು.
5. ನಡವಳಿಕೆ ಪುಸ್ತಕವನ್ನು ಯಾವುದೇ ಪರಿಸ್ಥಿತಿಯಲ್ಲಿ ಜಿಲ್ಲಾ ಪಂಚಾಯತಿ ಕಛೇರಿಯಿಂದ ಹೊರಗೆ ಕೊಂಡೊಯ್ಯುವಂತಿಲ್ಲ.
6. ಸಭೆಗಳಲ್ಲಿನ ಸಂಪೂರ್ಣ ವಿವರಣೆ ಒಳಗೊಂಡ ಒಂದು ಪ್ರತಿಯನ್ನು ಸಭೆ ನಡೆದ ದಿನಾಂಕದಿಂದ 10ದಿನದೊಳಗೆ ಸರಕಾರಕ್ಕೆ ಸಲ್ಲಿಸತಕ್ಕದ್ದು.
7. 3ದಿನದೊಳಗೆ ಜಿ.ಪಂ.ಯ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು.
8. ಅಧ್ಯಕ್ಷರಿಗೆ ಸಂಬಂಧಿಸಿದ ಅವಿಶ್ವಾಸ ನಿರ್ಣಯದ ಸಭೆಯಾದರೆ ಸಭೆಯ ಅಧ್ಯಕ್ಷತೆಯನ್ನು ಉಪಾಧ್ಯಕ್ಷರು ವಹಿಸತಕ್ಕದ್ದು ಉಪಾಧ್ಯಾಕ್ಷರಿಗೆ ಸಂಬಂಧಿಸಿದರೆ ಅಧ್ಯಕ್ಷರು ಅಧ್ಯಕ್ಷ-ಉಪಾಧ್ಯಕ್ಷ ಇಬ್ಬರಿಗೂ ಸಂಬಂಧಿಸಿದರೆ ಸದಸ್ಯರಲ್ಲಿ ಒಬ್ಬರು ವಹಿಸತಕ್ಕದ್ದು.

### ಪ್ರಕರಣ-181: ಅಡ್ಡ ಪ್ರಶ್ನೆ ಮತ್ತು ನಿರ್ಣಯಗಳು

ಜಿ.ಪಂ.ಯ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸದಸ್ಯರು ಅಧ್ಯಕ್ಷರಿಗೆ ಅಡ್ಡಪ್ರಶ್ನೆಗಳನ್ನು ಕೇಳಬಹುದು ಮತ್ತು ನಿರ್ಣಯಗಳನ್ನು ಮಂಡಿಸಬಹುದು.

### ಪ್ರಕರಣ-182: ಜಿಲ್ಲಾ ಪಂಚಾಯತಿ ಸಭೆಗಳಲ್ಲಿ ಸರಕಾರಿ ಅಧಿಕಾರಿಗಳ ಹಾಜರಾತಿಯನ್ನು ಅಗತ್ಯಪಡಿಸುವುದು

1) ಸರಕಾರವು ಅಧಿಸೂಚಿಸಬಹದಾದಂತೆ ಸರಕಾರದ / ಯಾವುದೇ ಸರಕಾರಿಸಮಿತಿಯ / ಕಂಪನಿಯ ನಿಗಮದ ಅಧಿಕಾರಿಗಳ ಹಾಜರಾತಿಯು ಜಿಲ್ಲಾಪಂಚಾಯತಿ ಸಭೆಯಲ್ಲಿ ಆಪೇಕ್ಷಣಿಯ ಎಂದುಕಂಡು ಬಂದಲ್ಲಿ ಅವರಿಗೆ ಮುಖ್ಯ ಕಾರ್ಯನಿವಾರ್ಹಕ ಅಧಿಕಾರಿಯು ಉದ್ದೇಶಿತ ಸಭೆಗೆ 15 ದಿನಗಳ ಮುಂಚೆ ಪತ್ರ ಬರೆದು ಸಭೆಗೆ ಹಾಜರಾಗುವಂತೆ ಮನವಿ ಮಾಡಕ್ಕದ್ದು.

### ಪ್ರಕರಣ-183: ವ್ಯವಹಾರಣೆಗಳ ವಿಧಿಮಾನ್ಯತೆ

* ಜಿ.ಪಂ.ಯ ಸಭೆಗಳಲ್ಲಿ ಅಥವಾ ಸ್ಥಾಯಿ ಸಮಿತಿಗಳ ಸಭೆಗಳಲ್ಲಿ ಯಾವುದೇ ನಿರ್ಣಯಗಳನ್ನು ಅಂಗೀಕರಿಸುವ ಸಮಯದಲ್ಲಿ ಸದಸ್ಯರು ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಮತವನ್ನು ನೀಡುತ್ತಾರೆ.
* ನಿರ್ಣಯದ ನಂತರ ಸದಸ್ಯರ ಸದಸ್ಯತ್ವ ನಿಂತು ಹೋದರೆ ತೆಗೆದುಕೊಂಡ ನಿರ್ಣಯವನ್ನು ಅಸಿಂಧು ಎಂದು ಭಾವಿಸಬಾರದು.
* ಬಹುಸಂಖ್ಯಾತ ಸದಸ್ಯರು ಭಾಗವಹಿಸಿ ತೆಗೆದುಕೊಂಡ ನಿರ್ಣಯಗಳಿಗೆ ವಿಧಿ ಮಾನ್ಯತೆ ನೀಡತಕ್ಕದ್ದು.

downloaded from: www.kpscvaani.com 

# ಅಧ್ಯಾಯ 11

# ಜಿ.ಪಂ.ಅಧ್ಯಕ್ಷ-ಉಪಾಧ್ಯಕ್ಷರ ಪ್ರಕಾರ್ಯಗಳು ಕರ್ತವ್ಯಗಳು ಮತ್ತು ಅಧಿಕಾರಗಳು

**ಪ್ರಕರಣ-184: ಜಿಲ್ಲಾ ಪಂಚಾಯತಿಯ ಪ್ರಕಾರ್ಯಗಳು**

1) ಜಿಲ್ಲಾ ಪಂಚಾಯತಿಯು 'ಅನುಸೂಚಿ-111'ರಲ್ಲಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು

2) ಜಿ.ಪಂ.ಯು ಅನುಸೂಚಿ-111 ರಲ್ಲಿನ ಪ್ರಕಾರ್ಯಗಳಲ್ಲದೆ ಈ ಕೆಳಗಿನ ವಿಷಯಗಳ ಕುರಿತು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದು.

* ಸರಕಾರದ ನಿಯಮಗಳಿಗನುಸಾರವಾಗಿ '5 ವರ್ಷದೊಳಗೆ' ಆರೋಗ್ಯ ಕೇಂದ್ರ ಮತ್ತು ಪ್ರಸೂತಿ ಕೇಂದ್ರಗಳನ್ನು ಸ್ಥಾಪಿಸುವುದು.
* ಕುಡಿಯುವ ನೀರಿನ ಬಾವಿಗಳಲ್ಲಿ ನೀರು (ಅಂತರ್ಜಲ) ಬತ್ತಿಹೋಗದಂತೆ ಕಾಪಾಡುವುದು.
* ಕಡಿಮೆ ಮಳೆಯಾದಾಗ ಕುಡಿಯುವ ನೀರಿನ ಬಾವಿಗಳ ಪಕ್ಕದಲ್ಲಿ ನೀರಾವರಿ ಕೊಳವೆ ಬಾವಿಗಳನ್ನು ಕೊರೆಯುವುದನ್ನು ತಡೆಗಟ್ಟವುದು.
* ಪ್ರತಿಯೊಂದು ತಾಲೂಕಿನಲ್ಲಿ ಸಾಮಾಜಿಕ ಅರಣ್ಯೋಧ್ಯಮದ ಅಭೀವೃದ್ದಿಗಾಗಿ ಯೋಜನೆಗಳನ್ನು ರೂಪಿಸುವುದು.

3) ಜಿ.ಪಂ.ಗೆ ಅಗತ್ಯವಾದ ಅಧಿಕಾರಿಗಳು, ಪ್ರಾಧಿಕಾರ,ಸಿಬ್ಬಂದಿಗಳು ಮತ್ತು ನಿದಿಗಳನ್ನು ರಾಜ್ಯಸರಕಾರವು ಒದಗಿಸಬೇಕು.

4) ಜಿ.ಪಂ.ಯು ತನ್ನ ಪ್ರದೇಶದ ಜನತೆಯ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಸರ್ವರಿಗೂ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದು ಅದರ ಕರ್ತವ್ಯವಾಗಿದೆ.

**ಪ್ರಕರಣ-185: ಪ್ರಕಾರ್ಯಗಳನ್ನು ವಹಿಸಿಕೊಡುವುದು**

1. ಸರಕಾರವು ತನ್ನ ಕಾರ್ಯಗಳನ್ನು / ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ವಹಿಸಿಕೊಟ್ಟ ಯಾವುದೇ ಕಾರ್ಯಗಳನ್ನು ಜಿ.ಪಂ.ಗೆ ವಹಿಸಿಕೊಡಬಹುದು.
2. ವಹಿಸಿಕೊಟ್ಟ ಕಾರ್ಯಗಳನ್ನು ಸರಕಾರವು ಅಧಿಸೂಚನೆಯ ಮೂಲಕ ಹಿಂದಕ್ಕೆ ಪಡೆಯಬಹುದು / ಮಾರ್ಪಾಡು ಮಾಡಬಹುದು.

**ಪ್ರಕರಣ-186: ಜಿ.ಪಂ.ಸ್ಥಾಯಿ ಸಮಿತಿಗಳು**

**ಜಿಲ್ಲಾ ಪಂಚಾಯತಿಯು ಈ ಕೆಳಗಿನ 5 ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ.**

1. ಸಾಮಾನ್ಯ ಸ್ಥಾಯಿ ಸಮಿತಿ-ಇದರ ಅಧ್ಯಕ್ಷ-ಜಿ.ಪಂ. ಉಪಾಧ್ಯಕ್ಷರಾಗಿರುತ್ತಾರೆ
2. ಹಣಕಾಸು ಲೆಕ್ಕಪರಿಶೋಧನೆ

ಮತ್ತು ಯೋಜನಾ ಸಮಿತಿ  ಇದರ ಅಧ್ಯಕ್ಷ-ಜಿ.ಪಂ.ಅಧ್ಯಕ್ಷರಾಗಿರುತ್ತಾರೆ.

3. ಸಾಮಾಜಿಕ ನ್ಯಾಯಸಮಿತಿ  ಸದಸ್ಯರ ಪೈಕಿ ಒಬ್ಬರು ಅಧ್ಯಕ್ಷರಾಗುತ್ತಾರೆ.
4. ಶಿಕ್ಷಣ ಮತ್ತು ಆರೋಗ್ಯ ಸಮಿತಿ - ಸದಸ್ಯರ ಪೈಕಿ ಒಬ್ಬರು ಅಧ್ಯಕ್ಷರಾಗುತ್ತಾರೆ.
5. ಕೃಷಿ ಮತ್ತು ಕೈಗಾರಿಕೆ ಸಮಿತಿ - ಸದಸ್ಯರ ಪೈಕಿ ಒಬ್ಬರು ಅಧ್ಯಕ್ಷರಾಗುತ್ತಾರೆ.

**ಪ್ರತಿಯೊಂದು ಸ್ಥಾಯಿ ಸಮಿತಿಯು ಅಧ್ಯಕ್ಷರು ಸೇರಿದಂತೆ 7 ಸದಸ್ಯರನ್ನು ಒಳಗೊಂಡಿರುತ್ತದೆ.**

1. ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಹಾಗೂ SC/ST ಇವುಗಳಲ್ಲಿ ಯಾವ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದಾರೋ ಅವರಲ್ಲಿ ಒಬ್ಬ ಸದಸ್ಯನನ್ನು ಒಳಗೊಂಡಿರಬೇಕು.
2. ಸ್ಥಾಯಿ ಸಮಿತಿ ಸದಸ್ಯರ ಅಧಿಕಾರಾವಧಿ 20 ತಿಂಗಳು (ಚುನಾಯಿಸಿದ ದಿನಾಂಕದಿಂದ) ಅಥವಾ ಆತನ ಸದಸ್ಯತ್ವ ನಿಂತು ಹೋಗುವವರೆಗೂ ಇದರಲ್ಲಿ ಯಾವುದು ಮೊದಲೋ ಅದು ಆಗಿದೆ.
3. ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ ಮತ್ತು ಉಳಿದ ಸ್ಥಾಯಿ ಸಮಿತಿಗಳಿಗಾಗಿ ಉಪ ಕಾರ್ಯದರ್ಶಿಗಳನ್ನು ನೇಮಿಸತಕ್ಕದ್ದು.

* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಎಲ್ಲಾ ಸ್ಥಾಯಿ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವರಾಗಿರುತ್ತಾರೆ.

**ಪ್ರಕರಣ-187: ಸ್ಥಾಯಿ ಸಮಿತಿಗಳ ಪ್ರಕಾರಗಳು**

1. ಸಾಮಾನ್ಯ ಸ್ಥಾಯಿ ಸಮಿತಿ: ಇದು ಜಿ.ಪಂ.ಯ ಸಾಮಾನ್ಯ ಕಾರ್ಯಗಳಾದ ಸಿಬ್ಬಂದಿ ಸಂಪರ್ಕ,ಕಟ್ಟಡ,ಗ್ರಾಮೀಣ ಗೃಹ ನಿರ್ಮಾಣ, ನೀರು ಸರಬರಾಜು, ಪ್ರಕೃತಿ ವಿಕೋಪಗಳಿಗೆ ಪರಿಹಾರ ನೀಡುವ ಕಾರ್ಯ ಮಾಡುತ್ತದೆ.
2. ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸಮಿತಿ: ಇದು ಜಿ.ಪಂ.ಯ ಹಣಕಾಸು, ಬಜೆಟ್ ರೂಪಿಸುವುದು, ಆದಾಯ ಹೆಚ್ಚಿಸುವುದಕ್ಕಾಗಿ ಪ್ರಸ್ತಾವನೆ, ಜಮಾ ಮತ್ತು ಖರ್ಚುಗಳ ಪರಿಶೀಲನೆ, ಯೋಜನೆಗಳಿಗೆ ತಗುಲುವ ವೆಚ್ಚಗಳನ್ನು ನಿಗದಿಪಡಿಸುವುದು.

**3. ಸಾಮಾಜಿಕ ನ್ಯಾಯ ಸಮಿತಿ:**

* SC, ST, OBC, ರವರ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಹಿತವನ್ನು ಕಾಪಾಡುವುದು.
* ಸಾಮಾಜಿಕ ಅನ್ಯಾಯ ಮತ್ತು ಶೋಷಣೆಯನ್ನು ತಡೆಗಟ್ಟುವುದು.
* ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡುವುದು

**4. ಶಿಕ್ಷಣ ಮತ್ತು ಆರೋಗ್ಯ ಸಮಿತಿ:**

* ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದು.
* ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ರಾಜ್ಯ ಮತ್ತು ರಾಷ್ಟ್ರೀಯ ಯೋಜನೆಗಳ ಚಾಕಟ್ಟಿನೊಳಗೆ ಜಿಲ್ಲೆಯಲ್ಲಿ ಶಿಕ್ಷಣ ಯೋಜನೆಯನ್ನು ಕೈಗೊಳ್ಳುವುದು.

 downloaded from: www.kpscvaani.com

* ಜಿ.ಪಂ.ಶೈಕ್ಷಣಿಕ ಚಟುವಟಿಕೆಗಳು ಸಮೀಕ್ಷೆ ಮತ್ತು ಮೌಲ್ಯ ನಿರ್ಣಯಮಾಡುವುದು.
* ವಯಸ್ಕರ ಶಿಕ್ಷಣ, ಸಾಕ್ಷರತೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಳ್ಳುವುದು.
* ಆರೋಗ್ಯ ಸೇವೆಗಳು, ಆಸ್ಪತ್ರೆಗಳು, ನೀರು ಸರಬರಾಜು, ಕುಟುಂಬ ಕಲ್ಯಾಣ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ಮಾಡುವುದು.

**5. ಕೃಷಿ ಮತ್ತು ಕೈಗಾರಿಕಾ ಸಮಿತಿ:**

1. ಕೃಷಿ ಉತ್ಪಾದನೆ, ಪಶುಸಂಗೋಪನೆ, ಸಹಕಾರ, ಭೂಮಿಯನ್ನು ಕೃಷಿ ಯೋಗ್ಯವಾಗಿ ಮಾಡುವುದು.
2. ಗೃಹ ಹಾಗೂ ಗುಡಿಕೈಗಾರಿಕೆಗಳಿಗೆ ಉತ್ತೇಜನ ನೀಡಬೇಕು.
3. ಜಿಲ್ಲಾ ಕೈಗಾರಿಕಾಭಿವೃದ್ಧಿಯನ್ನು ಉತ್ತೇಜಿಸುವುದು.

### ಪ್ರಕರಣ-188: ಸಮಿತಿಗಳ ಕಾರ್ಯವಿಧಾನ

1. ಜಿ.ಪಂ.ಯು ಸ್ಥಾಯಿಸಮಿತಿಗಳ ಕಾರ್ಯವಿಧಾನ ರೂಪಿಸುವುದು.
2. ಪ್ರತಿ ಸ್ಥಾಯಿಸಮಿತಿಯ ಅಧ್ಯಕ್ಷನು ತನ್ನ ಸಮಿತಿಗೆ ಸಂಬಂಧಿಸಿದ ಮಾಹಿತಿ ಅಥವಾ ವರದಿಯನ್ನು ಜಿ.ಪಂ.ಕಚೇರಿಯಿಂದ ಪಡೆಯಬೇಕು.
3. ಪ್ರತಿಯೊಂದು ಸ್ಥಾಯಿಸಮಿತಿಯು ತನಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಸಂಬಂಧಪಟ್ಟ ಸಭೆಗಳಿಗೆ ಹಾಜರಿರುವಂತೆ ನೋಡಿಕೊಳ್ಳಬೇಕು.

### ಪ್ರಕರಣ-189:
### ಅಧಿಕಾರಿಗಳ ಪ್ರತ್ಯಾಯೋಜನೆ (ವಹಿಸಿಕೊಡುವುದು)

1. ಜಿ.ಪಂ.ಯು ತನ್ನ ಯಾವುದೇ ಅಧಿಕಾರಗಳನ್ನು ಅಧಿಸೂಚನೆಯ ಮೂಲಕ "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" ಅಥವಾ ಇತರೆ ಅಧಿಕಾರಿಗಳಿಗೆ ವಹಿಸಿಕೊಡಬಹುದು.

### ಪ್ರಕರಣ-190: ರಸ್ತೆಗಳ ಮಾರ್ಗ ಪಲ್ಲಟ ಮಾಡುವ ಮುಂದುವರೆಸುವ ಅಥವಾ ಮುಚ್ಚುವ ಅಧಿಕಾರ

1. ಜಿ.ಪಂ.ಯ ನಿಯಂತ್ರಣಕ್ಕೆ ಮತ್ತು ಆಡಳಿತಕ್ಕೆ ಒಳಪಟ್ಟಿರುವ ಯಾವುದೇ ರಸ್ತೆಗಳನ್ನು ಬೇರೆ ಕಡೆ ತಿರುಗಿಸಬಹುದು. ಬಳಸುವುದನ್ನು ನಿಲ್ಲಿಸಬಹುದು ಅಥವಾ ಖಾಯಂ ಆಗಿ ಮುಚ್ಚಬಹುದು. ಈ ಕುರಿತು ಮೊದಲು ನೋಟಿಸನ್ನು ಪ್ರಕಟಿಸಬೇಕು.
2. ಒಟ್ಟಾರೆ, ಜನರಹಿತ ಕಾರ್ಯಗಳನ್ನು ಕೈಗೊಳ್ಳಬೇಕು.

### ಪ್ರಕರಣ-191:
### ಜಿಲ್ಲಾ ಪಂಚಾಯತಿಯ ಸಾಮಾನ್ಯ ಅಧಿಕಾರಗಳು

ಡಿಸೆಂಬರ್ 31 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುವ ಹೊಸ ಕಾಯ್ದೆಯು ಜಿಲ್ಲಾ ಪಂಚಾಯಿತಿಗಳು ನಿರ್ವಹಿಸಬೇಕಾದ ಕಾರ್ಯಗಳನ್ನು ಪಟ್ಟಿ ಮಾಡಿದೆ.

**ಅವುಗಳ ವಿವರ ಇಲ್ಲಿದೆ :**

1. ತನ್ನ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಎಲ್ಲಾ ನಿವಾಸಿಗಳ ಸುರಕ್ಷತೆ,
2. ಭದ್ರತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕಾಪಾಡುವುದಕ್ಕೆ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ನೆರವು ನೀಡುವುದು.
3. ಸಮುದಾಯ ಆರೋಗ್ಯಕೇಂದ್ರ ಮತ್ತು ಜಿಲ್ಲಾ ಆಸ್ಪತ್ರೆಗಳ ನಿರ್ವಹಣೆ. ಜಿಲ್ಲಾ ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ.ವಿಶೇಷ ಪ್ರವರ್ಗ ಮತ್ತು ಅಂಗವಿಕಲರ ಬಗ್ಗೆ ಕಾಳಜಿ ವಹಿಸುವುದು.
4. ಪ್ರಥಮದರ್ಜೆ, ಪದವಿಪೂರ್ವ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು, ಐಟಿಐಗಳು, ಆಶ್ರಮಗಳು, ಶಾಲೆಗಳು, ವಸತಿ ನಿಲಯಗಳು, ಅನಾಥ ಆಶ್ರಮಗಳು, ಯುವಜನತೆ ಮತ್ತು ಗ್ರಾಮೀಣ ಕುಶಲಕರ್ಮಿಗಳಿಗಾಗಿ ಸರ್ಕಾರಿ ಕೈಗಾರಿಕಾ, ತಾಂತ್ರಿಕ ಮತ್ತು ವೃತ್ತಿ ತರಬೇತಿ ಸಂಸ್ಥೆಗಳು ಹಾಗೂ ಶೈಕ್ಷಣಿಕ ಕೇಂದ್ರಗಳನ್ನು ನಿರ್ವಹಿಸುವುದು ಮತ್ತು ಅಂತರ್ಜಾಲ ಸೌಕರ್ಯಗಳುಳ್ಳ ಗ್ರಂಥಾಲಯಗಳ ಮೂಲಕ ಮಾಹಿತಿಯನ್ನು ಪಡೆಯಲು ಅವಕಾಶ ಕಲ್ಪಿಸುವುದು.
5. ಪ್ರವಾಸಿ ತಾಣಗಳ ಅಭಿವೃದ್ಧಿ ಮತ್ತು ಅವುಗಳನ್ನು ಬಲಪಡಿಸಲು ಗ್ರಾಮ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ನೆರವು ನೀಡುವುದು. ಖಾದಿ, ಗ್ರಾಮೋದ್ಯೋಗಗಳಿಗೆ ಉತ್ತೇಜನ ನೀಡುವುದು. ಆಹಾರ ದಾಸ್ತಾನು, ಸಂಸ್ಕರಣೆ ಹಾಗೂ ಮಾರುಕಟ್ಟೆ ಮಳಿಗೆಗಳನ್ನು ಸ್ಥಾಪಿಸುವುದು. ಸ್ವಯಂ ಉದ್ಯೋಗಗಳನ್ನು ಸೃಷ್ಟಿಸುವುದು. ಗ್ರಾಮೀಣ ಉದ್ಯಮ ಮತ್ತು ಸಹಕಾರ ಸಂಘ ಸಂಸ್ಥೆಗಳ ಮೂಲಕ ಬಡತನ ನಿವಾರಿಸುವುದು.
6. ಮಹಿಳೆಯರು ನಡೆಸುವ ಸಣ್ಣಪುಟ್ಟ ವ್ಯವಹಾರಗಳು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಉತ್ತೇಜಿಸಲು ತಾಲ್ಲೂಕು ಮಟ್ಟದಲ್ಲಿ ಮಹಿಳಾ ಸಹಕಾರಿ ಬ್ಯಾಂಕುಗಳು ಅಥವಾ ಮಹಿಳೆಯರಿಗಾಗಿ ಪ್ರತ್ಯೇಕ ಸಂಘಸಂಸ್ಥೆಗಳನ್ನು ಸ್ಥಾಪಿಸಿ, ನಿರ್ವಹಿಸಲು ತಾಲ್ಲೂಕು ಪಂಚಾಯಿತಿಗಳಿಗೆ ಉತ್ತೇಜನ ನೀಡುವುದು.
7. ಪ್ರದೇಶದ ಜೀವ ವೈವಿಧ್ಯ ಮತ್ತು ಜೀವಿ ಪರಿಸರ ಸಂರಕ್ಷಿಸಲು ಮತ್ತು ಪೋಷಿಸಲು ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ಬೆಂಬಲ ನೀಡುವುದು. ಸಾಮಾಜಿಕ ಅರಣ್ಯಗಳ ನಿರ್ಮಾಣ, ಹಳ್ಳಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪನೆ, ಕುಡಿಯುವ ನೀರಿನ ಬಾವಿಗಳ ಆಸುಪಾಸಿನಲ್ಲಿ ಕೊಳವೆ ಬಾವಿ ಕೊರೆಯುವುದನ್ನು ತಡೆಗಟ್ಟುವುದು.
8. ಗ್ರಾಮೀಣ ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳು, ಉತ್ಪತ್ತಿ ಮತ್ತು ಜಾನುವಾರುಗಳ ವ್ಯಾಪಾರವನ್ನು ಉತ್ತೇಜಿಸಲು ಜಿಲ್ಲಾ ಮಟ್ಟದಲ್ಲಿ ಮೇಳ, ಪ್ರದರ್ಶನಗಳನ್ನು ಏರ್ಪಡಿಸುವುದು.
9. ಕುಡಿಯುವ ನೀರು, ಶೌಚಾಲಯಗಳ ಮತ್ತು ವಿದ್ಯುತ್ ಪೂರೈಕೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳನ್ನು ಸದೃಢಗೊಳಿಸುವುದು. ಕುಡಿಯುವ ನೀರಿನ ಯೋಜನೆಗಳಿಗೆ ತಾಂತ್ರಿಕ ನೆರವು ಮತ್ತು ಮೂಲ ಸೌಕರ್ಯ ಒದಗಿಸುವುದು.
10. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ಉಪಯೋಗಕ್ಕಾಗಿ ನಿರ್ಮಿಸುವ ಮನೆ, ಶಾಲೆಗಳ ನಿರ್ಮಾಣ ಹಾಗೂ ಎಲ್ಲ ಲೋಕೋಪಯೋಗಿ ಕಾಮಗಾರಿಗಳನ್ನು ನಿರ್ವಹಿಸಲು ಕಡಿಮೆ ವೆಚ್ಚದ, ಸ್ವದೇಶಿ, ಕಾರ್ಯಸಾಧ್ಯವಾದ ಮತ್ತು ಸುಸ್ಥಿರವಾದ ತಾಂತ್ರಿಕತೆಗಳನ್ನು ಗುರುತಿಸುವುದು, ದಾಖಲಿಸುವುದು ಮತ್ತು ಅವುಗಳ ಕುರಿತಾಗಿ ಪ್ರಚಾರ ಮಾಡುವುದು. ರಸ್ತೆ, ಸೇತುವೆ, ಅಡಿಗಾಲುವೆಗಳು, ಚರಂಡಿಗಳ ನಿರ್ಮಾಣದ ಬಗ್ಗೆ ಯೋಜನೆ ರೂಪಿಸಿ ನಿರ್ಮಿಸುವುದು ಮತ್ತು ನಿರ್ವಹಿಸುವುದು. ಜಿಲ್ಲಾ ಮಟ್ಟದಲ್ಲಿ ದೋಣಿ ದಾಟುವ ಸ್ಥಳ ಮತ್ತು ಜಲ ಮಾರ್ಗಗಳನ್ನು ಗುರುತಿಸುವುದು.
11. ಎಲ್ಲಾ ತಾಲ್ಲೂಕುಗಳಲ್ಲಿ ಮತ್ತು ಗ್ರಾಮಗಳಲ್ಲಿ ಸಾಂಕ್ರಾಮಿಕ ರೋಗ ಮತ್ತು ವಿಪತ್ತು ನಿರ್ವಹಣಾ ವ್ಯವಸ್ಥೆ ಮತ್ತು ಸಿದ್ಧತೆಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನೆರವು

downloaded from: www.kpscvaani.com


ನೀಡುವುದು. ವಿಪತ್ತು ನಿರ್ವಹಣಾ ನೀತಿಗಳನ್ನು ರೂಪಿಸುವುದು.

12. ಸಮಾಜದ ಎಲ್ಲ ವರ್ಗಗಳ ಪಾರಂಪರಿಕ ಸಾಂಸ್ಕೃತಿಕ ಕಲಾ ಪ್ರಕಾರ, ಕ್ರೀಡೆ, ಕರ ಕುಶಲ ಕಲೆ, ಆಚರಣೆಗಳನ್ನು ಜಿಲ್ಲಾ ಮಟ್ಟದಲ್ಲಿ ಉತ್ತೇಜಿಸುವುದು.
13. ಸಮಾಜದ ಎಲ್ಲ ವರ್ಗಗಳ ಸಾಮಾಜಿಕ–ಆರ್ಥಿಕ ದತ್ತಾಂಶಗಳನ್ನು ದಾಖಲಿಸುವುದು,ಮೇಲ್ವಿಚಾರಣೆ ನಡೆಸುವುದು.
14. ಜಿಲ್ಲಾ ವ್ಯಾಪ್ತಿಯಲ್ಲಿ ಶಿಕ್ಷಣ ಅಥವಾ ವೈದ್ಯಕೀಯ ಪರಿಹಾರ ನೀಡುವುದಕ್ಕೆ ಮಾಡಿರುವ ವೆಚ್ಚವನ್ನು ಭರಿಸುವುದು.
15. ಜನರ ಆರೋಗ್ಯ, ಸುರಕ್ಷತೆ, ಶಿಕ್ಷಣ, ಸವಲತ್ತು, ಅನುಕೂಲ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಿತಾಸಕ್ತಿಗಳನ್ನು ಉತ್ತೇಜಿಸುವಂತಹ ಯಾವುದೇ ಕಾಮಗಾರಿ ಕೈಗೊಳ್ಳಲು ಅವಕಾಶ ನೀಡುವುದು.
16. ನಿವಾಸಿಗಳಿಗೆ ಕಿರುಕುಳ ಉಂಟು ಮಾಡುವ ಅಥವಾ ಅಪಾಯವನ್ನುಂಟು ಮಾಡುವ ಅಕ್ರಮ ಗಣಿಗಾರಿಕೆ, ಕೊಳವೆಬಾವಿಗಳನ್ನು ಕೊರೆಯುವುದು,ತೆರೆದ ಬಾವಿಗಳು ಅಥವಾ ಕೆರೆಗಳನ್ನು ತೋಡುವ ಕೃತ್ಯಗಳ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡುವುದು.
17. ಇದರ ಹೊರತಾಗಿ ರಾಜ್ಯ ಸರ್ಕಾರದ ಎಲ್ಲ ಯೋಜನೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣೆ,ಸಮನ್ವಯ ಮಾಡುವ ಹೊಣೆಗಾರಿಕೆಯೂ ಇದೆ.

### ಪ್ರಕರಣ–192: ನಿರ್ವಹಿಸಲಾಗದ ಸಂಚಾರ ನಿಯಂತ್ರಣ

1. 1960 ರ ಸಂಚಾರ ನಿಯಂತ್ರಣ ಅಧಿನಿಯಮಕ್ಕೆ ಒಳಪಟ್ಟು ಜಿ.ಪ.ಯು ತನ್ನ ಪ್ರದೇಶದೊಳಗಿನ ಯಾವುದೇ ರಸ್ತೆಗಳ ಮೇಲೆ ಅನಧಿಕೃತ ವಾಹನಗಳ ಸಂಚಾರವನ್ನು ನಿಯಂತ್ರಣ ಮಾಡಬಹುದು.

### ಪ್ರಕರಣ–193: ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು

1. ಜಿ.ಪಂ.ಅಧ್ಯಕ್ಷರು ಜಿ.ಪಂ.ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ.
2. ಜಿ.ಪಂ. ಸಭೆಗಳನ್ನು ಕರೆಯುವುದು ಮತ್ತು ಸಭೆಗಳ ಅಧ್ಯಕ್ಷತೆ ವಹಿಸುವುದು.
3. ಜಿ.ಪಂ.ಅಧಿಕಾರಿಗಳನ್ನು ಮತ್ತು ಜಿ.ಪಂ. ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವುದು.
4. ಜಿ.ಪಂ.ಸಿಬ್ಬಂದಿ ಮತ್ತು ಸದಸ್ಯರ ನಡುವೆ ಸಂಯೋಜಕನಾಗಿ ಕೆಲಸ ಮಾಡುವುದು.
5. ಸಭೆಯಲ್ಲಿ ಸಮಾನ ಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುವುದು.
6. ಜಿ..ಪಂ.ಯ ಆಡಳಿತ ಮತ್ತು ಹಣಕಾಸು ವಿಷಯಗಳ ಮೇಲ್ವಿಚಾರಣೆ ಹಾಗು ನಿಯಂತ್ರಣ ಮಾಡುವುದು.
7. ಜಿಲ್ಲೆಯಲ್ಲಿ ನೈಸರ್ಗಿಕ ವಿಕೋಪಗಳು ಉಂಟಾದಾಗ ಪರಿಹಾರಕ್ಕಾಗಿ ಒಂದು ವರ್ಷದಲ್ಲಿ ಒಟ್ಟು 5 ಲಕ್ಷ ರೂ.ಗಳವರೆಗೆ ಮಂಜೂರು ಮಾಡುವ ಅಧಿಕಾರ ಅಧ್ಯಕ್ಷರು ಹೊಂದಿದ್ದಾರೆ.

### ಪ್ರಕರಣ–194:
### ಉಪಾಧ್ಯಕ್ಷನ ಅಧಿಕಾರಿಗಳು ಮತ್ತು ಕರ್ತವ್ಯಗಳು

1. ಅಧ್ಯಕ್ಷನು ಗೈರುಹಾಜರಾಗಿದ್ದಾಗ ಅಥವಾ ಅಧ್ಯಕ್ಷ ಹುದ್ದೆಯು ಖಾಲಿಯಿದ್ದಾಗ ಉಪಾಧ್ಯಕ್ಷನು ಅಧ್ಯಕ್ಷರ ಅಧಿಕಾರಗಳನ್ನು ಚಲಾಯಿಸತ್ತಕ್ಕದ್ದು
2. ಅಧ್ಯಕ್ಷನು ವಿಶೇಷ ಸಭೆಯನ್ನು ಕರೆಯಲು ವಿಫಲವಾದರೆ ಉಪಾಧ್ಯಕ್ಷನು ವಿಶೇಷ ಸಭೆಯನ್ನು ಕರೆಯಬಹುದು
3. ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷ ಸ್ಥಾನ ವಹಿಸುವುದು

### ಪ್ರಕರಣ–195: ಕರಾರುಗಳನ್ನು ಮಾಡಿಕೊಳ್ಳುವ ವಿಧಾನ

1. ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಜಾರಿಯಲ್ಲಿರುವ ನಿಯಾಮಾವಳಿಗಳಿಗೆ ಒಳಪಟ್ಟ ಜಿ.ಪಂ ಪರವಾಗಿ ಯಾವುದೇ ಕರಾರು ಅಥವಾ ಒಪ್ಪಂದಗಳನ್ನು ಮಾಡಿಕೊಳ್ಳಬಹುದು
2. ಜಿ.ಪಂ ಯ ಕರಾರು ಅಥವಾ ಒಪ್ಪಂದಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಉಪಬಂಧಗಳ ಅನುಸಾರ ಇರತಕ್ಕದ್ದು

downloaded from: www.kpscvaani.com

# ಅಧ್ಯಾಯ 12

# ಜಿಲ್ಲಾ ಪಂಚಾಯಿತಿ ಸಿಬ್ಬಂದಿ

### ಪ್ರಕರಣ-196:

### ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಇತರ ಸಿಬ್ಬಂದಿ

1. ಜಿ.ಪಂ.ಗೆ ಸರಕಾರವು ನೇಮಕ ಮಾಡುವ ಅಧಿಕಾರಿಗಳು ಅಥವಾ ಇತರ ನೌಕರರು ಇರತಕ್ಕದ್ದು
 * ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿಇಒ ಜಿಲ್ಲಾಧಿಕಾರಿಗೆ ಸರಿಸಮಾನ ಹುದ್ದೆ
 * ಮುಖ್ಯ ಲೆಕ್ಕಾಧಿಕಾರಿ
 * ಯೋಜನಾ ಅಧಿಕಾರಿ
 * ಒಬ್ಬರು ಅಥವಾ ಹೆಚ್ಚು ಉಪಕಾರ್ಯದರ್ಶಿಗಳು
 * ಇತರ ಸಿಬ್ಬಂದಿಗಳು
2. ಸರಕಾರವು ಯಾವುದೇ ಅಧಿಕಾರಿಯನ್ನು ಜಿಲ್ಲೆಯೊಳಗೆ ಅಥವಾ ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗಾವಣೆ ಮಾಡುವ ಅಧಿಕಾರ ಹೊಂದಿದೆ.

### ಪ್ರಕರಣ-197

### ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಇತರೆ ಅಧಿಕಾರಿಗಳ ಅಧಿಕಾರಗಳು, ಕಾರ್ಯಗಳು ಮತ್ತು ಕರ್ತವ್ಯಗಳು

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅಧಿಕಾರಗಳು:**

1. ಕಾನೂನು ಪ್ರಕಾರ ವಹಿಸಿದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು
2. ಜಿಲ್ಲಾ ಪಂಚಾಯತಿ ನೌಕರರ ಮೇಲ್ವಿಚಾರಣೆ ಅಥವಾ ನಿಯಂತ್ರಣ
3. ಜಿ.ಪಂ. ಕಾಮಗಾರಿಗಳ ಮೇಲ್ವಿಚಾರಣೆ ಅಥವಾ ನಿಯಂತ್ರಣ
4. ಜಿ.ಪಂ. ನಿಧಿಯಿಂದ ಹಣ ತೆಗೆಯುವದು ಅಥವಾ ಬಟವಾಡೆ ಮಾಡುವುದು
5. ಜಿ.ಪಂ. ಸಭೆ ಮತ್ತು ಸಮಿತಿಗೆ ಸಂಬಂಧ ಪಟ್ಟ ದಾಖಲೆಗಳನ್ನು ಹೊಂದಿರತಕ್ಕದ್ದು
6. ಜಿ.ಪಂ. ಪ್ರತಿಯೊಂದು ಸಭೆಯಲ್ಲಿ ಹಾಜರಾಗುವುದು ಚರ್ಚೆಯಲ್ಲಿ ಭಾಗವಹಿಸಬಹುದು ಆದರೆ ನಿರ್ಣಯ ಮಂಡಿಸುವಂತಿಲ್ಲ ಅಥವಾ ಮತ ಹಾಕುವಂತಿಲ್ಲ
7. ಜಿ.ಪಂ. ಪರವಾಗಿ ಒಪ್ಪಂದಗಳು ಅಥವಾ ಕರಾರುಗಳನ್ನು ನಿರ್ವಹಿಸುವ ಅಧಿಕಾರ ಹೊಂದಿದ್ದಾರೆ.

**ಮುಖ್ಯ ಲೆಕ್ಕಾಧಿಕಾರಿಯ ಕಾರ್ಯಗಳು:**

1. ಹಣಕಾಸಿನ ವಿಷಯಕ್ಕೆ ಸಂಬಂಧ ಪಟ್ಟಂತೆ ಜಿ.ಪಂಗೆ ಸಲಹೆ ನೀಡುವುದು
2. ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸುವುದು
3. ಬಜೆಟನ್ನು ಸಿದ್ಧಪಡಿಸುವುದು
4. ಉಪಕಾರ್ಯದರ್ಶಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಹಾಯಕನಾಗಿ ಕಾರ್ಯನಿರ್ವಹಿಸುವರು
5. ಜಿ.ಪಂ.ಯು ದ್ವಿಮಾನ ಪದ್ದತಿಯಲ್ಲಿ ಲೆಕ್ಕಪತ್ರಗಳನ್ನು ಇಟ್ಟುಕೊಳ್ಳವುದು
6. ಜಿ.ಪಂ.ಯ ಮುಂಗಡ ಪತ್ರವನ್ನು ಫೆಬ್ರುವರಿ-1 ಮಾರ್ಚ-10ನೇ ದಿನಾಂಕದೊಳಗೆ ಜಿ.ಪಂ. ಮುಂದೆ ಮಂಡಿಸಬೇಕು

### ಪ್ರಕರಣ-198: ದಾಖಲೆ ಇತ್ಯಾದಿಗಳನ್ನು ಕೋರಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು

1. ಗ್ರಾ.ಪಂ. ಅಥವಾ ತಾ.ಪಂ. ಅಥವಾ ಜಿ.ಪಂ.ಗೆ ಸಂಬಂಧಿಸಿದೆ ಹಣ ಮತ್ತು ಲೆಕ್ಕಪತ್ರಗಳ ದಾಖಲೇಗಳನ್ನು ಹೊಂದಿರುವ ವ್ಯಕ್ತಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಕೋರಿದ್ದರೆ ಅವುಗಳನ್ನು ಒಪ್ಪಿಸತಕ್ಕದ್ದು.

downloaded from: www.kpscvaani.com


# ಅಧ್ಯಾಯ 13

# ತೆರಿಗೆಗಳು ಮತ್ತು ಫೀಜುಗಳು

## ಪ್ರಕರಣ–199:

## ಗ್ರಾ.ಪಂ.ಗಳು ತೆರಿಗೆ, ದರ, ಇತ್ಯಾದಿಗಳನ್ನು ವಿಧಿಸುವುದು

ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿ ಪ್ರದೇಶದಲ್ಲಿ 4ನೇ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸುವ ಗರಿಷ್ಟ ದರವನ್ನು ಮೀರದಂತೆ ತೆರಿಗೆಯನ್ನು ವಿಧಿಸುವ ಅಧಿಕಾರ ಹೊಂದಿದೆ.

**ಗ್ರಾಮ ಪಂಚಾಯತಿಯು ವಿಧಿಸುವ ಪ್ರಮುಖ ತೆರಿಗೆಗಳು**

**ನಮೂನೆ–4**

- ಕಟ್ಟಡ ಮತ್ತು ಭೂಮಿ ಮೇಲೆ ತೆರಿಗೆ
- ಜಾಹೀರಾತುಗಳ ಮೇಲಿನ ತೆರಿಗೆ
- ಬಸ್ಸು, ಟ್ಯಾಕ್ಸಿ ಮತ್ತು ಆಟೊ ನಿಲ್ದಾಣಗಳ ಮೇಲಿನ ತೆರಿಗೆ
- ಚಲನ ಚಿತ್ರಮಂದಿರ ಹೊರತು ಪಡಿಸಿ ಇತರ ಮನರಂಜನಾ ತೆರಿಗೆ
- ಮೋಟಾರು ವಾಹನ ಹೊರೆತು ಪಡಿಸಿ ಇತರ ವಾಹನಗಳ ಮೇಲಿನ ತೆರಿಗೆ
- ಇತರ ಎಲ್ಲಾ ರೀತಿಯ ತೆರಿಗೆಗಳು
- ಕುಡಿಯುವ ನೀರು ಸರಬರಾಜು ತೆರಿಗೆ
- ಹುಲ್ಲುಗಾವಲು ಮೇಲಿನ ತೆರಿಗೆ
- ಮಾರುಕಟ್ಟೆ ಮತ್ತು ಜಾನುವಾರು ಮೇಲಿನ ಶುಲ್ಕ

## ಪ್ರಕರಣ–199.ಎ–ತೆರಿಗೆಗಳು ಮತ್ತು ದರ ಪರಿಷ್ಕರಣೆ

* 199 ನೇ ಪ್ರಕರಣದಲ್ಲಿರುವ ತೆರಿಗೆಗಳನ್ನು 2 ವರ್ಷಕ್ಕೆ ಒಮ್ಮೆ ಪರಿಷ್ಕರಣೆ ಮಾಡಬೇಕು
* ಅನುಸೂಚಿ 4 ರಲ್ಲಿರುವ ತೆರಿಗೆಗಳನ್ನು ವರ್ಷಕ್ಕೊಮ್ಮೆ ಪರಿಷ್ಕರಬೇಕು.

## ಪ್ರಕರಣ–200:

## ತೆರಿಗೆಗಳು ಮತ್ತು ಇತರ ಬಾಕಿಗಳ ವಸೂಲಿ

**ತೆರಿಗೆ ವಸೂಲಾತಿಗೆ ಅನುಸರಿಸಬೇಕಾದ ಕ್ರಮಗಳು**

- ಶೇ 80 ಕ್ಕಿಂತ ತೆರಿಗೆ ವಸೂಲಾಗಿದ್ದರೆ ಆ ಕುರಿತು ತನಿಖೆ ಮಾಸಬೇಕು.
- ತರಿಗೆ ವಸೂಲಿ ಮಾಡುವ ಕುರಿತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಕ್ರಮ ಕೈಗೊಳ್ಳಬೇಕು.
- ತೆರಿಗೆ ವಸೂಲಾಗದಿದ್ದರೆ,ನಿಯಮ–30ರ ಪ್ರಕಾರ ನೋಟಿಸ್ ನೀಡಬೇಕು.
- 15 ದಿನದೊಳಗೆ ತೆರಿಗೆ ಪಾವತಿಸದಿದ್ದರೆ ನಿಯಮ 31 ನಮೂನೆ–2 ರಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಎಚ್ಚರಿಕೆ ನೊಟಿಸ್ ಕಳುಹಿಸಬೇಕು.
- ಪ್ರತಿಯೊಂದು ಎಚ್ಚರಿಕೆಯ ನೋಟಿಸ್‌ಗೆ 1 ರೂಪಾಯಿ ಶುಲ್ಕ ನಿಗದಿ ಮಾಡಬೇಕು.
- ಎಚ್ಚರಿಕೆ ನೋಟಿಸ್ ನೀಡಿದ 30 ದಿನದೊಳಗೆ ತೆರಿಗೆ ಪಾವತಿಸದಿದ್ದರೆ ಅಧ್ಯಕ್ಷರ ಸಹಿಯೊಂದಿಗೆ ಜಪ್ತಿ ವಾರಂಟ್ ಹೊರಡಿಸಬೇಕು.
- ಜಪ್ತಿ ಮಾಡುವಾಗ ಸಿವಿಲ್ ಪ್ರಕ್ರಿಯೆ ಸಂಹಿತೆ 1908 ಸ್ವತ್ತನ್ನು ಜಪ್ತಿ ಮಾಡತಕ್ಕದ್ದು.
- ಕಾರ್ಯದರ್ಶಿಯು ಸ್ವತಃ ವಾರಂಟ್ ಜಾರಿ ಮಾಡಬೇಕು. ನಮೂನೆ–33 ರಲ್ಲಿ ವಿವರಣೆ ನಿಡಬೇಕು
- ಜಪ್ತಿ ಮಾಡಿದ 7 ದಿನಗಳ ಒಳಗಾಗಿ ಹಣ ಸಂದಾಯ ಮಾಡದಿದ್ದರೆ ಸ್ವತ್ತುಗಳನ್ನು ಹರಾಜು ಮಾಡಬೇಕು.
- ಜಪ್ತಿ ಮತ್ತು ನಿರ್ವಹಣೆಗೆ ತಗಲುವ ಮೊತ್ತವನ್ನು ನಿಯಮ–37 ಮತ್ತು 38 ರಲ್ಲಿ ನಿದಿಷ್ಟ ಪಡಿಸಬೇಕು.
- ತೆರಿಗೆದಾರನ ಬಳಿಯಲ್ಲಿ ಬಾಕಿ ಮೊತ್ತವನ್ನು ಆಸ್ತಿ ಇರದಿದ್ದರೆ ಅವನನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬೇಕು.
- ತೆರಿಗೆಗಳಿಗೆ ಸಂಬಂಧಪಟ್ಟಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಮಾಡಿಕೊಳ್ಳಬೇಕು.

## ಪ್ರಕರಣ–201:

## ತೆರಿಗೆ ನಿರ್ಧಾರಣೆ ಮುಂತಾದವುಗಳ ವಿರುದ್ಧ ಆಪೀಲು

ತೆರಿಗೆ ಫೀಜುಗಳನ್ನು ಕಟ್ಟುವ ವ್ಯಕ್ತಿಯು ತನ್ನ ಆಫಿಲನ್ನು ಗೊತ್ತುಪಡಿಸಿದ ಪ್ರಾಧಿಕಾರಕ್ಕೆ ಸಲ್ಲಿಸಬಹುದು. ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರುತ್ತದೆ.

## ಪ್ರಕರಣ–202: ಕಾರ್ಖಾನೆ ಪ್ರದೇಶಗಳಲ್ಲಿ ತೆರಿಗೆಗಳ ಬಗ್ಗೆ ರಾಜಿ ಮಾಡಿಕೊಳ್ಳುವುದು

* ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಾಪಿಸಲ್ಪಟ್ಟ ಯಾವುದೇ ಕೈಗಾರಿಕೆ ಕಾರ್ಖಾನೆಗಳ ಮಾಲೀಕರು ಗ್ರಾಮ ಪಂಚಾಯತಿ ಯೊಂದಿಗೆ ಒಪ್ಪಂದ ಮಾಡಿಕೊಂಡು ನಿಗದಿತ ಪ್ರಮಾಣದ ತೆರಿಗೆಯನ್ನು ಸಂದಾಯ ಮಾಡಬಹುದಾಗಿದೆ.
* ಒಪ್ಪಂದ ಏರ್ಪಡದಿದ್ದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ತಿಳಿಸಬೇಕು ಅವರು ಇಬ್ಬರಿಗೂ ಅಹವಾಲು ಹೇಳಿಕೊಳ್ಳಲು ಅವಕಾಶ ಕಲ್ಪಿಸಿ 3 ತಿಂಗಳೊಳಗೆ ಇತ್ಯರ್ಥ ಪಡಿಸತಕ್ಕದ್ದು.
* ವಿವಾದ ಗ್ರಸ್ಥ ತೆರಿಗೆಯ ಶೇ–50% ನ್ನು ಗ್ರಾಮ ಪಂಚಾಯತಿಗೆ ಕಡ್ಡಾಯವಾಗಿ ಕಟ್ಟಿದ ನಂತರ ಇತ್ಯರ್ಥಗೊಳಿಸಬೇಕು.

## ಪ್ರಕರಣ–203: ಸಂಗ್ರಹಣೆಗಾಗಿ ಏಜೆನ್ಸಿ

ಗ್ರಾಮ ಪಂಚಾಯತಿಯು ತನಗೆ ಬರಬೇಕಾದ ತೆರಿಗೆ, ಫೀಜುಗಳನ್ನು ಗ್ರಾಮ ಪಂಚಾಯತಿಯು ನೇಮಕ ಮಾಡಿದ ಏಜೆನ್ಸಿ ಮೂಲಕ ಸಂಗ್ರಹಿಸಬಹುದು.

 downloaded from: www.kpscvaani.com

# ಅಧ್ಯಾಯ 14 ಸರಕಾರದಿಂದ ಉಪಕರಗಳು ಮುಂತಾದವುಗಳನ್ನು ವಿಧಿಸುವುದು ಮತ್ತು ಆರ್ಥಿಕ ನೆರವು ನೀಡುವುದು

### ಪ್ರಕರಣ-204: ಸರಕಾರವು ಸ್ಥಳೀಯ ಉಪಕರ ಮುಂತಾದವುಗಳನ್ನು ವಿಧಿಸುವುದು

ಸರಕಾರವು ಭೂ ಕಂದಾಯಕ್ಕೆ ಸಮನಾದ ದರದಲ್ಲಿ ಸ್ಥಳೀಯ ಉಪಕರಗಳನ್ನು ವಿಧಿಸಬಹುದು. ಒಂದು ಪಂಚಾಯತಿ ಪ್ರದೇಶದಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತವನ್ನು ಆ ಗ್ರಾಮ ಪಂಚಾಯತಿಗೆ ವರ್ಗಾವಣೆ ಮಾಡತಕ್ಕದ್ದು.

### ಪ್ರಕರಣ-205: ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲೆ ಶುಲ್ಕ

ಸರಕಾರವು ತಾ.ಪಂ.ಪ್ರದೇಶದ ವ್ಯಾಪ್ತಿಯೊಳಗಿರುವ ಎಲ್ಲಾ ಸ್ಥಿರ ಸ್ವತ್ತುಗಳ ಮಾರಾಟ, ದಾವೆ, ಅಡಮಾನ, ವಿನಿಮಯಗಳಿಗೆ ಕರ್ನಾಟಕ ಸ್ಟಾಂಪ್ ಅಧಿನಿಯಮ-1957ರಲ್ಲಿ ವಿಧಿಸಲಾದ ಸ್ಟಾಂಪ ಶುಲ್ಕದ ಜೊತೆಗೆ ಅವುಗಳ ಮಾರುಕಟ್ಟೆ ಮೌಲ್ಯದ ಶೇ.3ರಷ್ಟು ಮೀರದ ಹೆಚ್ಚುವರಿ ಸ್ಟಾಂಪ್ ಶುಲ್ಕಗಳನ್ನು ವಿಧಿಸಬಹುದು.

### ಪ್ರಕರಣ-206: ಗ್ರಾಮ ಪಂಚಾಯತಿಗಳ ಅನುದಾನ

* ಸರಕಾರವು ಪ್ರತಿ ವರ್ಷ ಗ್ರಾಮ ಪಂಚಾಯತಿಗೆ 5 ಲಕ್ಷ ಕಡಿಮೆ ಇಲ್ಲದ ಅನುದಾನ ನೀಡತಕ್ಕದ್ದು. ಈ ಅನುದಾನವನ್ನು ಕುಡಿಯುವ ನೀರು ಸರಬರಾಜು ಯೋಜನೆಗಳು. ವಿದ್ಯುತ್‌ಬಿಲ್ಲ್ ಭರಿಸಲು, ನೈರ್ಮಲ್ಯ ವ್ಯವಸ್ಥೆ ನಿರ್ವಹಣೆ ಮತ್ತು ಇತರೆ ಕಲ್ಯಾಣ ಕಾರ್ಯಕ್ರಮಗಳಿಗೆ ಉಪಯೋಗಿಸಬಹುದು.
* ರಾಜ್ಯ ಹಣಕಾಸು ಆಯೋಗ ನಿರ್ಧರಿಸಬಹುದಾದಂತೆ ಪಂಚಾಯತಿಗಳಿಗೆ ಅನುದಾನಗಳ ಶೇಕಡವಾರು ಹಂಚಿಕೆ ಮಾಡತಕ್ಕದ್ದು. ಅದರಲ್ಲಿ ಶೇ.30ರಷ್ಟು ಮುಕ್ತ ಅನುದಾನಗಳಾಗಿರಬೇಕು.
* ವಿಶೇಷ ಘಟಕ ಯೋಜನೆ & ಬುಡಕಟ್ಟುಗಳ ಉಪಯೋಜನೆಗಳ ಅನುದಾನಗಳ ಹಂಚಿಕೆಯ ವಿಧಾನವು ಪಂಚಾಯತ್ ಪ್ರದೇಶದಲ್ಲಿನ SC/ST ಜನಗಣತಿಯ ಆಧಾರದಲ್ಲಿರತಕ್ಕದ್ದು.

### ಪ್ರಕರಣ-208 ವಿವೇಚನಾತ್ಮಕ ಅನುದಾನ

ಸರಕಾರವು ತಾನು ನಿರ್ಧರಿಸಬಹುದಾದ ಉದ್ದೇಶಗಳಿಗೆ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಗ್ರಾ.ಪಂ. ತಾ.ಪಂ. ಜಿ.ಪಂ.ಗಳಿಗೆ ವಿವೇಚನಾತ್ಮಕ ಅನುದಾನ ನೀಡಬಹುದು.

ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಗ್ರಾಮಪಂಚಾಯತಿಗಳಿಗೆ ಬರುವ ಅನುದಾನ, ಆದಾಯವನ್ನು ಈ ಕೆಳಗಿನಂತೆ ವಿಂಗಡಿಸಬಹುದು.

1. ಅನುದಾನ ವಂತಿಗೆ 3) ದರ
2. ತೆರಿಗೆ 4) ಅಧಿಕಾರದಿಂದ ಬರುವ ಆದಾಯ

**1) ಅನುದಾನ & ವಂತಿಗೆ:** ಕೇಂದ್ರ & ರಾಜ್ಯ ಸರಕಾರಗಳಿಂದ ಗ್ರಾ.ಪಂ.ಗೆ ಬಿಡುಗಡೆಯಾಗುವ ಶಾಸನಬದ್ಧ ಅನುದಾನದ ಪ್ರಮುಖ ಕಾರ್ಯಕ್ರಮಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ಅನುದಾನದ ಮೂಲ | ವಿವರಣೆ | ಯಾವ ಉದ್ದೇಶಕ್ಕಾಗಿ | ಕಲು.ಸಂ |
|---|---|---|---|---|
| 1. | ಶಾಸನಬದ್ಧ ಅನುದಾನ (ರಾಜ್ಯಸರಕಾರ) | 8.000ಜನ ಸಖ್ಯೆಗಿಂತ ಕಡಿಮೆ ಇರುವ ಗ್ರಾ.ಪಂ.ಗೆ 10.00.000ರೂ.ಗಳನ್ನು ಜಾಗೀ 8.000ಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದರೆ ಪ್ರತಿ 1000ಜನರಿಗೆ 1ಲಕ್ಷ ರೂ.ಹೆಚ್ಚುವರಿಯಾಗಿ ವಾರ್ಷಿಕ ಅನುದಾನ ನಿಡುತ್ತದೆ. | 1. ಶೇ.60 ರಷ್ಟನ್ನು ಗ್ರಾ.ಪಂ.ಗಳ ವಿದ್ಯುತ್‌ಬಿಲ್ ಪಾವತಿಸಲು.<br>2. ಶೇ.40ರಷ್ಟು ಗ್ರಾ.ಪಂ.ಗಳ ಸಿಬ್ಬಂದಿಗಳ ವೇತನ ಪಾವತಿಸಲು ಬಳಸಬೇಕು.<br>3. ಇದನ್ನು 4ಕಂತುಗಳಲ್ಲಿ ಬಿಡುಗಡೆ ಯಾಗುತ್ತದೆ.(ತ್ರೈಮಾಸಿಕ) | 206 |
| 2. | ಹಣಕಾಸು ಆಯೋಗದ ಅನುದಾನ | 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ | | 267 |
| 3. | ರಾಜ್ಯ ಸರಕಾರದ ಕಾರ್ಯಕ್ರಮಗಳು<br>1. ವಸತಿಯೋಜನೆಗಳಿಗೆ ಸಹಾಯಧನ | ಕುಡಿಯುವ ನೀರು ಸರಬರಾಜು ನಿರ್ವಹಣೆಗೆ<br>1. ಅಂಬೇಡ್ಕರ ವಸತಿ ಯೋಜನೆ<br>2. ಬಸವ ವಸತಿ ಯೋಜನೆ | 1. ಕೊಳವೆ ಬಾವಿ-800ರೂ.<br>2. ಕಿರುನೀರು ಸರಬರಾಜು-3.500<br>3. ಕೈಪಂಪುಗಳ ನಿರ್ವಹಣೆ-600ರೂ. SC/ST ಗಳಿಗೆ - 50.000ರೂ. 1.20.000ರೂ. ಸಹಾಯಧನ | |
| 4. | ಕೇಂದ್ರ ಸರಕಾರದ ಕಾರ್ಯಕ್ರಮಗಳು | ಮ.ರಾ.ಗ್ರಾ.ಉ.ಖಾ.ಯೋ(ಒಉಓಖಇಉ) | 1. ಆರ್ಥಿಕ ವರ್ಷದಲ್ಲಿ 100ದಿನಗಳ ಉದ್ಯೋಗ.<br>2. ಒಬ್ಬರಿಗೆ ದಿನಕ್ಕೆ ರೂ.224(150ದಿನ) ರಂತೆ ಕೂಲಿ | |
| | | ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಅನುದಾನ (ಬಿ.ಆರ್.ಜಿ.ಎಫ್.) | 1. ಗುಲಬರ್ಗಾ, ಬೀದರ್, ರಾಯಚೂರು, ಚಿತ್ರದುರ್ಗಾ ಮತ್ತು ದಾವಣಗೆರೆ ರೂ. | |

downloaded from: www.kpscvaani.com 

| | | | | |
|---|---|---|---|---|
| | | ಪ್ರಧಾನಮಂತ್ರಿ ಆವಾಸ ಯೋಜನೆ | 1.20.000ಸಹಾಯಧನ | |
| | | ಸ್ವಚ್ಛ ಭಾರತ ಮಿಷನ್ | 1. ವೈಯಕ್ತಿಕ ಶೌಚಾಲಯ–ರೂ.12.000<br>2. ಶಾಲಾ–ರೂ.35.000<br>3. ಅಂಗನವಾಡಿ–ರೂ.8.000<br>4. ಸಮುದಾಯ ಭವನ–ರೂ.2.00.000 | |

2. **ತೆರಿಗೆ :** ತೆರಿಗೆ ಎಂದರೆ ಕಾನೂನು ಬದ್ಧವಾಗಿ ಗ್ರಾ.ಪಂಗಳಿಗೆ ನೀಡಿದ ಅಧಿಕಾರ

- ಕೃಷಿಯೇತರ ಜಾಗದ ಮೇಲಿನ ತೆರಿಗೆ–ಪ್ರತಿ.ಚ.ಮೀ.ಜಾಗಕ್ಕೆ ರೂ.1ರಂತೆ
- ಕಟ್ಟಡಗಳ ಮೇಲಿನ ತೆರಿಗೆ (ಬಾಡಿಗೆ ಮೌಲ್ಯ) – ಕಟ್ಟಡದ ವಾರ್ಷಿಕ ಆದಾಯದ ಶೇ.10ರಷ್ಟು
- ಮನೋರಂಜನೆ ತೆರಿಗೆ (ಸಿನೆಮಾ ಬಿಟ್ಟು) –ಪ್ರತಿ ಮನೊರಂಜನೆಗೆ–20ರೂ.
- ವಾಹನ ತೆರಿಗೆ (ಮೋಟಾರು ವಾಹನ ಬಿಟ್ಟು) –ವರ್ಷಕ್ಕೆ 5ರೂನಿಂದ 25ರೂ.ವರೆಗೆ
- ಜಾಹಿರಾತು ತೆರಿಗೆ – ಪ್ರತಿ ಚ.ಮೀಗೆ ತಿಂಗಳಿಗೆ 5ರೂ.ಗಳಂತೆ

3. **ದರ:** ದರ ಎಂದರೆ ಗ್ರಾ.ಪಂ.ಗಳು ತಾವು ಒದಗಿಸುವ ಸೌಲಭ್ಯಕ್ಕೆ ವಿಧಿಸುವ ಶುಲ್ಕವಾಗಿದೆ.

- ಸಾಮಾನ್ಯವಾಗಿ ನೀರಿನ ದರ– ಸಾರ್ವಜನಿಕನಲ್ಲಿ ಕನಿಷ್ಠ 20ರೂ. ತಿಂಗಳಿಗೆ ವೈಯಕ್ತಿಕನಲ್ಲಿ ಕನಿಷ್ಠ–50ರೂ. ಮೀಟರ್ ರೀಡಿಂಗ್‌ನಂತೆ

4. **ಗ್ರಾ.ಪಂ.ಆಸ್ತಿಯಿಂದ ಬರತಕ್ಕ ಆದಾಯ:**

- ಪಂಚಾಯತ್ ಜಾಗವನ್ನು ಬಾಡಿಗೆ ನೀಡುವ ಮೂಲಕ ಬರುವ ಆದಾಯ(ಸಂತೆಗೆ,ಸರ್ಕಸ್)
- ಪಂಚಾಯತಿ ಕಟ್ಟಡ–ವಸತಿಗೃಹ ವಾಣಿಜ್ಯಮಳಿಗೆ(ಬಾಡಿಗೆ)
- ಪಂಚಾಯತಿ ಜಾಗದ ಮಾರಾಟ ಹರಾಜು ಮಾಡುವುದು
- ಗ್ರಾಮ ಪಂಚಾಯತಿ ಜಮೀನು ಆಸ್ತಿಯಿಂದ ಆದಾಯ

  * ನೆಡುತೋಪು * ಗೋಮಾಳ
  * ವಾಹನ ನಿಲ್ದಾಣ ಶುಲ್ಕಗಳು * ಮರಳುಗಾರಿಕೆ
  * ಕೆರೆ ಬಾಡಿಗೆ * ಮಟನ್ ಚಿಕನ್ ಅಂಗಡಿಗಳಿಂದ
  * ಮಾರುಕಟ್ಟೆ * ಬಿದ್ದ ಮರಗಳ ಮಾರಾಟ

5. **ಗ್ರಾ.ಪಂ.ಅಧಿಕಾರದಿಂದ ಬರುವ ಆದಾಯ**

* ಜಾತ್ರೆ ಶುಲ್ಕ ವಸೂಲಿ–ಸಂತೆ ಜಾತ್ರೆಗಳಲ್ಲಿ ವ್ಯಾಪಾರಿಗಳಿಂದ ವಸೂಲಿ
* ಪರವಾನಗಿ ಶುಲ್ಕಗಳು–ಹೊಟೆಲ್,ರೆಸ್ಟೋರೆಂಟ್,ಬೇಕರಿ,ವಸತಿಗೃಹ, ಫ್ಯಾಕ್ಟರಿ, ಕಟ್ಟಡ
* ಖಾಸಗಿ ಲೇಔಟ್ ನಿರ್ಮಾಣ–ಲೇಔಟ್ ಮಾಲೀರರಿಂದ
* ನೋಟಿಸು ಫೀ – ನೋಟಿಸು ಕಳುಹಿಸಲು ತಗುಲುವ ಫೀ
* ವಾರಂಟ್ ಫೀ – ವಾರಂಟ್ ಕಳುಹಿಸಲು ತಗಲುವ ಫೀ
* ದಂಡ (ಫೈಸ್)
* ಸ್ಥಳೀಯಕರ – ಭೂಕಂದಾಯಕ್ಕೆ ಸಮಾನವಾದ ದರದಲ್ಲಿ ವಿಧಿಸುವ ಉಪಕರ

**ಉಪಕರಣಗಳು:–**

**ಕಟ್ಟಡ ಭೂಮಿಗಳ ಮೇಲೆ ವಿಧಿಸಲಾದ ತೆರಿಗೆ ಮೇಲೆ–**

1. ಶಿಕ್ಷಣ ಉಪಕರ–ಶೇ.10
3. ಆರೋಗ್ಯ ಉಪಕರ–ಶೇ.15
2. ಗ್ರಂಥಾಲಯ ಉಪಕರ ಶೇ–6
4. ಭಿಕ್ಷುಕರ ಉಪಕರ ಶೇ.3 ವಿಧಿಸಬೇಕು.

**ತೆರಿಗೆಗೆ ಒಳಪಡದ ಆಸ್ತಿಗಳು**

1. ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಕಟ್ಟಡ ಮತ್ತು ಭೂಮಿ ಕೇಂದ್ರ ಮತ್ತು ರಾಜ್ಯ ಸರಕಾರ–ಕ್ಕೆ ಸೇರಿದ ಕಟ್ಟಡಗಳು
2. ಧಾರ್ಮಿಕ ಉದ್ದೇಶಕ್ಕಾಗಿ ಉಪಯೋಗಿಸುವ ಕಟ್ಟಡಗಳು.

**ತೆರಿಗೆ ಪಾವತಿಸುವ ಹೊಣೆಗಾರಿಕೆ:**

1. ಸಂಬಂಧಪಟ್ಟವರು ನಿಯಮಿತವಾಗಿ ತೆರಿಗೆ ಪಾವತಿ ಮಾಡಬೇಕು.
2. ಆಸ್ತಿ ವರ್ಗಾವಣೆಯಾದರೆ ಅದಕ್ಕೆ ಸಂಬಂಧ ಪಟ್ಟ ಮಾಹಿತಿಯನ್ನು 2 ತಿಂಗಳೊಳಗೆ ಲಿಖಿತವಾಗಿ ಪಂಚಾಯ್ತಿಗೆ ತಿಳಿಸಬೇಕು.
3. ಮಾಲೀಕನು ಮರಣ ಹೊಂದಿದರೆ ಅದರ ವಾರಸುದಾರರ ಬಗೆಗೆ ಪಂಚಾಯ್ತಿಗೆ ತಿಳಿಸಬೇಕು.

**ತೆರಿಗೆ ವಿಧಿಸಲು ಅನುಸರಿಸಬೇಕಾದ ನಿಯಮಗಳು**

1. ಸರ್ಕಾರಿ ಕಚೇರಿ ಕಟ್ಟಡವನ್ನು ಹೊರತು ಪಡಿಸಿ ಎಲ್ಲಾ ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಬೇಕು.
2. ಕಾರ್ಖಾನೆಗಳು ಇದ್ದರೆ ಅದನ್ನು ಕಾರ್ಖಾನೆ ಮಾಲೀಕರೊಂದಿಗೆ ಚರ್ಚಿಸಿ, ಗರಿಷ್ಠ ದರ ನಿಗದಿ ಮಾಡಬೇಕು.
3. ಕೃಷಿಯೇತರ ಉಪಯೋಗಕ್ಕೆಂದು ಪರಿವರ್ತಿಸಿದ ನಿವೇಶನಗಳಲ್ಲಿ ಕಟ್ಟಿರುವ ಕಟ್ಟಡಗಳ ಮೇಲೆ ತೆರಿಗೆ ಹಾಕಬೇಕು.

 downloaded from: www.kpscvaani.com

# ಅಧ್ಯಾಯ 15

# ಪಂಚಾಯತಿಗಳ ಸ್ವತ್ತುಗಳು ಅಥವಾ ನಿಧಿಗಳು

**ಪ್ರಕರಣ-209:**

**ಗ್ರಾಮ ಪಂಚಾಯತಿಯು ಸ್ವತ್ತನ್ನು ಅರ್ಜಿಸಬಹುದು, ಧಾರಣ ಮಾಡಬಹುದು ಅಥವಾ ವಿಲೇವಾರಿ ಮಾಡಬಹುದು**

* ಗ್ರಾಮ ಪಂಚಾಯತಿಯು ತನ್ನ ಚರ ಅಥವಾ ಸ್ಥಿರ ಸ್ವತ್ತುಗಳನ್ನು ಸರಕಾರದ ನಿಯಮಗಳಿಗೆ ಅನುಗುಣವಾಗಿ ಧಾರಣೆ ಮಾಡುವ ಅಥವಾ ವಿಲೇವಾರಿ ಮಾಡವ ಅಧಿಕಾರ ಹೊಂದಿದೆ.
* ಆದರೆ ಗುತ್ತಿಗೆ ಅಥವಾ ಬಾಡಿಗೆಯ ಮೂಲಕ ಸ್ವತ್ತುಗಳ ವರ್ಗಾವಣೆಯ ಶೇ.25 ರಷ್ಟನ್ನು ಎಸಿ/ಎಟಿ ಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದು.

**ಪ್ರಕರಣ-210: ಗ್ರಾ.ಪಂ.ಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು**

* ಗ್ರಾ.ಪಂ.ಯ ಸಹಮತದೊಂದಿಗೆ ಸರಕಾರ ಜಿ.ಪಂ.ಅಥವಾ ತಾ.ಪಂ. ಗಳಿಗೆ ಸೇರಿದ ಯಾವುದೇ ಸ್ವತ್ತನ್ನು ಗ್ರಾ.ಪಂ.ಯಲ್ಲಿ ನಿಹಿತಗೊಳಿಸಬಹುದು ಇದಕ್ಕೆ ಗ್ರಾ.ಪಂ.ಯ ಪೂರ್ವಾನುಮತಿ ಅತ್ಯಗತ್ಯ.

**ಪ್ರಕರಣ-211: ಗ್ರಾ.ಪಂ.ಯಿಂದ ಅಥವಾ ಅದರ ವಿರುದ್ಧವಾಗಿ ಸ್ವತ್ತಿನ ಒಗೆಗಿನ ಕ್ಲೇಮುಗಳ ತೀರ್ಮಾನ**

* ಕೃಷಿ ಭೂಮಿಯನ್ನು ಹೊರತು ಪಡಿಸಿ ಇತರೆ ಭೂಮಿಯ ನೊಂದಣಿಯಾಗಿರುವ ಅಥವಾ ಆಗಬೇಕಾಗಿರುವ ಗ್ರಾಮದಲ್ಲಿ ಯಾವುದೇ ವ್ಯಕ್ತಿಯು ಗ್ರಾ.ಪಂ.ವಿರುದ್ಧ ಕ್ಲೇಮುಗಳನ್ನು ಮಾಡಿದ್ದಲ್ಲಿ ಅದರ ಕುರಿತು ಅಸಿಸ್ಟೆಂಟ್ ಕಮಿಷನರ ತೀರ್ಮಾನ ಕೈಗೊಳ್ಳುವರು
* AC ಆದೇಶದಿಂದ ಭಾದಿತನಾದ ವ್ಯಕ್ತಿಯು ಆಅ ಯವರಿಗೆ ಮೇಲ್ಮನವಿ ಸಲ್ಲಿಸಬಹುದು. ಜಿಲ್ಲಾಧಿಕಾರಿಯ ಆದೇಶವೇ ಅಂತಿಮವಾಗಿರುತ್ತದೆ.

**ಪ್ರಕರಣ-212-ಗ್ರಾಮ ಪಂಚಾಯತಿಯ ನಿಧಿ**

1) ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಅದರದೇ ಆದ ನಿಧಿ ಇರುತ್ತದೆ
2) ಆ ನಿಧಿಗೆ ಸರ್ಕಾರ,ಜಿ.ಪಂ.ತಾ.ಪಂ.ಗಳಿಂದ ಬಂದ ಹಣ ಸೇರುತ್ತದೆ
   * ಗ್ರಾಮ ಪಂಚಾಯ್ತಿ ತೆರಿಗೆಗಳು,ದರ,ಶುಲ್ಕಗಳಿಂದ ಬಂದ ಆದಾಯ
   * ದೇಣಿಗೆ ರೂಪದಲ್ಲಿ ಬಂದ ಹಣ
   * ಗ್ರಾ.ಪಂ.ಆಸ್ತಿಗಳಿಂದ ಬಂದ ಹಣ
   * ಸಾಲದ ರೂಪದಲ್ಲಿ ಬಂದ ಹಣ ಇತ್ಯಾದಿಗಳು ಗ್ರಾಂ.ಪಂ.ನಿಧಿಗೆ ಸೇರುತ್ತವೆ.
3) ಗ್ರಾಮ ಪಂ.ನಿಧಿಗೆ ಸಂಬಂಧಪಟ್ಟ ಖಾತೆಯನ್ನು ತಾಲ್ಲೂಕಿನ ಸರ್ಕಾರಿ ಖಜಾನೆಯಲ್ಲಿ ಇಡಬೇಕು.ಇಲ್ಲವೇ ಕಾರ್ಯನಿರ್ವಾಹಕ ಅಧಿಕಾರಿ ಅನುಮತಿ ಪಡೆದುಕೊಂಡು ಇತರ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಡಬೇಕು.

**ಪ್ರಕರಣ-213: ಗ್ರಾಮ ಪಂಚಾಯತಿ ನಿಧಿಯನ್ನು ಅಥವಾ ಸ್ವತ್ತನ್ನು ಒಳಸುವುದು**

* ಗ್ರಾ.ಪಂ.ಯು ತನ್ನ ಕಾರ್ಯಗಳನ್ನು ನಿರ್ವಹಿಸಲು ಹಣವನ್ನು ಖರ್ಚು ಮಾಡಲು ಅವಕಾಶವಿದೆ.
* ಬಜೆಟ್‌ನಲ್ಲಿ ತೋರಿಸಿದ ನಿಧಿಗೆ ಖರ್ಚು ಹಾಕುವಂತಿಲ್ಲ
* ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಜನರ ಕಲ್ಯಾಣಕ್ಕಾಗಿ ಶೇ 25% ಹಣ ಖರ್ಚು ಮಾಡಬೇಕು
* ಸಿಬ್ಬಂದಿ ವೇತನ & ಭತ್ಯೆ ನೀಡಲು
* ಸಾಲ ಸಂದಾಯ ಮಾಡಲು
* ಸಾರ್ವಜನಿಕ ಹಿತಕ್ಕಾಗಿ ಖರ್ಚು ಮಾಡಲು ಅವಕಾಶವಿದೆ ಆದರೆ ಅದಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಒಪ್ಪಿಗೆ ಪಡೆಯಬೇಕು

**ಪ್ರಕರಣ-214: ಗ್ರಾ.ಪಂ.ಯು ಸಾಲಗಳನ್ನು ಎತ್ತಬಹುದು ಅಥವಾ ಋಣ ಪರಿಹಾರ ನಿಧಿಯನ್ನು ರಚಿಸಬಹುದು**

* ಗ್ರಾಮ ಪಂಚಾಯತಿಯ ಸರಕಾರದ ಸರಕಾರದ ನಿಯಮಗಳಿಗ ನುಗುಣವಾಗಿ ಅಥವಾ ಷರತ್ತಿಗರ ಒಳಪಟ್ಟು ತನ್ನ ಕಾಮಗಾರಿಗಳ ನಿರ್ವಹಣೆಗಾಗಿ ಸಾಲವನ್ನು ಎತ್ತಬಹುದು ಹಾಗೂ ಸಾಲವನ್ನು ಸಂದಾಯ ಮಾಡಲು ಋಣಪರಿಹಾರ ನಿಧಿಯನ್ನು ರಚಿಸಬಹುದು

**ಪ್ರಕರಣ-215: ತಾ.ಪಂ.ಯು ಸ್ವತ್ತನ್ನು ಅರ್ಜಿಸಬಹುದು ದಾರಣ ಮಾಡಬಹುದು ಅಥವಾ ವಿಲೇವಾರಿ ಮಾಡಬಹುದು**

* ಸರಕಾರದ ನಿಯಮಗಳಿಗೆ ಅನುಗುಣವಾಗಿ ತಾಲೂಕು ಪಂ.ಯು ತನ್ನ ವ್ಯಾಪ್ತಿಗೆ ಒಳಪಟ್ಟರುವ ಯಾವುದೇ ಸ್ಥಿರ, ಚರ ಸ್ವತ್ತನ್ನು ಅರ್ಜಿಸುವ, ಧಾರಣ ಮಾಡುವ ಅಥವಾ ವಿಲೇವಾರಿ ಮಾಡುವ ಅಧಿಕಾರ ಹೊಂದಿದೆ

**ಪ್ರಕರಣ-216: ತಾಲೂಕು ಪಂಚಾಯತಿಗೆ ಸ್ವತ್ತಿನ ವರ್ಗಾವಣೆ**

* ಜಿ.ಪಂ.ಅಥವಾ ಸರಕಾರವು ತನ್ನ ಅಧಿಕಾರ ವ್ಯಾಪ್ತಿಯಲ್ಲಿನ ಯಾವುದೇ ಸ್ವತ್ತನ್ನು ತಾ.ಪಂ.ಗೆ ವರ್ಗಾಹಿಸಬಹುದು ಇದಕ್ಕೆ ತಾ.ಪಂ.ಅನುಮತಿ ಅತ್ಯಗತ್ಯ
* ಈ ಸ್ವತ್ತನ್ನು ತಾ.ಪಂ.ಯು ಜಿ.ಪಂ. ಮತ್ತು ಸರಕಾರದ ಅನುಮತಿಯಿಲ್ಲದೆ ಗುತ್ತಿಗೆ ನೀಡುವಂತಿಲ್ಲ ಹಾಗೂ ವರ್ಗಾವಣೆ ಮತ್ತು ಮಾರಾಟ ಮಾಡುವಂತಿಲ್ಲ.

**ಪ್ರಕರಣ-217-ಸ್ವತ್ತಿನ ಕುರಿತು ತಾ.ಪಂ.ಅಥವಾ ಅದರ ವಿರುದ್ಧವಾಗಿ ಮಾಡಿದ ಕ್ಲೇಮುಗಳ ತೀರ್ಮಾನ**

* ಕೃಷಿ ಭೂಮಿಯನ್ನು ಹೊರತುಪಡಿಸಿ ಇತರೆ ಭೂಮಿಯ ನೋಂದಣಿ ಆಗಿರುವ ಅಥವಾ ಆಗಬೇಕಾಗಿರುವುದರ ಕುರಿತು ಯಾವುದೇ ವ್ಯಕ್ತಿಯು ತಾ.ಪಂ. ವಿರುದ್ಧ ಕ್ಲೇಮುಗಳನ್ನು ಮಾಡಿದ್ದಲ್ಲಿ ಡೆಪ್ಯುಟಿ ಕಮಿಷನರ ರವರು ವಿಚಾರಣೆ ನಡೆಸಿದ ನಂತರ ತೀರ್ಮಾನ

downloaded from: www.kpscvaani.com


ಕೈಗೊಳ್ಳುವರು.

* ಡಿ.ಸಿ. ಆದೇಶದ ವಿರುದ್ಧ ಬಾಧಿತನಾದ ವ್ಯಕ್ತಿಯು ಕಮಿಷನರ ರವರಿಗೆ ಮೇಲ್ಮನವಿ ಸಲ್ಲಿಸಬಹುದು ಕಮಿಷನರವರ ತೀರ್ಮಾನವೇ ಅಂತಿಮವಾಗಿರುತ್ತದೆ.

### ಪ್ರಕರಣ-218: ತಾಲೂಕು ಪಂಚಾಯತಿ ನಿಧಿ

- ಪ್ರತಿ ತಾ.ಪಂ.ಯು "ಒಂದು ನಿಧಿಯನ್ನು ಹೊಂದಿರತಕ್ಕದ್ದು ತಾ.ಪಂ ನಿಧಿಗೆ ಜಮಾ ಆಗುವ ಮೋತ್ತಗಳನ್ನು ತಾಲೂಕಿನ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಬ್ಯಾಂಕನಲ್ಲಿ ಇಡತಕ್ಕದ್ದು.
- ಸರಕಾರ ಮತ್ತು ಜಿ.ಪಂ ಯು ಮಂಜೂರು ಮಾಡುವ ನಿಧಿ(ಹಣ)
- ತಾ.ಪಂ ಯು ವಿಧಿಸುವ ಸುಂಕು, ಶುಲ್ಕಗಳು, ದರ ಇತ್ಯಾದಿ..
- ತಾ.ಪಂ ಗೆ ಸರಕಾರ ಹಾಗೂ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯಿಂದ ದೊರೆಯುವ ಸಾಲಗಳು ಮತ್ತು ಕಾಣಿಕೆ ರೂಪದಲ್ಲಿ ಬರುವ ಎಲ್ಲಾ ವಿಧದ ಹಣದ ಮೊತ್ತ .
- ತಾ.ಪಂ ಯ ಯಾವುದೇ ಸ್ಥಿರ ಮತ್ತು ಚರ ಸ್ವತ್ತಿನಿಂದ ಬರುವ ಆದಾಯದ(ಬಾಡಿಗೆ) ಮೂಲ

### ಪ್ರಕರಣ-219:
### ತಾಲೂಕು ಪಂಚಾಯತಿ ನಿಧಿ ಮತ್ತು ಸ್ವತ್ತಿನ ಬಳಕೆ

- ತಾ.ಪಂ. ಯು ಸರಕಾರದ ನಿಯಮಗಳಿಗೆ ಅನಿಗುಣವಾಗಿ ತನ್ನ ಯಾವುದೇ ಹಣವನ್ನು ನಿರ್ದಿಷ್ಟ ಉದ್ದೇಶಗಳಿಗಾಗಿ ಬಳಸಿಕೊಳ್ಳಬವುದು.
- ತಾ.ಪಂ ಯು SC & ST ಜನರ ಕಲ್ಯಾಣಕ್ಕಾಗಿ ಶೇ 25 ಕ್ಕಿಂತ ಕಡಿಮೆ ಇಲ್ಲದಷ್ಟು ಮೊತ್ತವನ್ನು ಬಳಸಬೇಕು
- ತಾ.ಪಂ ನಿಧಿಯನ್ನು ಅಧ್ಯಕ್ಷ, ಉಪಾಧ್ಯಕ್ಷ ಅಧಿಕಾರಿಗಳು ಹಾಗೂ ಸಿಬ್ಬಂದಿ ವೇತನ ಭತ್ಯ ಇತ್ಯಾದಿಗಳನ್ನು ಭರಿಸಲು ಮತ್ತು ತೆಗೆದು-ಕೊಂಡ ಸಾಲ ಮತ್ತು ಬಡ್ಡಿಯನ್ನು ತೀರಿಸಲು ಉಪಯೋಗಿಸತಕ್ಕದ್ದು.

### ಪ್ರಕರಣ-220: ತಾ.ಪಂ.ಯು ಸಾಲಗಳನ್ನು ಎತ್ತಬಹುದು ಮತ್ತು ಋಣ ಪರಹಾರ ನಿಧಿಯನ್ನು ರಚಿಸಬಹುದು

- ತಾ.ಪಂ.ಯು ಸರಕಾರದ ಷರತ್ತು ಮತ್ತು ನಿಯಮಗಳಿಗನು ಗುಣವಾಗಿ ತನ್ನ ಉದ್ದೇಶವನ್ನು ಪೂರೈಸಿಕೊಳ್ಳಲು ಸಾಲವನ್ನು ತೆಗೆದುಕೊಳ್ಳಬಹುದು ಹಾಗೂ ಸಾಲ ತೀರಿಸಲು ಒಂದು ಋಣ ಪರಹಾರ ನಿಧಿಯನ್ನು ರಚಿಸಬಹುದು.

### ಪ್ರಕರಣ-221: ಬಾಡಿಗೆಗಳು ಮತ್ತು ಫಿಜುಗಳು

- ತಾ.ಪಂ.ಯು ತನ್ನ ವ್ಯಾಪ್ತಿಯಲ್ಲಿರುವ ಯಾವುದೇ ಜಮೀನು ಹಾಗೂ ಇತರ ಸ್ವತ್ತಿನ ಬಳಕೆಗಾಗಿ ಬಾಡಿಗೆ ಮತ್ತು ಫಿಜಗಳನ್ನು ವಿಧಿಸಬಹುದು.

### ಪ್ರಕರಣ-222: ಜಿ.ಪಂ ಯು ಸ್ವತ್ತನ್ನು ಅರ್ಜಿಸುವ ಧಾರಣ ಮಾಡುವ ಮತ್ತು ವಿಲೇವಾರಿ ಮಾಡುವ ಅಧಿಕಾರ

ಸರಕಾರದ ನಿಯಮಗಳಿಗನುಸಾರ ಜಿ.ಪಂ ಯು ತನ್ನ ವ್ಯಾಪ್ತಿಯಲ್ಲಿನ ಯಾವುದೇ ಸ್ಥಿರಚರ ಸ್ವತ್ತನ್ನು ಅರ್ಜಿಸುವ ದಾರಣ ಮಾಡುವ ಮತ್ತು ವಿಲೇವಾರಿ ಮಾಡುವ ಅಧಿಕಾರವನ್ನು ಹೊಂದಿದೆ.

### ಪ್ರಕರಣ-223: ಜಿ.ಪಂ.ಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು.

ಜಿ.ಪಂ.ಯ ಸಹಮತಿಯೊಂದಿಗೆ ಸರಕಾರವು ತನ್ನ ಯಾವುದೇ ಸ್ವತ್ತನ್ನು ಜಿ.ಪಂ ಗೆ ವರ್ಗಾಹಿಸಬಹುದು. ಈ ಸ್ವತ್ತನ್ನು ಜಿ.ಪಂ ಯು ಸರಕಾರದ ಅನುಮತಿಯಿಲ್ಲದೆ ಗುತ್ತಿಗೆ ನೀಡುವಂತಿಲ್ಲ ಹಾಗೂ ವರ್ಗಾವಣೆ ಮತ್ತು ಮಾರಾಟ ಮಾಡುವಂತಿಲ್ಲ.

### ಪ್ರಕರಣ-224: ಸ್ವತ್ತಿನ ಜಿ.ಪಂ ಹಾಗೂ ವಿರುದ್ದವಾಗಿ ಮಾಡಿದ ಕ್ಲೇಮುಗಳ ತೀರ್ಮಾನ

1) ಕೃಷಿ ಭೂಮಿಯನ್ನು ಹೊರತುಪಡಿಸಿ ಇತರೆ ಭೂಮಿಯ ನೋಂದಣಿಯಾಗಿರುವ ಹಾಗೂ ಆಗಬೇಕಾಗಿರುವುದರ ಕುರಿತು ಯಾವುದೇ ವ್ಯಕ್ತಿಯ ಜಿ.ಪಂ ವಿರುದ್ಧ ಕ್ಲೇಮುಗಳನ್ನು ಮಾಡಿದಲ್ಲಿ ಡೆಪ್ಯುಟಿ ಕಮಿಷನರ್ ವಿಚಾರಣೆ ನಡೆಸಿ ತೀರ್ಮಾರ್ನ ಕೈಗೊಳ್ಳುವರು
2) ಡಿ.ಸಿ ಆದೇಶದಿಂದ ಬಾದಿತನಾದ ವ್ಯಕ್ತಿಯು ಕಮಿಷನರ್ ರವರಿಗೆ ಮೇಲ್ಮನವಿ ಸಲ್ಲಿಸಬಹುದು ಕಮಿಷನರ್ ತೀರ್ಮಾನವೇ ಅಂತಿಮವಾಗಿರುತ್ತದೆ.

### ಪ್ರಕರಣ-225: ಜಿಲ್ಲಾ ಪಂಚಾಯತಿ ನಿಧಿ

ಪ್ರತಿ ಜಿ.ಪಂ ಯು ಒಂದು ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಈ ಕೆಳಗಂಡ ರೀತಿಯಲ್ಲಿ ಅನುದಾನದ ಹಣ ಮತ್ತು ಕೊಡುಗೆಗಳು ಜಿ.ಪಂ ನಿಧಿಗೆ ಸಂಧಾಯವಾಗತಕ್ಕದ್ದು

1. ಸರಕಾರದ ಸಂಚಿತ ನಿಧಿಯಿಂದ ವಿನಿಯೋಗದ ಮೂಲಕ ಜಿ.ಪಂ ನಿಧಿಗೆ ವರ್ಗಾಹಿಸಲಾದ ಹಣ
2. ಸರಕಾರವು ಜಿ.ಪಂ ಗೆ ನೀಡುವ ಅನುದಾನ ಸಾಲ ವಂತಿಕೆ ಇತ್ಯಾದಿ
3. ಜಿ.ಪಂ ಯು ವಿದಿಸುವ ಸುಂಕ(ತೆರಿಗೆ) ಶುಲ್ಕಗಳು ಇತ್ಯಾದಿ
4. ಜಿ.ಪಂ ಗೆ ಖಾಸಗಿ ವ್ಯಕ್ತಿಗಳಿಂದ ಮತ್ತು ಸಂಘಸಂಸ್ಥೆಗಳಿಂದ ಬಂದ ಕೊಡುಗೆಗಳು ಅನುದಾನ, ಇತ್ಯಾದಿ
5. ಜಿ.ಪಂ ಯು ಯಾವುದೇ ಸ್ವತ್ತಿನಿಂದ ಬರುವ ಆದಾಯ(ಬಾಡಿಗೆ)
6. ಜಿ.ಪಂ ಯಿಂದ ಮಾರಲಾದ ಜಮೀನು, ಭದ್ರತೆಗಳು ಮತ್ತು ಇತರ ಸ್ವತ್ತುಗಳಿಂದ ಬರುವ ಆದಾಯ

- ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ದತ್ತಿಯ ರೂಪದಲ್ಲಿ ಸ್ವೀಕರಿಸಿದ ಹಣ ಜಿ.ಪಂ ನಿಧಿಗೆ ಸಂದಾಯವಾಗುವುದಿಲ್ಲ

### ಪ್ರಕರಣ-226:
### ಜಿಲ್ಲಾ ಪಂಚಾಯತಿ ನಿಧಿಯ ಅಭಿರಕ್ಷೆ ಮತ್ತು ಹೂಡಿಕೆ

1. ಜಿ.ಪಂ.ಗೆ ಜಮೆಯಾದ ಮೊತ್ತವನ್ನು ಸರಕಾರಿ ಖಜಾನೆಯಲ್ಲಿ ಇಡತಕ್ಕದ್ದು
2. ಸರಕಾರದ ಮಂಜೂರಾತಿಯೊಂದಿಗೆ ಜಿ.ಪಂ ಯು ತನ್ನಲ್ಲಿರುವ ಉಳಿತಾಯದ ನಿಧಿಯನ್ನು ರಾಜ್ಯದ ಯಾವುದೇ ಅನುಸೂಚಿತ ಹಾಗೂ ಸಹಕಾರಿ ಬ್ಯಾಂಕನಲ್ಲಿ ಭಡ್ಡಿಗಾಗಿ ಠೇವಣಿ ಇಡಬಹುದು
3. ಸರಕಾರದ ನಿಯಮಗಳಿಗನುಸಾರವಾಗಿ ಜಿ.ಪಂ ಯು ತನ್ನಲ್ಲಿರುವ ಉಳಿತಾಯದ ನಿಧಿಯನ್ನು ಭಾರತದ ಸರಕಾರದ ಹಾಗೂ ರಾಜ್ಯಸರಕಾರದ ಹಾಗೂ ಇತರ ಭದ್ರತೆಗಳಲ್ಲಿ ಹೂಡಬಹುದು.

### ಪ್ರಕರಣ-227: ಜಿ.ಪಂ.ನಿಧಿ ಮತ್ತು ಸ್ವತ್ತಿನ ಬಳಕೆ

1. ಸರಕಾರದ ನಿಯಮಗಳಿಗನುಸಾರವಾಗಿ ಜಿ.ಪಂ.ಯು. ತನ್ನಲ್ಲಿನ ಯಾವುದೇ ಹಣವನ್ನು ಈ ಕೆಳಗಿನ ಉದ್ದೇಶಗಳಿಗೆ ಉಪಯೋಗಿಸಬಹುದು.
2. ಜಿ.ಪಂ.ನಿಧಿಯನ್ನು ಅಧ್ಯಕ್ಷ, ಉಪಾಧ್ಯಕ್ಷ, ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವೇತನ, ಭತ್ಯ ಇತ್ಯಾದಿಗಳನ್ನು ಭರಿಸಲು ಮತ್ತು ತನ್ನ

 downloaded from: www.kpscvaani.com

ಸಾಲ, ಬಡ್ಡಿಯನ್ನು ತೀರಿಸಲು ಉಪಯೋಗಿಸತಕ್ಕದ್ದು.

3. ಖಿಛಿ,ಣ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ಉದ್ದೇಶಕ್ಕಾಗಿ ಜಿ.ಪಂ.ಯು ತನ್ನ ನಿಧಿಯಲ್ಲಿ ಶೇ.25 ಕ್ಕಿಂತ ಕಡಿಮೆ ಇಲ್ಲದ ಮೊತ್ತವನ್ನು ಉಪಯೋಗಿಸತಕ್ಕದ್ದು.

### ಪ್ರಕರಣ–228: ಬಾಡಿಗೆಗಳು ಮತ್ತು ಫಿಜುಗಳು

- ಸರಕಾರದ ನಿಯಮಗಳಿಗನುಸಾರವಾಗಿ ಜಿ.ಪಂ.ಯು ತಾನು ನೀಡುವ ಪರವಾನಗಿಗಳಿಗೆ ಶುಲ್ಕ ವಿಧಿಸುವ ಹಾಗೂ ತನ್ನ ಯಾವುದೇ ಸ್ಥಿರ ಮತ್ತು ಚರಾಸ್ತಿಗೆ ಬಾಡಿಗೆ ಮತ್ತು ಫೀಜಿಗಳನ್ನು ವಿಧಿಸಬಹುದು.

### ಪ್ರಕರಣ–229: ಜಿ.ಪಂ.ಯು ಸಾಲಗಳನ್ನು ಎತ್ತಬಹುದು ಮತ್ತು ಋಣ ಪರಹಾರ ನಿಧಿಯನ್ನು ರಚಿಸಬಹುದು.

- ಜಿ.ಪಂ ಯು ಸರಕಾರದ ನಿಯಮಗಳಿಗನುಸಾರವಾಗಿ ಸಾಲವನ್ನು ತೆಗೆದುಕೊಳ್ಳಬಹುದು ಮತ್ತು ಸಾಲ ತೀರಿಸಲು ಋಣ ಪರಹಾರ ನಿಧಿಯನ್ನು ರಚಿಸಬಹುದು.

### ಪ್ರಕರಣ–230: ಬಜೆಟನಲ್ಲಿ ಒಳಪಡುದೆ ಇರುವ ವೆಚ್ಚಕ್ಕೆ ನಿರ್ಬಂಧ

- ಜಿಲ್ಲಾ ಪಂಚಾಯತಿ ನಿಧಿಯಿಂದ ಯಾವುದೇ ಹಣವನ್ನು ಖರ್ಚು ಮಾಡಬೇಕಾದರೆ ಅದಕ್ಕೆ ಬಜೆಟನಲ್ಲಿ ಸೂಕ್ತ ಏರ್ಪಾಡಾಗಿರಬೇಕು ಬಜಟಿನಲ್ಲಿ ಸೂಕ್ತ ಏರ್ಪಾಡು ಮಾಡಿದರೆ ಹೊರತು ಜಿ.ಪಂ ನಿಧಿಯಿಂದ ಯಾವುದೇ ಹಣವನ್ನು ಖರ್ಚು ಮಾಡುವಂತಿಲ್ಲ

### ಪ್ರಕರಣ–231: ಸರಕಾರದ ರಸ್ತೆಗಳು ಮತ್ತು ಇತರ ಸ್ವತ್ತನ್ನು ಜಿಲ್ಲಾ ಪಂಚಾಯತಿಗೆ ವಹಿಸಿಕೊಡಬಹುದು.

- ಜಿ.ಪಂ ಸಮ್ಮತಿಯೊಂದಿಗೆ ಸರಕಾರವು ತನ್ನ ಅಧೀನದಲ್ಲಿರುವ ರಸ್ತೆ, ಕಾಲುವೆ, ಸೇತುವೆ, ಕಟ್ಟಡ, ಇತ್ಯಾದಿಗಳನ್ನು ಜಿ.ಪಂ.ಗೆ ಮಾರ್ಪಾಡು ಮಾಡುವ ಅಧಿಕಾರ ಹೊಂದಿದೆ.

downloaded from: www.kpscvaani.com


# ಅಧ್ಯಾಯ 16

# ಆಡಳಿತ ಪರಿವೀಕ್ಷಣೆ ಮೇಲ್ವಿಚಾರಣೆ ಮತ್ತು ಗ್ರಾಮ ಸ್ವರಾಜ್ಯ ಮತ್ತು ಪಂಚಯತ್‌ರಾಜ್ ಆಯುಕ್ತರ ಕಾರ್ಯಾಲಯದ (ಕಮೀಷನರಟ್) ಸೃಜನೆ

### ಪ್ರಕರಣ–209: ಗ್ರಾಮ ಪಂಚಾಯತಿಯು ಸ್ವತ್ತನ್ನು ಅರ್ಜಿಸಬಹುದು, ಧಾರಣ ಮಾಡಬಹುದು ಅಥವಾ ವಿಲೇವಾರಿ ಮಾಡಬಹುದು

* ಗ್ರಾಮ ಪಂಚಾಯತಿಯು ತನ್ನ ಚರ ಅಥವಾ ಸ್ಥೀರ ಸ್ವತ್ತುಗಳನ್ನು ಸರಕಾರದ ನಿಯಮಗಳಿಗೆ ಅನುಗುಣವಾಗಿ ಧಾರಣೆ ಮಾಡುವ ಅಥವಾ ವಿಲೇವಾರಿ ಮಾಡವ ಅಧಿಕಾರ ಹೊಂದಿದೆ

### ಪ್ರಕರಣ–232: ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆ ಅಧಿಕಾರ

| ಪಂಚಾಯತಿಗಳು | ಪರಿವೀಕ್ಷಣಾ ಮತ್ತು ಮೇಲ್ವಿಚಾರಣೆಯ ಅಧಿಕಾರ |
|---|---|
| ಗ್ರಾಮ ಪಂಚಾಯತಿ | ಕಾರ್ಯನಿರ್ವಾಹಕ ಅಧಿಕಾರಿ |
| ತಾಲ್ಲೂಕು ಪಂಚಾಯತಿ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ |
| ಜಿಲ್ಲಾ ಪಂಚಾಯತಿ | ಸರಕಾರದಿಂದ ವಿಶೇಷವಾಗಿ(ನೇಮಕ) ಪ್ರಾಧಿಕೃತರಾದ ಅಧಿಕಾರಿ |

### ಪ್ರಕರಣ–232(ಎ): ಪಂಚಾಯತ್ ರಾಜ್ ಆಯುಕ್ತರ ಕಾರ್ಯಾಲಯರ ಸ್ಥಾಪನೆ

- ರಾಜ್ಯದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಸುಗಮ ಆಡಳಿತ ನಿರ್ವಹಣೆಗಾಗಿ ಸರಕಾರವು ಪ್ರತ್ಯೆಕವಾಗಿ ಪಂಚಾಯತ್ ರಾಜ್ ಆಯುಕ್ತರ ಕರ್ಯಾಲಯವನ್ನು ಸ್ಥಾಪಿಸತಕ್ಕದ್ದು.
- ಇದರ ಅಧಿಕಾರಗಳೂ ಪ್ರಕಾರ್ಯಗಳು ಕರ್ತವ್ಯಗಳು ಹಾಗೂ ಹುದ್ದೆಗಳ ಪ್ರವರ್ಗಗಳ ಸಂಖ್ಯೆ ನೇಮಕಾತಿ ವಿಧಾನ ಕನಿಷ್ಟ ಅರ್ಹತೆಗಳು ಸರಕಾರ ನಿಯಮಿಸಬಹುದಾದಂತೆ ಇರುತ್ತದೆ.

### ಪ್ರಕರಣ–232.ಬಿ – ಕರ್ನಾಟಕ ಪಂಚಯತ್ ಆಡಳಿತಾತ್ಮಕ ಸೇವೆಯ ಸ್ಥಾಪನೆ.

- ಸರಕಾರವು ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಂತಹ ಪ್ರವರ್ಗಗಳ ಹುದ್ದೆಗಳನ್ನು ಒಳಗೊಂಡ ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆಯನ್ನು ರಚಿಸತಕ್ಕದ್ದು. ಅಂಥಹ ಹುದ್ದೆಗಳ ಸಂಖ್ಯೆ,ವೇತನ ಶ್ರೇಣಿ,ನೇಮಕಾತಿ ವಿಧಾನ,ವಿದ್ಯಾರ್ಹತೆ,ನಿಗಧಿಸಿದಂತೆ ಇರತಕ್ಕದ್ದು.

### ಪ್ರಕರಣ–233–ತಾಂತ್ರಿಕ ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ

- ಸಂಭಂದ ಪಟ್ಟ ಇಲಾಖೆಯ ಮುಖ್ಯಸ್ಥರು ಮತ್ತು ವಿಭಾಗೀಯ ಮಟ್ಟದ ಇಲಾಖೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಎಲ್ಲಾ ಹಂತಗಳ ಪಂಚಯತಿಗಳ ಕಾಮಾಗಾರಿಗಳೂ ಅಭಿವೃದ್ಧಿ ಯೋಜನೆಗಳೂ ಆಯಾ ಯೋಜನೆಗಳ ತಾಂತ್ರಿಕ ಮತ್ತು ಹಣಕಾಸಿನ ಸೂತ್ರಗಳುನುಗುಣವಾಗಿ ಅನುಷ್ಠಾನದ ಗುಣಮಟ್ಟವನ್ನು ಪರಿಶೀಲಿಸಬಹುದು.
- ಪರಿಶಿಲಿಸಿದ ವರದಿಯನ್ನು ಸಂಬಂಧಪಟ್ಟ ಪಂಚಾಯತಿಗಳ ಅಧಿಕಾರಿಗಳಿಗೆ ಸಲ್ಲಿಸಬೇಕು.
- ಪರಿವೀಕ್ಷಣಾ ಅಧಿಕಾರಿಯು ವರದಿ ನೀಡಿದ 30 ದಿನಗಳೊಳಗೆ ಸಂಬಂಧಪಟ್ಟ ಪಂಚಾಯತಿ ಸೂಕ್ತ ಕ್ರಮ ಕೈಗೊಳ್ಳುವುದು.

### ಪ್ರಕರಣ–234: ಗ್ರಾ.ಪಂ, ತಾ.ಪಂ. ಮತ್ತು ಜಿ.ಪಂ.ಗಳಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯ ಅಧಿಕಾರಗಳು

1. ಗ್ರಾಮ ಪಂಚಾಯತಿ & ತಾಲೂಕು ಪಂಚಾಯತಿಯ ಯಾವುದೇ ಪುಸ್ತಕವನ್ನು. ಲೆಕ್ಕದ ವಿವರದ ಯಾವುದೇ ದಾಖಲೆಯನ್ನು ಹಾಗೂ ವರಧಿಯನ್ನು ತರಿಸಿಕೊಳ್ಳಬಹುದು.

   ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯು ತನ್ನಯಾವುದೇ ಕರ್ತವ್ಯವನ್ನು ನೆರವೆರಿಸದ್ದಿದ್ದರೆ ನಿರ್ಧಿಷ್ಟ ಪಡಿಸಿದ ಅವಧಿಯೊಳಗೆ ಆ ಕರ್ತವ್ಯನ್ನು ನಿರ್ವಹಿಸುವಂತೆ ಆದೇಶಿಸಬಹುದು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಆದೇಶದ ವಿರುದ್ಧ ಪಂಚಾಯತಿಗಳು ಸರಕಾರಕ್ಕೆ ಅಫೀಲು ಸಲ್ಲಿಸಬಹುದು.
3. ಜಿಲ್ಲಾ ಪಂಚಾಯತಿಗೆ ಸಂಭಂದಿಸಿದಂತೆ ಸರಕಾರ ಈ ಮೇಲಿನ ಅಧಿಕಾರಗಳನ್ನು ಹೊಂದಿದೆ.

### ಪ್ರಕರಣ–235: ಗ್ರಾ.ಪಂ., ತಾ.ಪಂ ಹಾಗೂ ಜಿ.ಪಂ.ಗಳು ತಪ್ಪು ಎಸಗಿದ್ದಾಗ ಕರ್ತವ್ಯಗಳನ್ನು ನೇರವೇರಿಸಲು ಸರಕಾರದ ಹಾಗೂ ಜಿ.ಪಂ ಮತ್ತು ತಾ.ಪಂ ಯ ಅಧಿಕಾರಗಳು

1) ಜಿಲ್ಲಾ ಪಂಚಾಯತಿ ತಪ್ಪು ಎಸಗಿದಾಗ ಸರಕಾರವು ತಾಲೂಕು ಪಂಚಾಯತಿ ತಪ್ಪು ಎಸಗಿದಾಗ ಜಿಲ್ಲಾ ಪಂಚಾಯತಿಯು ಹಾಗೆ ಗ್ರಾಮ ಪಂಚಾಯತಿ ತಪ್ಪು ಎಸಗಿದಾಗ ತಾಲ್ಲೂಕು ಪಂಚಾಯತಿಯು ವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿವೆ.
2) ಜಿ.ಪಂ ಆದೇಶದ ವಿರುದ್ಧ ಆಫೀಲನ್ನು ತಾ.ಪಂ ಯು ಸರಕಾರಕ್ಕೆ ಮತ್ತು ತಾ.ಪಂ ಯ ಆದೇಶದ ವಿರುದ್ಧ ಅಫಿಲನ್ನು ಗ್ರಾ.ಪಂ ಯು ಜಿ.ಪಂ ಗೆ 30 ದಿನದೊಳಗೆ ಸಲ್ಲಿಸಬಹುದು.

### ಪ್ರಕರಣ–236: ಗ್ರಾ.ಪಂ ತಾ.ಪಂ ಜಿ.ಪಂ ಯ ವ್ಯವಹಾರಗಳ ಬಗ್ಗೆ ಸರಕಾರವು ವಿಚಾರಣೆ ನಡೆಸುವುದು.

1) ಗ್ರಾ.ಪಂ., ತಾ.ಪಂ ಜಿ.ಪಂ ಗಳಿಗೆ ಸಂಬಂಧ ಪಡುವ ಮಂಜೂರಾತಿ, ಒಪ್ಪಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುವ ಅಧಿಕಾರ ಸರಕಾರ ಹೊಂದಿದೆ.

### ಪ್ರಕರಣ–237: ಕಾನೂನು ಬಾಹಿರ ಆದೇಶದ ಹಾಗೂ ನಿರ್ಣಯದ ಅಮಲ್ದಾರಿಯನ್ನು ಅಮಾನತುಗೊಳಿಸುವ ಅಧಿಕಾರ

1) ಯಾವುದೇ ಅಧಿಕಾರಿಯು ಗ್ರಾ.ಪಂ ಯ ಯಾವುದೇ ಆದೇಶ ಹಾಗೂ ನಿರ್ಣಯವು ಕಾನೂನು ಬಾಹಿರವಾಗಿದ್ದು ಸಾರ್ವಜನಿಕರಿಗೆ ಹಾನಿಯನ್ನುಂಟು ಮಾಡುತ್ತಿದೆ ಎಂದು ಬಾವಿಸಿದರೆ ಅಂತಹ ಆದೇಶ ಹಾಗೂ ನಿರ್ಣಯವನ್ನು ತಾ.ಪಂ ಯ ಅಧ್ಯಕ್ಷನು

downloaded from: www.kpscvaani.com

ಅಮಾನತು ಮಾಡಬಹುದು.ಇಂತಹ ಆದೇಶದ ಪ್ರತಿಯನ್ನು ಗ್ರಾಮ ಪಂಚಾಯತಿ ಮತ್ತು ಜಿಲ್ಲಾಪಂಚಾಯತಿಗೆ ಕಳುಹಿಸಬೇಕು

2) ಜಿಲ್ಲಾ ಪಂಚಾಯತಿಯು ಹೊರಡಿಸಿದ ಯಾವುದೇ ಆದೇಶ ಹಾಗೂ ನಿರ್ಣಯವು ಕಾನೂನು ಬಾಹಿರ ಎಂದು ಸರಕಾರವು ಬಾವಿಸಿದರೆ ಅದನ್ನು ಅಮಾನತ್ತಿನಲ್ಲಿಡುವ ಅಧಿಕಾರ ಸರಕಾರಕ್ಕೆ ಇದೆ.

### ಪ್ರಕರಣ–238: ಸಾಮಗ್ರಿ ಸಾಧನ ಸಲಕರಣೆಗಳ ಖರೀದಿ

1) ಸರಕಾರದ ಸಾಮಾನ್ಯ ಹಾಗೂ ವಿಶೇಷ ಆದೇಶಗಳ ಅನ್ವಯ ಜಿಲ್ಲಾ ಪಂಚಾಯತಿ ತಾಲ್ಲೂಕು ಪಂಚಾಯತಿ & ಗ್ರಾಮ ಪಂಚಾಯತಿಗಳಿಗೆ ಅಗತ್ಯವಿರುವ ಸಾಮಗ್ರಿ ಸಾಧನ ಸಲಕರಣೆಗಳನ್ನು ಖರಿಧಿ ಮಾಡಲು ಟೆಂಡರನ್ನು ಅಹ್ವಾನಿಸತಕ್ಕದ್ದು ಮತ್ತು ಪರೀಕ್ಷಿಸತಕ್ಕದ್ದು.

### ಪ್ರಕರಣ–239: ಕೆಲವು ಸಂಧರ್ಭಗಳಲ್ಲಿ ಆಡಾಳಿತಾಧಿಕಾರಿಯನ್ನು ನೇಮಕ ಮಾಡುವ ಅಧಿಕಾರ

- ಜಿ.ಪಂ ಮತ್ತು ತಾ.ಪಂ ಚುನಾವಣೆ ನಡಸಲು ಸಕ್ಷಮ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದರೆ ಆಡಳಿತಾದಿಕಾರಿಯನ್ನು ನೇಮಕ ಮಡತಕ್ಕದ್ದು.
- ಜಿ.ಪಂ.ಯ ಹಾಗೂ ತಾ.ಪಂ ಒಟ್ಟು ಸದಸ್ಯರಲ್ಲಿ 2/3 ರಷ್ಟಕ್ಕಿಂತ ಹೆಚ್ಚಿನ ಸದಸ್ಯರು ರಾಜೀನಾಮೆ ನೀಡಿದಾಗ ಸರಕಾರವು ಅಧಿಸೂಚನೆಯ ಮೂಲಕ ಆಡಳಿತಾಧಿಕಾರಿಯನ್ನು ನಿಗಧಿತ ದಿನಗಳವರೆಗೆ ನೇಮಿಸತಕ್ಕದ್ದು.
- ಆಡಳಿತ ಅಧಿಕಾರಿಯ ಅವಧಿ 5ವರ್ಷಗಳಾಗಿರುತ್ತದೆ.

### ಪ್ರಕರಣ–240: ಪಂಚಾಯತಿಗಳ ಪಾತ್ರವನ್ನು ನಿಧಿಷ್ಟ ಪಡಿಸಲು ಸರಕಾರದ ಅಧಿಕಾರ

- ಸರಕಾರವು ಸಾಮಾನ್ಯ ಹಾಗೂ ವಿಶೇಷ ಆದೇಶದ ಮೂಲಕ ಅನುಸೂಚಿ–1.11 ಮತ್ತು.111 ರಲ್ಲಿ ನಿದಿಷ್ಟ ಪಡಿಸಿದ ಕಾರ್ಯಗಳಿಗೆ ಸಂಬಂದಿಸಿದಂತೆ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಗ್ರಾ.ಪಂ ತಾ.ಪಂ,ಮತ್ತು ಜಿ.ಪಂ.ಗಳಿಗೆ ನಿರ್ದಿಷ್ಟ ಪಡಿಸತಕ್ಕದ್ದು.

downloaded from: www.kpscvaani.com


ಅಧ್ಯಾಯ 17

# ಹಣಕಾಸು ನಿಯಂತ್ರಣ ಮತ್ತು ಲೆಕ್ಕ ಪರಿಶೋಧನೆ

### ಪ್ರಕರಣ-241: ಗ್ರಾಮ ಪಂಚಾಯತಿಯ ಲೆಕ್ಕಗಳ ಮತ್ತು ಬಜೆಟಿನ ಮಂಡನೆ

1) PDO ರವರು ಏಪ್ರೀಲ್-1ರಿಂದ ಮಾರ್ಚ್-31 ರವರೆಗಿನ ಆರ್ಥಿಕ ವರ್ಷದ ಬಜೆಟನ್ನು ಫೆಬ್ರುವರಿ-1ರಿಂದ ಮಾರ್ಚ್-10 ರನಡುವೆ ನಡೆಯುವ ಸಭೆಯಲ್ಲಿ ಮಂಡಿಸತಕ್ಕದ್ದು.
2) ಗ್ರಾಮ ಪಂಚಯತಿ ಅಂಗೀಕರಿಸಿದ ಬಜೆಟನ್ನು ನಿಗದಿತ ದಿನಾಂಕ ದೊಳಗೆ ತಾಲೂಕು ಪಂಚಾಯತಿಗೆ ಕಳುಹಿಸತಕ್ಕದ್ದು
3) ಬಜೆಟ್ ನಿಯಮಗಳಿಗನುಸಾರವಾಗಿ ಇಲ್ಲದಿದ್ದರೆ ತಾ.ಪಂ ಯು ಬಜೆಟ್‌ನ್ನು ಸ್ವೀಕರಿಸಿದ ದಿನಾಂಕದಿಂದ 2 ತಿಂಗಳೊಳಗೆ ಅದನ್ನು ಮಾರ್ಪಾಟು ಮಾಡತಕ್ಕದ್ದು.
4) ಗ್ರಾ.ಪಂ ಯು ಮೊದಲ ಬಜೆಟ್ ಅಂದಾಜನ್ನು ಅಂಗೀಕರಿಸಲು ತಪ್ಪಿದ್ದಲ್ಲಿ PDO ರವರು ಬಜೆಟ್ ಅಂದಾಜನ್ನು ತಾ.ಪಂ.ಗೆ ಕಳುಹಿಸತಕ್ಕದ್ದು ಮತ್ತು ಅದನ್ನು ಮಾರ್ಪಾಟು ಇಲ್ಲದೆ ತಾ.ಪಂ ಯು ಅನುಮೋದಿಸಿದರೆ EO ಪ್ರಮಾಣಿಕರಿಸತಕ್ಕದ್ದು. ಇದು ಗ್ರಾ.ಪಂ.ಯು ಅನುಬೋದಿಸಿದಂತೆಯೇ ಅನುಮೋದಿಸಲಾಗಿದೆ ಎಂದು ಭಾವಿಸತಕ್ಕದ್ದು.

### ಪ್ರಕರಣ-242: ಬಜೆಟ್ ಪರಿಷ್ಕರಣೆ

- ಬಜೆಟ್‌ನಲ್ಲಿ ಜಮೆ ಮತ್ತು ವಿವಿಧ ಸೇವೆಗಳಿಗೆ ಮಾಡಬೇಕಾದ ಮೊತ್ತಗಳ ಹಂಚಿಕೆ ಬಗ್ಗೆ ಮಾರ್ಪಾಡು ಮಾಡಬಹುದು.ಆದರೆ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಗ್ರಾಮ ಪಂಚಾಯತಿಯು ಅನುಮೊದಿಸಿದ ಅನಧಾನದಲ್ಲಿ ಶೇ-10ಕ್ಕಿಂತ ಹೆಚ್ಚಿಗೆ ಕಡಿತವನ್ನು ಅಇಔ ರವರ ಅನುಮೋದನೆ ಇಲ್ಲದೆ ಮಾಡುವಂತಿಲ್ಲ.

### ಪ್ರಕರಣ-243: ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಭಂಧ

1) ಗ್ರಾಮ ಪಂಚಾಯತಿಯು ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಗಳಿಗನುಸಾರ ಇಡಬೇಕು
2) ಗ್ರಾಮ ಪಂಚಾಯತಿಯು ಆರ್ಥಿಕ ವರ್ಷದ ಮುಕ್ತಾಯದ ತರುವಾಯ ನಡೆಸಿದ ಮೊದಲನೇ ಸಾಮಾನ್ಯ ಸಭೆಯಲ್ಲಿ ಆ ವರ್ಷದ ಲೆಕ್ಕಪತ್ರಗಳನ್ನು ಅಂಗಿಕರಿಸಬೇಕು.

### ಪ್ರಕರಣ-244: ಲೆಕ್ಕಪತ್ರಗಳ ರವಾನೆ

- ಗ್ರಾಮ ಪಂಚಾಯತಿಯು ವಾರ್ಷಿಕಲೆಕ್ಕಪತ್ರಗಳನ್ನು ಅಂಗಿಕರಿಸಿದ ತರುವಾಯ ಸಾದ್ಯವಾದಷ್ಟು ಬೇಗನೆ ಸೂಕ್ತ ವೂಚರ್/ರಸೀಧಿ ಯೊಂದಿಗೆ ಜಿಲ್ಲಾಪಂಚಾಯತಿಗೆ ಸಲ್ಲಿಸಬೇಕು

### ಪ್ರಕರಣ-245: ವಸೂಲಾಗದ ಮೊತ್ತವನ್ನು ವಜಾಮಾಡುವ ಅಧಿಕಾರ

- ಗ್ರಾ.ಪಂ.ಯು 1000ರೂ.ಗಳ ವರೆಗಿನ ಯಾವುದೆ ದರ ಶುಲ್ಕ ಹಾಗೂ ಇತರೆ ಬಾಕಿ ಮೊತ್ತವನ್ನು ಮನ್ನ ಮಾಡುವ ಅಥವಾ ವಜ ಮಾಡುವ ಅಧಿಕಾರ ಹೊಂದಿದೆ
- ಬಾಕಿ ಮೊತ್ತ ಒಂದು ಸಾವಿರ(1000) ರೂಪಾಯಿ ಗಳಿಗೆ ಮೀರಿದ್ದರೆ ತಾ.ಪಂ ಪೂರ್ವಾನುಮತಿ ಪಡೆದು ವಜಾ ಮಾಡಬಹುದು.

### ಪ್ರಕರಣ-246.ಲೆಕ್ಕ ಪತ್ರಗಳ ಪರಿಶೋಧನೆ :

1) ಪ್ರತಿಯೊಂದು ಗ್ರಾಮ ಪಂಚಾಯತಿಯು ಲೆಕ್ಕ ಪತ್ರಗಳನ್ನು ರಾಜ್ಯ ಲೆಕ್ಕಪತ್ರ ನಿಯಂತ್ರಕರು ನೇಮಿಸಿದ ಅಧಿಕಾರಿಯು ತಪಾಸಣೆ ಮಾಡುತ್ತಾರೆ.
2) ಅಂತಹ ಲೆಕ್ಕಪರಿಶೋಧಕನಿಗೆ ಗ್ರಾಮ ಪಂಚಾಯತಿಯ ಲೆಕ್ಕಪತ್ರ ಗಳನ್ನು ಮತ್ತು ಇತರ ಧಾಖಲೆ ಗಳನ್ನು ನೋಡುವ ಅಧಿಕಾರ ಇರುತ್ತದೆ
3) ಲೆಕ್ಕ ಪತ್ರಕ್ಕೆ ಸಂಬಂಧಿಸಿದ ಸಭೆಯಲ್ಲಿ ನಿಯಮಿಸಲ್ಪಟ್ಟ ಅಧಿಕಾರಿ ಭಾಗವಹಿಸುವಂತೆ ಪಂಚಾಯತಿ ಅಭಿವೃಧ್ಧಿ ಅಧಿಕಾರಿ ನೋಡಿಕೊಳ್ಳುತ್ತಾರೆ
4) ಸಂಬಂಧಿಸಿದ ಕಾಮಗಾರಿಗೆ ಸೂಕ್ತ ಧಾಖಲೆ/ವೋಚರ್ ಗಳನ್ನು ನೀಡುವಲ್ಲಿ ವ್ಯಕ್ತಿ ವಿಫಲನಾದರೆ ಅವನಿಗೆ ಒಂದುನೂರು(100) ರೂಪಾಯಿ ದಂಡ ವಿಧಿಸಲಾಗುತ್ತದೆ .
5) ಲೆಕ್ಕ ಪರಿಶೋಧಕನು ಲೆಕ್ಕ ಪರಿಶೋಧನೆ ಮುಕ್ತಾಯದ ಒಂದು ತಿಂಗಳೊಳಗೆ ಲೆಕ್ಕ ಪರಿಶೋಧನಾ ವರಧಿಯ ಒಂದೊಂದು ಪ್ರತಿಯನ್ನು ಗ್ರಾಮ ಪಂಚಾಯತಿಗೆ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸಿಕೊಡುತ್ತಾರೆ.
6) ಲೆಕ್ಕ ಪರಿಶೋಧನಾ ವರಧಿಯಲ್ಲಿ ಎತ್ತಿತೋರಿಸಿದ ಲೋಪದೋಷ ಗಳನ್ನು ಸಂಬಂಧ ಪಟ್ಟವರು ಸರಿಪಡಿಸಿಕೊಳ್ಳಬೇಕು.
7) ಗ್ರಾಮ ಪಂಚಾಯತಿಯಲ್ಲಿ ಕಾನೂನು ಬಾಹಿರ ವೆಚ್ಚವೆಂದು ಕಂಡು ಬಂದರೆ ಕಾರ್ಯ ನಿರ್ವಾಹಕ ಅಧಿಕಾರಿ ಅನುಮತಿಯನ್ನು ಪಡೆದು ಅದನ್ನು ತಡೆಹಿಡಿಯ ಬಹುದು
8) ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ನಿಯಂತ್ರಕರು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಕ್ರೂಡೀಕೃತ ವಾರ್ಷಿಕ ವರದಿಯನ್ನು ಸರಕಾರಕ್ಕೆ ಸಲ್ಲಿಸಬೇಕು. ರಾಜ್ಯ ಸರಕಾರವು ಅಂತಹ ವರದಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಬೇಕು.

### ಪ್ರಕರಣ 247: ತಾಲೂಕು ಪಂಚಾಯತಿಯ ಲೆಕ್ಕಪತ್ರಗಳ ಮತ್ತು ಬಜೆಟ್‌ನ ಮಂಡನೆ

1) ತಾಲೂಕು ಪಂಚಾಯತಿಯು ಫೆಬ್ರವರಿ 1ನೇ ತಾರಿಖಿನಿಂದ ಮಾರ್ಚ 10ನೇ ತಾರೀಕಿನೊಳಗೆ ನಡೇಯುವ ಸಾಮನ್ಯಾ ಸಭೆಯಲ್ಲಿ ಬಜೆಟ್‌ನ್ನು ಮಂಡಿಸತಕ್ಕದ್ದು.
2) ತಾಲೂಕು ಪಂಚಾಯತಿಯು ಅಂಗೀಕರಿಸಿದಂತಹ ಬಜೆಟನ್ನು ಸರಕಾರವು ನಿಗದಿಪಡಿಸಿದ ದಿನಾಂಕಕ್ಕೆ ಮೊದಲು ಜಿಲ್ಲಾ ಪಂಚಾಯತಿಗೆ ಕಳುಹಿಸಬೇಕು

downloaded from: www.kpscvaani.com

3) ನಿಗದುಪಡಿಸಿದ ದಿನಾಂಕದೊಳಗೆ ತಾ.ಪಂ.ಯು ಬಜೆಟ್ ಮಂಡಿಸಲು ವಿಫಲವಾದರೆ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಯವರು ಬಜೆಟ್ ಪ್ರತಿಯನ್ನು ಜಿಲ್ಲಾಪಂಚಾಯತ್ ಗೆಕಳುಹಿಸಬೇಕು ಮತ್ತು ಜಿಲ್ಲಾ ಪಂಚಾಯತಿಯು ಸೂಕ್ತ ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಅದನ್ನು ಅನುಮೊಧಿಸಬೇಕು.

4) ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸಮೀತಿಯು ತಾ.ಪಂ.ಯ ವಾರ್ಷಿಕ ಬಜೆಟ್‌ನ್ನು ಸಿದ್ದಪಡಿಸತಕ್ಕದ್ದು.

### ಪ್ರಕರಣ 248: ಬಜೆಟ್ ಪರಿಷ್ಕರಣೆ

ಎ) ತಾಲೂಕು ಪಂಚಾಯತಿಯ ಯಾವುದೇ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುಮೋದಿಸಿದ ಅನುದಾನದಲ್ಲಿ ಶೇಕಡ(10%) ಹತ್ತಕ್ಕಿಂತ ಹೆಚ್ಚಿಗೆ ಕಡಿತ ಮಾಡುವಂತಿಲ್ಲ. ಹಾಗೆ ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅನುಮೋದನೆ ಅತ್ಯಗತ್ಯ.

### ಪ್ರಕರಣ 249: ಪೂರಕ ಬಜೆಟ್

* ಅನಿವಾರ್ಯ ಸಂದರ್ಭದಲ್ಲಿ ಗ್ರಾ.ಪಂ., ತಾ.ಪಂ. ಹಾಗೂ ಜಿ.ಪಂ. ಗಳು ಪೂರಕ ಬಜೆಟನ್ನು ಮಂಡಿಸಬಹುದು.
* ಪೂರಕ ಬಜೆಟ್ ಜಿಲ್ಲಾ ಪಂಚಾಯತಿ ಪರಾಮರ್ಶಿಸಬೇಕು ಮತ್ತು ಅನುಮೋದನೆಗಾಗಿ ಸರಕಾರಕ್ಕೆ ಒಪ್ಪಿಸಬೇಕು.

### ಪ್ರಕರಣ 250: ಲೆಕ್ಕಪತ್ರಗಳನ್ನು ಇಟ್ಟುಕೊಂಡುಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ

1) ತಾಲ್ಲೂಕು ಪಂಚಾಯತಿಯು ಆದಾಯಮತ್ತು ವೆಚ್ಚದ ಲೆಕ್ಕ ಪತ್ರಗಳನ್ನು ನಿಯಮಗಳಿಗನುಸಾರ ಇಡಬೇಕು.

2) ತಾಲ್ಲೂಕು ಪಂಚಾಯತಿಯ ಆರ್ಥಿಕ ವರ್ಷವು ಮುಕ್ತಾಯವಾದ ತರುವಾಯ ನಡೆಸಿದ ಮೊದಲನೇಸಾಮಾನ್ಯ ಸಭೆಯಲ್ಲಿ ಆವರ್ಷದ ಲೆಕ್ಕ ಪತ್ರಗಳನ್ನು ಅಂಗೀಕರಿಸಬೇಕು.

### ಪ್ರಕರಣ 251: ಲೆಕ್ಕಪತ್ರಗಳ ರವಾನೆ

* ತಾಲ್ಲೂಕು ಪಂಚಾಯತಿ ವಾರ್ಷಿಕ ಲೆಕ್ಕ ಪತ್ರಗಳನ್ನು ಅಂಗೀಕರಿಸಿದ ತರುವಾಯ ಸಾದ್ಯವಾದಷ್ಟು ಬೇಗನೇನಿಗಧಿತ ನಮೂನೆಯಲ್ಲಿ ಜಿಲ್ಲಾಪಂಚಾತಿಗೆ ಕಳುಹಿಸಿಕೊಡಬೇಕು.

### ಪ್ರಕರಣ 252: ವಸೂಲಾಗದ ಮೊತ್ತವನ್ನು ವಜಾ/ಮನ್ನಾಮಾಡುವ ಅಧಿಕಾರ

- ತಾ.ಪಂ.ಯು 1000ರೂ.ಗಳ ವರೆಗಿನ ಬಾಕಿ ಮೊತ್ತವನ್ನು ಮನ್ನಮಾಡುವ ಅಥವಾ ವಜಮಾಡುವ ಅಧಿಕಾರ ಹೊಂದಿದೆ
- ಬಾಕಿ ಮೊತ್ತ ಒಂದುಸಾವಿರ(1000) ರೂಪಾಯಿ ಗಳಿಗೆ ಮೀರಿದ್ದರೆ ಜಿ.ಪಂ ಪೂರ್ವಾನುಮತಿ ಪಡೆದು ವಜಾ ಮಾಡಬಹುದು.

### ಪ್ರಕರಣ 253: ಲೆಕ್ಕ ಪತ್ರಗಳ ಪರಿಶೋಧನೆ

- ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ನಿಧಿಯ ಲೆಕ್ಕ ಪತ್ರಗಳನ್ನು ಪ್ರತಿ ವರ್ಷ ಭಾರತದ ಕಂಪ್ಟ್ರೋಲರ್ ಮತ್ತು ಅಡಿಟರ್ ಜನರಲ್ ಅವರಿಂದ ತಪಾಸಣೆಮಾಡಿಸಬೇಕು.
- ಲೆಕ್ಕ ಪರಿಶೊಧಕರು ತಾಲೂಕ್ ಪಂಚಾಯತಿಯ ಲೆಕ್ಕಪತ್ರವನ್ನು ಮತ್ತು ಇತರೆ ಧಾಖಲೆ ಗಳನ್ನು ನೋಡುವ ಅಧಿಕಾವನ್ನು ಹೊಂದಿರುತ್ತಾರೆ.
- ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದ ಕ್ರೋಡಿಕೃತ ಲೆಕ್ಕಪರಿಶೋಧನಾ ವರಧಿಯನ್ನು ಲೆಕ್ಕಪರಿಶೋಧಕರು ಪ್ರತಿ ವರ್ಷ ಸರಕಾರಕ್ಕೆ ಕಳುಹಿಸಿಕೊಡುತ್ತಾರೆ ಮತ್ತು ಸರ್ಕಾರ ಕ್ರೋಡಿಕೃತ ವರದಿಯನ್ನು ರಾಜ್ಯ ವಿಧಾನ ಮಂಡಲಗಳು ಉಭಯ ಸದನದಲ್ಲಿ ಮಂಡಿಸಬೇಕು.

### ಪ್ರಕರಣ 254: ಲೆಕ್ಕ ಪರಿಶೋಧನಾ ವರದಿಯ ಮೇಲೆ ತಾಲ್ಲೂಕು ಪಂಚಾತಿಯ ಕ್ರಮ

- ಲೆಕ್ಕ ಪರಿಶೋಧನಾ ವರದಿಯ ನಂತರ, ಯಾವುದೇ ಹಣಕಾಸು ವ್ಯವಹಾರದಲ್ಲಿ ತೊಡಗಿದ ವ್ಯಕ್ತಿಯಿಂದ ಬಾಕಿ ಹಣವನ್ನು ವಸೂಲಿ ಮಾಡಬಹುದು.

1) ತಾ.ಪಂ.ಯು ಪ್ರತಿಯೊಂದು ಋಣಭಾರದ ಸಂಬಂದದಲ್ಲಿ ತಾನು ತಿರ್ಮಾನ ತೆಗೆದಯಕೊಂಡರೆ ಕಾರಣಗಳನ್ನು ಬರಹದಲ್ಲಿ ತಿಳಿಸಬೇಕು ಮತ್ತು ಯಾರ ಮೇಲೆ ಋಣಭಾರ ಹೊರಿಸಲಾಗಿಒದೆಯೊ ಅವರಿಗೆ ಅದರ ಒಂದು ಪ್ರತಿಯನ್ನು ನೀಡಬೇಕು.

### ಪ್ರಕರಣ 255: ಬಾಕಿ ಮೊತ್ತಗಳ ವಸೂಲಿ

1) ಯಾವುದೇ ವ್ಯಕ್ತಿ ಇಂದ ಬಾಕಿ ಬರಬೇಕಾಗಿರುವ ಮೊತ್ತವನ್ನು ಮೂವತ್ತು ದಿನಗಳೊಳಗೆ ವಸೂಲಿಮಾಡಬೇಕು

2) ಅಂತಹ ವ್ಯಕ್ತಿ ಕಾಲಮಿತಿಯಲ್ಲಿ ಸಂದಾಯ ಮಾಡದಿದ್ದರೆ ವರ್ಷಕ್ಕೆ ಶೇ.15 ಬಡ್ಡಿಯೊಂದಿಗೆ ತಾ.ಪಂ. ವಸೂಲಿ ಮಾಡಬೇಕು.

3) ವಸೂಲಿಯಾದ ಅವಶ್ಯಕ ಖರ್ಚಿನ ಸಹಿತ ಭೂಕಂದಾಯ ಬಾಕಿಯಂತೆ ವಸೂಲಿ ಮಾಡಬೇಕು ಮತ್ತು ಅದನ್ನು ಪಂಚಾಯತಿ ನಿಧಿಗೆ ಜಮೆ ಮಾಡಬೇಕು.

### ಪ್ರಕರಣ 256: ಜಿಲ್ಲಾಪಂಚಾಯತಿಯ ಲೆಕ್ಕಪತ್ರಗಳು ಮತ್ತು ಬಜೆಟ್ ಮಂಡನೆ

1) ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾಸ್ಥಾಯಿ ಸಮಿತಿಯು ಒಂದು ಆರ್ಥಿಕ ವರ್ಷದ ಬಜೆಟ್‌ನ್ನು ಸಿದ್ದಪಡಿಸಬೇಕು.

* ಜಿ.ಪಂ.ಯು ಫೆಬ್ರುವರಿ.01 ರಿಂದ ಮಾರ್ಚ 10ರ ಒಳಗೆ ನಡೆಯುವ ಸಾಮನ್ಯಾ ಸಭೆಯಲ್ಲಿ ಬಜೆಟ್‌ನ್ನು ಮಂಡಿಸಬೇಕು.

2) ಜಿಲ್ಲಾ ಪಂಚಾಯತ್ ಅಂಗೀಕರಿಸಿದ ಬಜೆಟ್‌ನ್ನು ನಿಗದಿಪಡಿಸಿದ ದಿನಾಂಕಕ್ಕೆ ಮೊದಲು ಸರ್ಕಾರಕ್ಕೆ ಕಳುಹಿಸಬೇಕು

3) ಜಿಲ್ಲಾ ಪಂಚಾಯತಿಯು ನಿಗದಿತ ಕಾಲಾವಧಿಯ ಒಳಗೆ ಬಜೆಟ್ ಅಂಗೀಕರಿಸಲು ತಪ್ಪಿದ್ದಲ್ಲಿ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಬಜೆಟ್‌ನ್ನು ಸರ್ಕಾರಕ್ಕೆ ಕಳುಹಿಸಬೇಕು ಮತ್ತು ಸರ್ಕಾರವು ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸಬಹುದು.

### ಪ್ರಕರಣ 257: ಬಜೆಟ್ ಪರಿಷ್ಕರಣೆ

ಎ) ಜಿಲ್ಲಾ ಪಂಚಾಯತಿಯ ಯಾವುದೇ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುಮೋದಿಸಿದ ಅನುದಾನದಲ್ಲಿ ಶೇಕಡ (10%) ಹತ್ತಕ್ಕಿಂತ ಹೆಚ್ಚಿಗೆ ಕಡಿತ ಮಾಡುವಂತಿಲ್ಲ.

### ಪ್ರಕರಣ 258: ಪೂರಕ ಬಜೆಟ್

* ಜಿ.ಪಂ.ಯು ಅವಶ್ಯವೇನಿಸಿದ ಸಂದರ್ಭದಲ್ಲಿ ಪೂರಕ ಬಜೆಟ್‌ನ್ನು ಮಂಡಿಸಬಹುದು. ಪ್ರತಿಯೊಂದು ಪೂರಕ ಬಜೆಟ್‌ನ್ನು ಜಿಲ್ಲಾ ಪಂಚಾಯತಿ ಪರಾಮರ್ಶಿಸಬೇಕು ಮತ್ತು ಅನುಮೋದನೆಗಾಗಿ ಸರಕಾರಕ್ಕೆ ಒಪ್ಪಿಸಬೇಕು.

downloaded from: www.kpscvaani.com


### ಪ್ರಕರಣ 259: ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ

- ಜಿಲ್ಲಾ ಪಂಚಾಯತಿಯು ತನ್ನ ನಿಧಿ, ಆದಾಯ ಮತ್ತು ವೆಚ್ಚದ ಲೆಕ್ಕ ಪತ್ರಗಳನ್ನು ಗೊತ್ತುಪಡಿಸ ಬಹುದಾದಂತಹ ನಿಯಮಗಳಿಗನು ಸಾರವಾಗಿ ವೋಚರ್ ಮತ್ತು ರಸಿದಿಗಳೊಂದಿಗೆ ಇಡಬೇಕು.
- ಆರ್ಥಿಕ ವರ್ಷ ಮುಕ್ತಾಯವಾದ ನಂತರ ನಡೆಸಿದ ಮೋದಲನೆ ಸಾಮನ್ಯಾ ಸಭೆಯಲ್ಲಿ ಆ ವರ್ಷದ ಲೆಕ್ಕಪತ್ರಗಳನ್ನು ಅಂಗಿಕರಿಸತಕ್ಕದ್ದು

### ಪ್ರಕರಣ 260: ಲೆಕ್ಕಪತ್ರಗಳ ರವಾನೆ

- ಜಿಲ್ಲಾ ಪಂಚಾಯತಿ ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ಅಂಗೀಕರಿಸಿದ ತರುವಾಯ ಶೀಘ್ರವಾಗಿ ಸರಕಾರಕ್ಕೆ ಸಲ್ಲಿಸಬೇಕು.

### ಪ್ರಕರಣ 261: ವಸೂಲಾಗದ ಮೊತ್ತಗಳನ್ನು ವಜಾಮಾಡುವ ಅಧಿಕಾರ

- ಜಿ.ಪಂ.ಯು 1000ರೂ.ಗಳ ವರೆಗಿನ ಮೊತ್ತವನ್ನು ಮನ್ನಮಾಡುವ ಅಥವಾ ವಜಮಾಡುವ ಅಧಿಕಾರ ಹೊಂದಿದೆ
- ಬಾಕಿ ಮೊತ್ತ ಒಂದುಸಾವಿರ ರೂಪಾಯಿ ಗಳಿಗೆ ಮೀರಿದ್ದರೆ ಸರಕಾರದ ಪೂರ್ವಾನುಮತಿ ಪಡೆದು ವಜಾ ಮಾಡಬಹುದು.

### ಪ್ರಕರಣ 262: ಲೆಕ್ಕಪತ್ರಗಳ ಪರಿಶೋಧನೆ

1. ಭಾರತದ ಲೆಕ್ಕನೀಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು (CAG) ಜಿ.ಪಂ.ಯ ಲೆಕ್ಕಪತ್ರಗಳ ಪರಿಶೋಧನೆ ಮಾಡತಕ್ಕದ್ದು.
2. ಲೆಕ್ಕ ಪರಿಶೋಧನೆಯ ಉದ್ಧೇಶಕ್ಕಾಗಿ ಲೆಕ್ಕ ಪರಿಶೋಧಕರು ಎಲ್ಲಾ ಲೆಕ್ಕ ಪತ್ರಗಳನ್ನು ನೋಡುವ ಮತ್ತು ಪರಿಶೀಲಿಸುವ ಅಧೀಕಾರ ಹೊಂದಿರುತ್ತಾರೆ.
3. ರಾಜ್ಯದ ಎಲ್ಲಾ ಜಿ.ಪಂ.ಗಳ ಕ್ರೂಢೀಕೃತ ಲೇಕ್ಕ ಪರಿಶೋಧನೆ ವರದಿಯನ್ನು ಲೆಕ್ಕಪರಿಶೋಧಕರು ಸರಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸರಕಾರ ಜಿಲ್ಲಾ ಪಂಚಾಯತಿಗಳ ಲೆಕ್ಕ ಪರಿಶೋಧನಾ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುತ್ತದೆ.

### ಪ್ರಕರಣ 263: ಲೆಕ್ಕ ಪರಿಶೋಧಕನ ವರದಿಯ ಮೇಲೆ ಜಿಲ್ಲಾ ಪಂಚಾಯತಿಯ ಕ್ರಮ

1. ಜಿಲ್ಲಾ ಪಂಚಾಯತಿಯು, ಲೆಕ್ಕ ಪರಿಶೋಧಕರ ವರದಿಯ ಆಧಾರದ ಮೇಲೆ ಎತ್ತಿ ತೋರಿಸಿದ ಅಕ್ರಮ ವೆಚ್ಚದ ಬಗ್ಗೆ ಯಾವುದೇ ವ್ಯಕ್ತಿಯ ಮೇಲೆ ಋಣಭಾರ ಹೊರಿಸಬಹುದು.
2. ಜಿಲ್ಲಾ ಪಂಚಾಯತಿಯಿಂದ ಯಾರ ಮೇಲೆ ಋಣಭಾರ ಹೊರಿಸಲಾಗಿದೆಯೋ ಆ ವ್ಯಕ್ತಿಗೆ ಅದರ ಒಂದು ಪ್ರತಿಯನ್ನು ಕಳುಹಿಸಬೇಕು.

### ಪ್ರಕರಣ 264: ಅನುಮತಿ ಇಲ್ಲದ ಮೊತ್ತದ ವಸೂಲಿ

- ಯಾವುದೇ ವ್ಯಕ್ತಿಯಿಂದ ಬಾಕಿ ಬರಬೇಕಾಗಿದೆ ಎಂದರೆ ಜಿಲ್ಲಾ ಪಂಚಾಯತಿಯ ಪ್ರಾಮಾಣೀಕರಿಸಿರುವ ಪ್ರತಿಯು ಅವನಿಗೆ ತಲುಪಿದ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ ಜಿಲ್ಲಾ ಪಂಚಾಯತಿಗೆ ಸಂದಾಯ ಮಾಡಬೇಕು.
- ಬಾಕಿಯಾಗಿರುವ ದಿನಾಂಕದಿಂದ ಶೇ.15ರಷ್ಟು ಬಡ್ಡಿಯೊಂದಿಗೆ ಸಂದಾಯ ಮಾಡದಿದ್ದರೆ ಭೂಕಂದಾಯ ಬಾಕಿಯಂತೆ ವಸೂಲಿ ಮಾಡಿ ಜಿಲ್ಲಾ ಪಂಚಾಯತಿ ನಿಧಿಗೆ ಜಮೆ ಮಾಡಬೇಕು.

### ಪ್ರಕರಣ 265: ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಬಾಕಿ ವಸೂಲಾತಿಗೆ ಕಾರ್ಯವಿಧಾನ

1) ತಾ.ಪಂ. ಮತ್ತು ಜಿ.ಪಂ.ಗಳಿಗೆ ತೆರಿಗೆ ದರ ಫೀಜು ಮುಂತಾದವುಗಳು ಸಂದಾಯವಾಗದೆ ಬಾಕಿ ಉಳಿೀದಾಗ ಸಂದರ್ಭಾನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಹಕ ಅಧಿಕಾರಿ ನೋಟೀಸನ್ನು ಆ ವ್ಯಕ್ತಿಗೆ ಜಾರಿ ಮಾಡಬಹುದು.

2) ಅಂತಹ ವಸೂಲಾತಿ ನೋಟೀಸನ್ನು ತನಗೆ ಜಾರಿಗೊಳಿಸಿದ ಹದಿನೈದು (15) ದಿವಸಗಳೊಳಗೆ ಪಾವತಿಮಾಡದಿದ್ದರೆ ಚರ ಆಸ್ತಿ/ ಸ್ವತ್ತನ್ನು ಜಪ್ತಿಮಾಡಿ ಮಾಡುವ ಮೂಲಕ ವಸೂಲಿ ಮಾಡಬಹುದು

3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಗೊತ್ತು ಪಡಿಸಿರುವ ನಮೂನೆಯಲ್ಲಿ ವಾರೆಂಟ್ /ನೋಟೀಸನ್ನು ಜಾರಿ ಮಾಡುತ್ತಾರೆ

4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು ಬಾಕಿಯಿರುವ ಮೊತ್ತವನ್ನು ಸಂದಾಯಮಾಡಿದ ಮೇಲೆ ರಸೀಧಿಯನ್ನು ನೀಡಬೇಕು. ಆರಸೀಧಿಯಲ್ಲಿ ಸಂದಾಯ ಮಾಡಿದ ದಿನಾಂಕ, ಹೆಸರು, ಬಾಕಿ ಇರುವ ಮೊತ್ತ ಸಂದಾಯಮಾಡಿದ ಅವಧಿ ಕುರಿತು ಮಾಹಿತಿ (ವಿವರ) ಇರಬೇಕು.

7) ಸ್ವತ್ತಿನ ಜಪ್ತಿ ಕುರಿತಂತೆ ಯಾವುದೇ ತಕರಾರು ಇದ್ದರೆ ಸಿವಿಲ್ ನ್ಯಾಯಾಲಯಕ್ಕೆ ಪರಿಹಾರಕ್ಕಾಗಿ ಅರ್ಜಿದಾರ ಅರ್ಜಿ ಸಲ್ಲಿಸ ಬಹುದು.

### ಪ್ರಕರಣ 266 ಜಪ್ತಿ ಮತ್ತು ಮಾರಟದ ಷರತ್ತುಗಳು

- ತಾ.ಪಂ. ಮತ್ತು ಜಿ.ಪಂ.ಯು ಯಾವುದೇ ಸ್ವತ್ತು ಅಥವಾ ಆಸ್ತಿಯನ್ನು ಜಪ್ತಿಮಾಡುವ ಮತ್ತು ಮಾರಟಮಾಡುವ ಅಧಿಕಾರವನ್ನು ಹೊಂದಿದೆ.
- ಅವಶ್ಯಕತೆಗಿಂತ ಹೆಚ್ಚಿನ ಆಸ್ತಿಯನ್ನು ಜಪ್ತಿ ಮಾಡುವಂತಿಲ್ಲ.
- ಜಪ್ತಿ ಮತ್ತು ಮಾರಾಟಮಾಡುವ ಸ್ವತ್ತಿನ ಮೌಲ್ಯವು ಬಾಕಿಹಣಕ್ಕೆ ಸರಿಹೊಂದುವಂತಿರಬೇಕು.
- ಆಸ್ತಿ ಮಾರಾಟವಾದ ಮೇಲೆ ಹೆಚ್ಚಿನ ಹಣ ಉಳಿದರೆ ಸಂಬಂಧ ಪಟ್ಟ ಮಾಲಿಕನಿಗೆ ಆ ಹಣವನ್ನು ಹಿಂದಿರುಗಿಸಬೇಕು

### ಪ್ರಕರಣ 267: ಹಣಕಾಸು ಆಯೋಗ

1) ರಾಜ್ಯಪಾಲರು ಜಿಲ್ಲಾಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಹಣಕಾಸು ಪರಿಸ್ಥಿತಿಗಳನ್ನು ಪರಾಮರ್ಶಿಸಲು ಹಣಕಾಸು ಆಯೋಗವನ್ನು ರಚಿಸುತ್ತಾರೆ.

(ಎ) ರಾಜ್ಯದ ಜಿಲ್ಲಾಪಂಚಾಯತಿಗಳ, ತಾಲ್ಲೂಕಾ ಪಂಚಾಯತಿಗಳ ಮತ್ತು ಗ್ರಾಮಪಂಚಾಯತಿಗಳ ನಡುವೆ ಹಣಕಾಸಿನ ವಿತರಣೆ ಯನ್ನು ಇದು ನಿರ್ಧರಿಸುತ್ತದೆ.

(ಬಿ) ಮೂರು ರೀತಿಯ ಪಂಚಾಯತಿಗಳಿಗೆ ವಹಿಸಿಕೊಡಬಹುದಾದ ತೆರಿಗೆ, ಶುಲ್ಕ, ಸುಂಕ ಮತ್ತು ಫೀಜುಗಳನ್ನು ನಿರ್ಧರಿಸುವುದು.

(ಸಿ) ರಾಜ್ಯದ ಸಂಚಿತ ನಿಧಿಯಿಂದ ಜಿಲ್ಲಾಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಮತ್ತುಗ್ರಾಮಪಂಚಾಯತಿಗಳಿಗೆ ಸಹಾಯ ಧನವನ್ನು ನೀಡುವುದು.

2) ಹಣಕಾಸು ಆಯೋಗವು ಒಬ್ಬರು ಅಧ್ಯಕ್ಷರನ್ನು ಮತ್ತು ಇತರ ಇತರ ಇಬ್ಬರು ಸದಸ್ಯರನ್ನು ಒಳಗೊಂಡಿರುತ್ತದೆ, ಪ್ರಸ್ತುತವಾಗಿ ರಾಜ್ಯದಲ್ಲಿ 4ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ಸಿ.ಜಿ., ಚಿನ್ನಸ್ವಾಮಿ ಹಾಗೂ ಎಚ್.ಡಿ.ಅಮರನಾಥ, ಎಚ್.ಶಶಿಧರ್ ಅವರು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

 downloaded from: www.kpscvaani.com

3) ಹಣಕಾಸು ಆಯೋಗದ ಅಧ್ಯಕ್ಷರು ಅಥವಾ ಸದ್ಯಸ್ಯರು ಸರಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಗೆ ಲಿಖಿತವಾಗಿ ತಮ್ಮ ಹುದ್ದೆಗೆ ರಾಜಿನಾಮೆ ನೀಡಬಹುದು.

4) ರಾಜ್ಯಪಾಲರು ಈ ಪ್ರಕರಣದ ಅಡಿಯಲ್ಲಿ ಹಣಕಾಸು ಆಯೋಗ ಮಾಡಿದ ಪ್ರತಿಯೊಂದು ಶಿಫಾರಸ್ಸನ್ನು ರಾಜ್ಯವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡಬೇಕು.

* ರಾಜ್ಯಪಾಲರು ಈ ಅಧಿನಿಯಮ ಪ್ರಾರಂಭವಾದ ದಿನಾಂಕ ದಿಂದ ಒಂದುವರ್ಷ ಒಳಗಾಗಿ ಆ ತರುವಾಯ ಪ್ರತಿ ಐದನೇ ವರ್ಷವು ಮುಕ್ತಾಯ ವಾದಾಗ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ & ಗ್ರಾಮ ಪಂಚಾಯತಿ ಪರಾಮರ್ಶಿಸಲು ರಚಿಸುತ್ತಾರೆ.

* ಯಾವುದೇ ಕಾರಣದಿಂದ ವುಂಟಾದ ಆಕಸ್ಮಿಕ ಖಾಲಿಸ್ಥಾನವನ್ನು ಹೊಸದಾಗಿ ನೇಮಕ ಮಾಡುವ ಮೂಲಕ ಭರ್ತಿಮಾಡ ಬಹುದು.

# ಅಧ್ಯಾಯ 18 ಸಂಕೀರ್ಣ

### ಪ್ರಕರಣ 268 ಪಂಚಾಯತಿಗಳ ವಿಸರ್ಜನೆ :

1) ಗ್ರಾಮಪಂಚಾತಿ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದರೆ,ಮತ್ತು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡರೆ ಸರಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅಂತಹ ಗ್ರಾಮ ಪಂಚಾಯತಿಯನ್ನು ಸರಕಾರ ವಿಸರ್ಜಿಸಬಹುದು. ಈ ವಿಸರ್ಜನಾ ಪ್ರಕ್ರಿಯೆ ತಾಲ್ಲೂಕು ಹಾಗೂ ಜಿಲ್ಲಾಪಂಚಾಯತಿಗೂ ಯಥಾವತ್ತಾಗಿ ಅನ್ವಯಿಸುತ್ತದೆ.

2) ಪಂಚಾಯತಿ ವಿಸರ್ಜನೆಯಾದ ನಂತರ ನಿರ್ದಿಷ್ಟಪಡಿಸಿದ ದಿನಾಂಕದಿಂದ ಮೂರುಹಂತದ ಪಂಚಾಯತ್ ಸದಸ್ಯರು ತಮ್ಮ ಹುದ್ದೆಯನ್ನು ತೆರವು ಮಾಡಬೇಕು.

3) ಅಂತಹ ವಿಸರ್ಜನಾ ದಿನಾಂಕದ 6 ತಿಂಗಳ ಒಳಗಾಗಿ ಹೊಸಪಂಚಾತಿಯು ಪುನರ್‌ರಚನೆಯಾಗಬೇಕು.

4) ತನ್ನ ಅವಧಿ ಪೂರ್ಣಗೊಳ್ಳುವುದಕ್ಕೆ ಮೊದಲು ಪಂಚಾಯತಿಗಳು ವಿಸರ್ಜನೆಗೊಂಡಿದ್ದರೆ. ಬಾಕಿ ಉಳಿದ ಅವದಿಗೆ ಮಾತ್ರ ಹೊಸ ಪಂಚಾಯತಿ ಮುಂದುವರಿಯುತ್ತದೆ. ಸರಕಾರದ ಅಭಿಪ್ರಾಯದಲ್ಲಿ ತಾ.ಪಂ.ಯು ಅದರ ಅಧಿಕಾರವನ್ನು ಮೀರಿದರೆ, ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅಂತಹ ಜಿಲ್ಲಾ/ತಾಲ್ಲೂಕು ಪಂಚಾಯತಿಯನ್ನು ಸರಕಾರ ವಿಸರ್ಜಿಸ ಬಹುದು.

5) ವಿಸರ್ಜನೆ ಯಾದ ಪಂಚಾಯತಿಗಳಿಗೆ ಅಕ್ಷೇಪಣೆ ಸಲ್ಲಿಸಲು ಅವಕಾಶ ನಿಡಲಾಗಿರುತ್ತದೆ.

6) ಜಿಲ್ಲಾ ಪಂಚಾಯತ್ ಆದೇಶದಿಂದ ತೊಂದರೆಗೊಳಗಾದ ವ್ಯಕ್ತಿಯು ಅಂತಹ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು. ಗ್ರಾಮಪಂಚಾಯತಿ, ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಯಲ್ಲಿ ನಿಹಿತವಾಗಿ ರುವ ಎಲ್ಲಾ ಸ್ವತ್ತು, ವಿಸರ್ಜನೆಯ ಅವಧಿಯಲ್ಲಿ ಸರಕಾರದ ಸುಪರ್ಧಿಯಲ್ಲಿರುತ್ತದೆ.

* ವಿಸರ್ಜನೆ ಯಾದಮೇಲೆ ಹುದ್ದೆಯನ್ನು ತೆರವುಮಾಡುವ ವ್ಯಕ್ತಿಗಳು ಮರು ಚುನಾವಣೆಗೆ ಅರ್ಹರಾಗುತ್ತಾರೆ.

### ಪ್ರಕರಣ 269: ಅಪೀಲು/ಮೇಲ್ಮನವಿಗಳು

1) ಗ್ರಾಮ ಪಂಚಾಯತಿಯ ಯಾವುದೇ ಮೂಲ ಆದೇಶದಿಂದ ತೊಂದರೆಗೊಳಗಾದ ಯಾವುದೇ ವ್ಯಕ್ತಿಯು, ಆದೇಶದ ದಿನಾಂಕದಿಂದ 30ದಿನಗಳೊಳಗಾಗಿ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿ/ಅಪೀಲು ಮಾಡಿಕೊಳ್ಳ ಬಹುದು.

2) ಜಿಲ್ಲಾ ಪರಿಷತ್‌ನಲ್ಲಿ ಬಾಕಿಉಳಿದಿರುವ ಯಾವುದೇ ಅಫೀಲನ್ನು 1993ರ ಕ.ಪಂ.ರಾ ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಅಸಿಸ್ಟಂಟ್ ಕಮಿಷನರ್‌ರವರಿಗೆ ವರ್ಗಾವಣೆ ಮಾಡತಕ್ಕದ್ದು.

### ಪ್ರಕರಣ 270: ಸ್ಥಾಯಿ ಸಮೀತಿಯ ತಿರ್ಮಾನಗಳ ಮೇಲೆ ಅಧಿಕಾರ

* ಮೂರು ಹಂತದ ಪಂಚಾಯತ್‌ರಾಜ್ ಸಂಸ್ಥೆಗಳು ತಮ್ಮ ಅಧೀನದ ಸ್ಥಾಯಿಸಮೀತಿಗಳು ಮಾಡಿದ ತೀರ್ಮಾನಗಳನ್ನು ಮಾರ್ಪಾಟು ಮಾಡುವ ಅಥವಾ ಅನೂರ್ಜಿತ ಗೊಳಿಸುವ ಅಧಿಕಾರ ಹೊಂದಿರುತ್ತದೆ.

### ಪ್ರಕರಣ 271: ಚುನಾವಣಾ ಉದ್ದೇಶ ಗಳಿಗಾಗಿ ಆವರಣ, ವಾಹನ ಹಾಗೂ ಇತ್ಯಾದಿಗಳನ್ನು ಕಡ್ಡಾಯವಾಗಿ ಕೊರುವುದು

1) ಎ. ಯಾವುದೇ ಆವರಣವು, ಮತದಾನ ಕೇಂದ್ರವಾಗಿ ಉಪಯೋಗಿಸುವ ಉದ್ದೇಶಕ್ಕಾಗಿ ಬೇಕಾಗುವ ಸಂಭವವಿದೆ ಎಂದು ಕಂಡು ಬಂದರೆ.

2) ಎ.ಆವರಣ ಎಂದರೆ ಯಾವುದೇ ಭೂಮಿ, ಕಟ್ಟಡ, ಗುಡಿಸಲು ಯಾವುದೇ ಭಾಗವನ್ನು ಒಳಗೊಳ್ಳುತ್ತದೆ.

ಬಿ. ವಾಹನ ಎಂದರೆ ಯಾಂತ್ರಿಕ ಶಕ್ತಿಯಿಂದ ಉಪಯೊಗವಾಗುವ ವಾಹನ ಎಂದರ್ಥ

* ಯಾವುದೇ ವಾಹನ, ನೌಕೆ, ಅಥವಾ ಪ್ರಾಣಿಯು ಯಾವುದೇ ಮತದಾನ ಕೇಂದ್ರಕ್ಕೆ ಮತಪೆಟ್ಟಿಗೆಗಳನ್ನು ಸಾಗಿಸುವ ಉದ್ದೇಶಕ್ಕಾಗಿ ಉಪಯೋಗಕ್ಕಾಗಿ ಕಡ್ಡಾಯವಾಗಿ ಕೋರಬಹುದು.

### ಪ್ರಕರಣ 272: ನಷ್ಟ ಪರಿಹಾರ ಸಂದಾಯ

ಆ ಆವರಣ, ಕಟ್ಟಡ ಮತ್ತು ಭೂಮಿ ಬಳಕೆಯ ಸಂದರ್ಭದಲ್ಲಿ ನಷ್ಟ ಉಂಟಾದರೆ ದಂಡವನ್ನು ಭರಿಸಬೇಕು. ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಯಾವುದೇ ವಾಹನ, ನೌಕೆ, ಪ್ರಾಣಿಯನ್ನು ಕಡ್ಡಾಯವಾಗಿ ಕೊರಿದಾಗಲೆಲ್ಲಾ ಜಿ.ಪಂ. ತಾ.ಪಂ. ಮತ್ತು ಗ್ರಾ.ಪಂ. ಯಿಂದ ಮಾಲಿಕನಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕು.

downloaded from: www.kpscvaani.com


**ಪ್ರಕರಣ 273: ಮಾಹಿತಿಯನ್ನು ಪಡೆಯುವ ಅಧಿಕಾರ**

ನಿರ್ದಿಷ್ಟಪಡಿಸಬಹುದಾದಂತಹ ಸ್ವತ್ತಿಗೆ ಸಂಬಂಧಪಟ್ಟಂತೆ ವ್ಯಕ್ತಿ ಯಿಂದ ಮಾಹಿತಿಯನ್ನು ನೀಡಲು ಯಾವುದೇ ವ್ಯಕ್ತಿಯನ್ನು ಒತ್ತಾಯ ಮಾಡಬಹುದು, ನಿರ್ದಿಷ್ಟಪಡಿಸಿದ ಸ್ವತ್ತಿಗೆ ಸಂಬಂಧಪಟ್ಟ ಅವನಲ್ಲಿರುವಂಥ ಮಾಹಿತಿಯನ್ನು ಒದಗಿಸಲು ಯಾವನೇ ವ್ಯಕ್ತಿ ಯನ್ನು ಅಗತ್ಯಪಡಿಸಬಹುದು.

**ಪ್ರಕರಣ 274: ಆವರಣ ಇತ್ಯಾದಿಗಳಿಗೆ ಪ್ರವೇಶಿಸುವ ಮತ್ತು ಅವುಗಳನ್ನು ಪರಿಶೀಲಿಸುವ ಅಧಿಕಾರ**

ಈ ಬಗ್ಗೆ ಅಧಿಕಾರ ನೀಡಿರುವ ಯಾವುದೇವ್ಯಕ್ತಿಯು ಅಂಥ ಆವರಣ, ವಾಹನ, ನೌಕೆ, ಪ್ರಾಣಿಗಳಿಗೆ ಸಂಬಂಧಪಟ್ಟ ಆದೇಶವನ್ನು ಮಾಡಬೇಕು. ಆ ಆವರಣದೊಳಗೆ ಪ್ರವೇಶಿಸಬಹುದು ಮತ್ತು ಅಂಥ ಆವರಣ ಮತ್ತು ಅದರಲ್ಲಿರುವ ಯಾವುದೇ ವಾಹನ, ನೌಕೆ, ಪ್ರಾಣಿಗಳನ್ನು ಪರಿಶೀಲಿಸಬಹುದು.

**ಪ್ರಕರಣ 275: ಕಡ್ಡಾಯವಾಗಿ ಕೋರಲಾದ ಆವರಣದಿಂದ ಹೊರಹಾಕುವುದು**

1) ಮಾಡಿದ ಆದೇಶವನ್ನು ಉಲ್ಲಂಘಿಸಿದಾಗ ಅಂಥಹ ವ್ಯಕ್ತಿಯನ್ನು ಆವರಣದಿಂದ ಹೊರಹಾಕಬಹುದು.
2) ಅಧಿಕಾರ ಹೊಂದಿದ ವ್ಯಕ್ತಿಯು ಯಾವುದೇ ಕಟ್ಟಡದ ಬೀಗ ಚಿಲಕವನ್ನು ಒಡೆಯಬಹುದು.

* ಈ ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶವನ್ನು ಉಲ್ಲಂಘಿಸಿದಾಗ ಆವರಣದಿಂದ ಹೊರಹಾಕ ಬಹುದು.

**ಪ್ರಕರಣ 276: ಕಡ್ಡಾಯ ಕೋರಿಕೆಯಿಂದ ಆವರಣಗಳ ಬಿಡುಗಡೆ**

ಚುನಾವಣೆ ಉದ್ದೇಶಕ್ಕಾಗಿ ಕಡ್ಡಾಯವಾಗಿ ಕೋರಿ ಪಡೆಯಲಾದ ಯಾವುದೇ ಆವರಣ ವಾಹನ ಇತ್ಯಾದಿಗಳನ್ನು ಚುನಾವಣೆ ಮುಗಿದ ನಂತರ ಮಾಲಿಕರು ಲಿಖಿತ ಮನವಿ ಕೊಟ್ಟಾಗ ಆವರಣ–ವಾಹನ ಇತ್ಯಾದಿಗಳನ್ನು ಹಸ್ತಾಂತರ ಮಾಡಬಹುದು.

**ಪ್ರಕರಣ 277: ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ**

ಆದೇಶ ಉಲ್ಲಂಘನೆ ಮಾಡಿದಂತಹ ವ್ಯಕ್ತಿಗಳಿಗೆ ಅಪರಾಧ ನಿರ್ಣಯವಾದ ಮೇಲೆ ಒಂದುವರ್ಷದ ಜೈಲು ಶಿಕ್ಷೆ ಅಥವಾ ಜುಲ್ಮಾನೆ ವಿಧಿಸಬಹುದು.

**ಪ್ರಕರಣ 278: ಅನರ್ಹಗೊಂಡಿದ್ದಾಗ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಸದಸ್ಯರಾಗಿಕಾರ್ಯನಿರ್ವಹಿಸುವುದಕ್ಕಾಗಿ ದಂಡನೆ**

ಈಮೇಲಿನವರು ತಮ್ಮಧಿಕಾರ ಹೋಗಿದೆ ಎಂದು ತಿಳಿದಿದ್ದರೂ ಅಧಿಕಾರ ಚಲಾಯಿಸಲು ಮುಂದಾದರೆ ಪ್ರತಿದಿನಕ್ಕೆ ನೂರು(100) ರೂಪಾಯಿಯ ದಂಡ ವಿಧಿಸಬಹುದು.

**ಪ್ರಕರಣ 279: ಸ್ವಹಿತಾಸಕ್ತಿಯನ್ನು ಹೊಂದಿದ ಸದಸ್ಯನು ಮತ ಚಲಾಯಿಸಿದ್ದಕಾಗಿ ದಂಡನೆ**

ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯ ಸದಸ್ಯನು ತನ್ನ ಹಿತಾಸಕ್ತಿ ಅಡಗಿದ ವಿಷಯಗಳಿಗೆ ಸಂಬಂಧಪಟ್ಟಂತೆ ಮತ ಚಲಾಯಿಸಿದರೆ ಅಪರಾಧ ನಿರ್ಣಯವಾದ ಮೇಲೆ ಐದುನೂರು(500) ರೂಪಾಯಿಗಳವರೆಗೆ ದಂಡ ವಿದಿಸಬಹುದು.

**ಪ್ರಕರಣ 280: ಕರಾರು ಉಲ್ಲಂಘಿಸಿದ್ದಕ್ಕಾಗಿ ಅಧಿಕಾರಿ ಅಥವಾ ನೌಕರನಿಗೆ ದಂಡನೆ**

* ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯ ತಿಯ ಯಾವುದೇ ಸದಸ್ಯನು, ನೌಕರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪಂಚಾಯತಿಗಳೊಂದಿಗೆ ಪಾಲುದಾರಿಕೆ ಹೊಂದಿದ್ದರೆ ಐದುನೂರು(500) ರೂಪಾಯಿಯ ದಂಡಕ್ಕೆ ಒಳಗಾಗುತ್ತಾನೆ.
* ಯಾವನೇ ವ್ಯಕ್ತಿಯು ಯಾವುದೇ ಕಂಪನಿಯಲ್ಲಿ ಷೇರುದಾರನಾಗಿರುವ ಅಥವಾ ಸದಸ್ಯನಾಗಿರುವ ಕಾರಣ ಮಾತ್ರದಿಂದಲೇ ಅವನು ಅಂಥ ಕಂಪನಿಯ ನಿರ್ದೇಶಕನಾಗಿದ್ದ ಹೊರತು ಅವನು ಅಂಥ ಕಂಪನಿ ಅಥವಾ ಗ್ರಾ.ಪಂ., ತಾ.ಪಂ, ಜಿ.ಪಂ. ನಡುವೆ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅವನು ಹಿತಾಸಕ್ತಿಯನ್ನು ಹೊಂದಿರುವುದಾಗಿ ಗ್ರಹಿಸುವಂತಿಲ್ಲ.

**ಪ್ರಕರಣ 281: ಕೆಲವು ಅಧಿಕಾರಿಗಳನ್ನು ಕಾರ್ಯನಿರ್ವಾಹಿಸಲು ಅಡ್ಡಿಪಡಿಸುವುದು**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಯವುದೇ ಕಟ್ಟಡ ಪ್ರವೇಶ ಅಥವಾ ಇತರ ಕಾನೂನುಬದ್ಧ ಅಧಿಕಾರ ಚಲಾಯಿಸಲು ಅಡ್ಡಿಪಡಿಸಿದರೆ ಅಂತಹ ವ್ಯಕ್ತಿಗೆ ಒಂದು ತಿಂಗಳ ಜೈಲುಶಿಕ್ಷೆ ಅಥವಾ ಐದುನೂರು(500) ರೂಪಾಯಿ ದಂಡ ವಿಧಿಸಲಾಗುತ್ತದೆ.

**ಪ್ರಕರಣ 282. ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಮುಂತಾದವರ ಕೆಲಸಕ್ಕೆ ಅಡ್ಡಿಪಡಿಸುವುದರ ವಿರುದ್ಧ ನಿಷೇಧ**

ಈ ಮೇಲಿನವರು ಅಧಿಕಾರ ಚಲಾಯಿಸಲು ಅಡ್ಡಪಡಿಸಿದವರ ವಿರುದ್ದ ಐದುನೂರು(500) ರೂಪಾಯಿಗಳವರೆಗೆ ದಂಡ ವಿಧಿಸಬಹುದು.

**ಪ್ರಕರಣ 283:– ನೋಟೀಸನ್ನು ತೆಗೆದು ಹಾಕುವುದು ಅಥವಾ ಅಳಿಸಿ ಹಾಕುವುದರ ವಿರುದ್ದ ನಿಷೇಧ:**

ವ್ಯಕ್ತಿಯು ಯಾವುದೇ ನೋಟೀಸನ್ನು ಅಥವಾ ಲಗತ್ತಿಸಿದ ಜಾಹಿರಾತನ್ನು ತೆಗೆದು ಹಾಕಿದರೆ, ನಾಶಗೊಳಿಸಿದರೆ ಅಂತಹ ವ್ಯಕ್ತಿಗೆ ಒಂದು ನೂರು(100) ರೂಪಾಯಿಯ ದಂಡ ವಿಧಿಸಬಹುದು.

**ಪ್ರಕರಣ :284, ಮಾಹಿತಿಯನ್ನು ಕೊಡದೆ ಇರುವುದಕ್ಕೆ ಅಥವಾ ಸುಳ್ಳು ಮಾಹಿತಿಯನ್ನು ಕೊಡುವುದಕ್ಕಾಗಿ ದಂಡನೆ :**

ಸಂಬಂಧಿಸಿದ ವ್ಯಕ್ತಿಯು ಮಾಹಿತಿಯನ್ನು ಒದಗಿಸಲು ತಪ್ಪಿದರೆ ಅಥವಾ ಸುಳ್ಳು ಮಾಹಿತಿ ನೀಡಿದರೆ ಅಂತಹ ವ್ಯಕ್ತಿಗೆ ಒಂದು ನೂರು(100) ರೂಪಾಯಿಯ ದಂಡ ವಿಧಿಸಬಹುದು.

**ಪ್ರಕರಣ 285: ಸವಾಲು ಕೂಗುವುದರ ವಿರುದ್ಧ ನಿಷೇಧ**

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ನೌಕರನು ಚರ ಅಥವಾ ಸ್ಥಿರ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಸವಾಲನ್ನು ಕೊಗುವಂತಿಲ್ಲ. ಒಂದು ವೇಳೆ ಆ ನಿಯಮ ಉಲ್ಲಂಘಿಸಿದ ವ್ಯಕ್ತಿಗೆ 500 ರೂಪಾಯಿಯ ದಂಡ ವಿಧಿಸಲಾಗುತ್ತದೆ.

**ಪ್ರಕರಣ: 286. ಪಂಚಾಯತಿ ಸದಸ್ಯ, ಅಧಿಕಾರಿ ಮತ್ತು ನೌಕರರಿಗೆ ಲೋಕ ನೌಕರ ಎಂಬ ಪದದ ಅನ್ವಯ** ಗ್ರಾ.ಪಂ., ತಾ.ಪಂ., ಮತ್ತು ಜಿ.ಪಂ.ಯ ಪ್ರತಿಯೊಬ್ಬ ಸದಸ್ಯನನ್ನು ಮತ್ತು ನೌಕರರನ್ನು ಲೋಕ ನೌಕರ ಅಥವಾ 1988ರ ಭ್ರಷ್ಟಚಾರ ನಿವಾರಣ ಅಧಿನಿಯಮದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರನೆಂಬುದಾಗಿ ಭಾವಿಸಬೇಕು.

 downloaded from: www.kpscvaani.com

**ಪ್ರಕರಣ 287:**
**ಜುಲ್ಮಾನೆ /ದಂಡಗಳನ್ನು ಪಂಚಾಯತಿ ನಿಧಿಗೆ ಜಮೆ ಮಾಡಬೇಕು**

ಗ್ರಾ.ಪಂ., ತಾ.ಪಂ. ಮತ್ತು ಜಿ.ಪಂ.ಯು ಅಥವಾ ಅದರ ಪರವಾಗಿ ಹೂಂದಿದ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ ಮ್ಯಾಜಿಸ್ಟ್ರೇಟರು ವಿಧಿಸಿದ ಎಲ್ಲಾ ಜುಲ್ಮಾನೆಗಳನ್ನು ಅದರ ನಿಧಿಗೆ ಜಮೆ ಮಾಡಬೇಕು.

**ಪ್ರಕರಣ 288: ಪಂಚಾಯತಿಗಳ ಯವುದೇ ಆಸ್ತಿಸ್ವತ್ತಿಗೆ ಹಾನಿ ಉಂಟಾದರೆ ಅದರ ನಷ್ಟವನ್ನು ತುಂಬಿ ಕೊಡಬೇಕು.**

ಯಾವುದೇ ವ್ಯಕ್ತಿಯು ತನ್ನ ಕಾರ್ಯನಿರ್ಲಕ್ಷ್ಯತೆ ಅಥವಾ ಕರ್ತವ್ಯ ಲೋಪದಿಂದಾಗಿ ಪಂಚಾಯತಿ ಆಸ್ತಿಗೆ ಹಾನಿ ಉಂಟಾದರೆ ಅಂತವರ ಮೇಲೆ ದಂಡವನ್ನು ವಿಧಿಸಲಾಗುತ್ತದೆ. ಅಂಥ ಮೌಲ್ಯದ ಹಾನಿಯನ್ನು ಮ್ಯಾಜಿಸ್ಟ್ರೇಟರು ನಿರ್ಧರಿಸುತ್ತಾರೆ. ನಂತರ ತಗಾದೆಯ ಮೂಲಕ ಅಂಥ ಮೌಲ್ಯವನ್ನು ಸಂದಾಯ ಮಾಡದಿದ್ದಾಗ ಅದನ್ನು ಜಪ್ತಿಯ ಮೊಲಕ ಸಂಗ್ರಹಿಸಬೇಕು.

**ಪ್ರಕರಣ 289: ಪಂಚಾಯತಿಗಳ ವಿರುದ್ಧ ಖಟ್ಲೆ /ದಾವೆಗಳನ್ನು ಹೂಡುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧಗಳು**

- ಯಾವುದೇ ವ್ಯಕ್ತಿಯು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಗಳ ವಿರುದ್ಧ ಮತ್ತು ಅದರ ಯಾವಯದೇ ಅಧಿಕಾರಿಯ ವಿರುದ್ಧ ನಷ್ಟಪರಿಹಾರಕ್ಕಾಗಿ ದಾವೇಹುಡುವ ಮೊದಲು ಸಂಬಂಧಿಸಿದ ಪಂಚಾಯಿತಿ ಮತ್ತು ಅಧಿಕಾರಿಗೆ ನೋಟಿಸನ್ನು ಹೂರಡಿಸ ಬೇಕು. ಯಾವುದೇ ದಾವೆಯನ್ನು ನೋಟಿಸನ್ನು ಕೊಟ್ಟ ತರುವಾಯದ ಎರಡು ತಿಂಗಳು ಮುಕ್ತಾಯವಾಗುವರೆಗೆ ಹೊಡುವಂತಿಲ್ಲ.
- ಯವುದೇ ದಾವೆಯಲ್ಲಿ ಪ್ರತಿವಾದಿಯು ಗ್ರಾಮ ಪಂಚಾಯತಿಯ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸದಸ್ಯ, ಅಧಿಕಾರಿ ಅಥವಾ ನೌಕರರಾಗಿದ್ದರೆ, ಸಂದರ್ಬಾನುಸಾರ , ಕಾರ್ಯದರ್ಶಿ, ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಪಂಚಾಯತಿಗಳ ಪ್ರತಿರಕ್ಷೆಯನ್ನು ಕೈಗೊಳ್ಳಬೇಕೆ ಎಂಬುವುದನ್ನು ನಿರ್ಧರಿಸಬೇಕು. ಈ ಪ್ರಕರಣದಲ್ಲಿರುವುದು ಯಾವುದೇ ನಿರ್ದಿಷ್ಠ ಪರಿಹಾರ ಅಧಿನಿಯಮ (1963ರ ಕೇಂದ್ರ ಅಧಿನಿಯಮ ಸಂಖ್ಯೆ 47) 38ನೇ ಪ್ರಕರಣದ ಅಡಿಯಲ್ಲಿ ಹೂಡಲಾದ ಯಾವುದೇ ದಾವೆಗೆ ಅನ್ವಯವಾಗುವುದೆಂದು ಭಾವಿದುವಂತಿಲ್ಲ.

**ಪ್ರಕರಣ 290: ಸರ್ಕಾರವು ಲೈಸನ್ಸಗಳು ಮತ್ತು ಅನುಮತಿಗಳನ್ನು ಪಡೆಯಬೇಕಾಗಿಲ್ಲ**

ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ಸ್ವಾಧಿನದಲ್ಲಿರುವ ಸ್ಥಳ ಹಾಗೂ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಪರವಾನಗಿ (ಲೈಸನ್ಸ್) ಅಥವಾ ಅನುಮತಿಯನ್ನು ಪಡೆದುಕೊಳ್ಳಬೇಕಾಗಿಲ್ಲ.

**ಪ್ರಕರಣ–291:**
**ಚುನಾವಣಾ ನೀಷೇದಾಜ್ಞೆಗಳನ್ನು ಕೊಡುವಂತಿಲ್ಲ.**

ಯಾವುದೇ ನ್ಯಾಯಾಲಯವು ಚುನಾವಣಾ ಪ್ರಕ್ರಿಯೆಯನ್ನು ತಡೆ ಹಿಡಿಯುವಂತಿಲ್ಲ. ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನುನಿನಲ್ಲಿ ಏನೇ ಇದ್ದರೂ ಯಾವುದೇ ನ್ಯಯಾಲಯವು ಚುನಾವಣೆಯನ್ನು ನಡೆಸುವುದಕ್ಕಾಗಿ ಅಥವಾ ವ್ಯವಹರಣೆಯನ್ನು ಪ್ರತಿಬಂಧಿಸುವ ಆದೇಶವನ್ನು ಮಾಡುವಂತಿಲ್ಲ.

**ಪ್ರಕರಣ–292: ಇತರ ಯಾವುದೇ ಒಂದು ಪ್ರಕರಣದಲ್ಲಿ ವಿಧಿಸಿದ ಆದೇಶಗಳು ಮತ್ತು ನೋಟಿಸುಗಳ ಉಲ್ಲಂಘನೆಗಾಗಿ ದಂಡ**

ಗ್ರಾ.ಪಂ., ತಾ.ಪಂ. & ಜಿ.ಪಂ.ಗಳ ಪರವಾಗಿ ಲಿಖಿತ ನೋಟಿಸಿನ ಮೂಲಕ ಹೊರಡಿಸಿದ ಯಾವುದೇ ಕಾನೂನುಬದ್ಧ ನಿರ್ದೇಶನಗಳನ್ನು ಉಲ್ಲಘಿಸುವ ವ್ಯಕ್ತಿಗೆ 100ರೂ ದಂಡ ವಿಧಿಸಲಾಗುತ್ತದೆ.

ಈ ಅಪರಾಧ ಮುಂದುವರೆದರೇ ಪ್ರತಿದಿನಕ್ಕೆ 5ರೂ. ದಂಢವಿದಿಸ ಬಹುದು.

**ಪ್ರಕರಣ 293: ಮಾಲೀಕ ಅಥವಾ ಅನುಭವದಾರನು ವಹಿಸಿದ ಜವಾಬ್ದಾರಿಯನ್ನು ಮಾಡಲು ತಪ್ಪಿದ್ದಲ್ಲಿ ಖರ್ಚು ವೆಚ್ಚಗಳನ್ನು ವಸೂಲಿ ಮಾಡಬಹುದು.**

1) ಈ ಅಧಿನಿಯಮದ ಮೇರೆಗೆ ಉಪಬಂಧಗಳ ಅಡಿಯಲ್ಲಿ ಯಾವುದೇ ಕಾಮಗಾರಿಯನ್ನು ಯಾವುದೇ ಕಟ್ಟಡ ಅಥವಾ ಭೂಮಿಯ ಮಾಲೀಕ ಅಥವಾ ಅನುಭವದಾರನು ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ತಪ್ಪಿದಾಗ ಗ್ರಾ.ಪಂ. ತಾ.ಪಂ. ಮತ್ತು ಜಿ.ಪಂ.ಗಳು ಅಂಥ ಕಾಮಗಾರಿಗಳನ್ನು ನಿರ್ವಹಿಸುಬಹುವುದು.
2) ಕಾಮಗಾರಿಗಳ ನಿರ್ವಹಣೆಗೆ ತಗುಲಿದ ವೇಚ್ಚವನ್ನು ಮಾಲಿಕ ಅಥವಾ ಅನುಭವದಾರನಿಂದ ವಸುಲಿಮಾಡತಕ್ಕದ್ದು.

**ಪ್ರಕರಣ 294: ಖರ್ಚು ಅಥವಾ ವೆಚ್ಚಗಳನ್ನು ನಿರ್ಧರಿಸುವ ಮತ್ತು ವಸೂಲಿ ಮಾಡುವ ಬಗ್ಗೆ**

13ನೇ ಅಧ್ಯಾಯದ ಅಡಿಯಲ್ಲಿ ವಸೂಲಿ ಮಾಡಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಲಾದ ಮೊತ್ತ ವಸೊಲಿ ಮಾಡಬೇಕು.

ಈ ಅಧ್ಯಾಯದ ಮೂಲಕ ಸಂದಾಯ ಮಾಡಬೇಕೆಂದು ನಿರ್ದೇಶಿಸಲಾದಂತ ಯಾವುದೇ ವೆಚ್ಚಗಳು ಅಥವಾ ಖರ್ಚುಗಳಿಗೆ ಸಂಬಂದಿಸಿದಂತೆ ವಿವಾದವು ಉದ್ಬವಿಸಿದರೆ ಅದರ ಹಂಚುವಿಕೆಯನ್ನು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂದಿಸಿರುವ ಹೂರತು, ಸಂಭಂದಪಟ್ಟ ಗ್ರಾಮ ಪಂಚಾಯತಿ ತಾ.ಪಂ. ಅಥವಾ ಜಿಲ್ಲಾ ಪಂಚಾಯತಿಯ ನಿರ್ಧರಿಸಬೇಕು.

**ಪ್ರಕರಣ–295: ದಾವೆ/ಖಟ್ಲೆಗಳ ನಿಷೇಧ**

ಪಂಚಾಯತಿಗಳ ನಿರ್ದೇಶನದ ಮೇರೆಗೆ ಕಾರ್ಯನಿರ್ವ ಹಿಸುತ್ತರುವ ಯಾವುದೇ ಸದಸ್ಯ, ಅಧಿಕಾರಿ, ನೌಕರ ಅಥವಾ ಏಜೆಂಟಿನ ವಿರುದ್ದ ಯಾವುದೇ ದಾವೆ ಅಥವಾ ಖಟ್ಲೆಯನ್ನು ಹೂಡುವಂತಿಲ್ಲ.

**ಪ್ರಕರಣ–296: ಮ್ಯಾಜಿಸ್ಟ್ರೇಟರ್ ಅಧಿಕಾರ ವ್ಯಾಪ್ತಿ**

ಮ್ಯಾಜಿಸ್ಟ್ರೇಟರ್‌ಗೆ/ನ್ಯಾಯಾಧೀಶರಿಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ, ತನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗಿನ ಯಾವುದೇ ಚರ ಸ್ವತ್ತಿನ ಜಪ್ತಿ ಮತ್ತು ಹಿಂಬಾಕಿಯನ್ನು ಮಾರಾಟದ ಮೂಲಕ ವಸೂಲು ಮಾಡಬಹುದು.

ಈ ಅಧಿನಿಯಮದ ಮೇರೆಗೆ ವಿಧಿಸಿದ ಪ್ರತಿಯೊಂದು ದಂಡವನ್ನು ಮತ್ತು ಯಾವುದಾದರು ವಸೊಲಿಗಾಗಿ ವಿಶೇಷ ವ್ಯವಸ್ಥೆಯನ್ನು ಮಾಡಿಲ್ಲವೋ ಆ ನಷ್ಟ ಪರಿಹಾರವನ್ನು ಅಥವಾ ಕ್ಲೇಮುಗಳನ್ನು ಮ್ಯಾಜಿಸ್ಟ್ರೇಟರಿಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಯಾರಿಂದ ಹಣ ಕ್ಲೇಮು ಮಾಡಲಾಗಿದೆಯೊ ಆ ವ್ಯಕ್ತಿಗೆ ಸೇರಿದ ಯಾವುದೇಚರ ಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೊಲಕ ವಸೂಲಿ ಮಾಡಬಹುದು.

**ಪ್ರಕರಣ–296(ಎ): ಕುಂದುಕೊರತೆ ನಿವಾರಣಾ ಪ್ರಾಧಿಕಾರ**

downloaded from: www.kpscvaani.com 

1) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ಡೆಪ್ಯೂಟಿ ಕಮಿಷನರ್ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯನ್ನು ಒಳಗೊಂಡ ಕುಂದು ಕೊರತೆ ನಿವಾರಣಾ ಪ್ರಧಿಕಾರಿಯನ್ನಾಗಿ ನೇಮಿಸಬೇಕು.
2) ರಾಜ್ಯ ಸರ್ಕಾರವು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ಅವ್ಯಶಕ ಸಿಬ್ಬಂದಿಯನ್ನು ಒದಗಿಸಬೇಕು
3) ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಜಿಲ್ಲಾ ಕುಂದುಕೊರತೆ ನಿವಾರಣಾ ಪ್ರಾಧಿಕಾರಿಯ ನಿರ್ಧಾರವನ್ನು ತಿಳಿಸುವುದಕ್ಕಾಗಿ ನಿಯಮಿಸಲಾದ ಅವಧಿಯ ಮುಕ್ತಾಯವಾದ ತರುವಾರು ತಕ್ಷಣವೇ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯ ಸಂಧರ್ಭದಲ್ಲಿ ಮುಖ್ಯ ಕಾರ್ಯವಾಹಕ ಅಧಿಕಾರಿಗೆ ಜಿಲ್ಲಾ ಪಂ.ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ & ಪಂಚಾಯತರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಕ್ರಮಕ್ಕಾಗಿ ವರದಿ ಮಾಡುವುದು.

* ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಯಾವುದೆ ವ್ಯಕ್ತಿಯು ಕರ್ತವ್ಯ ನಿರ್ಲಕ್ಷ ಮಾಡಿದ್ದರೆ ಅಂಥ ಅಧಿಕಾರಿಯನ್ನು ಕುಂದು–ಕೊರತೆ ಪರಿಹಾರ ಅಗುವವರೆಗೆ ಪ್ರತಿ ದಿನಕ್ಕೆ ಎರಡುನೂರ ಐವತ್ತು ರೂಪಾಯಿಗಳನ್ನು ದಂಡಕ್ಕೆ ಒಳಪಡಿಸಬಹುದು ಆದರೆ ಅಂಥ ದಂಡದ ಒಟ್ಟು ಮೊತ್ತವು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರಿವಂತಿಲ್ಲ.
* ಬಾಧಿತ ವ್ಯಕ್ತಿ ಎಂದರೆ ಸರ್ಕಾರವು ನೀಡುವ ಯಾವುದೇ ಯೋಜನೆಯ ಪ್ರಯೋಜನವವನ್ನು ಕೋರುವ ವ್ಯಕ್ತಿ ನೀರು ಸರಬರಾಜು, ಆರೋಗ್ಯ, ನಿರ್ವಹಣೆ, ರಸ್ತೆ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಸಂಬಂಧದಲ್ಲಿ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತಿ ತೆಗೆದುಕೊಳ್ಳುವ ಕ್ರಿಯೆಯನ್ನು ಮಾಡುವುದರಿಂದ ನೀಡುವ ಯಾವುದೇ ದೂರನ್ನು ಇದು ಒಳಗೊಳ್ಳುತ್ತದೆ.

### ಪ್ರಕರಣ 296(ಬಿ): ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಅಧಿಕಾರಗಳು & ಕರ್ತವ್ಯಗಳು:

ಎ) ನೊಂದ ವ್ಯಕ್ತಿಯಿಂದ ಸೂಕ್ತ ದಾಖಲಾತಿಗಳನ್ನು ಕೇಳಿ ಪರಿಶೀಲಿಸುವುದು ಇದರ ಕರ್ತವ್ಯವಾಗಿದೆ.

ಬಾಧಿತ ವ್ಯಕ್ತಿಯು ಕುಂದು ಕೊರತೆಯನ್ನು ಪರಿಹರಿಸುವುದಕ್ಕೆ ಆತನು ಅವಶ್ಯವೆಂದು ಭಾವಿಸುವ ಯಾವುದೇ ದಸ್ತಾವೇಜನ್ನು ಕೇಳಬಹುದು.

ಬಿ) ಕೊಂದುಕೊರತೆ ನಿವಾರಣಾ ಪ್ರಾಧಿಕಾರವು ಈ ಅಧಿನಿಯಮದ ಅಡಿಯಲ್ಲಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಸಿವ್ಹಿಲ್ ಪ್ರಕ್ರಿಯಾ ಸಂಹಿತೆ 1908ರ ಅಡಿಯಲ್ಲಿ ಸಿವ್ಹಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವ ಅಧಿಕಾರಿಗಳನ್ನು ಹೊಂದಿರುತ್ತಾರೆ.

* ಕುಂದುಕೊರತೆ ನಿವಾರಣಾ ಪ್ರಾಧಿಕಾರವು ತನ್ನ ಕರ್ತವ್ಯಗಳನ್ನು ಕ್ರಮಬದ್ದ ನಿರ್ವಹಣೆಗಾಗಿ ಇತರ ಅಧಿಕಾರಿಯ ನೇರವನ್ನು ಕೋರಬಹುದು
* ಅಫಿಡುವಿಟ್‌ಗಳ ಮೇಲೆ ಸಾಕ್ಷವನ್ನು ಸ್ವಿಕರಿಸುವುದು.
* ಯಾವುದೇ ಸಾರ್ವಜನಿಕ ದಾಖಲೇಗಳನ್ನು ಅಗತ್ಯ ಪಡಿಸುವುದು
* ಸಾಕ್ಷಿಗಳ ಪರಿಕ್ಷೇಗಾಗಿ ಕಂಮಿಷ್ನ್‌ಗಳು ಹೂರಡಿಸುವುದು
* ತನ್ನ ನಿರ್ಧರಗಳು ನಿರ್ದೇಶನಗಳು ಮತ್ತು ಆದೇಶಗಳನ್ನು ಪುನರವಲೋಕಿಸುವುದು.

### ಪ್ರಕರಣ–296(ಸಿ): ಅಪೀಲು/ಮೇಲ್ಮನವಿ

1) ಕುಂದುಕೊರತೆ ನಿವಾರಣಾ ಪ್ರಾಧಿಕಾರದ ನಿರ್ಧಾರದಿಂದ ನೊಂದ ಅಭ್ಯರ್ಥಿಯ ಮೂವತ್ತು ದಿನಗೊಳಗಾಗಿ ಗ್ರಾಮೀಣಾಭಿವೃದ್ಧಿ & ಪಂಚಾಯತರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಮೇಲ್ಮನವಿ ಸಲ್ಲಿಸಬಹುದು.
2) ಪ್ರತಿಯೊಂದು ಅಫೀಲನ್ನು ಅಫೀಲು ಸ್ವೀಕರಿಸಿದ 90 ದಿನದೊಳಗೆ ವಿಲೇಮಾಡತಕ್ಕದ್ದು
3) ಅಫೀಲು ಪ್ರಾಧಿಕಾರವು ತಾನು ತೆಗೆದುಕೊಂಡ ತೀರ್ಮಾನಗಳ ದಿನಾಂಕದಿಂದ ಹದಿನೈದು ಕೆಲಸದ ದಿನಗಳ ಅವಧಿಯೊಳಗೆ ಸಂಬಂಧಪಟ್ಟ ಪಕ್ಷಕಾರರಿಗೆ ತೀರ್ಮಾನಗಳ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡಬೇಕು.

### ಪ್ರಕರಣ–296(ಡಿ) ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಅವಧಿ

ಅಧಿಕಾರವಹಿಸಿಕೊಂಡ ದಿನಾಂಕದಿಂದ 5 ವರ್ಷಗಳ ಅಥವಾ ಅವನಿಗೆ 65 ವರ್ಷಗಳಾಗುವವರೆಗೆ ಹುದ್ದೆಯಲ್ಲಿರುತ್ತಾನೆ. (ಇದಲ್ಲಿ ಯಾವುದು ಮೋದಲು ಅದು ಪದವಧಿಯಾಗಿದೆ). ಮರು ನೇಮಕಕ್ಕೆ ಅರ್ಹನಾಗಿರುವುದಿಲ್ಲ.

### ಪ್ರಕರಣ–296(ಇ): ರಾಜೀನಾಮೆ & ತೆಗೆದುಹಾಕುವುದು

1) ಕುಂದುಕೊರತೆ ನಿವಾರಣಾ ಪ್ರಾಧಿಕಾರಿಯು ರಾಜ್ಯ ಸರ್ಕಾರಕ್ಕೆ ಲಿಖಿತವಾಗಿ ತನ್ನ ರಾಜೀನಾಮೆ ಪತ್ರವನ್ನು ಸಲ್ಲಿಸಬಹುದು.
2) ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯು ದಿವಾಳಿಯಾಗಿದ್ದರೆ, ದೈಹಿಕ ಮತ್ತು ಮಾನಸಿಕ ಅಸಮರ್ಥತೆಯಿಂದ ಒಳಲುತ್ತಿದ್ದರೆ ಅಧಿಕಾರದಿಂದ ತೆಗೆದುಹಾಕಬಹುದು.
3) ಸ್ವಹಿತಾಸಕ್ತಿಗಾಗಿ ತನ್ನ ಅಧಿಕಾರವನ್ನು ದುರುಪಯೊಗ ಪಡಿಸಿಕೊಂಡರೆ ತೆಗೆದುಹಾಕಬಹುದು.

### ಪ್ರಕರಣ–296 (ಎಫ್): ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಪ್ರಕ್ರಿಯೆ

ದೂರನ್ನು ದಾಖಲು ಮಾಡುವ ಪ್ರಕ್ರಿಯೆ,ವಿಧಾನವು & ಅಂಥ ದೂರಿನ ಜೊತೆ ಇರಬೇಕಾದ ಫೀಜುಗಳು ನಿಯಮಿಸ ಬಹುದಾದಂತೆ ಇರಬೇಕು

### ಪ್ರಕರಣ 296 (ಜಿ): ತನಿಖೆಗೆ ಒಳಪಡದ ವಿಷಯಗಳು

ಈಗಾಗಲೇ ಲೋಕಾಯುಕ್ತರು ಯಾವುದೇ ವಿಷಯದ ಕುರಿತಂತೆ ತನಿಖೆಯನ್ನು ಕೈಗೊಂಡಿದ್ದರೆ ಈ ಪ್ರಾಧಿಕಾರ ಅಂತಹ ವಿಷಯಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವಂತಿಲ್ಲ.

### ಪ್ರಕರಣ 296 (ಎಚ್): ಬಾಕಿ ಪ್ರಕರಣಗಳ ವರ್ಗಾವಣೆ

2015ರ ಹಿಂದೆ ಪಂಚಾಯತ ಓಂಬುಡ್ಸ್‌ಮನ್ ಮುಂದೆ ಬಾಕಿ ಇರುವ ಎಲ್ಲ ಪ್ರಕರಣಗಳು ಕುಂದು ಕೊರತೆ ನಿವಾರಣಾ ಪ್ರಾಧಿಕಾರಕ್ಕೆ ವರ್ಗಾವಣೆಯಾಗುತ್ತವೆ.

### ಪ್ರಕರಣ 296(ಐ): ಕೈಗೊಂಡ ಕ್ರಮದ ವರದಿ

- ಕುಂದುಕೊರತೆ ನಿವಾರಣಾ ಪ್ರಾಧಿಕಾರವು ತನಗೆ ಬಂದ ದೂರುಗಳ ಸಂಬಂಧದಲ್ಲಿ ಅನುಸರಿಸಲಾದ ಕ್ರಮದ ವರದಿಯನ್ನು ಸೂಕ್ತ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು

downloaded from: www.kpscvaani.com

- ಪ್ರತಿಯೊಂದು ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ತನ್ನ ಜಾಲತಾಣದಲ್ಲಿ ಪ್ರತಿ ತಿಂಗಳ 15ನೇ ತಾರೀಖಿನೊಳಗೆ,ಸ್ವೀಕರಿಸಲಾದ ದೂರುಗಳ ಸಂಖ್ಯೆಯನ್ನು,ಬಾಕಿ ಇರುವ ದೂರುಗಳ ಸಂಖ್ಯೆಯನ್ನು, ವಿಲೇವಾರಿ ಆದ ದೂರುಗಳ ಸಂಖ್ಯೆಯನ್ನು ಜಾಲತಾಣದಲ್ಲಿ ಪ್ರಕಟಿಸಬೇಕು.

### ಪ್ರಕರಣ 297-ದಾವೆಯ ಮೂಲಕ ಪರ್ಯಾಯ ಪ್ರಕ್ರಿಯೆ

ಮೂರುಹಂತದ ಯಾವುದೇ ಪಂಚಾಯಿತಿಗೆ ಬರಬೇಕಾದ ದಂಡ ಬರದೆ ಇದ್ದಾಗ ಸಂಬಂಧಪಟ್ಟ ವ್ಯಕ್ತಿಯ ವಿರುದ್ಧ ಮೊಕದ್ದಮೆ ಹೂಡಬಹುದು.

13ನೇ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ವಸೂಲಿ ಆಗಬಹುದಾದ ನಷ್ಟ ಪರಿಹಾರ ವೆಚ್ಚಗಳು ವಸೂಲಿ ಮಾಡಲಾದ ಯಾವುದೆ ವಿಧಾನಕ್ಕೆ ಬದಲಾಗಿ ಬೇರೆ ರೀತಿಯಲ್ಲಿ ವ್ಯಕ್ತಿಯ ವಿರುದ್ಧ ದಾವೆಯನ್ನು ಹೂಡಬಹುದು

### ಪ್ರಕರಣ 298: ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗಾಗಿ ದಂಡನೆ & ರಾಜಿಮಾಡಿಕೊಳ್ಳುವ ಅಧಿಕಾರ

- ಪಂಚಾಯಿತಿಗಳ ಅನುಮತಿಯಿಲ್ಲದೆ, ಷರತ್ತುನ್ನು ಉಲ್ಲಂಘಿಸಿ ಕಟ್ಟಡವನ್ನು ನಿರ್ಮಿಸಿದರೆ, ನೀಡಿದ ಲೈಸನ್ಸ ಅಮಾನತಯಗೊಳಿಸಿದ ಕಾಲದಲ್ಲಿ ಯಾವುದೇ ಸ್ಥಳವನ್ನು ಉಪಯೋಗಿಸಿದರೆ, ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ(5000) ರೂಪಯಿ ದಂಡ ವಿಧಿಸಬಹುದು. ಈ ಅಪರಾಧ ಮುಂದುವರೆದರೆ ಪ್ರತಿ ದಿನಕ್ಕೆ 50 ರೂ ದಂಡವಿಧಿಸಬಹುದಾಗಿದೆ
- ಯಾವುದೇ ಅಪರಾಧವನ್ನು ರಾಜಿ ಮಾಡಿಕೊಂಡ ಮೇಲೆ ಆ ಆಪರಾಧಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕ್ಕದಮ್ಮೆ ಹೊಡಿದರೆ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ಹೆಚ್ಚಿನ ವ್ಯವಹಾರ ಕೈಗೊಳ್ಳುವಂತಿಲ್ಲ.

### ಪ್ರಕರಣ-299: ಪೋಲೀಸ್ ಅಧಿಕಾರಗಳ ಅಧಿಕಾರಗಳು

ಯಾವುದೇ ಆರೋಪಿ, ವ್ಯಕ್ತಿ & ವಿಳಾಸದ ಬಗ್ಗೆ ಸಂದೇಹವಿದ್ದರೆ ಇವುಗಳು ಸ್ಪಷ್ಟವಾಗುವವರೆಗೆ ಅಂತಹ ವ್ಯಕ್ತಿಯನ್ನು ಬಂಧಿಸಬಹುದು.

1) ದಸ್ತಗಿರಿ ಮಾಡಲಾದ ಯಾವನೇ ವ್ಯಕ್ತಿಗೆ ಆದಷ್ಟು ಬೇಗ ಅಂಥ ದಸ್ತಗಿರಿಯ ಕಾರಣಗಳ ಬಗ್ಗೆ ತಿಳಿಸಬೇಕು & ಅವನನ್ನು ದಸ್ತಗಿರಿಯಾದ ಸ್ಥಳದಿಂದ ಪ್ರಯಾಣ ಕಾಲವನ್ನು ಹೊರತುಪಡಿಸಿ 24 ಗಂಟೆಗಳ ಅವಧಿಯೊಳಗೆ ಸಮೀಪದ ಮ್ಯಾಜಿಸ್ಟೇಟರ್ ಮುಂದೆ ಹಾಜರುಪಡಿಸಬೇಕು.
2) ಜಿ.ಪಂ. ತಾ.ಪಂ. ಮತ್ತು ಗ್ರಾಂ.ಪಂ. ಸದಸ್ಯರನ್ನು ಬಂಧಿಸದಲ್ಲಿ ಬಂಧಿಸಿದ 24 ಘಂಟೆಗಳ ಒಳಗೆ ಸಂಬಂಧಿಸಿದ ಪಂಚಾಯಿತಿಗೆ ಮಾಹಿತಿಯನ್ನು ನೀಡತಕ್ಕದ್ದು.

### ಪ್ರಕರಣ 300: ವಾರ್ಷಿಕ ಆಡಳಿತ ವರದಿ

1. ಕಾರ್ಯದರ್ಶಿಯು ಹಿಂದಿನ ವರ್ಷದ ಆರ್ಥಿಕ ವರದಿಯನ್ನು ಏಪ್ರೀಲ್ ಮೊದಲನೇ ವಾರದಲ್ಲಿ ಗ್ರಾಮ ಪಂಚಾಯತಿ ಮುಂದೆ ಮಂಡಿಸಬೇಕು.

(1) ಪ್ರತಿವರ್ಷದ ಏಪ್ರಿಲ್ ಮೊದಲನೇ ದಿನದ ತರುವಾಯ ಆದಷ್ಟು ಬೇಗನೆ ಮತ್ತು ಸರ್ಕಾರವು ನಿಗದಿಪಡಿಸಿದ ದಿನಾಂಕದ ಒಳಗೆ ಕಾರ್ಯದರ್ಶಿಯು ಗ್ರಾಮ ಪಂಚಾಯತಿಯ ಹಿಂದಿನ ಆರ್ಥಿಕ ವರ್ಷದ ಆಡಳಿತ ವರದಿಯನ್ನು ಸರ್ಕಾರವು ನಿರ್ದೇಶಿಸಿದ ನಮೂನೆಯಲ್ಲಿ ಮಂಡಿಸಬೇಕು ನಂತರ ಆವರದಿಯನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಬೇಕು.

(2) ಅದೇ ರೀತಿ ತಾಲ್ಲೂಕು ಪಂಚಾಯಿತಿಗೆ ಕಾರ್ಯನಿರ್ವಾಹಕ ಅಧಿಕಾರಿಯ ತಾಲ್ಲೂಕು ಪಂಚಾಯಿತಿಯ ಮುಂದೆ ಮಂಡಿಸಬೇಕು ನಂತರ ಆ ವರದಿಯನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಬೇಕು

(3) ಅದೇ ತರಹ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ಜಿಲ್ಲಾ ಪಂಚಾಯತ್ ಮುಂದೆ ಮಂಡಿಸಬೇಕು & ಆ ವರದಿಯನ್ನು ಸರಕಾರ ಪುನರಾವಲೋಕಿಸಿದ ಬಗ್ಗೆ ಜ್ಞಾಪದ ಪತ್ರದೊಂದಿಗೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಬೇಕು

### ಪ್ರಕರಣ 301: ಸರ್ಕಾರಿ ಬಾಕಿ ಇತ್ಯಾದಿಗಳ ಹೊಂದಾಣಿಕೆ

ಮೂರು ಹಂತದ ಪಂಚಾಯತ ಸಂಸ್ಥೆಗಳು ಸರಕಾರಕ್ಕೆ ಮತ್ತು ಕರ್ನಾಟಕ ರಾಜ್ಯ ವಿದುಚ್ಛಕ್ತಿ ಮಂಡಳಿಗೆ ಕೊಡಬೇಕಾದ ಮೊತ್ತಗಳನ್ನು ಕಂತುಗಳಲ್ಲಿ ಕಟ್ಟಬಹುದು.

**ಪ್ರಕರಣ 302:** ಒಂದು ಪಂಚಾಯತಿ ಪ್ರದೇಶದ ಭಾಗವನ್ನು ಜಿಲ್ಲೆ ಅಥವಾ ತಾಲ್ಲೂಕು ಪರಿಮಿತಿಗಳಲ್ಲಿರುವ ಒಂದು ಪ್ರದೇಶವನ್ನು ದೊಡ್ಡ ನಗರ ಪ್ರದೇಶ ಮುಂತಾದವುಗಳ ಒಳಗೆ ವಿಲೀನಗೊಳಿಸುವುದರ ಪರಿಣಾಮ.

**ಪರಿಣಾಮ:**

1) ವಿಲೀನಗೊಂಡ ಅಂತಹ ಸದಸ್ಯರ ಸದಸ್ಯತ್ವವು ಜಿಲ್ಲಾ ಪಂಚಾಯತಿ ಅಥವಾ ಗ್ರಾಮ ಪಂಚಾಯತಿ ಸದಸ್ಯನಾಗಿರುವುದು ನಿಂತು ಹೋಗುತ್ತದೆ. ಮೂರು ಹಂತದ ಪಂಚಾಯತಿ ಸದಸ್ಯನ ಹುದ್ದಯೆ ಅವಧಿಯಲ್ಲಿ ಪ್ರದೇಶವನ್ನು ಯಾವುದೇ ದೊಡ್ಡನಗರ ಪ್ರದೇಶದಲ್ಲಿ ಚಿಕ್ಕನಗರ ಪ್ರದೇಶದಲ್ಲಿ ಸೇರ್ಪಡೆ ಮಾಡಿದರೆ ಮುಂದಿನ ಪರಿಣಾಮಗಳು ಸಂಭವಿಸುತ್ತೆವೆ

ಎ) ಅಂಥಹ ವ್ಯಕ್ತಿಯ ಸದಸ್ಯತ್ವ ನಿಂತು ಹೋಗುವದು

ಬಿ) ಸೇರ್ಪಡೆ ಮಾಡಲಾದ ಪ್ರದೇಶದಲ್ಲಿ ಉದ್ಭವಿಸುವ ಕ್ರಿವಿನಲ್ ವ್ಯವಹರಣೆಗಳು ಅಥವಾ ಸಂಬಂದಿಸಿದಂತೆ ಪ್ರಾಧಿಕಾರದಲ್ಲಿ ನಿಹಿತವಾಗಿರುತ್ತದೆ

**ಪ್ರಕರಣ 302(ಎ) ಅಸ್ತಿತ್ವದಲ್ಲಿದ್ದ ಜಿಲ್ಲೆಗಳು ಮತ್ತು ತಾಲ್ಲೂಕುಗಳು ಪರಿಮಿತಿಯಗಳನ್ನು ಬದಲಾಯಿಸುವ ಮೂಲಕ ಹೊಸ ಜಿಲ್ಲೆ ಮತ್ತು ತಾಲ್ಲೂಕುಗಳು ರಚನೆ**

1) ಎ) ಹೊಸ ಜಿಲ್ಲೆಗೆ ಒಂದು ಜಿಲ್ಲೆ ಪಂಚಾಯಿತಿ ಅಥವಾ ಹೊಸ ತಾಲ್ಲೂಕಿಗೆ ಒಂದು ತಾಲ್ಲೂಕ ಪಂಚಾಯಿತಿ ಇರುತ್ತದೆ

   ಬಿ) ಹೊಸದಾಗಿ ರಚನೆಯಾದ ನಂತರ ಮೊದಲ ಸಭೆಯಲ್ಲಿ ಸದಸ್ಯರ ಪೈಕಿ ಒಬ್ಬನನ್ನು ಅಧ್ಯಕ್ಷನನ್ನಾಗಿ ಮತ್ತು ಮತ್ತೊಬ್ಬನನ್ನು ಉಪಾಧ್ಯಕ್ಷನನ್ನಾಗಿ ಆಯ್ಕ ಮಾಡಾಲಾಗುತ್ತದೆ
2) ಅಸ್ತವದಲ್ಲಿದ್ದ ಜಿಲ್ಲಾ ಪಂಚಾಯಿತಿ ಸಂಬಂಧದಲ್ಲಿ ಹೊರಡಿಸಿದ ಯಾವುದೇ ನೇಮಕಾತಿ ಆದೇಶವನ್ನು ರದ್ದುಗೂಳಿಸುವರಿಗೆ ಅಥವಾ ಮಾರ್ಪಾಟು ಮಾಡುವರಿಗೆ ಮುಂದುವರಿಯುತ್ತದೆ
3) ಖರ್ಚುಮಾಡದೆ ಉಳಿದಿರುವ ನಿಧಿಯನ್ನು ಸರಕಾರವು ವಿಶೇಷ ಆದೇಶದ ಮೂಲಕ ಹೊಸ ಜಿಲ್ಲೆ ಅಥವಾ ತಾಲ್ಲೂಕು ಪಂಚಾಯಿತಿಗೆ ವರ್ಗಾಯಿಸಬೇಕು
4) ಅದೇ ರೀತಿ ಹೊಸ ಸಿವಿಲ್ ಅಥವಾ ಕ್ರಿಮಿನಲ್ ಪ್ರಕರಣಗಳು ವರ್ಗಾವಣೆಯಾಗುತ್ತವೆ.

downloaded from: www.kpscvaani.com 

**ಪ್ರಕರಣ 302 (ಬಿ): ಒಂದು ಪಂಚಾಯಿತಿ ಪ್ರದೇಶದ ಭಾಗವನ್ನು ಮತ್ತೊಂದು ಪಂಚಾಯಿತಿ ಪ್ರದೇಶದೊಂದಿಗೆ ವಿಲೀನಗೊಳಿಸುವುದರ ಪರಿಣಾಮ**

1. ಯಾವುದೇ ಒಂದು ಗ್ರಾ.ಪಂ., ತಾ.ಪಂ. ಅಥವಾ ಜಿ.ಪಂ.ಯ ಭಾಗವನ್ನು ಮತ್ತೊಂದು ಗ್ರಾ.ಪಂ., ತಾ.ಪಂ. ಅಥವಾ ಜಿ.ಪಂ. ಯೊಂದಿಗೆ ಸೇರ್ಪಡೆಮಾಡುವುದರಿಂದ ಈ ಕೇಳಕಂಡ ಪರಿಣಾಮಗಳು ಉಂಟಾಗುತ್ತವೆ.

- ಸೇರ್ಪಡೆಗೊಂಡ ಪಂಚಾತಿ ಪ್ರದೇಶದ ಭಾಗಗಳ ಸದಸ್ಯರ ಹಿಂದಿನ ಪಂಚಾಯಿತಿಯ ಸದಸ್ಯತ್ವ ನಿಂತುಹೂಗುತ್ತದೆ
- ಹಿಂದಿನ ಪಚಾಯಿತಿಗಳ ಸದಸ್ಯರ ಸಂಖ್ಯೆ ಕಡಿಮೆಯಾಗುತ್ತದೆ
- ಹೊಸದಾಗಿ ಸೇರ್ಪಡಿಸಲಾದ ಪಂಚಾಯಿತಿಗಳ ಸದಸ್ಯರ ಸಂಖ್ಯೆಯು ಹೆಚ್ಚಾಗುತ್ತದೆ.
- ಸೇರ್ಪಡೆಗೊಂಡ ಪಂಚಾಯಿತಿ ಪ್ರದೇಶಗಳ ಉಳಿದ ಅವಧಿಯನ್ನು ಸದಸ್ಯರು ಹೂಂದಿರುತ್ತಾರೆ.
- ಹಿಂದಿನ ಪಂಚಾಯಿತಿಗಳು ಮಾಡಿಕೊಂಡ ಕರಾರುಗುಳು ಒಪ್ಪಂದಗಳು ವ್ಯವಹರಣೆಗಳು ತೇರಿಗೆ ಫೀಜು ಶುಲ್ಕಗಳು ನೀಧಿ ಮತ್ತು ಸ್ವತ್ತುಗಳಿಗೆ ಸಂಬಂಧಿಸಿದ ಇತ್ಯಾಧಿ ವಿಷಯಗಳು ನಂತರದ ಪಂಚಾಯಿತಿಗೆ ಯಥವತ್ತಾಗಿ ವರ್ಗಾವಣೆಗೋಳ್ಳುತ್ತವೆ.

**ಪ್ರಕರಣ 303: ಸ್ವತ್ತಿನ/ಆಸ್ತಿಯ ವರ್ಗಾವಣೆಯ ಷರತ್ತುಗಳಿಗೆ ಒಳಪಟ್ಟಿರಬಹುದು.**

ಒಂದು ಪಂಚಾಯಿತಿ ಪ್ರದೇಶವನ್ನು ಭಾಗವನ್ನು ಹಿಂದಿನ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಯ ನಿಧಿ ಅಥವಾ ಯಾವುದೇ ವರ್ಗಾಯಿಸಬೇಕು ಸ್ಥಿರ ಅಥವಾ ಚರ ಸ್ವತ್ತಿನ ಮಂಜೂರಾತಿ ಗುತ್ತಿಗೆ ಹಾಗೂ ವರ್ಗಾವಣೆಯನ್ನು ನಿರ್ದಿಷ್ಠಪಡಿಸಬಹುದು ಷರತ್ತುಗಳಿಗೂಳಪಟ್ಟಿರುತ್ತದೆ.

**ಪ್ರಕರಣ 304: ಕಾರ್ಯಗಳು ಮತ್ತು ವ್ಯವಹರಣೆಗಳು**

ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೂಂಡ ವ್ಯವರಹಣೆಗಳುನ್ನು ಆ ಪ್ರಕರಣದ ಗುಣಾವಗುಣಗಳಿಗೆ ಬಾಧಕವಾದ ಯಾವುದೇ ದೋಷದ ಕಾರಣದಿಂದ ಪ್ರಶ್ನಿಸುವಂತಲ್ಲ.

**ಪ್ರಕರಣ 305: ಸಮಲೋಚನಾ ಪ್ರಕ್ರಿಯೆ**

ಯಾವುದೇ ಪ್ರಾಧಿಕಾದೂಂದಿಗೆ ಸಮಾಲೋಚಿಸಿದೆ ತರುವಾಯ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಕಾರ್ಯವನ್ನು ಕೈಗೂಳಬೇಕಾಗಿರು ವಾಗಲೆಲ್ಲ ಅಂಥ ಸಮಾಲೋಚನೆಯನ್ನು ಸಂಬಂಧಪಟ್ಟ ಪ್ರಾಧಿಕಾರ ಕ್ರಮದ ಬಗ್ಗೆ ತಿಳಿಸಲಾದ್ದರೆ ಮತ್ತು ಅದರ ಅಭಿಪ್ರಾಯಗಳನ್ನು ಒದಿಗಿಸಲು ಅದಕ್ಕೆ ಯುಕ್ತ ಕಾಲವನ್ನು ಕೂಟ್ಟದ್ದರೆ ಮಾಡಲಾಗಿದೆ ಎಂದು ಭಾವಿಸಬೇಕು

**ಪ್ರಕರಣ 306:**

**ನೋಟಿಸು ಇತ್ಯಾದಿಗಳುನ್ನು ಜಾರಿ ಮಾಡುವ ವಿಧಾನ**

1. (ಎ) ಸಂಬಂದಪಟ್ಟ ವ್ಯಕ್ತಿಗೆ ನೋಟಿಸು ಅಥವಾ ದೆಸತಾವೇಜನ್ನು ನೀಡುವುದು

   (ಎ) ಮಾಲೀಕ ಅಥವಾ ಅನುಭವದಾರರು ಒಬತಬರಗಿಂತ ಹೆಚ್ಚು ಇದ್ದರೆ ಅವರ ಪೈಕಿ ಒಬ್ಬನಿಗೆ ನೋಟಿಸು ನೀಡುವದು

2. ಸಂಬಂಧಪಟ್ಟ ವ್ಯಕ್ತಿಯು ಸ್ವಸ್ಥಳದಿಂದ ಬಹುದೂರದಲ್ಲಿ ವಾಸಿಸು ತ್ತಿದ್ದರೆ ನೋಟಿಸು ಅಥವ ದಸ್ತಾವೇಜನ್ನು (ವಿಳಾಸ ಗೊತ್ತಿದ್ದರೆ) ರಿಜಿಸ್ಟ್ರರ್ ಪೋಸ್ಟ್ ಮೂಲಕ ಕಳುಹಿಸಬಹುದು.

**ಪ್ರಕರಣ 307: ಧ್ವಜದ ಅಧಿಕೃತ ಪ್ರದರ್ಶನ**

(1) ಯಾವುದೇ ವ್ಯಕ್ತಿಯು ರಾಷ್ಟ್ರಧ್ವಜ ಅಥವಾ ಸರ್ಕಾರದಿಂದ ಮುನ್ನಡೆ ಪಡೆದ ಧ್ವಜವನ್ನು ಹೂರತುಪಡಿಸಿ ಯಾವುದೇ ಧಜವನ್ನು ಪಂಚಾಯಿಇಗಳ ಮೇಲೆ ಹಾರಿಸುವಂತಿಲ್ಲ

(2) 1ನೇ ಉಪಪ್ರಕರಣವನ್ನು ಉಲ್ಲಂಘಿಸಿದರೆ ಮೂರು ತಿಂಗಳ ಜೈಲುಶಿಕ್ಷೇ ಅಥವಾ 5000 ರೂಪಾಯಿ ದಂಡವನ್ನು ವಿಧಿಸಬಹುದು ಉಲ್ಲಘನೆ ನಂತರವೂ ಮುಂದುವರಿದರೆ ಪ್ರತಿ ದಿನಕ್ಕೆ 500 ರೂಪಾಯಿ ದಂಡ ವಿಧಿಸಬಹುದು.

**ಪ್ರಕರಣ 308: ರಾಜ್ಯ ಚುನಾವಣ ಆಯೊಗ**

ಗ್ರಾ.ಪಂ., ತಾ.ಪಂ. ಅಥವಾ ಜಿ.ಪಂ.ಯ ಎಲ್ಲಾ ಚುನಾವಣೆಗಳಿಗಾಗಿ ಚುನಾವಣ ಸಿದ್ಧತೆ ಮೇಲ್ವಿಚಾರಣೆ ನೀರ್ದೇಶನ ಚುನಾವಣೆ ಕ್ಷೇತ್ರಗಳ ಸೀಮಾ ನಿರ್ಣಯಾ ಮತ್ತು ನೀತಿಸಂಹಿತೆಗಳನ್ನು ಜಾರಿಗೆ ತರುವುದು ರಾಜ್ಯಾ ಚುನಾವಣ ಆಯೋಗದ ಕರ್ತವ್ಯವಾಗಿದೆ.

- ರಾಜ್ಯ ಚುನಾವಣ ಆಯೋಗದ ಆಯುಕ್ತರನ್ನು ರಾಜ್ಯಪಾಲರು ನೇಮಿಸುತ್ತಾರೆ.
- ರಾಜ್ಯಚುನಾವಣ ಆಯುಕ್ತರ ಸೇವಾ ಷರತ್ತುಗಳ ಮತ್ತು ಅವಧಿಯು ರಾಜ್ಯಾಪಾಲರ ನಿರ್ಧರಿಸಬಹುದಾಂದತೆ ಇರತಕ್ಕದ್ದು (ಇವರನ್ನು ಹೈಕೋರ್ಟ್ ನ್ಯಾಯಧೀಶರನ್ನು ಹುದ್ದೆಯಿಂದ ತೆಗೆದುಹಾಕುವ ರೀತಿಯಲ್ಲಿ ತೆಗೆದ ಹಾಕತಕ್ಕದ್ದು)
- ರಾಜ್ಯಚುನಾವಣೆ ಆಯುಕ್ತರು ತಮ್ಮ ರಾಜೀನಾಮೆಯನ್ನು ರಾಜ್ಯಾಪಾಲರಿಗೆ ಸಲ್ಲಿಸತಕ್ಕದ್ದು
- ರಾಜ್ಯಪಾಲರು ಹುದ್ದೆ ತೆರವಾದ ಒಂದು ತಿಂಗಳಿನೊಳಗೆ ಹೊಸಚುನಾವಣಾ ಆಯುಕ್ತರನ್ನು ತುಂಬಬೇಕು.
- ರಾಜ್ಯಪಾಲರು ಚುನಾವಣಾ ಆಯೋಗಕ್ಕೆ ಅವಶ್ಯಕ ಸಿಬ್ಬಂದಿಯನ್ನು ನೇಮಿಸಬೇಕು.

**ಪ್ರಕರಣ 308-ಎ) ಕೆಲವು ಪ್ರಾದಿಕಾರಗಳ ಸಿಬ್ಬಂದಿಯನ್ನು ಚೂನಾವಣ ಕೇಲಸಕ್ಕೆ ಲಭ್ಯವಾಗುವಂತೆ ಮಾಡುವುದು. ಚುನಾವಣಾ ಕೇಲಕ್ಕೆ ಬೇಕಾಗಿರುವ ಅಗತ್ಯ ಸಿಬ್ಬಂದಿಯನ್ನು (ಶಾಲಾ, ಕಾಲೇಜು, ವಿ.ವಿ. ಹಾಗೂ ವಿವಿಧ ಇಲಾಖೆಗಳ ಸರಕಾರಿ ಸಿಬ್ಬಂದಿ) ರಾಜ್ಯಚುನಾವಣ ಆಯುಕ್ತರು ಕೋರಿದಾಗ ಸಂಬಂಧಪಟ್ಟ ಪ್ರಾಧಿಕಾರಗಳು ಸಿಬ್ಬಂದಿಗಳನ್ನು ಒದಗಿಸತಕ್ಕದ್ದು.**

**ಪ್ರಕರಣ 308-ಎಎ): ಚುನಾವಣೆಗಳ ವೇಳಾಪಟ್ಟಿ**

ರಾಜ್ಯ ಚುನಾವಣಾ ಆಯೋಗವು ಪಂಚಾಯತ್ ಅವಧಿಯು ಪೂರ್ಣ ಗೊಳ್ಳುವುದಕ್ಕೆ ಮೊದಲು ಚುನಾವಣಾ ಸಿದ್ದತೆಯನ್ನು ಮಾಡಿಕೊಳ್ಳಬೇಕು ಮತ್ತು ಚುನಾವಣಾ ದಿನಾಂಕಕ್ಕೆ 45 ದಿನದ ಮುಂಚೆ ವೇಳಾಪಟ್ಟಿಯನ್ನು ಘೋಷಿಸಬೇಕು.

**ಪ್ರಕರಣ 308)ಎಬಿ): ನಾಮಪತ್ರ ಸಲ್ಲಿಸುವ ಕುರಿತಂತೆ ದಿನಾಂಕ ಪ್ರಕಟಿಸುವುದು.**

(ಎ) ನಾಮ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸಬೇಕು.ಆ ಕೊನೆಯ ದಿನಾಕವು ಮೊದಲು ಹೇಳಿರುವ ಅಧಿಸೂಚನೆಯ ಪ್ರಕಟಣೆಯ ದಿನಾಂಕದ ತರುವಾಯ ಬರುವ ಮೂರನೆಯ ದಿನವಾಗಿರಬೇಕು.

(ಬಿ) ನಾಮಪತ್ರವನ್ನು ಪರಿಶೀಲನೆಗೆ ದಿನಾಂಕವನ್ನು ಗೊತ್ತುಪಡಿಸಬೇಕು. ಮತದಾರರ ಪಟ್ಟಿಯನ್ನು ತಯಾರಿಸುವ ಪರಿಷ್ಕರಿಸುವ ಮತ್ತು ತಿದ್ದುವ ಸಂಬಂದದಲ್ಲಿ ಅವರು ಚುನಾವಣಾ ಆಯೋಗಕ್ಕೆ ಪ್ರತಿ

downloaded from: www.kpscvaani.com

ನಿಯೋಜಿತರಾಗದ್ದಾರೆಂದು ಭಾವಿಸಬೇಕು. ಮತ್ತು ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯು ಆ ಅವಧಿಯಲ್ಲಿ ಚುನಾವಣಾ ಆಯೋಗದ ನಿಯಂತ್ರಣ, ಮೇಲ್ವಿವಾರಣೆ ಹಾಗೂ ಶಿಸ್ತಿಗೆ ಒಳಪಟ್ಟಿರಬೇಕು.

**ಪ್ರಕರಣ 308(ಎಸಿ):**

**ಚುನಾವಣಾ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವುದು.**

(1) ನೀತಿ ಸಂಹಿತೆಯು ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಫಲಿತಾಂಶ ಪ್ರಕಟಗೊಳ್ಳುವ ದಿನಾಂಕದವರೆಗೆ ಜಾರಿಯಲ್ಲಿರುತ್ತದೆ.

- ನಿತಿ ಸಂಹಿತೆಯು ಜಾರಿಯಲ್ಲಿರುವಾಗ ಎಲ್ಲಾಮಧ್ಯದ ಅಂಗಡಿಗಳನ್ನು ಹಾಗೂ ಮಧ್ಯತಯಾರಿಕ ಘಟಕಗಳನ್ನು ಮಾಲಿಕರು ಮುಚ್ಚತಕ್ಕದ್ದು ಮತ್ತು ಮೊಹರುಮಾಡಿ ಕೀ ಯನ್ನು ಜಿಲ್ಲಾಧಿಕಾರಿಗೆ ಒಪ್ಪಿಸತಕ್ಕದ್ದು.

**ಪ್ರಕರಣ 308(ಬಿ):** ರಿಟರ್ನಿಂಗ್ ಆಫೀಸರನಿಗೆ ಲಕ್ಕಪತ್ರಗಳನ್ನು ಸಲ್ಲಿಸುವುದು (1) ಸಕಾಲದಲ್ಲಿ ಲೆಕ್ಕಪತ್ರವನ್ನು ಸಲ್ಲಿಸದೆ ಇರುವ ವ್ಯಕ್ತಿಯನ್ನು ಆರು ವರ್ಷಗಳವರೆಗೆ ಅನರ್ಹನನ್ನಾಗಿ ಮಡಬಹುದು.

**ಪ್ರಕರಣ 308(ಸಿ)** ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸುವುದಕ್ಕೆ ತಪ್ಪುವುದು

**ಪ್ರಕರಣ 308–ಡಿ)** ರಿಟರ್ನಿಂಗ್ ಆಫೀಸರ್ ಮುಂತಾದವರು ರಾಜ್ಯ ಚುನಾವಣಾ ಆಯೋಗದ ಪರವಾಗಿ ಕೆಲಸ ಮಾಡುವುದು.

**ಪ್ರಕರಣ 309. ಅಭಿವೃದ್ಧಿ ಯೋಜನೆಯ ತಯಾರಿಕೆ:**

- ಪ್ರತಿಯೋಂದು ಗ್ರಾ.ಪಂ.ಯು ಪ್ರತಿ ವರ್ಷವು ಗ್ರಾಮಸಭೆಯು ಸೂಚಿಸವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗಮನದಲ್ಲಿರಿಸಿಕೊಂಡು ಅಭಿವೃದ್ಧಿಯೋಜನೇಗಳನ್ನು ಸಿದ್ಧಪಡಿಸಿ ಅಗತ್ಯಪಡಿಸಿದ ದಿನಾಂಕದೊಳಗೆ ತಾ.ಪಂ.ಗೆ ಕಳುಹೀಸಬೆಕು.
- ತಾ.ಪಂ.ಯು ಪ್ರತಿ ವರ್ಷ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಜಿ.ಪಂ.ಗೆ ಕಳುಹಿಸಬೇಕು.
- ಜಿ.ಪಂ.ಯು ಪ್ರತಿ ವರ್ಷ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಸರಕಾರಕ್ಕೆ ಕಳುಹಿಸಬೇಕು.
- ಈ ಎಲ್ಲಾ ಯೋಜನೆಗಳನ್ನು ತಾಲೂಕು ಯೋಜನಾ ಮತ್ತು ಅಭೀವೃದ್ಧಿ ಸಮೀತಿಗಳು ಮತು ಜಿಲ್ಲಾ ಯೋಜನಾ ಮತ್ತು ಅಭಿವೃದ್ಧಿ ಸಮೀತಿಗಳು ರೂಪಿಸತಕ್ಕದ್ದು.

**ಪ್ರಕರಣ 309(ಎ):**

**ಪಂಚಾಯತಿಗಳಿಗಾಗಿ ವಿಕೇಂದ್ರಿಕರಣ ಯೋಜನೆ**

ಸ್ವಯಂ ಆಡಳಿತ ಸಂಸ್ಥೆಗಳಾದ ಪಂಚಾಂಯತಗಳು ಸಾಮಾಜಿಕ ನ್ಯಾಯ ಸೇರಿದಂತೆ ಹಾಗೂ ವಹಿಸಿಕೊಟ್ಟ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬೇಕು, ಹಾಗೂ ಎಲ್ಲಾ ವರ್ಗದ ಜನರ ಇತಾಸಕ್ತಿಗಳಿಗೆ ಒತ್ತುನಿಡಿ ತಳಮಟ್ಟದಿಂದ ಅಭಿವೃದ್ಧಿಯಾಗುವಂತೆ ಯೋಜನೆಗಳನ್ನು ರೂಪಿಸಬೇಕು.

**ಪ್ರಕರಣ 309(ಬಿ): ದೂರದೃಷ್ಠಿ ಯೋಜನ**

ಸ್ಥಳಿಯ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸ್ಥಾಪಿಸಿದ ಅಭಿವೃದ್ಧಿ ಮೈಲಿ ಗುರುತುಗಳು ಅಭಿವೃದ್ಧಿ ಆಧಾರದ ಮೇಲೆ ಪಂಚಾಯತ್ ಪೂರ್ವ ಅವಧಿಗಾಗಿ ದೂರದೃಷ್ಟಿ ಯೋಜನೆಯನ್ನು ಸಿದ್ದಪಡಿಸಬೇಕು, ಅದು 5 ವರ್ಷದ ಅವಧಿಯದ್ದಾಗಿರಬೇಕು.

**ಪ್ರಕರಣ 309(ಸಿ): ತಾಲ್ಲೂಕು ಪಂಚಾಯತ ಯೋಜನೆ**

ತಾಲ್ಲೂಕ್ ಮಟ್ಟದಲ್ಲಿ ಎಲ್ಲಾ ಗ್ರಾಮ ಪಂಚಯತ್‌ಗಳ ಯೋಜನೆಗಳನ್ನು ಡಿಜಿಟಲ್ ನಮೂನೆಯಲ್ಲಿ ಕ್ರೋಢಿಕರಿಸಬೇಕು. ಇದರ ಒಂದು ಪ್ರತಿಯನ್ನು ಜಿ.ಪಂ ಗೆ ಕಳುಹಿಸಿಕೊಡಬೇಕು.

**ಪ್ರಕರಣ 309(ಡಿ):**

**ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ**

ಪ್ರತಿಯೊಂದು ತಾಲ್ಲೂಕಿನಲ್ಲಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಇರುತ್ತದೆ.

1) ತಾಲ್ಲೂಕಿನ ದೊಡ್ಡ ಭಾಗಗಳನ್ನು ಪ್ರತಿನಿಧಿಸುವ ವಿಧಾನಸಭೆ ಸದಸ್ಯರು–ಅಧ್ಯಕ್ಷರು
2) ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಅಧ್ಯಕ್ಷ–ಕೋ ಛೇರ್ಮನ್
3) ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ದೊಡ್ಡ ನಗರ ಸ್ಥಳೀಯ ಸ್ವಯಂ ಆಡಳಿತದ ಅಧ್ಯಕ್ಷ –ಕೋಚೇರಪರ್ಸನ್
4) ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಪೈಕಿ ಲಾಟರಿಯ ಮೂಲಕ ಆಯ್ಕೆಮಾಡಲಾದ ಗ್ರಾಮ ಪಂಚಾಯತಿ ಅಧ್ಯಕ್ಷ–ವೈಸ್‌ಚೇರಪರ್ಸನ್
5) ಲೋಕಸಭೆ ಮತ್ತು ರ್‍ಯಾಜ ವಿಧಾನಸಭೆಯ ಸದಸ್ಯರು ತಾಲ್ಲೂಕನ್ನು ಪ್ರತಿನಿಧಿಸುವ ತಾಲ್ಲೂಕಿನೂಳಗೆ ಮತದಾನ ಕ್ಷೇತ್ರಗಳನ್ನುಹೂಂದಿರುವ ತಾಲ್ಲೂಕುಗಳಿಗೆ ಮತದಾರನೆಂದು ನೊಂದಾಯಿತವಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್ ಸದಸ್ಯರು –ಸದಸ್ಯರು
6) ತಾಲ್ಲೂಕು ಪಂಚಾಯಿತಿಯ ಉಪಾಧ್ಯಕ್ಷ–ಸದಸ್ಯ
7) ಸಾಮಾಜಿಕ ನ್ಯಾಯ ಸಮಿತಿಯ ಚೇರ್ ಮನ್ ಸದಸ್ಯ
8) ತಾಲೂಕಿನ A.P.MC ಅಧ್ಯಕ್ಷರು ತಾಲೂಕಿನ P.C.A.R.D ಅಧ್ಯಕ್ಷರು ಜಿಲ್ಲೆಯ ಮುಂಚೂಣಿ ಬ್ಯಾಂಕಿನ ಜಿಲ್ಲಾ ಮ್ಯಾನೇಜರ್ ಹಾಗೂ ಮುವರು ತಾಂತ್ರಿಕ ತಜ್ಞರು ವಿಶೇಶ ಅಹ್ವಾನಿತರಾಗಿರುತ್ತಾರೆ ಇವರನ್ನು ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಪದನಿಮಿತ್ತ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುತ್ತಾರೆ.
9) ಕಾರ್ಯನಿರ್ವಾಹಕ ಅಧಿಕಾರಿಯು ಈ ಸಮಿತಿಯ ಸದಸ್ಯಕಾರ್ಯ ದರ್ಶಿಯಾಗಿರುತ್ತಾರೆ.

**ಪ್ರಕರಣ 309 (ಇ)**

**ಯೋಜನೆ ಮತ್ತು ಅಭಿವೃದ್ಧಿ ಕಾರ್ಯವಿಧಾನ**

ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಎಲ್ಲಾ ಪಂಚಾಯಿತಿಗಳ ಮತ್ತು ನಗರ ಸ್ಥಳೀಯ ಸ್ವಯಂ ಆಡಳಿತಗಳು ಸಲ್ಲಿಸಿದ ಕರಡು ಯೋಜನೆಗಳನ್ನು ಸ್ವಿಕರಿಸಬೇಕು ಮತ್ತು ತಾಲ್ಲೂಕು ಮಟ್ಟದಲ್ಲಿ ಪ್ರತಿಯೊಂದು ವಲಯದ ಆದ್ಯತೆಗಳನ್ನು ವಲಯವಾರು ಗುರುತಿಸಿ ಕ್ರೋಢಿಕರಿಸಬೇಕು.

**ಪ್ರಕರಣ 309 (ಎಫ್): ಜಿಲ್ಲಾ ಪಂಚಾಯತಿ ಯೋಜನೆ**

ಜಿಲ್ಲಾ ಪಂಚಾಯತಗಳು ಜಿಲ್ಲಾ ಪಂಚಾಯತನ ಕರಡು ಯೋಜನೆಯನ್ನು ಸಿದ್ದಪಡಿಸುವುದು ಮತ್ತು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿಗಳ ಯೋಜನೆಗಳನ್ನು ಕ್ರುಡಿಕರಿಸುವುದು ಮತ್ತು ಜಿಲ್ಲಾ ಯೋಜನ ಸಮಿತಿಯ ಮುಂದೆ ಮಂಡಿಸಬೇಕು.

**ಪ್ರಕರಣ 309 (ಜಿ): ಜಿಲ್ಲಾ ಅಭಿವೃದ್ಧಿ ಯೋಜನೆ**

1) ಜಿಲ್ಲಾ ಯೋಜನೆ ಸಮಿತಿಯು ಅನುದಾನ ಲಭ್ಯತೆಗೆ ಒಳಪ್ಪಟು ಈ ಕೆಳಗಿನವುಗಳ ಕುರಿತಂತೆ ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸಬೇಕು.

downloaded from: www.kpscvaani.com


2) ಸ್ಥಳ ವಿಸ್ತಾರ ಯೋಜನೆ ನೀರಿನ ಹಂಚಿಕೆ ಮತ್ತು ಇತರೆ ಭೌತಿಕ ನೈರ್ಸಗಿಕ ಸಂಪನ್ಮೂಲಗಳು ಜಿಲ್ಲೆಯಲ್ಲಿ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಅಧಿಕಾರಿಗಳ ನಡುವೆ ಸಮಾನ ಆಸಕ್ತಿಗಳ ವಿಷಯಗಳು.

3) ಜಿಲ್ಲಾ ಯೋಜನಾ ಸಮಿತಿಯು ಪಂಚಾಯತಿಗಳು ಮತ್ತು ನಗರ ಸ್ಥಳೀಯ ಮತ್ತು ಇತರ ಯೋಜನಾ ಘಟಕಗಳ ಯೋಜನೆಗಳನ್ನು ಅವುಗಳ ನಡುವೆ ಪರಸ್ಪರ ಸಮಾಲೋಚನೆ ಮತ್ತು ವ್ಯವಹರಿಸುವುದಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ ಜೋಡಿಸುವುದು.

4) ಜಿಲ್ಲಾ ಯೋಜನಾ ಸಮಿತಿಯು ಕ್ರೋಢಿಕೃತ ಯೋಜನೆಯನ್ನು ಸದ್ದಪಡಿಸುವಾಗ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟ ಪಡಿಸುವಂತಹ ಸಂಸ್ಥೆಗಳೊಂದಿಗೆ ಸಮಾಲೋಚಿಸಬೇಕು.

### ಪ್ರಕರಣ 309(ಎಚ್): ಕೈಗೊಂಡ ಕ್ರಮದ ವರದಿ

1) ಪಂಚಾಯತ್‌ಗಳ ಯೋಜನೆಗಳ ಪ್ರಗತಿಯ ಬಗ್ಗೆ ವರದಿಯನ್ನು ಆರು ತಿಂಗಳಿಗೊಮ್ಮೆ ಸಿದ್ದಪಡಿಸಬೇಕು.

2) ಗ್ರಾಮ ಪಂಚಾಯತಿಗಳು ಸಂಯೋಜಿತ ವರದಿಯನ್ನು ತಮ್ಮ ಮುಂದಿನ ಗ್ರಾಮ ಸಭೆಯ ಮುಂದೆ ಮಂಡಿಸಬೇಕು.

### ಪ್ರಕರಣ 310: ಜಿಲ್ಲಾ ಯೋಜನಾ ಸಮಿತಿ

ಒಂದು ಅಭಿವೃದ್ಧಿ ಯೋಜನೆಯ ಕರಡನ್ನು ತಯಾರಿಸಲು ಪ್ರತಿ ಜಿಲ್ಲೆಗೆ ಒಂದು ಯೋಜನಾ ಸಮಿತಿ ಇರುತ್ತದೆ.

1) ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು – ಸದಸ್ಯರು

2) ಜಿಲ್ಲಾ ಪಂಚಾಯತನ ಅಧ್ಯಕ್ಷರು – ಸದಸ್ಯರು

3) ತಾಲ್ಲೂಕ್ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಪದನಿಮಿತ್ತ ಕೋ–ಚೇರಪರ್ಸನ್ ಆಗಿರುವ ತಾಲ್ಲೂಕ್ ಪಂಚಾಯಿತಿಗಳ ಅಧ್ಯಕ್ಷರು –ಸದಸ್ಯರು

4) ಜಿಲ್ಲೆಯಲ್ಲಿನ ಪ್ರತಿಯೊಂದು ತಾಲ್ಲೂಕಿನಿಂದ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ವೈಸ್ ಚೇರಪರ್ಸನ್ ( ತಾಲ್ಲೂಕಿನ ಗ್ರಾಮ ಪಂಚಾಯತ ಮೂಲಕ ಚುನಾಯಿತರಾದವರು) – ಸದಸ್ಯರು

5) ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿ ಪಟ್ಟಣ ಪಂಚಾಯಿತಿಗಳು ಮತ್ತು ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳ ಮತ್ತು ನಗರ ಪ್ರದೇಶಗಳ ಜನಸಂಖ್ಯೆಯ ನಡುವಿನ ಅನುಪಾತಕ್ಕೆ ಅನುಗುಣವಾಗಿ ಜಿಲ್ಲೆಯಲ್ಲಿ ನಗರಪಾಲಿಕೆ ಮತ್ತು ಪೌರಸಭೆಗಳ ಕೌನ್ಸಿಲಗಳ ಪೈಕಿಯಿಂದ ನೇಮಿಸಲಾದ ವಿಧಾನದಲ್ಲಿ ಚುನಾಯಿತರಾದ ಸದಸ್ಯರ ಒಟ್ಟು ಸಂಖ್ಯೆಯ ಐದನೇ ನಾಲ್ಕಕಿಂತ ಕಡಿಮೆ ಇದರ ಅಂತಹ ಸಂಖ್ಯೆಯ ವ್ಯಕ್ತಿಗಳು –ಸದಸ್ಯರು

6) ಜಿಲ್ಲಾ ಯೋಜನಾ ಸಮಿತಿ ಕಾರ್ಯದರ್ಶಿಯಾಗಿ ಜಿಲ್ಲಾ ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ಇರುತ್ತಾರೆ. ಈ ಸಮಿತಿಗೆ ಅಧ್ಯಕ್ಷರನ್ನು ಆ ಸದಸ್ಯರ ಮಧ್ಯೆ ಒಬ್ಬರನ್ನು ಚುನಾಯಿಸಲಾಗುತ್ತದೆ.

7) ಲೋಕಸಭೆಯ ಸದಸ್ಯರು ಜಿಲ್ಲೆಯಲ್ಲಿ ಮತದಾರರೆಂದು ನೋಂದಣಿ ಯಾಗಿರುವ ರಾಜ್ಯಸಭಾ ಸದಸ್ಯರು, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರು, ಡಿಸಿಯವರು ಶಾಶ್ವತ ಆಹ್ವಾನಿತರಾಗಿರುತ್ತಾರೆ. ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿ ಅಧ್ಯಕ್ಷರು ಅಭಿವೃದ್ಧಿ ಯೋಜನೆಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸುತ್ತಾರೆ.

### ಪ್ರಕರಣ 310(ಎ) ರಾಜ್ಯ ಪಂಚಾಯಿತಿ ಪರಿಷತ್

1) ಸರ್ಕಾರವು ಪಂಚಾಯತರಾಜ್ ವ್ಯವಸ್ಥೆಯನ್ನು ಸುಧಾರಿಸಲು ಹಾಗೂ ಜನತೆಯ ಅವಶ್ಯಕತೆಗಳಿಗೆ ತೀವ್ರವಾಗಿ ಸ್ಪಂದಿಸುವಂತೆ ಮಾಡುವ ಸಲುವಾಗಿ ರಾಜ್ಯ ಪಂಚಾಯತ್ ಪರಿಷತ್ತನ್ನು ರಚಿಸುತ್ತದೆ.

2) ರಾಜ್ಯ ಪಂಚಾಯತ ಪರಿಷತ್ತಿಗೆ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿ ರುತ್ತಾರೆ.

- ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯಸಚಿವರು ಉಪಾಧ್ಯಕ್ಷರಾಗಿರುತ್ತಾರೆ.
- ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಇತರ ಐವರು ಸಚಿವರು ಸದಸ್ಯರಾಗಿರುತ್ತಾರೆ.
- ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಈಲ್ಲಾ ಪಂಚಾಯಿತಿಯ 10 ಜನ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.
- ನಾಲ್ಕು ಗ್ರಾಮ ಹಾಗೂ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಸದಸ್ಯರನ್ನಾಗಿ ಮಾಡಲಾಗಿರುತ್ತದೆ.
- ಐದು ಜನ ಎಮ್.ಎಲ್.ಎ. ಮತ್ತು ಇಬ್ಬರು ಎಮ್.ಎಲ್.ಸಿ.ಗಳು ಇದರ ಸದಸ್ಯರಾಗಿರುತ್ತಾರೆ.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ಕಾರ್ಯದರ್ಶಿಯನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಮಾಡಲಾಗಿರುತ್ತದೆ.

3) ರಾಜ್ಯ ಪಂಚಾಯತ ಪರಿಷತ್ ಪ್ರತಿವರ್ಷ ಕನಿಷ್ಠ ಎರಡು ಸಲ ಸಭೆಯನ್ನು ಸೇರಬೇಕು ಮತ್ತು ರಾಜ್ಯ ಪಂಚಾಯತ ಪರಿಷತ್ತು ರಾಜ್ಯದಲ್ಲಿರುವ ಪಂಚಾಯತಿಗಳ ಕಾರ್ಯನಿರ್ವಹಣೆಗೆ ಸಂಬಂಧ ಪಟ್ಟ ವಿಷಯಗಳ ಬಗ್ಗೆ ಚರ್ಚಿಸುತ್ತದೆ.

### ಪ್ರಕರಣ 310(ಬಿ): ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ

(1) ಅಭಿವೃದ್ಧಿ ಯೋಜನೆಗಳನ್ನು ಮತ್ತು ಆಯವ್ಯಯ ದಸ್ತಾವೇಜಿ ನೊಂದಿಗೆ ಹಾಜರುಪಡಿಸಬೇಕಾದ ವಾರ್ಷಿಕ ಹಣಕಾಸು ಪುನರಾ ವಲೋಕನೆಯನ್ನು ರೂಪಿಸುವುದಕ್ಕೆ ಸರ್ಕಾರವನ್ನು ಸಮರ್ಥಗೊಳಿ ಸುವುದಕ್ಕೆ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯೆಂದು ಕರೆಯಲಾಗುವ ಸಮಿತಿಯನ್ನು ಸ್ಥಾಪಿಸಬೇಕು.

(2) ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಈ ಮುಂದಿನವರನ್ನು ಒಳಗೊಂಡಿರುತ್ತದೆ.

1. ಚೇರಪರ್ಸನ್ – ಮುಖ್ಯಮಂತ್ರಿ
2. ವೈಸ್ ಚೇರ್ಮನ್ –ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಹಣಕಾಸು ಸಚಿವರು,ಯೋಜನೆ ಸಚಿವರು,ನಗರಾಭಿವೃದ್ಧಿ ಸಚಿವರು ಮತ್ತು ಸಮಾಜೋ ಆರ್ಥಿಕ ಕ್ಷೇತ್ರದಲ್ಲಿ ತಜ್ಞರಾದ ಒಬ್ಬರನ್ನು ಸದಸ್ಯರನ್ನಾಗಿ ಮಾಡಲಾಗುತ್ತದೆ. ಸರ್ಕಾರವು ನಾಮ ನಿರ್ದೇಶಿಸಿದ ಸಮಾಜೋ ಆಅಭೊವೃದ್ಧಿಯ 3. ಸದ್ಯಸರು – ಕ್ಷೇತ್ರದಲ್ಲಿ ತಜ್ಞರಾದ ಒಬ್ಬರು ಸದಸ್ಯರಾಗಿರುತ್ತಾರೆ. ರಾಜ್ಯ ಅಭಿವೃದ್ಧಿ ಆಯುಕ್ತರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇರುತ್ತಾರೆ.

RDP ಕಾರ್ಯದರ್ಶಿ–ಸದಸ್ಯರು, ನಗರಾಭಿವೃದ್ಧಿ ಇಲಾಖೆ– ಕಾರ್ಯನಿರತ ನಾಮನಿರ್ದೇಶನ–ಐದು ಜನ ಸದಸ್ಯರ ಸದಸ್ಯರಾಗಿ ರುತ್ತಾರೆ. ಸದಸ್ಯ ಕಾರ್ಯದರ್ಶಿ–ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ.

 downloaded from: www.kpscvaani.com

ಅಧ್ಯಾಯ
19

# ನಿಯಮಗಳು, ವಿನಿಮಯಗಳು ಮತ್ತು ಉಪವಿಧಿಗಳು

**ಪ್ರಕರಣ 311:**

**ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರ**

1) ಪಂಚಾಯತರಾಜ್ ಅಧಿನಿಯಮದ ಉದ್ದೇಶಗಳನ್ನು ಸಂಬಂಧಪಟ್ಟ ಪ್ರಾಧಿಕಾರ ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

2) ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚೆನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸುವುದು.

ಈ ಪ್ರಕರಣದ ಅಡಿಯಲ್ಲಿ ನಿಯಮಗಳನ್ನು, ರಚಿಸುವಲ್ಲಿ, ಸರ್ಕಾರವು ಅದರ ಉಲ್ಲಂಘನೆ ಬಗ್ಗೆ ತಪ್ಪಿತಸ್ಥನಾದ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ 500, ರೂಪಾಯಿಗಳವರೆಗೆ ದಂಡಕ್ಕೆ ಒಳಗಾಗುತ್ತಾನೆ.

**ಪ್ರಕರಣ 312:**

**i, ii ಮತ್ತು iiiನೇ ಅನುಸೂಚಿಗಳ ತಿದ್ದುಪಡಿ:**

ಸರ್ಕಾರದ ರಾಜ್ಯ ಪಂಚಾಯತಿ ಪರಿಷತ್ತಿನೊಂದಿಗೆ ಸಮಲೋಚಿಸಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ 1, 2, ಮತ್ತು 3ನೇ ಅನುಸೂಚಿಗಳಲ್ಲಿ ಹೇಳಿರುವ ಯೋಜನೆಯನ್ನು ಬಿಟ್ಟುಬಿಡಬಹುದು ಅಥವಾ ತಿದ್ದುಪಡಿ ಮಾಡಬಹುದು. ಆದರೆ ಮುಂದೆ ಅದರ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕು.

**ಪ್ರಕರಣ 313:**

**ವಿನಿಯಮಗಳನ್ನು ರಚಿಸಲು ಜಿಲ್ಲಾ ಪಂಚಾಯತಿಯ ಅಧಿಕಾರ**

ಜಿಲ್ಲಾ ಪಂಚಾಯತಿಯು (313 & 311ನೇ ಪ್ರಕರಣದ ಅಡಿಯಲ್ಲಿನ ನಿಯಮಗಳು) ಈ ಅಧಿನಿಮದ ಉದ್ದೇಶ ಕಾರ್ಯಗತಗೊಳಿಸಲು ಅಧಿಸೂಚನೆ ಮೂಲಕ ಅದರ ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಅದು ಸಂಬಂದಿಸುವಷ್ಟರ ಮಟ್ಟಿಗೆ ವಿನಿಮಯಗಳನ್ನು ರಚಿಸಬಹುದು.

**ಪ್ರಕರಣ 314:**

**ವಿನಿಮಯಗಳನ್ನು ರಚಿಸಲು ತಾ.ಪಂ.ಯ ಅಧಿಕಾರ**

ತಾಲ್ಲೂಕು ಪಂಚಾಯಿತಿಯು (314 & 311ನೇ ಪ್ರಕರಣದ ಅಡಿಯಲ್ಲಿನ ನಿಯಮಗಳು) ಸರ್ಕಾರದ ಪೂರ್ವ ಮಂಜುರಾತಿಯೊಡನೆ ಈ ಅಧಿನಿಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ಅಧಿಕಾರಿಗಳನ್ನು ಮತ್ತು ಕರ್ತವ್ಯಗಳನ್ನು ವಿನಿಮಯಗಳನ್ನು ರಚಿಸಬಹುದು.

**ಪ್ರಕರಣ 315:**

**ಉಪವಿಧಿಗಳನ್ನು ರಚಿಸಲು ಪಂಚಾಯಿತಿಗಳ ಅಧಿಕಾರ.**

ಈ ಅಧಿನಿಯಮದ ಉಪಬಂಧಗಳು ಮತ್ತು 311ನೇ ಪ್ರಕರಣ ಅಡಿಯಲ್ಲಿನ ನೀಯಮಗಳು ಮತ್ತು 313ನೇ ಪ್ರಕರಣದ ಅಡಿಯಲ್ಲಿನ ವಿನಿಯಮಗಳುನ್ನು ಜಿ.ಪಂ. ಪೂರ್ವ ಮಂಜೂರಾತಿಯೊಂದಿಗೆ ಉಪವಿಧಿಗಳನ್ನು ರದ್ದುಪಡಿಸಬಹುದು ಅಥವಾ ರಚಿಸಬಹುದು.

**ಪ್ರಕರಣ 315: 'ಎ' ಗ್ರಾಮ ಪಂಚಾಯತಿಯ ಉಪವಿಧಿಗಳನ್ನು ರದ್ದುಪಡಿಸುವ ಅಥವಾ ಮಾರ್ಪಡಿಸುವ ಸರ್ಕಾರದ ಅಧಿಕಾರ**

ಸರ್ಕಾರವು ಯಾವುದೇ ಗ್ರಾ.ಪಂ ಯ ಮೂಲಕ ಮಾಡಲಾದ ಯಾವುದೇ ಉಪವಿಧಿಯನ್ನು ಅಥವಾ ಅದರ ಭಾಗವನ್ನು ಪೂರ್ಣವಾಗಿ ಯಾವುದೇ ಸಮಯದಲ್ಲಿ ಅಧಿಸೂಚನೆ ಮೂಲಕ ನಿರಸನಗೋಳಿಸಬಹುದು.

**ಪ್ರಕರಣ 316: ಮಾದರಿ ವಿನಿಮಯಗಳನ್ನು ಮತ್ತು ಉಪವಿಧಿಗಳನ್ನು ರಚಿಸಲು ಸರ್ಕಾರದ ಅಧಿಕಾರ**

(1) ಸರ್ಕಾರವು ಕರಡನ್ನು ಪೂರ್ವಭಾವಿಯಾಗಿ ಪ್ರಕಟಿಸಿದ ದಿನಾಂಕ ದಿಂದ ತಿಂಗಳಿಗೆ ಕಡಿಮೆಯಿಲ್ಲದಷ್ಟು ಅವಧಿಯ ತರುವಾಯ ಜಿ.ಪಂ. ,ತಾ.ಪಂ & ಗ್ರಾ.ಪಂ ಮಾದರಿ ವಿನಿಮಯಗಳು ಮತ್ತು ಉಪವಿಧಿಗಳನ್ನು ರಚಿಸಬಹುದು.

ಸರ್ಕಾರವು ಮಾದರಿ ವಿನಿಮಯಗಳು, ಮತ್ತು ಉಪವಿಧಿಗಳನ್ನು ಅಳವಡಿಸಿಕೊಳ್ಳಬೇಕೆಂದು ಅಧಿಸೂಚನೆ ಮೂಲಕ ನಿರ್ದೇಶನ ನೀಡಬಹುದು.

**ಪ್ರಕರಣ 317:**

**ಕಾನೂನುಗಳನ್ನು ಅಳವಡಿಸಲು ಸರ್ಕಾರದ ಅಧಿಕಾರ**

ಸರಕಾರವು ಹೀಗೆ ಅಳವಡಿಸಿದ ಅಥವಾ ಮಾರ್ಪಡಿಸಿದ ಕಾನೂನುಗಳನ್ನು ಯಾವುದೇ ನ್ಯಾಯಲಯದಲ್ಲಿ ಯಾವುದೇ ವ್ಯಕ್ತಿ ಪ್ರಶ್ನಿಸುವಂತಿಲ್ಲ.

**ಪ್ರಕರಣ 318: ನಿರಸನ ಮತ್ತು ಉಳಿಸುವಿಕೆಗಳು**

ಕರ್ನಾಟಕದ ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯಿತಿ ಸಮಿತಿಗಳ, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಮ 1983ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**ಪ್ರಕರಣ 319: ಈ ಅಧಿನಿಯಮವನ್ನು ಜಾರಿಗೊಳಿಸು ಆದೇಶಗಳು**

**ಪ್ರಕರಣ 320: ರಾಜ್ಯ ವಿಧಾನ ಮಂಡಲದ ಸದನಗಳ ಮುಂದೆ ಮಂಡಿಸಬೇಕಾದ ನಿಯಮಗಳು ಮತ್ತು ಆದೇಶಗಳು**

ರಾಜ್ಯ ವಿಧಾನ ಮಂಡಲದ ಸದನಗಳ ಮುಂದೆ ಮಂಡಿಸಬೇಕಾದ ನಿಯಮಗಳು ಮತ್ತು ಆದೇಶಗಳು. ಆದೇಶ ಮಾಡಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸಬೇಕು.

**ಪ್ರಕರಣ 321: ತೊಂದರೆಗಳ ನಿವಾರಣೆ**

ಈ ಅಧಿನಿಯಮವನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ ಸರ್ಕಾರವು ತೊಂದರೆಯನ್ನು ನಿವಾರಿಸಲು ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಅಗತ್ಯ ಕ್ರಮಕೈಗೊಳ್ಳಬಹುದು.

downloaded from: www.kpscvaani.com


ಹೀಗೆ ಒಟ್ಟು 321 ಪ್ರಕರಣಗಳು, 19 ಅಧ್ಯಾಯಗಳು ಹಾಗೂ 4 ಅನುಸೂಚಿಗಳನ್ನು ನಾವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ ರಾಜ್ ಕಾಯ್ದೆಯಲ್ಲಿ ನೋಡಬಹುದು.

**ವಿಶೇಷ ಸೂಚನೆ:** ಈ ಕಾಯ್ದೆಯಲ್ಲಿ ಪರೀಕ್ಷೆಯ ತಯಾರಿಗೆ ಅವಶ್ಯವಿರುವ ಮುಖ್ಯ ಮಾಹಿತಿಯನ್ನು ಮಾತ್ರ ಹೇಳಲಾಗಿದೆ. ಪ್ರಕರಣಗಳ ನಂತರ ಉಪ ಪ್ರಕರಣಗಳ ಅನುಕ್ರಮಣಿಯಲ್ಲಿ ವ್ಯತ್ಯಾಸವಿರುವುದರಿಂದ ಒದುಗರು ದ್ವಂದ್ವಕ್ಕೆ ಒಳಗಾಗಬಾರದು.

## ಕೇಂದ್ರ ಹಣಕಾಸು ಆಯೋಗ

### ಆಯೋಗದ ಸ್ಥಾಪನೆ ಅವಕಾಶ

**ಹಿನ್ನೆಲೆ :**

ಭಾರತದ ಸಂವಿಧಾನ 280 ನೇ ವಿಧಿ ಅನ್ವಯ ಕೇಂದ್ರ ಹಣಕಾಸು ಆಯೋಗವನ್ನು ಭಾರತದ ರಾಷ್ಟ್ರಪತಿಗಳು 5 ವರ್ಷದ ಅವಧಿಗೆ ಕೇಂದ್ರ ಹಾಗೂ ರಾಜ್ಯಗಳು ನಡುವಿನ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಶಿಫಾರಸ್ಸು ನೀಡಲು ನೇಮಕ ಮಾಡುತ್ತಾರೆ.

1) **ಭಾರತದಲ್ಲಿ ಹಣಕಾಸು ಆಯೋಗಗಳು :**
1951ರಲ್ಲಿ ಕೆ.ಸಿ.ನಿಯೋಗಿ ಅವರ ಅಧ್ಯಕ್ಷತೆಯಲ್ಲಿ ಮೊದಲು ಹಣಕಾಸು ಆಯೋಗವನ್ನು ಸ್ಥಾಪಿಸಲಾಯಿತು. ಪ್ರಸ್ತುತವಾಗಿ 14 ನೇ ಹಣಕಾಸು ಆಯೋಗವು ಜಾರಿಯಲ್ಲಿದೆ.

2) **14ನೇ ಹಣಕಾಸು ಆಯೋಗದ ಸಂರಚನೆ :**
14ನೇ ಹಣಕಾಸು ಆಯೋಗವನ್ನು RBI ಮಾಜಿ ಗವರ್ನರ್ ವೈ.ವಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ 2013 ರ ಜನೇವರಿ 3 ರಂದು ನೇಮಿಸಲಾಗಿತ್ತು.

3) 14ನೇ ಹಣಕಾಸು ಆಯೋಗದ 4 ಮಂದಿ ಸದಸ್ಯರುಗಳು ಡಾ.ಗೋವಿಂದರಾವ್, ಸುಷ್ಮನಾಥ್, ಪ್ರೊ.ಅಭಿಜಿತ್ ಸೇನ್, ಸುದೀಪ್ತೋ ಮುಂಡ್ಲೆ,

4) ಕಾರ್ಯದರ್ಶಿ: ಅಜಯ್ ನಾರಾಯಣ್ ಝಾ.

5) **ಆಯೋಗದ ಜಾರಿಯ ಅವಧಿ :** 14ನೇ ಹಣಕಾಸು ಆಯೋಗವು 2015 ಏಪ್ರಿಲ್ 1ರಿಂದ 2020 ಮಾರ್ಚ 31ರವರೆಗೆ ಅಂದರೆ ಐದು ವರ್ಷದ ಅವಧಿಗೆ ಶಿಫಾರಸ್ಸುಗಳು ಜಾರಿಯಲ್ಲಿವೆ.

6) **ಅನುದಾನ ಶಿಫಾರಸ್ಸು :** 14 ನೇ ಹಣಕಾಸು ಆಯೋಗವು ಕೇಂದ್ರ ಸರಕಾರವು ರಾಜ್ಯಗಳಿಗೆ ಶೇ.42ರಷ್ಟು ಅನುದಾನ ಹಂಚಿಕೆ ಮಾಡಲಾಗಿದೆ.

| ಕ್ರ.ಸಂ | ಆಯೋಗಗಳು | ಅಧ್ಯಕ್ಷರು |
|---|---|---|
| 1 | 1ನೇ ಹಣಕಾಸು ನಿಯೋಗ | ಕೆ.ಸಿ.ನಿಯೋಗಿ |
| 2 | 2ನೇ ಹಣಕಾಸು ನಿಯೋಗ | ಕೆ.ಸಂತಾನಂ |
| 3 | 3ನೇ ಹಣಕಾಸು ನಿಯೋಗ | ಎ.ಕೆ.ಚಂದಾ |
| 4 | 4ನೇ ಹಣಕಾಸು ನಿಯೋಗ | ಪಿವಿ.ರಾಜಮನ್ನಾರ್ |
| 5 | 5ನೇ ಹಣಕಾಸು ನಿಯೋಗ | ಮಹಾವೀರತ್ಯಾಗಿ |
| 6 | 6ನೇ ಹಣಕಾಸು ನಿಯೋಗ | ಬ್ರಹ್ಮಾನಂದರೆಡ್ಡಿ |
| 7 | 7ನೇ ಹಣಕಾಸು ನಿಯೋಗ | ಜೆ.ಎಂ.ಸೇಲತ್ |
| 8 | 8ನೇ ಹಣಕಾಸು ನಿಯೋಗ | ವೈ.ಬಿ.ಚೌಹಾಣ್ |
| 9 | 9ನೇ ಹಣಕಾಸು ನಿಯೋಗ | ಎನ್.ಕೆ.ಸಾತ್ವಿ |
| 10 | 10ನೇ ಹಣಕಾಸು ನಿಯೋಗ | ಕೆ.ಸಿ.ಸಂತ್ |
| 11 | 11ನೇ ಹಣಕಾಸು ನಿಯೋಗ | ಎಂ.ಎಂ.ಖುಸ್ರೋ |
| 12 | 12ನೇ ಹಣಕಾಸು ನಿಯೋಗ | ಸಿ.ರಂಗರಾಜನ್ |
| 13 | 13ನೇ ಹಣಕಾಸು ನಿಯೋಗ | ಡಾ.ವಿಜಯ ಕೇಲ್ಕರ್ |
| 14 | 14ನೇ ಹಣಕಾಸು ನಿಯೋಗ | ವೈ.ವಿ.ರೆಡ್ಡಿ. |

### ರಾಜ್ಯ ಹಣಕಾಸು ಆಯೋಗ ರಚನೆ

1) ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯಲ್ಲಿ ಕ್ರಮವಾಗಿ–
243(I) – {ಗ್ರಾಮೀಣ ಸ್ಥಳಿಯ ಸಂಸ್ಥೆಗಳು}
243(y) – {ನಗರ ಸ್ಥಳಿಯ ಸಂಸ್ಥೆಗಳು ಹಣಕಾಸಿನ}
ವಿಧಿಯಲ್ಲಿ ರಾಜ್ಯ ಹಣಕಾಸು ಆಯೋಗವನ್ನು ಸ್ಥಾಪಿಸಿ, ಅನುದಾನವನ್ನು ಹಂಚಿಕೆ ಮಾಡಲು ಮತ್ತು ಸ್ಥಳೀಯ ಹಣಕಾಸಿನ ಸುಧಾರಣೆ ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಾಜ್ಯ ಸರಕಾರಗಳು ಸ್ಥಾಪಿಸಬೇಕೆಂದು ಹೇಳಲಾಗಿದೆ. ಸಂವಿಧಾನದ ಹೇಳಿಕೆಯನ್ನು ಆಧಾರಿಸಿ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ, 1993ರಲ್ಲಿ ರಾಜ್ಯ ಸರ್ಕಾರವು ರಾಜ್ಯ ಹಣಕಾಸು ಆಯೋಗವನ್ನು ಸ್ಥಾಪಿಸಲು 267ನೇ ಪ್ರಕರಣದಲ್ಲಿ ಅವಕಾಶ ನೀಡಲಾಗಿದೆ.

2) ರಾಜ್ಯದ ರಾಜ್ಯಪಾಲರು, ಹಣಕಾಸು ಆಯೋಗದ ಅಧ್ಯಕ್ಷ ಹಾಗೂ ಸದಸ್ಯರುಗಳನ್ನು ನೇಮಿಸುತ್ತಾರೆ.

3) ರಾಜ್ಯ ಹಣಕಾಸು ಆಯೋಗವು: ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆ ಅನುದಾನ ಹಂಚಿಕೆ.

**ಅರ್ಹತೆಗಳು :**

ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳ ಅರ್ಹತೆಯು 2010ರ ನಿಯಮಾನುಸಾರ ರಾಜ್ಯ ಹಣಕಾಸು ಆಯೋಗದ ಮುಖ್ಯಸ್ಥರು ಮತ್ತು ಸದಸ್ಯರು.

**ಈ ಕೆಳಕಂಡ ಅರ್ಹತೆ ಹೊಂದಿರಬೇಕು:**

1) ಹಣಕಾಸಿನ ವಿಷಯ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಆಳವಾದ ವಿಶೇಷ ಜ್ಞಾನ ಹೊಂದಿರಬೇಕು.

2) ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿಷಯ ಜ್ಞಾನ ತಿಳಿದಿರಬೇಕು.

**ಶಿಫಾರಸ್ಸಿನ ಅವಧಿ: 5 ವರ್ಷದ ಅವಧಿಗೆ ನೇಮಕ**

3) ರಾಜ್ಯ ಸಂಚಿತ ನಿಧಿಯಿಂದ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ.

| ಕ್ರ. ಸಂ | ರಾಜ್ಯ ಹಣಕಾಸು ಆಯೋಗಗಳು | ಸ್ಥಾಪನೆ ಅವಧಿ | ಅಧ್ಯಕ್ಷರು ಹಾಗೂ ಸದಸ್ಯರು |
|---|---|---|---|
| 1 | 1 ನೇ ಹಣಕಾಸು ಆಯೋಗ | 1994 ಜೂನ್ 10 | ಅಧ್ಯಕ್ಷರು: ಡಾ.ಜಿ.ತಿಮ್ಮಯ್ಯ<br>ಸದಸ್ಯರು: ಅಬ್ದುಲ್ ಅಜೀಜ್ |

 downloaded from: www.kpscvaani.com

| | | | |
|---|---|---|---|
| 2 | 2 ನೇ ಹಣಕಾಸು ಆಯೋಗ | 2010 ಡಿಸೆಂಬರ್ 23 | ಅಧ್ಯಕ್ಷರು:ಡಾ. ಕೆ.ಪಿ.ಸುರೇಂದ್ರನಾಥ ಸದಸ್ಯರು:ಪ್ರೊ. ಗೋವಿಂದರಾವ್ |
| 3 | 3 ನೇ ಹಣಕಾಸು ಆಯೋಗ | 2006 ಅಗಸ್ಟ 28 | ಅಧ್ಯಕ್ಷರು:ಎ.ಜಿ.ಕೊಡಗಿ ಸದಸ್ಯರು:ಟಿ.ತಿಮ್ಮೇಗೌಡ, ಡಾ.ಎಸ್.ಮಹೇಂದ್ರಕಂಟಿ. |
| 4 | 4ನೇ ಹಣಕಾಸು ಆಯೋಗ | 2015 ಡಿಸೆಂಬರ್ 21 | ಅಧ್ಯಕ್ಷರು:ಸಿ.ಜಿ.ಚಿನ್ನಸ್ವಾಮಿ ಸದಸ್ಯರು: ಹೆಚ್.ಡಿ.ಅಮರನಾಥನ್, ಡಾ.ಹೆಚ್.ಶಶಿಧರ್. |

## ಅಧ್ಯಾಯ-40
## ಸುವರ್ಣ ಗ್ರಾಮೋದಯ ಯೋಜನೆ

### ಪ್ರಕರಣ 311:
### ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರ

ಕರ್ನಾಟಕ ಏಕೀಕರಣಗೊಂಡು 50 ವರ್ಷ ಪೂರ್ಣಗೊಂಡ ನೆನಪಿಗಾಗಿ ಕರ್ನಾಟಕ ಸರ್ಕಾರವು ದಿನಾಂಕ 25-02-2007 ರಂದು ಈ ಯೋಜನೆಗೆ ಚಾಲನೆ ನೀಡಿತು. ಯೋಜನೆಯಡಿಯಲ್ಲಿ ಪ್ರತಿವರ್ಷ 1000 ಸಾವಿರ ಗ್ರಾಮಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ. 2001 ರ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಪ್ರತಿ ತಾಲೂಕಿಗೆ ಸರ್ಕಾರವು ನಿಗಧಿಪಡಿಸಿದ ಜನಸಂಖ್ಯೆಯ ಮಿತಿಯೊಳಗೆ ಗ್ರಾಮಗಳನ್ನು ಶಾಸಕರು ಆಯ್ಕೆ ಮಾಡುತ್ತಾರೆ. ಸುವರ್ಣ ಗ್ರಾಮೋದಯ ಯೋಜನೆ ನಿಧಿಯಿಂದ ಗ್ರಾಮದ ಅಭಿವೃದ್ಧಿಗಾಗಿ 2001 ರ ಜನಗಣತಿಯ ಪ್ರಕಾರ ಗ್ರಾಮದ ಜನಸಂಖ್ಯೆಯನ್ನು ಆಧರಿಸಿ ತಲಾನುದಾನ ( ಪ್ರತಿ ವ್ಯಕ್ತಿಗೆ) 2500.00 ರೂಗಳಂತೆ ಗ್ರಾಮದ ಅಭಿವೃದ್ದಿಗೆ ಅನುದಾನ ನಿಗಧಿಪಡಿಸಲಾಗುತ್ತದೆ.

**ಯೋಜನೆಯ ಧ್ಯೇಯೋದ್ದೇಶಗಳು :**

1) ಆಯ್ಕೆಯಾದ ಗ್ರಾಮಗಳ ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವುದು.
2) ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಸೇರಿದಂತೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
3) ವಿದ್ಯಾವಂತ ಯುವಕರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದು.
4) ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಟನೆಗಳು ಮುಂತಾದವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿಗೆ ನೆರವಾಗುವುದು.

**1 ನೇ ಹಂತ: (2006-07 ಮತ್ತು 2007-08)**

ಮೊದಲ ಹಂತದಲ್ಲಿ ರೂ. 1000.60 ಕೋಟಿ ಅನುದಾನದಲ್ಲಿ 1204 ಗ್ರಾಮಗಳನ್ನು ಆಯ್ಕೆ ಮಾಡಿ ರೂ.950.05 ಕೋಟಿ ಅನುದಾನ ಬಿಡುಗಡೆಯಾಗಿದ್ದು ರೂ 950.00 ಕೋಟಿ ವೆಚ್ಚವಾಗಿರುತ್ತದೆ.

**2 ನೇ ಹಂತ (ಗುಲ್ಬರ್ಗಾ ಕಂದಾಯ ವಿಭಾಗ): (2008-09)**

1) ಆಯ್ಕೆಯಾದ ಗ್ರಾಮಗಳ ಸಂಖ್ಯೆ:222
2) ನಿಗದಿಪಡಿಸಿರುವ ಅನುದಾನ: ರೂ.208.20 ಕೋಟಿ
3) ಬಿಡುಗಡೆ: ರೂ. 241.66 ಕೋಟಿ ಮತ್ತು ವೆಚ್ಚ: ರೂ.211.00 ಕೋಟಿ.

**3 ನೇ ಹಂತ (2009-10)**

1) ಆಯ್ಕೆಯಾದ ಗ್ರಾಮಗಳ ಸಂಖ್ಯೆ: 1573
2) ನಿಗಧಿಪಡಿಸಿರುವ ಅನುದಾನ: ರೂ. 1012.05 ಕೋಟಿ.
3) ಬಿಡುಗಡೆ: ರೂ.1011.66 ಕೋಟಿ ಮತ್ತು ವೆಚ್ಚ ರೂ.990.27 ಕೋಟಿ.

**4 ನೇ ಹಂತ ( ಗುಲ್ಬರ್ಗಾ ಕಂದಾಯ ವಿಭಾಗ): 2010-11)**

1) ಆಯ್ಕೆಯಾದ ಗ್ರಾಮಗಳ ಸಂಖ್ಯೆ:381
2) ನಿಗಧಿಪಡಿಸಿರುವ ಅನುದಾನ: ರೂ 214.09 ಕೋಟಿ.
3) ಬಿಡುಗಡೆ: ರೂ 242.66 ಕೋಟಿ ಮತ್ತು ವೆಚ್ಚ: ರೂ 210.00 ಕೋಟಿ

**5 ನೇ ಹಂತ (2012-13)**

1) ಆಯ್ಕೆಯಾದ ಗ್ರಾಮಗಳ ಸಂಖ್ಯೆ:2174
2) ನಿಗಧಿಪಡಿಸಿರುವ ಅನುದಾನ:1000.00 ಕೋಟಿ.ಶ
3) ಬಿಡುಗಡೆ : 443.31 ಕೋಟಿ ಮತ್ತು ವೆಚ್ಚ: 398.00 ಕೋಟಿ.

## ಕರ್ನಾಟಕದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

**ಕರ್ನಾಟಕದಲ್ಲಿ ಮೊದಲ ಹಂತದಲ್ಲಿ ಜಾರಿಗೆ**

- ಕರ್ನಾಟಕದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಫೆಬ್ರವರಿ 2 2006ರಂದು 5 ಜಿಲ್ಲೆಗಳಾದ ಬಿದರ. ಗುಲಬರ್ಗ. ರಾಯಚೂರು. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಿಸಲಾಗಿದೆ.
- ಏಪ್ರಿಲ್ 1 2007ರಿಂದ ಕರ್ನಾಟಕದಲ್ಲಿ ಮತ್ತೆ 6 ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಜಿಲ್ಲೆಗಳಾದ ಬೆಳಗಾವ. ಬಳ್ಳಾರಿ. ಚಿಕ್ಕಮಂಗಳೂರು. ಹಾಸನ. ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳು
- ಕರ್ನಾಟಕದ ಇಡೀ ರಾಜ್ಯದಂತ ಉಳಿದ ಜಿಲ್ಲೆಗಳಿಗೆ ಏಪ್ರಿಲ್ 1 2008ರಿಂದ ವಿಸ್ತರಿಸಲಾಗಿದೆ. ಈ ಮೂಲಕ ರಾಜ್ಯಾದ್ಯಂತ ಈ ಕಾರ್ಯಕ್ರಮವು ಅನುಷ್ಠಾನಕ್ಕೆ ಬಂದಿತು.
- ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಕರ್ನಾಟಕದಲ್ಲಿ ಅಕ್ಟೋಬರ್ 2 2009ರಿಂದ ಮಹತ್ಮಾಗಾಂಧಿಜೀ ಉದ್ಯೋಗ ಖಾತ್ರಿ ಯೋಜನೆಯ ಹೆಸರಿನಡಿಯಲ್ಲಿ ಪುನರ್ ನಾಮಕರಣ ಮಾಡಲಾಗಿತು.

**ಸಾಮಾಜಿಕ ಪರಿಶೋಧನೆ**

- ಸಾಮಾಜಿಕ ಪರಿಶೋದನೆ ಎಂದರೆ ಯೋಜನೆಯ ಅನುಷ್ಠಾನದಲ್ಲಿನ ಪ್ರತಿಯೊಂದು ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಲಾಗಿದೆಯೇ ಹಾಗೂ ಸಮರ್ಪಕವಾಗಿ ಕಾಪಾಡಲಾಗಿದೆಯೇ ಹಾಗೂ ಸಮರ್ಪಕವಾಗಿ ನಿಯಮಗಳನ್ನು ಪಾಲಿಸುವುದರ ಜೊತೆಗೆ ಅಗತ್ಯ ದಾಖಲಾತಿಗಳನ್ನು ನಿರ್ವಹಿಸಲಾಗಿದೆಯೇ ಎಂಬ ಬಗ್ಗೆ

downloaded from: www.kpscvaani.com 

ಸಮುದಾಯದ ಪರಿಶೀಲನೆಗೆ ಯೋಜನೆ ಎಲ್ಲಾ ದಾಖಲಾತಿಗಳೂ ಒಳಗೊಂಡಂತೆ ಪ್ರತಿಯೊಂದು ಅಂಶಗಳನ್ನು ಹಾಜರುಪಡಿಸುವ ಕಾರ್ಯ ಇದಾಗಿದೆ.

- ಸಾಮಾಜಿಕ ಪರಿಶೋಧನೆಯನ್ನು ಕನಿಷ್ಠ ಆರು(6) ತಿಂಗಳಿಗೊಮ್ಮೆ ಕಡ್ಡಾಯವಾಗಿ ನಡೆಸಬೇಕು.
- ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ನಡೆಯುವ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿದ ಸಾಮಾಜಿಕ ಪರಿಶೋಧನಾ ಸಮಿತಿಯು ಸಾಮಾಜಿಕ ಪರಿಶೋಧನೆ ಮಾಡುವರು.
- ಸಾಮಾಜಿಕ ಪರಿಶೋಧನೆ ಸಮಿತಿಯ ಸಮಿತಿಯ ಒಟ್ಟು ಸದಸ್ಯರಲ್ಲಿ ಮೂರನೇ ಒಂದು ಭಾಗಕ್ಕಿಂತ (1/3) ಕಡಿಮೆಯಿಲ್ಲದಷ್ಟು ಮಹಿಳಾ ಸದಸ್ಯರನ್ನು ಹೊಂದಿರುವಂತೆ ಹಾಲಿ ಹಾಗೂ ಹಿಂದಿನ ವರ್ಷಗಳಲ್ಲಿ ಕೆಲಸ ನಿರ್ವಹಿಸಿರುವ ಕೆಲಸಗಾರರನ್ನು ಒಳಗೊಂಡಿರತಕ್ಕದ್ದು,ಸಮಿತಿ ಸದಸ್ಯರ ಸಂಖ್ಯೆ ಐದು ಮೀರುವಂತಿಲ್ಲ.
- ಸಾಮಾಜಿಕ ಪರಿಶೋಧನೆ ಸಮಿತಿಯ ಪರಿಶೀಲನೆಗಾಗಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಲ್ಲಿ ಅನುಷ್ಠಾನ ಗೊಲಿಸಲಾಗಿರುವ ಎಲ್ಲಾ ಅನುಷ್ಠಾನಗೊಳಿಸಲಾಗಿರುವ ಎಲ್ಲಾ ಇಲಾಖೆಗಳ ಕಾಮಗಾರಿಗಳು ಹಾಗೂ ದಾಖಲಾತಿಗಳನ್ನು ಪರಿಶೀಲಿಸುವುದು.

## ಜಾಗೃತಿ ಉಸ್ತುವಾರಿ ಸಮಿತಿಗಳು:

ಉದ್ಯೋಗ ಖಾತ್ರಿ ಯೋಜನಾ ಅನುಷ್ಠಾನದ ಉಸ್ತುವಾರಿ ಮೌಲ್ಯಮಾಪನ ಮತ್ತು ಪರಿಶೀಲನೆ ಸಂಬಂಧ ಎಲ್ಲಾ ಹಂತಗಳಲ್ಲಿನ ಪ್ರಕ್ರಿಯೆಗಳ ಪರಿಶೀಲನೆಗಾಗಿ ಪ್ರತಿ ಗ್ರಾಮಗಳಲ್ಲಿ ಜಾಗೃತ ಉಸ್ತುವಾರಿ ಸಮಿತಿಗಳನ್ನು ಗ್ರಾಮ ಸಭೆಯಲ್ಲಿ ಕಡ್ಡಾಯವಾಗಿ ರಚಿಸಿರತಕ್ಕದ್ದು.

ಜಾಗೃತ ಉಸ್ತುವಾರಿ ಸಮಿತಿಯಲ್ಲಿ ಇರಬೇಕಾದ ಸದಸ್ಯರ ವಿವರ ಹಾಗೂ ಸಮಿತಿಯ ಅವಧಿ:

1) ಒಂಭತ್ತು ಜನ ಸದಸ್ಯರಿರತಕ್ಕದ್ದು.
2) ಕನಿಷ್ಟ ಶೇ.50 ಜನ ಸದಸ್ಯರು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಾರರಾಗಿರಬೇಕು.
3) ಸಮಿತಿಯು ಸೂಕ್ತ ಪರಿಶಿಷ್ಟ ಜಾತಿ ,ಪರಿಶಿಷ್ಟ ಪಂಗಡ ಮತ್ತು ಮಹಿಳಾ ಸದಸ್ಯರು ಪ್ರತಿನಿಧಿಸುವಂತಿರಬೇಕು.
4) ಸಮಿತಿಯ ಅವಧಿ ಒಂದು ವರ್ಷವಾಗಿರುತ್ತದೆ.

- ಜಾಗೃತ ಸಮಿತಿಯ ಕಾರ್ಯವೆಂದರೆ ಸದರಿ ಸಮಿತಿ ಆಯಾ ಗ್ರಾಮದಲ್ಲಿ ಯೋಜನೆಯಡಿ ಅನುಷ್ಠಾನಗೊಳಿಸುವ ಪ್ರತಿಯೊಂದು ಕಾಮಗಾರಿಗಳನ್ನು ಸದರಿ ಕಾಮಗಾರಿಗಳು ನಡೆಯುವ ವೇಳೆಯಲ್ಲಿ ಕಾಮಗಾರಿ ಸ್ಥಳಕ್ಕೆ ವಾರದಲ್ಲಿ ಕನಿಷ್ಟ ಎರಡು(2) ಬಾರಿ ಭೇಟಿ ನೀಡಿ ಪರಿಶೀಲಿಸುವುದು ಮತ್ತು ಸದರಿ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕನಿಷ್ಟ ಐದು(5) ಕೆಲಸಗಾರರು ಒಳಗೋಂಡಂತೆ ಕಾಮಗಾರಿ ಸ್ಥಳದಲ್ಲಿನ ದಾಖಲಾತಿಗಳನ್ನು ದೃಢಿಕರಿಸುವುದು.
- ಈ ಯೋಜನೆಯಡಿ ಕೆಲಸಕ್ಕೆ ಹಾಜರಾಗುವ ಅಂಗವಿಕಲರಿಗೆ ಹಾಗೂ 60 ವರ್ಷ ಮೇಲ್ಪಟ್ಟ ವೃದ್ದರಿಗೆ ನಿಗಧಿತ ಕೆಲಸದ ಪ್ರಮಾಣದಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಿದೆ, ಯೋಜನೆಯಡಿ ಕೆಲಸಕ್ಕಾಗಿ ಹಾಜರಾಗುವ ಅಂಗವಿಕಲರಿಗಾಗಿ ವಿಶೇಷವಾಗಿ ಕಾಮಗಾರಿ ಸ್ಥಳಕ್ಕೆ ಹಾಜರಾಗಲು ದಿನಗೂಲಿ ಮೊತ್ತದ ಶೇ25 ರಷ್ಟು ರಿಯಾಯಿತಿ ನೀಡಿದೆ.

## ಉದ್ಯೋಗ ಮಿತ್ರ (ಕಾಯಕ ಬಂಧು)

- ಪ್ರತಿಯೊಂದು ಕಾಮಗಾರಿಗೆ, ಕಾಮಗಾರಿಯ ಸ್ಥಳದಲ್ಲಿ ಕೆಲಸ ಮಾಡುವವರ ಹಾಜರಾತಿಯನ್ನು ನಮೂದು ಮಾಡುವುದಕ್ಕೆ ಮತ್ತು ಮೇಲ್ವಿಚಾರಣೆಗಾಗಿ, “ಉದ್ಯೋಗ ಮಿತ್ರ”ನನ್ನು ನೇಮಕ ಮಾಡಲಾಗುವುದು. ಸಹಭಾಗಿತ್ವ ಪಾರದರ್ಶಕತೆ ಮತ್ತು ನ್ಯಾಯಯುತವಾದ ವಿಧಾನದ ಮೂಲಕ ಉದ್ಯೋಗ ಮಿತ್ರನನ್ನು ಆಯ್ಕೆ ಮಾಡಬೇಕು ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು.
- ಉದ್ಯೋಗ ಮಿತ್ರನು ತನ್ನ ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಕನಿಷ್ಟ ಎಸ್.ಎಸ್.ಎಲ್.ಸಿ/ ಎಂಟನೇ ತರಗತಿ,ವಿದ್ಯಾರ್ಹತೆ ಹೊಂದಿರಬೇಕು.

**ಉದ್ಯೋಗ ಮಿತ್ರ ನಿರ್ವಹಿಸುವ ಕರ್ತವ್ಯಗಳು:**

1) ಗುಂಪುಗಳ ರಚನೆ, ಕನಿಷ್ಟ ವೇತನಗಳಿಸಲು ಮಾಡಬೇಕಾದ ಕೆಲಸ ಪ್ರಮಾಣವನ್ನು ಗುರುತಿಸುವಿಕೆ.
2) ಕಾಮಗಾರಿ ಸ್ಥಳದಲ್ಲಿ ಹಾಜರಾತಿ ಪಟ್ಟಿಗಳ ನಿರ್ವಹಣೆ (ಪ್ರತಿದಿನದ ಹಾಜರಾತಿಯನ್ನು ನಮೂದಿಸುವುದು ಸೇರಿದಂತೆ)
3) ದೈನಂದಿನ ಅಥವಾ ವಾರದ ಆಧಾರದ ಮೇಲೆ ಪ್ರತಿ ಗುಂಪಿನ ಕೆಲಸದ ನಿರ್ವಹಣೆ.
4) ಕಾಮಗಾರಿ ಸ್ಥಳಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸುವುದು,ಮಕ್ಕಳ ಪಾಲನೆಗೆ ಕಾರ್ಮಿಕನೊಬ್ಬನ ನೇಮಕ ಮತ್ತು ನೀರು ಮತ್ತು ಔಷದಿಗಳ ಸೌಲಭ್ಯ ನಿರ್ವಹಣೆ.
5) ಕಾಮಗಾರಿ ಸ್ಥಳದಲ್ಲಿ ಸಾಮಾನ್ಯ ಮೇಲ್ವಿಚಾರಣೆ.
6) ತುರ್ತು ಪರಿಸ್ಥಿತಿಗಳ ನಿಭಾಯಿಸುವಿಕೆ ಉದಾ: ಕಾಮಗಾರಿ ಸ್ಥಳದಲ್ಲಿ ಅಪಘಾತಗಳು.
7) ಉದ್ಯೋಗ ಮಿತ್ರನ ಕೂಲಿಯು ಸಾಮಾನ್ಯವಾಗಿ ಅರೆ ಕುಶಲ ಕಾರ್ಮಿಕರಿಗೆ ನೀಡುವಷ್ಟೆ ಇರಬೇಕು ಯಾವುದೇ ಸಂದರ್ಭದಲ್ಲಿ ಅಕುಶಲ ಕೂಲಿ ಕಾರ್ಮಿಕರಿಗಿಂತ ಕಡಿಮೆ ಕೂಲಿ ಇರಬಹುದು. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿಗಳ ಅಂದಾಜು ಪಟ್ಟಿಗಳಲ್ಲಿ ಸಾಮಾಗ್ರಿ ಘಟಕದಡಿಯಲ್ಲಿ ಉದ್ಯೋಗ ಮಿತ್ರನ ವೇತನವನ್ನು ಸೇರಿಸಿರಬೇಕು.
8) ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ/ ಕಾರ್ಯದರ್ಶಿ, ಕ್ಷೇತ್ರ ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ ,ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಮತ್ತು ರಾಜ್ಯ ಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ನಿರ್ದೇಶಕರು,ಕುಂದು ಕೊರತೆ ನಿವಾರಣಾ ಅಧಿಕಾರಿಯಾಗಿರುತ್ತಾರೆ.
9) ದೂರುಗಳನ್ನು ವ್ಯಕ್ತಿಯ ಲಿಖಿತದಲ್ಲಿ ಅಥವಾ ಮೌಖಿಕವಾಗಿ ಅಥವಾ ಅಂಚೆ ಮೂಲಕ ಅಥವಾ
10) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ವೆಬ್ ಸೈಟ್ ಮೂಲಕ ಅಥವಾ ಸ್ಥಾಪಿಸಲಾದ ದೂರವಾಣಿ ಸಹಾಯವಾಣಿ ಮೂಲಕ ಸಲ್ಲಿಸಬಹುದಾಗಿದೆ.
11) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ವಿವಿಧ ಇಲಾಖೆಗಳಿಂದ ತೆಗೆದುಕೊಳ್ಳಬಹುದಾದ ಕಾಮಗಾರಿಗಳ ಪಟ್ಟಿ
12) 1) ಅರಣ್ಯ 2) ನೀರಾವರಿ / ಅಚ್ಚುಕಟ್ಟು ಪ್ರದೇಶಭಿವೃದ್ಧಿ ಪ್ರಾಧಿಕಾರ 3) ಕೃಷಿ / ತೋಟಗಾರಿಕೆ / ಜಲಾನಯನ 4) ಪಶುಸಂಗೂಪನಾ ಮತ್ತು ಮೀನುಗಾರಿಕೆ

## ಒಂಬಡ್ಸ್‌ಮನ್‌ಗಳ ನೇಮಕ :

 downloaded from: www.kpscvaani.com

1) ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದ ಕುಂದುಕೊರತೆಗಳನ್ನು ನಿವಾರಿಸಲು ಮತ್ತು ದೂರುಗಳನ್ನು ವಿಲೇವಾರಿ ಮಾಡಲು ಸಂಬಂಧಿಸಿದಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯ ಸೆಕ್ಷನ್ 27ರ ಅಡಿಯಲ್ಲಿ ಒಂಬಡ್ಸ್‌ಮನ್‌ಗಳನ್ನು ನೇಮಿಸಲು ಕರ್ನಾಟಕ ಸರ್ಕಾರದ ನೇಮಕ ಮಾಡಿದೆ. ಒಂಬಡ್ಸ್‌ಮನ್‌ಗಳನ್ನು ನೇಮಕಾತಿಯ ಸಮಿತಿಯ ಶಿಫಾರಸ್ಸಿನ ಮೇಲೆ ನೇಮಕ ಮಾಡಲಾಗುತ್ತದೆ. ನೇಮಕಾತಿ ಸಮಿತಿಯು ಈ ಕೆಳಕಂಡ ವ್ಯಕ್ತಿಯಿಂದ ಕೂಡಿರುತ್ತದೆ.
   - ರಾಜ್ಯ ಮುಖ್ಯ ಕಾರ್ಯದರ್ಶಿಗಳು – ಮುಖ್ಯಸ್ಥರು
   - ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಪ್ರತಿನಿಧಿ – ಸದಸ್ಯರು
   - ಕೇಂದ್ರ ಗ್ರಾಮೀಣಾಭಿವೃದ್ಧಿಯಿಂದ ನಾಮಕರಣವಾಗಿ ನಾಗರೀಕ ಸಮಾಜದ ಸಮರ್ಥ ವ್ಯಕ್ತಿ – ಸದಸ್ಯರು
   - ಸರ್ಕಾರದ ನೋಡಲ್ ಇಲಾಖೆಯ ಕಾರ್ಯದರ್ಶಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.
2) ಈ ಸಮಿತಿಯ ಶಿಫಾರಸಿನಂತೆ ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಗೆ 3 ಕ್ಕಿಂತ ಹೆಚ್ಚಿಲ್ಲದಂತೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಮಂದಿಯನ್ನು ಒಂಬಡ್ಸ್‌ಮನ್ ನೇಮಿಸಬಹುದು
3) ಒಂಬಡ್ಸ್‌ಮನ್‌ಗಳ ಕಛೇರಿಯು ಜಿಲ್ಲೆಯ ಕೇಂದ್ರ ಸ್ಥಳದಲ್ಲಿರುತ್ತದೆ.
4) ಒಂಬಡ್ಸ್‌ಮನ್‌ಗಳಿಗೆ ಒಂದು ಸಭೆಗೆ 500 ರೂಪಾಯಿಗಳ ಪರಿಹಾರವನ್ನು ನೀಡಲಾಗುತ್ತದೆ.
5) ಇದು ಒಂದು ಸ್ವತಂತ್ರವಾದತಂಹ ಹುದ್ದೆಯಾಗಿದ್ದು, ರಾಜ್ಯ ಅಥವಾ ಕೇಂದ್ರದ ವ್ಯಾಪ್ತಿಯಲ್ಲಿ ಕೆಲಸ ನಿರ್ವಯಿಸುತ್ತಾರೆ.
6) ಇವರ ಅಧಿಕಾರವಧಿಯು 2ವರ್ಷಗಳ ಅಥವಾ 65ವರ್ಷಗಳು
7) 2ವರ್ಷ ಅವಧಿಯ ನಂತರ ಇವರ ಸಾಮರ್ಥ್ಯದ ಮೇಲೆ ಒಂದು ವರ್ಷ ಹೆಚ್ಚಿಸಬಹುದು
8) ಇವರು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದ ಕುಂದುಕೊರತೆಗಳನ್ನು ವಿಚಾರಣೆ ನಡೆಸುವರು

### ದೂರು ಸಲ್ಲಿಸುವ ಹಂತಗಳು

1) ಗ್ರಾಮ ಮಟ್ಟದಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿ
2) ತಾಲೂಕ ಮಟ್ಟದಲ್ಲಿ ಕಾರ್ಯನಿರ್ವಾಹಣ ಅಧಿಕಾರಿ (ಇ.ಒ)
3) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ (ಸಿ.ಇ.ಒ)
4) ರಾಜ್ಯಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ ಮೇರೆಗೆ ಆಯುಕ್ತರು

| ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ನಮೂನೆಗಳು | |
|---|---|
| ನಮೂನೆ 1 | ಉದ್ಯೋಗ ನೊಂದಣಿಗಾಗಿ ಅರ್ಜಿ |
| ನಮೂನೆ 2 | ಅರ್ಜಿಗಳ ನೊಂದಣಿ ವಹಿ |
| ನಮೂನೆ 3 | ಉದ್ಯೋಗಾಕಾಂಕ್ಷಿಗಳ ಮತ್ತು ಉದ್ಯೋಗದ ವಹಿ |
| ನಮೂನೆ 4 | ಉದ್ಯೋಗ ಚೀಟಿ ಸಂಖ್ಯೆ |
| ನಮೂನೆ 5 | ಕುಟುಂಬ ಉದ್ಯೋಗ ಚೀಟಿ ವಿತರಣ ವಹಿ |
| ನಮೂನೆ 6 | ಕೆಲಸಕ್ಕಾಗಿ ಅರ್ಜಿ |
| ನಮೂನೆ 7 | ಉದ್ಯೋಗ ಬೇಡಿಕೆ ವಹಿ |
| ನಮೂನೆ 8 | ಕೆಲಸಕ್ಕಾಗಿ ವರದಿ ಮಾಡಿಕೊಳ್ಳುವುದಕ್ಕಾಗಿ ನೋಟಿಸ್ |
| ನಮೂನೆ 9 | ಕೆಲಸಕ್ಕೆ ಹಾಜರಾಗಲು ತಿಳಿಸುವ ಸಾರ್ವಜನಿಕ ನೋಟಿಸ್ |

## ಸುವರ್ಣ ಗ್ರಾಮೋದಯ

1) 2006ರ ನವಂಬರ್ 1ರಂದು ಕರ್ನಾಟಕ ರಾಜ್ಯವು ಏಕೀಕರಣಗೊಂಡು 50 ವರ್ಷ ತುಂಬಿ ಸುವರ್ಣ ಮಹೋತ್ಸವನ್ನು ಆಚರಣೆಯನ್ನು ಆಚರಿಸಿಕೊಂಡಿತು ಈ ಸಂದಂಭದಲ್ಲಿ ಸಂಭ್ರಮಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ರಾಜ್ಯ ವಲಯ ಅನುಧಾನದಲ್ಲಿ ಸುವರ್ಣಗ್ರಾಮೋದಯ ಯೋಜನೆಯನ್ನು 2006 ಅಕ್ಟೋಬರ್ 7ರಂದು ಜಾರಿಗೆ ತಂದಿತು.

**ಮೂಲ ಉದ್ದೇಶ**

1) ಸುವರ್ಣಗ್ರಾಮೋದಯ ಯೋಜನೆಯ ಕರ್ನಾಟಕ ಸರ್ಕಾರದ ಒಂದು ವಿನುತನ್ ಯೋಜನೆಯಾಗಿದ್ದು, ಗ್ರಾಮೀಣಾಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿ ಹೊಂದುವ ಮೂಲಕ ಸಾವಿರ ಗ್ರಾಮಗಳನ್ನು ಸದೃಢವಾಗಿ ಅಭಿವೃದ್ಧಿ ಪಡಿಸುವ ಮತ್ತು ಗುಣಮಟ್ಟದ ಗ್ರಾಮ ಸಮುದಾಯವನ್ನು ಸದೃಢಗೊಳಿಸುವ ಆಶಯವನ್ನು ಹೊಂದಿ ಕಾರ್ಯಕ್ರಮವನ್ನು ರೂಪಗೊಳಿಸಲಾಗಿತು.
2) ಈ ಯೋಜನೆಯಡಿಯಲ್ಲಿ ಆಯ್ಕೆಯಾದ ಪ್ರತಿ ಗ್ರಾಮದ ಜನ ಸಂಖ್ಯೆಯನ್ನು ಆದಾರವಾಗಿಟ್ಟುಕೊಂಡು ತಲಾನುಧಾನ ರೂಪಾಯಿ 2500 / ಗಳಂತೆ 4000 ಜನ ಸಂಖ್ಯೆ ಹೊಂದಿರುವ ಪ್ರತಿ ಗ್ರಾಮಕ್ಕೆ ಒಂದು ಕೋಟಿ, ಒಟ್ಟು ಒಂದು ಸಾವಿರ ಕೋಟಿ ಅನುಧಾನದಲ್ಲಿ ಈ ಯೋಜನೆಯನ್ನು ಮೊದಲ ಹಂತದಲ್ಲಿ 2006 ಮತ್ತು 2007ನೇ ಸಾಲಿನಿಂದ ಜಾರಿಗೆ ತರಲಾಯಿತು.

### ಯೋಜನೆ ಉದ್ದೇಶಗಳು

1) ಸುವರ್ಣ ಗ್ರಾಮೋದಯ ಯೋಜನೆಯು ರಾಜ್ಯ ವಲಯದ ಕಾರ್ಯಕ್ರಮವಾಗಿದ್ದು ಇದರ ಪ್ರಮುಖ ಉದ್ದೇಶಗಳು ಕೆಳಗಿನಂತಿವೆ.

1) ಆಯ್ಕೆಯಾದ ಗ್ರಾಮಗಳ ಜನಜೀವನ ಗುಣಮಟ್ಟವನ್ನು ಉತ್ತಮ ಗೊಳಿಸಲು ಗ್ರಾಮದ ಬೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು.
2) ಸ್ವಯಂ ಉದ್ಯೋಗ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದ ಮೂಲಕ ವಿಧ್ಯಾವಂತ ನಿರುದ್ಯೋಗಿ ಯುವ ಜನರಿಗೆ ಕೃಷಿಯೇತರ ಉದ್ಯೋಗ ಅವಕಾಶವನ್ನು ಸೃಷ್ಟಿಸುವ ಮೂಲಕ ಸದೃಢ ಹಾಗೂ ಸ್ವಾವಲಂಬಿ ಸಮಾಜವನ್ನು ನಿರ್ಮಾಣ ಮಾಡುವುದು.
3) ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಗುಂಪುಗಳು ಮುಂತಾದವುಗಳ ಮೂಲಕ ಜನ ಸಮುದಾಯದ ಜಾಗೃತಿ ಮತ್ತು ಅಭಿವೃದ್ಧಿಗೆ ನೇರವಾಗುವ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ಕಂಕಣ ಬದ್ಧವಾಗುವಂತೆ ಮಾಡುವುದು.

downloaded from: www.kpscvaani.com 

## ಅಭಿವೃದ್ಧಿ ಕಾರ್ಯತಂತ್ರ:

1) ಸುವರ್ಣ ಗ್ರಾಮೋದಯ ಕಾರ್ಯತಂತ್ರವು ಕೆಳಗಿನ ಅಂಶಗಳನ್ನು ಒಳಗೊಂಡಿದೆ.

1) ಈಗಿರುವ ಅಭಿವೃದ್ಧಿ ಕಾರ್ಯಕ್ರಮಗಳ ಸಂಪನ್ಮೂಲಗಳು, ಸಿಬ್ಬಂದಿ ಮತ್ತು ಪ್ರಕ್ರಿಯೆಗಳನ್ನು ಉಪಯೋಗಿಸುವುದು ಮತ್ತು ಆಯ್ಕೆಯಾದ ಗ್ರಾಮಗಳ ಅವಶ್ಯಕತೆಗಳನ್ನು ಅಂತಹ ಕಾರ್ಯಕ್ರಮಗಳ ಮಾನದಂಡನೆಗಳ ಚೌಕಟ್ಟಿನಲ್ಲಿ ಸಂಪೂರ್ಣವಾಗಿ ಈಡೇರಿಸುವುದು.

2) ಗ್ರಾಮದ ನಿರ್ಧಿಷ್ಟ ಅಭಿವೃದ್ಧಿ ಅವಶ್ಯಕತೆಗಳನ್ನು ಈಡೇರಿಸಲು ಹೆಚ್ಚುವರಿ/ಪೂರಕವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಪ್ರಸ್ತುತ ಕಾರ್ಯಕ್ರಮಗಳಲ್ಲಿನ ಅಂತರಗಳನ್ನು ತುಂಬುವುದು.

3) ಯೋಜನೆಯ ವಿವಿಧ ಅಂಶಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ವಿವಿಧ ಯೋಜನೆಗಳು ಸರ್ಕಾರೇತರ ಸಂಘಗಳು,ಸಮುಧಾಯ ಆಧಾರಿತ ಸಂಸ್ಥೆಗಳು ಹಾಗೂ ಖಾಸಗಿ ವಲಯದ ಭಾಗೀದಾರರು ಮುಂತಾದವುಗಳನ್ನು ಉಪಯೋಗಿಸಿಕೊಳ್ಳಬಹುದು.

4) ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಏಜೆನ್ಸಿಗಳು ಮತ್ತು ಗ್ರಾಮ ಸಮುದಾಯಗಳ ಪ್ರಯತ್ನಗಳ ಒಗ್ಗೂಡುವಿಕೆ ಹಾಗೂ ಸಮನ್ವಯವನ್ನು ಸಾಧಿಸುವುದು.

## ಗ್ರಾಮಗಳ ಆಯ್ಕೆ :

1) ರೂ 1000 ಕೋಟಿ ಅನುಧಾನದಲ್ಲಿ ತಲಾನುಧಾನ ರೂ.2500 ರಂತೆ ಒಟ್ಟು 40,00,000 ಗ್ರಾಮೀಣ ಜನಸಂಖ್ಯೆಯ 1000 ಗ್ರಾಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯ್ಕೆ ಮಾಡಲಾಗುವುದು. ಇದರಂತೆ 2001 ರ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು 1000 ಗ್ರಾಮಗಳಿಗೆ ನಿಗಧಿಪಡಿಸಿರುವ ಜನಸಂಖ್ಯೆ 40,00,000 ಹಾಗೂ ರಾಜ್ಯದ ಮತ್ತು ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ತಾಲ್ಲೂಕಿನ ಅನುದಾನವನ್ನು ನಿಗಧಿಪಡಿಸಲಾಗಿದೆ.

2) ತಾಲ್ಲೂಕಿನ ಒಂದಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳ ಗ್ರಾಮೀಣ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಕ್ಷೇತ್ರದಲ್ಲೂ ಗ್ರಾಮಗಳನ್ನು ಗುರುತಿಸಿ ತಾಲ್ಲೂಕವಾರು ಗ್ರಾಮಗಳನ್ನು ಆಯ್ಕೆ ಮಾಡಬೇಕಾಗುತ್ತದೆ.

3) ತಾಲೂಕಗಳಿಗೆ ನಿಗದಿಪಡಿಸಿದ ಗ್ರಾಮೀಣಾ ಜನಸಂಖ್ಯೆ ಮಿತಿಯೊಳಗೆ ಸ್ಥಳಿಯ ಚುನಾಯಿತ ಶಾಸಕರ ಶಿಫಾರಸಿನೊಂದಿಗೆ ಪ್ರತಿಯೊಂದು ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮಗಳನ್ನು ಗುರುತಿಸಿ ಆಯ್ಕೆ ಪಟ್ಟಿ ಅಂತಿಮ ಗೊಳಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಇವರು ಸರ್ಕಾರಕ್ಕೆ ಸಲ್ಲಿಸುವುದು ಯಾವುದೇ ಕಾರಣಕ್ಕು ತಾಲೂಕಿಗೆ ನಿಗದಿಪಡಿಸಿದ ಗ್ರಾಮೀಣ ಜನಸಂಖ್ಯೆ ಮೀರಿ ಗ್ರಾಮಗಳನ್ನು ಆಯ್ಕೆ ಮಾಡುವಂತಿಲ್ಲ

### ಯೋಜನೆಯ ಅನುದಾನ

ಸುವರ್ಣಗ್ರಾಮ ಯೋಜನೆಯಲ್ಲಿ ಆಯ್ಕೆಯಾದ 700 ರಿಂದ 750 ಕುಟುಂಬ (ಸುಮಾರು 4000 ಜನಸಂಖ್ಯೆ) ಗಳಿರುವ ಗ್ರಾಮಗಳಲ್ಲಿ ಹಂಚಿಕೆಯಾಗಬಹುದಾದ ಅಂದಾಜು ರೂ 1ಕೋಟಿ ಅನುಧಾನದಲ್ಲಿ ಶೇ70ರಷ್ಟು ರಸ್ತೆ ಮತ್ತು ಚರಂಡಿಗೆ, ಶೇ3ರಷ್ಟು ಘನ ವಸ್ತು ತ್ಯಾಜ್ಯ ವಿಲೇವಾರಿಗೆ, ಶೇ.2ರಷ್ಟು ಸೋಲರ್ ದೀಪ್ ಅಳವಡಿಸಿಕೊಳ್ಳಲು ಮತ್ತು ಶೇ.10ರಷ್ಟು ಒಂದು ಅಂಗನವಾಡ ಕಟ್ಟಡಕ್ಕೆ, ಉಳಿದ ಶೇ.15ರಷ್ಟು ಅನುಧಾನದಲ್ಲಿ ಆದ್ಯತೆ ಮತ್ತು ಅವಶ್ಯಕತೆ ಮೇರೆಗೆ ಶಾಲಾ ಕಟ್ಟಡಕ್ಕೆ, ಗ್ರಾಮ ಪಂಚಾಯತಿ ಕಟ್ಟಡಕ್ಕೆ, ಗ್ರಾಂಥಾಲಯ ಕಟ್ಟಡಕ್ಕೆ, ಮಹಿಳಾ ಸ್ವಸಹಾಯ ವರ್ಕಶೆಡಿಗೆ ಬಯಲು ರಂಗಮಂದಿರ ಮತ್ತು ಕೊನೆಯ ಆದ್ಯತೆ ಮೇರೆಗೆ ಸಮುದಾಯ ಭವನ, ಐ.ಇ.ಸಿ ಚಟುವಟಿಗಳಿಗೆ ವಿನಿಯೋಗಿಸಬಹುದು. ಆಯ್ಕೆಯಾದ ಗ್ರಾಮದ ಗಾತ್ರವು ಜನಸಂಖ್ಯೆ ಆಧಾರದ ಮೇಲೆ ನಿರ್ಧಾರವಾಗುವುದರಿಂದ ಅನುಧಾನವು ಅದಕ್ಕೆ ತಕ್ಕಂತೆ ಹಂಚಿಕೆಯಾಗುತ್ತದೆ. ಗ್ರಾಮದ ಪ್ರಸ್ತುತ ಅಭಿವೃದ್ಧಿ ಮಟ್ಟದ ಆಧಾರದ ಮೇಲೆ ಗ್ರಾಮದಲ್ಲಿ ಅವಶ್ಯಕತೆ ಮತ್ತು ಆದ್ಯತೆ ಮೇಲೆ ತೆಗೆದುಕೊಳ್ಳಬಹುದಾದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವೆಚ್ಚವು ಗ್ರಾಮದಿಂದ ಗ್ರಾಮಕ್ಕೆ ವ್ಯತ್ಯಾಸವಾಗುತ್ತದೆ. ಆದರಿಂದ ಗ್ರಾಮವಾರು ಮತ್ತು ಚಟುವಟಿಕೆವಾರು ಅನುಧಾನದ ಹಂಚಿಕೆ ಮಾಡಿ ಗ್ರಾಮೀಣಾಭಿವೃದ್ಧಿ ಯೋಜನೆ ತಯಾರಿಸಬೇಕು.

## ಗ್ರಾಮೀಣ ಪರಿಸರವನ್ನು ಮೇಲ್ದರ್ಜೆಗೇರಿಸುವುದು

1) ಕರ್ನಾಟಕದಲ್ಲಿ ಬಹುತೇಕ ಗ್ರಾಮೀಣ ಪರಿಸರದಲ್ಲಿ ಹೆಚ್ಚಿನ ಸ್ಥಳ ಅಂತರವಿಲ್ಲದೆ ಮನೆಗಳನ್ನು ನಿರ್ಮಾಣಮಾಡಿದ್ದು, ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಅನಾರೋಗ್ಯತರುವ ಅನೈರ್ಮಲ್ಯ ಪರಿಸರಗಳಿಂದ ಕೂಡಿರುತ್ತದೆ.

2) ಗ್ರಾಮೀಣ ಜನರು ಶೌಚಾಲಯದ ಅಗತ್ಯತೆ ಮತ್ತು ಅವಶ್ಯಕತೆಗಳನ್ನು ಇಂದಿಗೂ ನಿರೀಕ್ಷಿತ ಮಟ್ಟದಲ್ಲಿ ಅರ್ಥಮಾಡಿಕೊಳ್ಳದೆ. ಶೌಚಾಲಯ ಕ್ಕಾಗಿ ಬಯಲನ್ನೆ ಅವಲಂಬಿಸಿರುತ್ತಾರೆ. ಈ ಅಂಶಗಳು ಗ್ರಾಮೀಣ ಪರಿಸರವನ್ನು ಕಲುಷಿತಗೊಳಿಸಿ ಗ್ರಾಮಗಳ ಜೀವನ ಗುಣಮಟ್ಟವನ್ನು ಅಸಹನಿಯವಾಗಿಸಿವೆ.

3) ಈ ಹಿನ್ನೆಲೆಯಿಂದ ಗ್ರಾಮೀಣ ಜನರು ತಮ್ಮ ಗ್ರಾಮದ ಅಭಿವೃದ್ಧಿಗಾಗಿ ಅನುದಾನವನ್ನು ಕೋರುವ ಮತ್ತು ತನ್ಮೂಲಕ ಅವಕಾಶ ಹಾಗು ಸಂದರ್ಭಾನುಸಾರ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು ಒತ್ತಾಯಿಸುತ್ತಾರೆ.

4) ಆದುದ್ದರಿಂದ ಗ್ರಾಮಗಳಲ್ಲಿನ ಮೂಲಭೂತ ಸೌಲಭ್ಯಗಳು ಮತ್ತು ಸೇವೆಗಳನ್ನು ಅಭಿವೃದ್ಧಿ ಪಡಿಸಲು ಸುವರ್ಣ ಗ್ರಾಮೋದಯ ಯೋಜನೆಯಡಿ ಆದ್ಯತೆ ನೀಡುವ ಅವಶ್ಯಕತೆ ಇದೆ. ವಿವಿಧ ಕಾರ್ಯಕ್ರಮಗಳಡಿ ಹೊಂದಿರುವ ಸೇವಾ ಮಾನದಂಡಗಳ ಪ್ರಕಾರ ಈ ಯೋಜನೆಯಡಿ ಗ್ರಾಮಗಳಲ್ಲಿ ಮೂಲಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಸಂಪೂರ್ಣವಾಗಿ ಒದಗಿಸಲಾಗುವುದು.

## ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು :

1) ಗ್ರಾಮದೊಳಗಿನ ಪರಿಸರವನ್ನು ಅಭಿವೃದ್ಧಿಪಡಿಸಿ ಅತ್ಯುತ್ತಮ ವಾತಾವರಣ ನಿರ್ಮಾಣ ಮಾಡುವುದು. ಈ ಯೋಜನೆಯ ಮೊದಲ ಆದ್ಯತೆಯಾಗಿರುತ್ತದೆ. ವಿಶೇಷವಾಗಿ ಗ್ರಾಮದ ಒಳಭಾಗದಲ್ಲಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚಿನ ಹೊತ್ತು ನೀಡಲಾಗುತ್ತದೆ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿ ಪಡಿಸುವಾಗ ಈ ಕೆಳಕಂಡ

 downloaded from: www.kpscvaani.com

ಅಂಶಗಳನ್ನು ಗಮನಿಸಿ ಯೋಜನೆಯನ್ನು ತಯಾರಿಸಬೇಕು.

### ಗ್ರಾಮ ಸಮಗ್ರ ನಕ್ಷೆಯನ್ನು ತಯಾರಿಸುವುದು:

1) ನಕ್ಷೆಯಲ್ಲಿ ಹಾಲಿ ಇರುವ ರಸ್ತೆ, ಚರಂಡಿ ಮತ್ತು ಇತರೆ ಸಾಮಾನ್ಯ ಮಾಹಿತಿಗಳನ್ನು ಒಳಗೊಂಡಿರಬೇಕು. ರಸ್ತೆ ಉದ್ದ, ಅಗಲದ ಸ್ಥಿತಿಗಳ ಮಾಹಿತಿಯನ್ನು ಸಂಗ್ರಹಿಸುವುದು. ಯಾವುದೇ ಬೀದಿಯಲ್ಲಿ 4 ರಿಂದ 10 ಮನೆಗಳಿದ್ದಲ್ಲಿ ಕೂಡ ಆ ಬೀದಿಯನ್ನೂ ಸಹ ಅಭಿವೃದ್ಧಿ ಪಡಿಸುವುದು ಕಾಮಗಾರಿಗಳು ಉತ್ತಮ ಗುಣಮಟ್ಟವನ್ನು ಹೊಂದಿರಬೇಕು. ಅಭಿವೃದ್ಧಿ ಮಾಡಲಾದ ಬೀದಿಯ ಕಾಮಗಾರಿಯು ಕನಿಷ್ಠ ಪಕ್ಷ 10 ವರ್ಷಗಳ ಕಾಲ ಬಾಳಿಕೆ ಬರಬೇಕು.

### ಚರಂಡಿಗಳ ನಿರ್ಮಾಣ

1) ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಭಾಗ ಚರಂಡಿಯನ್ನು ನಿರ್ಮಿಸಲಾಗುತ್ತಿದ್ದು, ಇದಕ್ಕಾಗಿ ಹೆಚ್ಚಿನ ವೆಚ್ಚವಾಗುವುದನ್ನು ಕಂಡು ಬಂದಿದ್ದು, ಇದು ನೈರ್ಮಲ್ಯವನ್ನು ಕಾಪಾಡುವಲ್ಲಿ ವಿಫಲವಾಗಿದೆ. ಸಾಲಿಡ್ ಕಾಂಕ್ರೀಟ್ ಬ್ಲಾಕ್ಸ ಚರಂಡಿಯನ್ನು ಅಭಿವೃದ್ಧಿ ಪಡಿಸಲು ಈ ಯೋಜನೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

### ಸೋಲಾರ್ ಬೀದಿ ದ್ವೀಪಗಳ ಅಳವಡಿಕೆ:–

1) ಗ್ರಾಮಾಂತರ ಪ್ರದೇಶಗಳಲ್ಲಿ ಆಸಂಪ್ರದಾಯಕ ಇಂಧನ ಮೂಲ ಗಳನ್ನು ಉತ್ತೇಜಿಸಲು ಸುವರ್ಣಗ್ರಾಮೋದಯ ಯೋಜನೆಗೆ ಆದ್ಯತೆ ನೀಡಲಾಗಿದೆ.
2) ನೈಸರ್ಗಿಕ ಸಂಪನ್ಮೂಲವಾದ ಸೂರ್ಯನ ಬೆಳಕನ್ನು ಸಮರ್ಥ ರೀತಿಯಲ್ಲಿ ವಿದ್ಯುತ್ ಆಗಿ ಪರಿವರ್ತಿಸುವ ಸೋಲರ್ ದ್ವೀಪಗಳನ್ನು ಅಳವಡಿಸಿಕೊಳ್ಳವ ಅವಶ್ಯಕತೆ ಇದೆ. ಸುವರ್ಣಗ್ರಾಮೋದಯ ಯೋಜನೆಯ ಅನುದಾನದಲ್ಲಿ ಶೇ2ರಷ್ಟು ಸೋಲರ್ ದ್ವೀಪಗಳನ್ನು ಅಳವಡಿಸಿಕೊಳ್ಳವ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಲಾಗಿದೆ. ಈ ಅನುದಾನವನ್ನು ಉಪಯೋಗಿಸಿಕೊಂಡು ಸೋಲರ್ ದ್ವೀಪಗಳನ್ನು 5ನೇ ಹಂತದಲ್ಲಿ ಆಯ್ಕೆ ಮಾಡಿಕೊಂಡ ಗ್ರಾಮಗಳಲ್ಲಿ ಅಳವಡಿಸು ವುದು. ಇದಕ್ಕಾಗಿ ಕರ್ನಾಟಕ ಪಾರದರ್ಶಕ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.

### ತ್ಯಾಜ್ಯ ವಸ್ತುಗಳ ವಿಲೇವಾರಿ

1) ತ್ಯಾಜ್ಯ ವಸ್ತುಗಳನ್ನು ವಾಸದ ಮನೆಯ ಹೊರಗೆ ಹಾಕಲು ಜನ ವಸತಿಗೆ ಸಮೀಪದಲ್ಲಿ ಒಂದು ಅಥವಾ ಹೆಚ್ಚು ಪ್ರತೇಕ ಸಮುದಾಯ ನಿವೇಶನಗಳನ್ನು ಹೊಂದುವುದು ಅಂತಹ ನಿವೇಶನಗಳಲ್ಲಿ ತಿಪ್ಪೆ ಗುಂಡಿಗಳನ್ನು ಹೊಂದಲು ಪ್ರತ್ಯೇಕ ಪ್ಲಾಟ್‌ಗಳನ್ನು ಹಂಚಬೇಕು.
2) ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ತ್ಯಾಜ್ಯವಿಲೇವಾರಿಗೆ ಆದ್ಯತೆ ನೀಡಿದ್ದು, ನಿರುಪಯುಕ್ತ ಕಸ ಕಡ್ಡಿಗಳಿಂದ ಮಿಶ್ರಗೊಬ್ಬರವನ್ನು ತಯಾರಿಸುವ ಪ್ರಯತ್ನ ಸಾಗಿದೆ.

### ಶೌಚಾಲಯಗಳ ನಿರ್ಮಾಣ

1) ಸುವರ್ಣಗ್ರಾಮೋದಯ ಯೋಜನೆಯನ್ನು ಸ್ವಚ್ಛತೆ ಮತ್ತು ನೈರ್ಮಲ್ಯತೆಯ ಪರಿಸರವನ್ನು ನಿರ್ಮಾಣ ಮಾಡುವುದು ಪ್ರಮುಖ ಆದ್ಯತೆಯಾಗಿದೆ ಇದಕ್ಕಾಗಿ ಗ್ರಾಮಗಳ ಎಲ್ಲ ಕುಟುಂಬಗಳಿಗೆ ಅವರವರ ಉಪಯೋಗಕ್ಕಾಗಿ ಶೌಚಾಲಯಗಳನ್ನು ನಿರ್ಮಿಸಲು ಸಹಾಯಮಾಡುವುದು. ಶಾಲೆಗಳು ಮತ್ತು ಅಂಗನವಾಡಿಯಲ್ಲಿ ಕುಡಿಯುವ ನೀರಿನೊಂದಿಗೆ ಸಮುದಾಯ ಸೌಲಭ್ಯಗಳನ್ನು ಒದಗಿ ಸುವುದು ಗ್ರಾಮದ ಪ್ರತಿಯೊಬ್ಬರಿಗು ಸುರಕ್ಷಿತ ಸ್ವಚ್ಚ ಅಭ್ಯಾಸಗಳನ್ನು ಬೆಳೆಸುಕೊಂಡು ಬಯಲು ವಿಸರ್ಜನೆಯನ್ನು ಸಪೂರ್ಣವಾಗಿ ನಿಮೂಲನೆಗೊಳಿಸಿ ತಮ್ಮದೆಯಾದ ಸ್ವಂತ ಶೌಚಾಲಯ ವ್ಯವಸ್ಥೆ ಯನ್ನು ಹೊಂದುವುದು ಪ್ರಮುಖ ಗುರಿಯನ್ನಾಗಿರಿಸಿಕೊಳ್ಳಲಾಗಿದೆ.

### ಸಮುದಾಯ ಶೌಚಾಲಯ :

1) ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ ಸ್ಥಳದ ಮತ್ತು ನೀರಿನ ಅಭಾವವಿದ್ದು ಸ್ವಂತ ಶೌಚಾಲಯವನ್ನು ನಿರ್ಮಿಸಲು ಸಾಧ್ಯವಾಗದ ಕುಟುಂಬಗಳಿಗೆ ಸಮುದಾಯ ಶೌಚಾಲಯ ನಿರ್ಮಿಸಲು ಅಗತ್ಯತೆ ಕಂಡು ಬಂದಿರುವುದರಿಂದ ಸುವರ್ಣ ಗ್ರಾಮೋದಯ ಯೋಜನೆ ಯಲ್ಲಿ ಅಂತಹ ಕುಟುಂಬಗಳಿಗೆ ಸಮುದಾಯ ಶೌಚಾಲಯವನ್ನು ಸಂಪೂರ್ಣ ಆಂದೋಲನ ಅಥವಾ ನಿರ್ಮಲ ಭಾರತ ಅಭಿಯಾನದಡಿಯಲ್ಲಿ ಅವಕಾಸವಿರುವುದರಿಂದ ಈ ಆಯೋಜನೆಯ ಸಹಾಯಧನದ ಸೌಲಭ್ಯವನ್ನು ಬಳಸಿಕೊಂಡು ಸಮುದಾಯ ಶೌಚಾಲಯವನ್ನು ನಿರ್ಮಿಸಲಾಯಿತು.

### ಕಟ್ಟಡಗಳ ನಿರ್ಮಾಣ:

1) ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಶಿಕ್ಷಣಕ್ಕಾಗಿ ಸೌಕರ್ಯ ನಿರ್ಮಾಣ ಮಾಡುವ ಸಲುವಾಗಿ ಶಾಲಾ ಕಟ್ಟಡಗಳನ್ನು, ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಆಧ್ಯತೆ ನೀಡಲಾಗಿದೆ.

### ಕುಡಿಯುವ ನೀರಿನ ಪೂರೈಕೆ

1) ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಗ್ರಾಮೀಣ ಜನರಿಗೆ 40 ಎಲ್‌ಪಿಸಿಡಿ ಪ್ರಕಾರ ಕುಡಿಯುವ ನೀರನ್ನು ಒದಗಿಸಲು ಅವಕಾಶ ನೀಡಿರುತ್ತಾರೆ.
2) ಹಾಲಿ ಕುಡಿಯುವ ನೀರಿನ ಯಾವುದೇ ಯೋಜನೆಯಲ್ಲಿ ಅಥವಾ ಜಲಮೂಲದಲ್ಲಿ ಗುಣಮಟ್ಟದ ಲೋಪದೋಷವಿದ್ದಲ್ಲಿ (ಫ್ಲೋರೈಡ್, ಖನಿಜಾಂಶ ಲವಣಾಂಶ ಕಂಡುಬಂದಲ್ಲಿ) ಶುದ್ಧೀಕರಿಸಲಾಗಿ ಶುದ್ಧೀಕರಣ ಉಪಕರಣ (ಡಿ ಫ್ಲೋರೇಶನ್) ಘಟಕಗಳನ್ನು ಸ್ಥಾಪುಸುವುದು.

## ಗ್ರಾಮ ವಿಕಾಸ ಯೋಜನೆ

### ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಗ್ರಾಮ ವಿಕಾಸ

1) ಗ್ರಾಮಗಳ ಸಮಗ್ರ ಅಭಿವೃದ್ಧಿ, ಪ್ರತಿ ಹಳ್ಳಿಗನ ಜೀವನ ಮಟ್ಟದಲ್ಲಿ ಬದಲಾವಣೆತಂದು ಗ್ರಾಮಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸುವ ದಿಸೇಯಲ್ಲಿ ಸರ್ಕಾರವು ಗ್ರಾಮ ವಿಕಾಸ ಯೋಜನೆಯನ್ನು ರೂಪಿಸಿದೆ.

### ಗ್ರಾಮ ವಿಕಾಸ ಯೋಜನೆ ಘೋಷಣೆ

ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು 2014–15ನೇ ಸಾಲಿನ ಆಯಾವ್ಯದಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ರಾಜ್ಯದ 189 ಗ್ರಾಮೀಣ ವಿಧಾನ ಸಭೆ ಮತಕ್ಷೇತ್ರಗಳ ವ್ಯಪ್ತಿಯಲ್ಲಿ ಪ್ರಾರಂಭಿಸಲು ಘೋಷಿಸಲಾಯಿತು ಅದರಂತೆ ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮಗಳು ಸೇರಿ ಒಟ್ಟು 5ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ ಸಾಧಿಸಲು 3ವರ್ಷ ಯೋಜನೆಯನ್ನು ಜಾರಿಗೆ ತರಲಾಯಿತು.

downloaded from: www.kpscvaani.com 

**ಗ್ರಾಮ ವಿಕಾಸ ಯೋಜನೆಯ ವ್ಯಾಪ್ತಿಗೆ ಬರುವ ವಿಧಾನಸಭಾ ಕ್ಷೇತ್ರಗಳು**

1) 2011ರ ಜನಸಂಖ್ಯೆಯ ಆದರಿಸಿ ಪ್ರತಿ ಗ್ರಾಮೀಣ ವಿಧಾನಸಭಾ ಮತ ಕ್ಷೇತ್ರಕ್ಕೆ ಗರಿಷ್ಠ 5000 ಜನಸಂಖ್ಯೆಯುಳ್ಳ ಗರಿಷ್ಟ 5 ಗ್ರಾಮಗಳಿಗೆ ಗ್ರಾಮದ ಅಭಿವೃದ್ಧಿಗೆ ತಲಾನುಧಾನ ರೂ. 7500/ ರಂತೆ ಪ್ರತಿ ಗ್ರಾಮೀಣ ವಿಧಾನ ಸಭಾ ಮತಕ್ಷೇತ್ರಕ್ಕೆ ಒಟ್ಟು 5000 ಜನಸಂಖ್ಯೆಯುಳ್ಳ ಗರಿಷ್ಟ 5ಗ್ರಾಮಗಳಿಗೆ ಗರಿಷ್ಟ ರೂ 3.75 ಕೋಟಿಗಳನ್ನು ಹಂಚಿಕೆಮಾಡಲಾಗುತ್ತಿದೆ.

**ವಿಶೇಷ ಸಂದರ್ಭದಲ್ಲಿ ಅನುಧಾನ**

1) ವಿಶೇಷ ಸಂಧರ್ಭದಲ್ಲಿ ನಿಗದಿಪಡಿಸಿದ 5000 ಜನಸಂಖ್ಯೆಯನ್ನು ಮೀರಿ ಹೆಚ್ಚು ಜನಸಂಖ್ಯೆ ಇರುವ ಗರಿಷ್ಟ 5 ಗ್ರಾಮಗಳನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಸಹ ಅನುಧಾನವನ್ನು 5000 ಜನಸಂಖ್ಯೆಗೆ ಮಿತಿಗೊಳಿಸಿ ರೂ.3.75 ಕೋಟೆಗಳನ್ನು ಹಂಚಿಕೆಮಾಡಲಾಗುವುದು ಯಾವುದೇ ಕಾರಣಕ್ಕೂ ಅನುಧಾನವನ್ನು ಹೆಚ್ಚಿಗೆ ಹಂಚಿಕೆ ಮಾಡಲಾಗುವುದಿಲ್ಲ .

**ಗ್ರಾಮಗಳ ಆಯ್ಕೆ ವಿಧಾನ**

1) ರಾಜ್ಯದ ಯಾವ ಮತ ಕ್ಷೇತ್ರವು 1ಕ್ಕಿಂತ ಹೆಚ್ಚಿನ ತಾಲೂಕನ್ನು ಹೊಂದಿದಲ್ಲಿ ಅದಕ್ಕೆ ಅನುಗುಣವಾಗಿ ಗ್ರಾಮಗಳ ಸಂಖ್ಯೆಯನ್ನು ಆ ಗ್ರಾಮೀಣ ಮತ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಂಡಂತೆ ಸರ್ಕಾರವು ತಾಲೂಕವಾರು ನಿಗದಿಪಡಿಸಿದಂತೆ ಗ್ರಾಮಗಳನ್ನು ಆಯ್ಕೆ ಮಾಡಲಾಗುವುದು ಇದಕ್ಕೆ ಸಂಬಂಧಿಸಿದ ಸಂಪೂರ್ಣ ವಿವರಗಳಿಗಾಗಿ ಸರ್ಕಾರಿ ಆದೇಶ ಹಾಗೂ ಅದಕ್ಕೆ ಲಗತ್ತಿಸಿರುವ ಅನುಭದಗಳನ್ನು ಕಡ್ಡಾಯವಾಗಿ ನೋಡುವುದು ಮತ್ತು ಅನುಸರಿಸುವುದು. ವಿಶೇಷ ಸಂದರ್ಭದಲ್ಲಿ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ. ಗರಿಷ್ಟ 5 (ಎಸ್‌ಸಿ ಎಸ್‌ಟಿ ಜನಸಂಖ್ಯೆ ಹೆಚ್ಚು ವಿರುವ 2 ಗ್ರಾಮಗಳು ಸೇರಿದಂತೆ) ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶಕಲ್ಪಿಸಿದೆ.

**ಅನುಷ್ಟಾನ ಮತ್ತು ಅಂದಾಜು ವೆಚ್ಚ:**

1) ಗ್ರಾಮ ವಿಕಾಸ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಸುಮಾರು 1000 ಗ್ರಾಮಗಳಲ್ಲಿ ಅಂದಾಜು ವೆಚ್ಚ ರೂ.750/ ಕೋಟಿಗಳನ್ನು ಮೂರು ವರ್ಷಗಳಲ್ಲಿ ಭರಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ತಲಾನುದಾನ ರೂ.7500/ ರಂತೆ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಗರಿಷ್ಠ 5000 ಜನಸಂಖ್ಯೆಯ ಮಿತಿಯೊಳಗೆ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನರು ಹೆಚ್ಚು ವಾಸಿಸುವ 2 ಗ್ರಾಮಗಳು ಸೇರಿ) ಆಯ್ಕೆಯಾದ ಗರಿಷ್ಟ 5 ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು ಗ್ರಾಮ ವಿಕಾಸ ಯೋಜನೆಯಡಿ ಸರ್ಕಾರವು ಅನುಮೋದನೆ ನೀಡಿದ ಗ್ರಾಮಗಳಲ್ಲಿ ಅಭಿವೃದ್ಧಿ ಮಾಡುವ ಅನುಷ್ಟಾನದ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲು ಮಂಜೂರಾತಿ ನೀಡಿದೆ.ಗ್ರಾಮ ಪಂಚಾಯಿತಿಯು ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಸರ್ಕಾರವು ಅನುಮೋದಿಸುವ ಮಾರ್ಗಸೂಚಿ ಯಲ್ಲಿರುವಂತೆ ಅನುಷ್ಠಾನ ಮಾಡಲು ಮಂಜೂರಾತಿ ನೀಡಿದೆ.

2) ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಒದಗಿಸುವ ಅನುದಾನವನ್ನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಕಾಲೋನಿಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳಿಗೆ ಮಾತ್ರ ಕಡ್ಡಾಯವಾಗಿ ಕೈಗೊಳ್ಳುವುದು ಮತ್ತು ಈ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ.

**ಯೋಜನೆಯ ಉದ್ದೇಶಗಳು:**

1) ಗ್ರಾಮೀಣ ಪ್ರದೇಶದ ಕಟ್ಟಕಡೆಯ ವ್ಯಕ್ತಿಗೂ ಶುದ್ಧ ಕುಡಿಯುವ ನೀರು ದೊರೆಯುವಂತಾಗಲು ಅಗತ್ಯ ಕ್ರಮ ಕೈಗೊಳ್ಳುವುದು.

2) ಹಳ್ಳಿಗಳ ಸ್ವಚ್ಚತೆ, ನೈರ್ಮಲ್ಯಗಳಿಗೆ ಹೆಚ್ಚು ಒತ್ತನ್ನು ನೀಡಿ,ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಪರಿವರ್ತಿಸಿ,ಆರೋಗ್ಯವಂತ,ಸುಸ್ಥಿರ ಹಾಗೂ ಸಮುದಾಯವನ್ನೂ ಬಲಿಷ್ಠಗೊಳಿಸುವುದು.

3) ಆಯ್ಕೆಯಾದ ಗ್ರಾಮಗಳ ಉತ್ತಮ ಭೌತಿಕ ಪರಿಸರವನ್ನು ನಿರ್ಮಿಸಿ ಗ್ರಾಮ ಸೌಂದರ್ಯೀಕರಣ ಮಾಡುವುದು ಹಾಗೂ ಅವಶ್ಯಕ ಗ್ರಾಮೀಣ ಮೂಲ ಸೌಕರ್ಯಗಳನ್ನು ಒದಗಿಸುವುದು.

4) ಸ್ವಾಭಿಮಾನಿ ಹಾಗೂ ಸ್ವಾವಲಂಬಿ ದೃಷ್ಟಿಕೋನ ಹೊಂದಿರುವ ಗ್ರಾಮ ಸಮುದಾಯವನ್ನು ಸದೃಢಗೊಳಿಸಲು ವ್ಯಾಜ್ಯಮುಕ್ತ,ತ್ಯಾಜ್ಯವ ಮುಕ್ತ,ವ್ಯಸನಮುಕ್ತ,ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳ ನಿರ್ಮಾಣ ಮಾಡುವುದು.

5) ತಳ ಮಟ್ಟದ ಸಮುದಾಯಗಳಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಗತ್ಯತೆ ಆಧರಿಸಿ ಪ್ರತ್ಯೇಕ ಕ್ರಿಯಾ ಯೋಜನೆಯನ್ನು ತಯಾರಿಸಿ ಸಮ ಸಮಾಜದ ನಿರ್ಮಾಣಕ್ಕೆ ಆದ್ಯತೆ ನೀಡುವುದು.

6) ಗ್ರಾಮೀಣ ನಿರುದ್ಯೋಗಿ ಯುವಜನರಿಗೆ ಉದ್ಯೋಗ ಸೃಜಿಸಲು, ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಕಲ್ಪಿಸಿ, ಕೃಷಿಯೇತರ ಉದ್ಯೋಗವಕಾಶಗಳನ್ನು ಒದಗಿಸಲು ಆದ್ಯತೆ ನೀಡುವುದು.

7) ಅಗತ್ಯ ಗ್ರಾಮೀಣ ಮೂಲಭೂತ ಸೌಕರ್ಯಗಳೊಂದಿಗೆ ಗ್ರಾಮೀಣ ಬದುಕನ್ನು ಹಸನುಗೊಳಿಸಿ ಗ್ರಾಮಗಳ ಪುನರ್ ನಿರ್ಮಾಣಮಾಡುವುದು.

**ಅಭಿವೃದ್ಧಿಯ ಕಾರ್ಯತಂತ್ರ:**

1) ಗ್ರಾಮ ವಿಕಾಸ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಿಕೇಂದ್ರೀಕರಣ ತತ್ವದಡಿ ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಸಿದ್ದಪಡಿಸಿ ಗ್ರಾಮ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲಾಗುವುದು. ಈಗಿರುವ ಅಭಿವೃದ್ಧಿ ಕಾರ್ಯಕ್ರಮಗಳ ಸಂಪನ್ಮೂಲಗಳು,ಸಿಬ್ಬಂದಿ ಮತ್ತು ಪ್ರಕ್ರಿಯೆಗಳನ್ನು ಉಪಯೋಗಿಸುವುದು ಮತ್ತು ಆಯ್ಕೆಯಾದ ಗ್ರಾಮಗಳ ಅವಶ್ಯಕತೆಗಳನ್ನು ಅಂತಹ ಕಾರ್ಯಕ್ರಮಗಳ ಮಾನದಂಡಗಳ ಚೌಕಟ್ಟಿನಲ್ಲಿ ಸಂಪೂರ್ಣವಾಗಿ ಈಡೇರಿಸುವುದು.

**ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳ ಅನುಷ್ಠಾನ :**

1) ಗ್ರಾಮ ವಿಕಾಸ ಯೋಜನೆಯಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಒಗ್ಗೂಡಿಸುವ ಮೂಲಕ ಆಯ್ಕೆಯಾದ ಗ್ರಾಮಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವುದು.

**ಯೋಜನೆಯ ಸಹಭಾಗಿತ್ವ:**

1) ಗ್ರಾಮದ ನಿರ್ದಿಷ್ಟ ಅಭಿವೃದ್ಧಯ ಅವಶ್ಯಕತೆಗಳನ್ನು ಈಡೇರಿಸಲು ಹೆಚ್ಚುವರಿ ಪೂರಕವಾದ ವಿವಿಧ ಕಾರ್ಯಕ್ರಮಗಳನ್ನು ಏಕೀಕರಣ ಗೊಳಿಸಲಾಗುವುದು. ಯೋಜನೆಯ ವಿವಿಧ ಅಂಶಗಳನ್ನು ಅನುಷ್ಟಾನಗೊಳಿಸಲು ಗ್ರಾಮ ಸಮುದಾಯದ ಜೊತೆಗೆ ಸರ್ಕಾರದ ವಿವಿಧ ಯೋಜನೆಗಳು,ಸರ್ಕಾರೇತರ ಸಂಘಗಳು, ಸಮುದಾಯ ಆಧಾರಿತ ಸಂಸ್ಥೆಗಳು ಹಾಗೂ ಖಾಸಗಿ ವಲಯದ ಭಾಗೀದಾರರು ಮುಂತಾದವುಗಳ ಸೇವೆಗಳನ್ನು ಉಪಯೋಗಿಸಿಕೊಳ್ಳಬಹುದು.

downloaded from: www.kpscvaani.com

**ಯೋಜನೆಗೆ ಗ್ರಾಮಗಳ ಆಯ್ಕೆ ಮತ್ತು ಅನುಮೋದನೆ :**

1) ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಗರಿಷ್ಠ ಜನ ಸಂಖ್ಯೆಯನ್ನು ಆಧರಿಸಿ ಗರಿಷ್ಠ ಗ್ರಾಮ ಗಳನ್ನು ಸ್ಥಳೀಯ ಶಾಸಕರು ಆಯ್ಕೆ ಮಾಡಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡಿ ಅವರುಗಳಿಂದ ಆ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪಡೆಯುವುದು.

2) ಶಾಸಕರು ಆಯ್ಕೆ ಮಾಡಿ ನೀಡಿದ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವುದು.

**ಹೊಣೆಗಾರಿಕೆ ಮತ್ತು ಜವಾಬ್ದಾರಿಗಳು :**

**ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರು**

1) ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿದ ಗರಿಷ್ಠ 5000 ಜನಸಂಖ್ಯೆಯ ಮಿತಿಯೊಳಗೆ ಗರಿಷ್ಠ 5 ಗ್ರಾಮಗಳನ್ನು ಮಾತ್ರ ಆಯ್ಕೆ ಮಾಡುವುದು. ವಿಶೇಷ ಸಂದರ್ಭದಲ್ಲಿ ನಿಗಧಿಪಡಿಸಿದ 5000 ಜನಸಂಖ್ಯೆಯನ್ನು ಮೀರಿ ಹೆಚ್ಚು ಜನಸಂಖ್ಯೆ ಇರುವ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡುವಾಗಲೂ ಸಹ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರು ಹೆಚ್ಚು ವಾಸಿಸುವ ಕನಿಷ್ಠ 2 ಗ್ರಾಮಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡುವುದು.

2) ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮಗಳಿಂದಾಗಿ 5ಕ್ಕಿಂತ ಕಡಿಮೆ ಇರುವ ಗ್ರಾಮಗಳನ್ನು ಆಯ್ಕೆ ಮಾಡುವಾಗ ಹೆಚ್ಚು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನಸಂಖ್ಯೆಯುಳ್ಳ ಗ್ರಾಮಗಳನ್ನು ಆಯ್ಕೆ ಮಾಡುವುದು.

3) ಆಯ್ಕೆ ಮಾಡುವ ಗ್ರಾಮಗಳು ಈ ಹಿಂದೆ ಯಾವುದೇ ಯೋಜನೆಯಲ್ಲಿ ಆಯ್ಕೆಯಾಗಿರಬಾರದು.ಉದಾ: ಸುವರ್ಣ ಗ್ರಾಮೋದಯ, ಕುಗ್ರಾಮ–ಸುಗ್ರಾಮ,ಸ್ವಚ್ಚ ಗ್ರಾಮ ಇತ್ಯಾದಿ.

4) ಐದು ಗ್ರಾಮಗಳಿಗಿಂತ ಹೆಚ್ಚಿನ ಗ್ರಾಮಗಳನ್ನು ಆಯ್ಕೆ ಮಾಡಬಾರದು. ನಿಗಧಿಪಡಿಸಿದ 5000 ಜನಸಂಖ್ಯೆಯುಳ್ಳ ಗ್ರಾಮಗಳಿಗಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಒಂದೇ ಗ್ರಾಮವನ್ನು ಆಯ್ಕೆ ಮಾಡಿದಾಗ ಗ್ರಾಮೀಣ ಮತ ಕ್ಷೇತ್ರಕ್ಕೆ ನಿಗಧಿಪಡಿಸಿದ ರೂ.3.75 ಕೋಟಿಗಳ ಅನುದಾನವನ್ನು ಮಾತ್ರ ನೀಡಲಾಗುವುದು. ಇದಕ್ಕಾಗಿ ಹೆಚ್ಚಿನ ಅನುದಾನವನ್ನು ನೀಡಲಾಗುವುದಿಲ್ಲ.

5) ಸಂಪೂರ್ಣ 2 ತಾಲ್ಲೂಕುಗಳನ್ನು ಹೊಂದಿರುವ 6 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಿಗೆ ನಿಗಧಿಪಡಿಸಿದ ಗರಿಷ್ಠ 8000 ಜನಸಂಖ್ಯೆಯುಳ್ಳ ಗರಿಷ್ಠ 8 ಗ್ರಾಮಗಳನ್ನು ಆಯ್ಕೆ ಮಾಡುವಾಗ ಹೆಚ್ಚು ಎಸ್ ಮತ್ತು ಎಸ್‌ಟಿ ಜನಸಾಂಧ್ರತೆಯುಳ್ಳ ಕನಿಷ್ಠ 3 ಗ್ರಾಮಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡುವುದು. ಗರಿಷ್ಠ 8000 ಜನ ಸಂಖ್ಯೆಯನ್ನು ಮೀರಿದ 8 ಗ್ರಾಮಗಳನ್ನು ಆಯ್ಕೆ ಮಾಡಿದಾಗಲೂ ಸಹ ಅನುದಾನವನ್ನು ರೂ. 6.00 ಕೋಟಿಗೆ ಸೀಮಿತಗೊಳಿಸಲಾಗುವುದು.

6) ಗ್ರಾಮದ ಅಭಿವೃದ್ಧಿಗಾಗಿ ಆದ್ಯತೆಯನ್ನಾದರಸಿ ಗ್ರಾಮಾಭಿವೃದ್ಧಿ ಯೋಜನೆ ತಯಾರಿಸಲು ಗ್ರಾಮ ಪಂಚಾಯತ್‌ಗಳಿಗೆ ಸಲಹೆ, ಮಾರ್ಗದರ್ಶನಗಳನ್ನು ನೀಡುವುದು ಅಲ್ಲದೆ ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆಯಲ್ಲಿ ಗ್ರಾಮ ಸಮುದಾಯವು ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಪ್ರೇರೇಪಿಸುವುದು ಹಾಗೂ ಭಾಗವಹಿಸುವುದು.

7) ಅಭಿವೃದ್ಧಿಯ ಅನುಷ್ಠಾನದಲ್ಲಿ ಉತ್ತಮ ಪರಿಣಾಮಕಾರಿ ಫಲಿತಾಂಶ ವನ್ನು ಪಡೆಯುವ ಸಲುವಾಗಿ ಅಭಿವೃದ್ಧಿ ಕಾರ್ಯಕ್ರಮಗಳ ಪರಾ ಮರ್ಶೆಗಾಗಿ ಗ್ರಾಮದಲ್ಲಿ ಕಾಲಕಾಲಕ್ಕೆ ಸಭೆಗಳನ್ನು ಏರ್ಪಡಿಸಲು ಪಂಚಾಯತ್‌ಗಳಿಗೆ ಸೂಚಿಸುವುದು ಮತ್ತು ಪಾಲ್ಗೊಳ್ಳುವುದು.

8) ಗ್ರಾಮ ವಿಕಾಸ ಯೋಜನೆಗೆ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊರತೆಯಾಗಬಹುದಾದ ಅನುದಾನವನ್ನು ತಮ್ಮ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ ನೀಡುವುದು, ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ, ಖಾಸಗಿ ನಿಗಮಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದು.

9) ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳುವುದು. ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಲಹೆ,ಸೂಚನೆ,ಮಾರ್ಗದರ್ಶನ ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು.

**ಗ್ರಾಮ ಪಂಚಾಯತ್ :**

ಯೋಜನೆಗಳನ್ನು ತಯಾರಿಸುವ ಮತ್ತು ಅನುಮೋದಿಸುವ ವಿವಿಧ ಹಂತಗಳಲ್ಲಿ ತೆಗೆದುಕೊಳ್ಳಬಹುದಾದ ಪ್ರಕ್ರಿಯೆಗಳಲ್ಲಿ ಗ್ರಾಮ ಪಂಚಾಯಿತಿಯು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು. ಗ್ರಾಮಗಳ ಆಯ್ಕೆ ಪಟ್ಟಿಗೆ ಅನುಮೋದನೆ ಪಡೆದ ನಂತರ ಪಂಚಾಯತ್‌ಗಳು ಆಯ್ಕೆಯಾದ ಗ್ರಾಮದಲ್ಲಿನ ವಸ್ತು ಸ್ಥಿತಿಯನ್ನು ಜನರ ಸಹಭಾಗಿತ್ವದಲ್ಲಿ ಸಾಧ್ಯವಿದ್ದಲ್ಲಿ ಸರ್ಕಾರೇತರ ಅನುಭವವಿರುವ ಸ್ವಯಂ ಸೇವಾ ಸಂಸ್ಥೆಯ ಸೇವೆಯನ್ನು ಪಡೆದು ಗ್ರಾಮದಲ್ಲಿ ಹಾಲಿ ಇರುವ ಮೂಲ ಸೌಕರ್ಯಗಳ ಪಟ್ಟಿಯನ್ನು ತಯಾರಿಸಲು ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸುವುದು.ಶಾಸಕರ ಅಧ್ಯಕ್ಷತೆ ಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳುವುದು.

**ವಾರ್ಡ್ ಸಭೆ :**

ಕರಡು ಕ್ರಿಯಾ ಯೋಜನೆ ತಯಾರಿಸುವ ಪೂರ್ವದಲ್ಲಿ ಕಡ್ಡಾಯವಾಗಿ ವಾರ್ಡ್ ಸಭೆಗಳನ್ನು ನಡೆಸಿ ಜನರ ಬೇಡಿಕೆಗಳನ್ನು ಹಾಗೂ ಆಶಯಗಳನ್ನು ಕ್ರೋಢೀಕರಿಸಿ ಆದ್ಯತಾ ಪಟ್ಟಿ ತಯಾರಿಸುವುದು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಜನರ ಅಭಿವೃದ್ಧಿಗೆ ಕಾಲೋನಿಗಳಲ್ಲೇ ಸಭೆ ನಡೆಸಿ ಆದ್ಯತಾ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸುವುದು.

**ಗ್ರಾಮ ಸಭೆ :**

1) ಗ್ರಾಮ ವಿಕಾಸ ಯೋಜನೆಯ ಅಭಿವೃದ್ಧಿಗೆ ಸರ್ಕಾರವು ಹೊರಡಿಸುವ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಸಭೆಯಲ್ಲಿ ಓದುವುದು.

2) ಗ್ರಾಮ ಪಂಚಾಯಿತಿಯ ಗ್ರಾಮ ವಿಕಾಸ ಯೋಜನೆಯ

downloaded from: www.kpscvaani.com 

ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸುವ ಮುನ್ನ ವಾರ್ಡ್ ಸಭೆಗಳಿಂದ ಬಂದಂತಹ ಆದ್ಯತಾ ಪಟ್ಟಿಗಳನ್ನು ಗ್ರಾಮ ಸಭೆಯಲ್ಲಿ ಮಂಡಿಸುವುದು. ಮತ್ತು ಆದ್ಯತಾ ಪಟ್ಟಿಯನ್ನು ಅಂತಿಮಗೊಳಿಸುವುದು.

3) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಪ್ರದೇಶದಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳ ಕುರಿತಂತೆ ಬಂದಂತಹ ಶಿಫಾರಸ್ಸುಗಳನ್ನು ಸಹ ಗ್ರಾಮ ಸಭೆಗಳಲ್ಲಿ ಮಂಡಿಸುವುದು. ಮತ್ತು ಆದ್ಯತಾ ಪಟ್ಟಿಯನ್ನು ಅಂತಿಮಗೊಳಿಸುವುದು.

4) ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸುವ ಕಾಮಗಾರಿ/ ಚಟುವಟಿಕೆಗಳು ಇನ್ನೊಂದು ಯೋಜನೆಯಲ್ಲಿ ಅನುಷ್ಠಾನಗೊಂಡಿರುವ ಅಥವಾ ಅನುಷ್ಠಾನ ಮಾಡಲು ಆಯ್ಕೆಯಾಗಿರುವ ಕಾರ್ಯಕ್ರಮಗಳನ್ನು ಶಿಫಾರಸ್ಸು ಮಾಡಬಾರದು.

5) ಗ್ರಾಮದಲ್ಲಿ ದೊರೆಯಬಹುದಾದ ದೇಣಿಗೆ ಮೊತ್ತ ಮತ್ತು ಭೌತಿಕ ಸಂಪನ್ಮೂಲಗಳ ಕುರಿತು ಗ್ರಾಮ ಸಭೆಯಲ್ಲಿ ಚರ್ಚಿಸುವುದು. ದೊರೆಯಬಹುದಾದ ಸಂಪನ್ಮೂಲಗಳನ್ನು ಕುರಿತಂತೆ ಪ್ರತ್ಯೇಕ ಪಟ್ಟಿಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸುವುದು.

**ಗ್ರಾಮ ಪಂಚಾಯತ್**

1) ಗ್ರಾಮ ಸಭೆಯಲ್ಲಿ ಬಂದಂತಹ ಶಿಫಾರಸ್ಸುಗಳನ್ನು ಆಧರಿಸಿ ಯೋಜನೆಯಲ್ಲಿ ಅವಕಾಶ ಕಲ್ಪಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವಲೋಕಿಸಿ ಗ್ರಾಮಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು, ಯೋಜನೆಯನ್ನು ತಯಾರಿಸುವಾಗ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಪ್ರದೇಶಗಳಲ್ಲಿ ಅಗತ್ಯವಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನೂ ಸಹ ಪ್ರತ್ಯೇಕವಾಗಿ ತಯಾರಿಸಿಕೊಳ್ಳುವುದು.

2) ಗ್ರಾಮದ ಅಭಿವೃದ್ಧಿಗೆ ಪೂರಕವಾಗಿ ದೊರೆಯಬಹುದಾದ ಆರ್ಥಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನು ಸಹ ಗಣನೆಗೆ ತೆಗೆದುಕೊಳ್ಳುವುದು. ಗ್ರಾಮದ ಅಭಿವೃದ್ಧಿಗೆ ಆರ್ಥಿಕ ನೆರವನ್ನು ನೀಡುವಂತಹ ವ್ಯಕ್ತಿ ಅಥವಾ ಸಂಸ್ಥೆಗಳನ್ನೂ ಸಹ ಪಟ್ಟಿ ಮಾಡಿ ದೊರೆಯಬಹುದಾದ ಆರ್ಥಿಕ ಸಹಾಯದ ಮೊತ್ತವನ್ನು ಚೆಕ್ ಮೂಲಕ ಪಡೆಯುವುದು. ಭೌತಿಕ ಸಂಪನ್ಮೂಲಗಳ ಪೈಕಿ ಕಟ್ಟಡಗಳ ಅವಶ್ಯಕತೆ ಇದ್ದು ನಿರ್ಮಾಣಕ್ಕೆ ಸರ್ಕಾರಿ ಜಾಗವು ಲಭ್ಯವಿಲ್ಲದೆ ಇದ್ದಾಗ ನಿವೇಶನ ಅಥವಾ ಜಮೀನುಗಳನ್ನು ದಾನವಾಗಿ ನೀಡಬಹುದಾದ ದಾನಿಗಳ ಪಟ್ಟಿಯನ್ನೂ ಸಹ ಮಾಡಿಕೊಳ್ಳುವುದು. ದಾನ ನೀಡಬಹುದಾದ ಸಂದರ್ಭದಲ್ಲಿ ಮೊದಲಿಗೆ ಪಂಚಾಯತ್ ಹೆಸರಿಗೆ ನೊಂದಾಯಿಸುವ ಕ್ರಮವನ್ನು ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ.

1) ಗ್ರಾಮ ಪಂಚಾಯಿತಿಯು ದೊರೆಯಬಹುದಾದ ಗ್ರಾಮ ವಿಕಾಸದ ಅನುದಾನ ಮತ್ತು ಇತರೆ ಮೂಲಗಳಿಂದ ದೊರೆಯಬಹುದಾದ ಆರ್ಥಿಕ ದೇಣಿಗೆ, ಭೌತಿಕ ಸಂಪನ್ಮೂಲಗಳು ಹಾಗೂ ಒಗ್ಗೂಡಿಸುವಿಕೆಯ ಮೂಲಕ ಕೈಗೊಳ್ಳಬಹುದಾದ ಕಾರ್ಯಕ್ರಮಗಳು/ ಕಾಮಗಾರಿಗಳು ಮತ್ತು ಅವುಗಳಲ್ಲಿ ಲಭ್ಯವಾಗುವ ಅನುದಾನಗಳು ಎಲ್ಲವನ್ನೂ ಕ್ರೋಡೀಕರಿಸುವುದು ಅಥವಾ ಗ್ರಾಮ ವಿಕಾಸ ತಂತ್ರಾಂಶದಲ್ಲಿ ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಅನುಮೋದನೆ ಮಾಡುವುದು. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನಾಂಗದವರು ವಾಸಿಸುವ ಪ್ರದೇಶದ ಅಭಿವೃದ್ಧಿಗೆ ಪ್ರತ್ಯೇಕ ಗ್ರಾಮಾಭಿವೃದ್ಧಿ ಯೋಜನೆಯನ್ನು ನಿಗದಿಪಡಿಸಿದ ಅನುದಾನದಲ್ಲಿ ತಯಾರಿಸುವುದು ಮತ್ತು ಅನುಮೋದನೆ ನೀಡುವುದು.

2) ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪರಿಶೀಲನೆ ಮಾಡಿ ಗುಣಾತ್ಮಕವಾಗಿ ಕಾಮಗಾರಿಗಳು ಅನುಷ್ಠಾನವಾಗುವಂತೆ ನೋಡಿಕೊಳ್ಳುವುದು.

3) ಪ್ರಗತಿಯನ್ನಾಧರಿಸಿ ಅನುಷ್ಠಾನ ಸಂಸ್ಥೆಗಳಿಗೆ ಚೆಕ್ ಮೂಲಕ ಹಣವನ್ನು ನೀಡುವುದು.

4) ಸ್ವಾವಲಂಬಿ, ಸ್ವಾಸ್ಥ್ಯ ಗ್ರಾಮದ ಕಲ್ಪನೆಯ ಸಾಕಾರಕ್ಕಾಗಿ ಶ್ರಮಧಾನ, ಆರೋಗ್ಯ ಶಿಬಿರ, ಕರ ವಸೂಲಿ, ಸಾಲ ವಸೂಲಿ, ವ್ಯಾಜ್ಯ ಪರಿಹಾರ ಕಾರ್ಯಕ್ರಮಗಳನ್ನೂ ಸಹ ಕಡ್ಡಾಯವಾಗಿ ಹಮ್ಮಿಕೊಳ್ಳುವುದು. ಇದಕ್ಕಾಗಿ ದಿನಾಂಕಗಳನ್ನು ನಿಗಧಿಪಡಿಸಿ ಜನಪ್ರತಿನಿಧಿಗಳು,ಹಿರಿಯ ಅಧಿಕಾರಿಗಳು, ಹಾಗೂ ಸಾರ್ವಜನಿಕರು ಭಾಗವಹಿಸುವಂತೆ ಮಾಡುವುದು.

5) ಆಯ್ಕೆಯಾದ ಗ್ರಾಮವನ್ನು ಯೋಜನೆ ಪ್ರಾರಂಭವಾದ ಒಂದು(1) ವರ್ಷಗಳೊಳಗೆ ಸಂಪೂರ್ಣವಾಗಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಮಾಡುವುದು.

6) ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆಯಲ್ಲಿ ಸರ್ಕಾರದ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು,ಸ್ವಯಂ ಸೇವಾ ಸಂಸ್ಥೆಗಳು ಮತ್ತು ಮಹಿಳಾ ಸಂಘಗಳನ್ನು ತೊಡಗಿಸಿಕೊಳ್ಳುವುದು.

7) ಗ್ರಾಮ ವಿಕಾಸ ಯೋಜನೆಗೆ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊರೆತೆಯಾಗಬಹುದಾದ ಅನುದಾನವನ್ನು ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದು.

8) ಕಾಮಗಾರಿಗಳ ಹಣ ಪಾವತಿಸುವ ಮುನ್ನ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳನ್ನು "ಗಾಂಧಿ ಸಾತ್ವಿಕ ಕಾಯಕ ತಂತ್ರಾಂಶ"ದಿಂದ ಪಡೆದ ಕಚಿಥಿಟಜಟಣ ಚಿಜತ್ರುಜ ಆಧಾರದ ಮೇಲೆ ಮಾತ್ರ ಹಣ ಪಾವತಿಸುವುದು.

9) ಯೋಜನೆಯು ಅನುಷ್ಠಾನಗೊಂಡ ನಂತರ ಸಾಮಾಜಿಕ ಲೆಕ್ಕ ಪರಿಶೋಧನೆಗೆ ಕಡ್ಡಾಯವಾಗಿ ಅವಕಾಶ ಕಲ್ಪಿಸುವುದು.

10) ಪಂಚಾಯತ್ ಅಭಿವೃದ್ದಿ ಅಧಿಕಾರಿಗಳು ಗ್ರಾಮ ವಿಕಾಸ ಯೋಜನೆಗೆ ಅಯ್ಕೆಯಾದ ಗಾಮದ ಪ್ರಸ್ತುತ ಚಿತ್ರಣವನ್ನು ವರದಿ ಹಾಗೂ ಫೋಟೋ ಹಾಗೂ ಸಾಕ್ಷ್ಯ ಚಿತ್ರ ಸಮೇತ ದಾಖಲೀಕರಣ ಮಾಡಿಕೊಳ್ಳುವುದು ಹಾಗೂ ಯೋಜನೆಯು ಪೂರ್ಣಗೊಂಡ ನಂತರ ಗ್ರಾಮವು ಅಭಿವೃದ್ಧಿ ಹೊಂದಿದ ಚಿತ್ರಣವನ್ನು ಫೋಟೋ ಹಾಗೂ ಸಾಕ್ಷ್ಯ ಚಿತ್ರ ಸಮೇತ ದಾಖಲೀಕರಣ ಮಾಡಿ ವರದಿ ಮಾಡುವುದು.

11) ಗ್ರಾಮ ಸಭೆಯ ಸಂಪೂರ್ಣ ವೀಡಿಯೋ ಚಿತ್ರೀಕರಣ ಮಾಡುವುದು ಮತ್ತು ಸಭೆಯ ಮೊದಲಿಗೆ ನಡವಳಿಯ ವಹಿಯಲ್ಲಿ ಸಹಿ ಪಡೆಯುವುದು.

12) ತಾಂತ್ರಿಕ ಅನುಮೋದನೆಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೆ ಒಳಪಟ್ಟಿರುತ್ತದೆ.

**ಅನುಷ್ಠಾನ ಸಂಸ್ಥೆ / ಅಧಿಕಾರಿಗಳು :**

1) ಗ್ರಾಮ ಪಂಚಾಯತ್‌ಗಳು ಆಯ್ಕೆ ಮಾಡಿದ ಅನುಷ್ಠಾನ ಸಂಸ್ಥೆಯು ಪಾರದರ್ಶಕವಾಗಿ ಏಖಿಕಿಕ ಕಾಯ್ದೆ ಮತ್ತು ನಿಯಮಗಳನ್ನು ಅನುಸರಿಸಿ ಗುತ್ತಿಗೆದಾರರನ್ನು ನೇಮಿಸುವುದು.

 downloaded from: www.kpscvaani.com

2) ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿಗಾಗಿ ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಕಡ್ಡಾಯವಾಗಿ ಎರಡು (2) ತಿಂಗಳಿಗೊಮ್ಮೆ ನಡೆಯುವಂತೆ ಮಾಡಲು ಕ್ರಮ ಕೈಗೊಳ್ಳುವುದು. ಸಭೆಯಲ್ಲಿ ನಿರ್ಣಯ ಮಾಡಿದಂತೆ ಅನುಸರಣಾ ಕ್ರಮ ಕೈಗೊಂಡು ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು.
3) ಕಾಮಗಾರಿಗಳನ್ನು ಸಕಾಲದಲ್ಲಿ ಅನುಷ್ಠಾನಕ್ಕೆ ತರುವುದು.
4) ಕಾಮಗಾರಿಗಳ ಪ್ರತಿ ಹಂತದ ಪ್ರಗತಿಯನ್ನು ಗಾಂಧಿ ಸಾಕ್ಷಿ ಕಾಯಕ/ಪಂಚತಂತ್ರ ತಂತ್ರಾಂಶಗಳಲ್ಲಿ ತಪ್ಪದೇ ಅಳವಡಿಸುವುದು.
5) ಕಾಮಗಾರಿಗಳನ್ನು ಆರಂಭಿಸುವ ಮುನ್ನ ಯಾವುದೇ ಕಾಮಗಾರಿಯು ಇನ್ನೊಂದು ಯೋಜನೆಯಲ್ಲಿ ಹಣ ಪಾವತಿಗಾಗಿ ಬಾಕಿ ಇರುವಂತಹ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಾರದು.

**ಯೋಜನಾ ಉಸ್ತುವಾರಿ ಸಮಿತಿ :**

1) ಅಭಿವೃದ್ಧಿ ಕಾರ್ಯಗಳ ಪರಿವೀಕ್ಷಣೆಗೆ ಆಯ್ಕೆಯಾದ ಗ್ರಾಮಗಳ ಗ್ರಾಮ ಪಂಚಾಯತ್‌ಗಳಲ್ಲಿ ಯೋಜನಾ ಉಸ್ತುವಾರಿ ಸಮಿತಿಯನ್ನು ಈ ಕೆಳಕಂಡಂತೆ ರಚಿಸುವುದು.

1) ಮಾನ್ಯ ಶಾಸಕರು– ಅಧ್ಯಕ್ಷರು
2) ಗ್ರಾಮ ಪಂಚಾಯತ್ ಅಧ್ಯಕ್ಷರು – ಸಹ ಅಧ್ಯಕ್ಷರು
3) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ – ಸದಸ್ಯರು

## ವಸತಿ ಯೋಜನೆಗಳು

**1. ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ**

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜನರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪುರಸ್ಕೃತ ಎಲ್ಲಾ ವಸತಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾಗೊಳಿಸಲು ನಿಗಮವನ್ನು ನೋಡಲ್ ಸಂಸ್ಥೆಯನ್ನಾಗಿ ದಿನಾಂಕ 20ನೇ ಏಪ್ರಿಲ್ 2000ರಂದು ಸ್ಥಾಪಿಸಲಾಗಿದೆ. ನಿಗಮದ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ.

- ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವಸತಿ ರಹಿತ ಮತ್ತು ನಿವೇಶನ ರಹಿತರಿಗೆ ವಸತಿ ಮತ್ತು ನಿವೇಶನ ಸೌಲಭ್ಯ ಕಲ್ಪಿಸುವುದು.
- ತ್ವರಿತವಾಗಿ ಯೋಜನೆಗಳ ಅನುಷ್ಠಾನ
- ಅನುಷ್ಠಾನದಲ್ಲಿ ಪಾರದರ್ಶಕತೆ.
- ಸುಗಮ ಅನುದಾನದ ಬಿಡುಗಡೆ ಮತ್ತು ಅನುದಾನವು ಅಂತಿಮವಾಗಿ ಫಲಾನುಭವಿಗೆ ನಿಗದಿತ ಅವಧಿಯಲ್ಲಿ ತಲುಪುವಂತೆ ಖಚಿತಪಡಿಸಿಕೊಳ್ಳವುದು.
- ಜಿಲ್ಲಾ ನಿರ್ಮಿತಿ ಕೇಂದ್ರಗಳ ಮೂಲಕ ಕಟ್ಟಡ ನಿರ್ಮಾಣದಲ್ಲಿ ತಂತ್ರಜ್ಞಾನ ಉಪಯೋಗಕ್ಕೆ ಉತ್ತೇಜನ ನೀಡುವುದು.
- ನಿರ್ಮಿತಿ ಕೇಂದ್ರಗಳನ್ನು ಬಲಪಡಿಸುವುದು.

**ವಸತಿ ಬೇಡಿಕೆ ಸಮೀಕ್ಷೆ**

ವಸತಿ ರಹಿತ ಮತ್ತು ನಿವೇಶನ ರಹಿತ ಕುಟುಂಬಗಳ ಸಮೀಕ್ಷೆಯನ್ನು ನಿಗಮವು 2003ರಲ್ಲಿ ಕೈಗೊಂಡಿತು. ಈ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಒಟ್ಟು 12.99.789 ವಸತಿ ಮತ್ತು 12.98.813 ನಿವೇಶನ ರಹಿತರನ್ನು ಗುರುತಿಸಲಾಗಿತ್ತು ನಂತರ 2009ರಲ್ಲಿ ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡುವ ದೃಷ್ಟಿಯಿಂದ ಗುಡಿಸಲುವಾಸಿಗಳ ಸಮೀಕ್ಷೆಯನ್ನು ಕೈಗೊಂಡು. ಈ ಸಮೀಕ್ಷೆಯಂತೆ ಸುಮಾರು 10.50 ಲಕ್ಷ ಗುಡಿಸಲುವಾಸಿಗಳನ್ನು ಗುರುತಿಸಲಾಗಿದೆ .

**3. ವಸತಿ ನಿವೇಶನ**

ರೂ32.000 ಕ್ಕಿಂತ ಕಡಿಮೆ ವಾರ್ಷಿಕ ಆದಾಯವಿರುವ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಿವೇಶನರಹಿತ ಬಡಜನರಿಗೆ ನಿವೇಶನವನ್ನು ಉಚಿತವಾಗಿ ಈ ಯೋಜನೆಯಡಿ ಹಂಚಿಕೆ ಮಾಡಲಾಗುತ್ತದೆ. ಈ ಯೋಜನೆಯನ್ನು 1992– 93ನೇ ಸಾಲಿನಿಂದ ಜಾರಿಗೊಳಿಸಿದೆ.

## ನನ್ನ ಮನೆ ಯೋಜನೆ
**(ಕಡಿಮೆ ಆದಾಯದ ಗುಂಪಿನವರಿಗೆ ಕೈಗೆಟುಕುವ ದರದಲ್ಲಿ ವಸತಿ)**

ಬಡತನ ರೇಖೆಗಿಂತ ಮೇಲಿದ್ದು ವಾರ್ಷಿಕ ಆದಾಯ ರೂ 1 ಲಕ್ಷದವರೆಗೆ ಆದಾಯವಿರುವ ಆಟೋ ರಿಕ್ಷಾ ಚಾಲಕರು. ಚಲನ ಚಿತ್ರ ಉದ್ಯಮದ ಕಾರ್ಮಿಕರು, ಬೀಡಿಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು, ಹಮಾಲರು ಮುಂತಾದವರಿಗೆ ಈ ಹೊಸ ಯೋಜನೆಯನ್ನು 2010–11 ನೇ ಸಾಲಿನಿಂದ ಜಾರಿಗೆ ತರಲಾಗಿದೆ. 2011–12ನೇ ಸಾಲಿನಲ್ಲಿ ಬೆಂಗಳೂರು ಮತ್ತು ಅದರ ಸುತ್ತ ಮುತ್ತ ಅಂದರೆ ತಾಳಗುಪ್ಪ. ಬಿಡದಿ, ಸಿಂಗನಾಯಕನಹಳ್ಳಿ ಮತ್ತು ಹುಣಸಮಾರಹಳ್ಳಿ. ಯಲಹಂಕ ಕೊಡತಿಯ ಸಮೀಪ ಜಿ+2 ಮಾದರಿಯಲ್ಲಿ 4 ವಸತಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ಫ್ಲಾಟ್‌ನ ಘಟಕ ವೆಚ್ಚವು ಅನುಕ್ರಮವಾಗಿ ರೂ. 3.90 ಲಕ್ಷ ರೂ 4.25 ಲಕ್ಷ ಮತ್ತು ರೂ. 5.20 ಲಕ್ಷದವರಿಗೆ ಇರುತ್ತದೆ.

**ಮನೆಯ ಘಟಕ ವೆಚ್ಚ**

- ಪ್ರತಿ ಮನೆಯ ಘಟಕ ವೆಚ್ಚವನ್ನು ವರ್ಷದಿಂದ ವರ್ಷಕ್ಕೆ ಕ್ರಮೇಣ ಹೆಚ್ಚಿಸಲಾಗುತ್ತಿದೆ. 2010–11ನೇ ಸಾಲಿನಿಂದ ಗ್ರಾಮೀಣ ಆಶ್ರಯ ಯೋಜನೆಯನ್ನು ಬಸವ ವಸತಿ ಯೋಜನೆ ಎಂದು ಮತ್ತು ನಗರ ಆಶ್ರಯ ಯೋಜನೆಯನ್ನು ವಾಜಪೇಯಿ ವಸತಿ ಯೋಜನೆ ಎಂದು ಮರು ನಾಮಕರಣ ಮಾಡಲಾಗಿದೆ.

downloaded from: www.kpscvaani.com 

# ವಸತಿ ಯೋಜನೆಗಳ ವಿವರ

| ವಸತಿ ಯೋಜನೆಗಳು ಹೆಸರು | ಜಾರಿಗೆ ಬಂದದ್ದು | ಯೋಜನೆಯ ಮೊತ್ತ | ಇತರೆಯ ವಿಷಯಾಂಶಗಳು |
|---|---|---|---|
| ಗ್ರಾಮೀಣ ಆಶ್ರಯ / ಬಸವ ವಸತಿ ಯೋಜನೆ | 1991–1992 | 1.20.000=00 | • ವಾರ್ಷಿಕ ಆದಾಯ 32.000 ಕ್ಕಿಂತ ಕಡಿಮೆ ವಸತಿ ರಹಿತ ಬಡಜನರ ಆಯ್ಕೆ<br>• ಈ ಯೋಜನೆಯಡಿ ಒಟ್ಟು ಮನೆಗಳು ಪ.ಜಾ. ಅವರಿಗೆ ಶೇ.30ರಷ್ಟು ಪ.ಪಂ.ದವರಿಗೆ ಶೇ.10ರಷ್ಟು. ಹಾಗೂ ಅಲ್ಪಸಂಖ್ಯಾತರಿಗೆ ಶೇ.10ರಷ್ಟು. ಮೀಸಲು ನೀಡಲಾಗಿದೆ.<br>• ಈ ಯೋಜನೆಯು ಮೊದಲು ಆಶ್ರಯ ವಸತಿಯೋಜನೆಯಡಿ ಕಾರ್ಯನಿರ್ವಹಿಸುತ್ತಿತ್ತು. 2010–11ರಲ್ಲಿ ಬಸವ ವಸತಿ ಯೋಜನೆಯೆಂದು ನಾಮಕರಣ ಮಾಡಲಾಯಿತು. |
| ಇಂದಿರಾ ಆವಾಸ ಯೋಜನೆ | 1985–86 | 1.20.000=00 | • ಈ ಯೋಜನೆಯಡಿ ಬಡ ಜನರಿಗೆ ವಸತಿ ಕಲ್ಪಿಸುವ ಯೋಜನೆಯಾಗಿದ್ದು. ಒಟ್ಟು ಮನೆಗಳಲ್ಲಿ ಪ.ಜಾ.ಗಳಿಗೆ ಶೇ.60ರಷ್ಟು ಪ.ಪಂ.ಕ್ಕೆ ಶೇ.15ರಷ್ಟು ಹಾಗೂ ಅಲ್ಪಸಂಖ್ಯಾತರಿಗೆ ಶೇ.25 ರಷ್ಟು ಮೀಸಲು ನೀಡಲಾಗಿದೆ.<br>• 2015–16ರ ಸಾಲಿನಲ್ಲಿ ಒಂದು ಮನೆಗೆ 1.20.000 ಇದರಲ್ಲಿ ಕೇಂದ್ರ ಸರ್ಕಾರ 35.000 ಹಾಗೂ ರಾಜ್ಯಸರ್ಕಾರ 85.000 ಮತ್ತು ಪ.ಜಾ. ಹಾಗೂ ಪ.ಪಂ.ದವರಿಗೆ 1.50.000 ನೀಡಲಾಗಿದೆ. |
| ಗ್ರಾಮೀಣ ಅಂಬೇಡ್ಕರ ವಸತಿ ಯೋಜನೆ | 2010–11 | ಗ್ರಾಮೀಣ ಪ್ರದೇಶಕ್ಕೆ 1.50.000 ನಗರ ಪ್ರದೇಶಕ್ಕೆ 1.80.000 | • ಈ ಯೋಜನೆಯು ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ವಸತಿ ಕಲ್ಪಿಸಲಾಗಿದೆ. |
| ಪ್ರಧಾನಮಂತ್ರಿ ಆವಾಸ ಯೋಜನೆ | 2015 ಜೂನ್–25 | 1.20.000 | • ಭಾರತ ಸರ್ಕಾರವು ಇಂದಿರಾ ಆವಾಸ ಯೋಜನೆಯನ್ನು ಮರುನಾಮಕರಣ ಗೊಳಿಸಿ ಪ್ರಧಾನಮಂತ್ರಿ ಆವಾಸ ಯೋಜನೆ ಎಂಬ ಹೆಸರಿನಲ್ಲಿ ಆರಂಭಿಸಲಾಗಿದೆ.<br>• ದೇಶದ ಪ್ರತಿಯೊಬ್ಬ ನಾಗರಿಕನು ಅವನು ಆರ್ಥಿಕ ಸಾಮಾರ್ಥ್ಯಕ್ಕೆ ಅನುಗುಣವಾಗಿ ಮನೆಹೊಂದಲು ಅವಕಾಶ ಕಲ್ಪಿಸಲಾಗಿದೆ.<br>• ಈ ಯೋಜನೆಯಡಿಯಲ್ಲಿ 2.ಕೋಟಿಗಿಂತ ಹೆಚ್ಚು ಮನೆಗಳ ನಿರ್ಮಿಸಲು ಗುರಿ ಹೊಂದಲಾಗಿದೆ. |
| ನಗರ ಆಶ್ರಯ ಯೋಜನೆ/ ವಾಜಪೇಯಿ ನಗರ ವಸತಿ ಯೋಜನೆ | 1991–92 | 1.20.000 | • ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಸತಿ ಕಲ್ಪಿಸಲಾಗಿದೆ. ನಗರ ಪ್ರದೇಶದಲ್ಲಿ 35.000ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರುವ ವಸತಿ ರಹಿತ ಬಡವರಿಗೆ ಮನೆ ನಿರ್ಮಾಣ. ಈ ಯೋಜನೆಯಡಿ 2013–14ನೇ ಸಾಲಿನಲ್ಲಿ ಮನೆಯ ಘಟಕದ ವೆಚ್ಚ 2ಲಕ್ಷ ಅದರಲ್ಲಿ 1.20ಲಕ್ಷ ರೂ.ಸಹಾಯಧನ ಇದ್ದು 35.000 ಫಲಾನುಭವಿ ಕಡ್ಡಾಯವಂತಿಕೆ 50.000ಬ್ಯಾಂಕ್ ಸಾಲ ಇರುತ್ತದೆ. |
| ನನ್ನ ಮನೆ ಯೋಜನೆ | 2010–11 | ಘಟಕದ ವೆಚ್ಚ 3.90.000 / 4.25.000/ 5.20.000 | • ಈ ಯೋಜನೆಯಡಿ ವಾರ್ಷಿಕ 1 ಲಕ್ಷಕ್ಕಿಂತ ಕಡಿಮೆ ಆದಾಯ ಇರುವವರಿಗೆ ನಗರವಾಸಿಗಳಿಗೆ ವಸತಿ ಕಲ್ಪಿಸುವುದಾಗಿದೆ.<br>• ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಇರುವ ಆಟೋರಿಕ್ಷಾ ಚಾಲಕರು ಚಲನ ಚಿತ್ರ ಉದ್ಯಮದಲ್ಲಿ ಕೆಲಸಮಾಡುವವರು ಬೀಡಿ ಕಾರ್ಮಿಕರು ಹಾಗೂ ಅಮಾಲರಿಗಾಗಿ ಇರುವ.<br>• ಈ ಯೋಜನೆ 2011–12ರಲ್ಲಿ ಬೆಂಗಳೂರು ಸುತ್ತಮುತ್ತ ತಾಳೆಗುಪ್ಪ, ಬಿಡದಿ ಹತ್ತಿರ ಸಿಂಗನಾಯಕನ ಹಳ್ಳಿ, ಯಲಹಂಕ ಹಾಗೂ ಕೊಡತಿ ಹಳ್ಳಿಯಲ್ಲಿ ಜಾರಿಗೆ ತರಲಾಗಿತು. |

downloaded from: www.kpscvaani.com

## ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳ ಸದಸ್ಯರ ಆಯ್ಕೆ

| ಪಂಚಾಯತಿಗಳು | ಅರ್ಹತೆ | ಮತದಾರರ ಪಟ್ಟಿ | ಆಯ್ಕೆ | ಅಧಿಕಾರಾವಧಿ | ಮೀಸಲಾತಿ | | | ರಾಜೀನಾಮೆ |
|---|---|---|---|---|---|---|---|---|
| | | | | | ಪ./ಜಾ/ ಪ.ಪಂ | ಹಿಂದುಗಳಿದ ವರ್ಗ | ಮಹಿಳೆ | |
| ಗ್ರಾಮ ಪಂಚಾಯತಿ | 21 ವರ್ಷ | ಜಿಲ್ಲಾ ಪಂಚಾಯತಿ | ಪ್ರತಿ 400 ಜನಸಂಖ್ಯೆಗೆ | 5ವರ್ಷ | ಗ್ರಾಮದ ಜನಸಂಖ್ಯೆಗೆ ಅನುಪತ ಅನುಸಾರ | 1/3 | ಶೇ.50 | ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ |
| ತಾಲ್ಲೂಕು ಪಂಚಾಯತಿ | 21 ವರ್ಷ | ಜಿಲ್ಲಾ ಪಂಚಾಯತಿ | ಪ್ರತಿ 12,500 ಜನಸಂಖ್ಯೆಗೆ | 5 ವರ್ಷ | ತಾಲ್ಲೂಕಿನ ಜನಸಂಖ್ಯೆಗೆ ಅನುಪಾತ ಅನುಸಾರ | 1/3 | ಶೇ.50 | ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ |
| ಜಿಲ್ಲಾ ಪಂಚಾಯತಿ | 21 ವರ್ಷ | ಜಿಲ್ಲಾ ಪಂಚಾಯತಿ | ಪ್ರತಿ 3.500 ದಿಂದ 4.500 ಜನಸಂಖ್ಯೆಗೆ | 5 ವರ್ಷ | ಜಿಲ್ಲೆಯ ಜನಸಂಖ್ಯೆಗೆ ಅನುಪಾತ ಅನುಸಾರ | 1/3 | ಶೇ.50 | ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ |

## ಗ್ರಾಮ ಪಂಚಾಯತಿ ರಚನೆ

| | ಜನಸಂಖ್ಯೆ | ರಚಿಸುವವರು | ಮೇಲ್ಮನವಿ | ಇತರೆ |
|---|---|---|---|---|
| ಗ್ರಾಮ ಪಂಚಾಯತಿ | 5,000 ದಿಂದ 7,000 ಜನಸಂಖ್ಯೆಗೆ | ಡೆಪ್ಯೂಟಿ ಕಮೀಷನ | 30 ದಿವಸಗಳ ಒಳಗೆ ಕಮೀಷನರ್ ಅವರಿಗೆ | ಬೆಳಗಾವಿ, ಚಿಕ್ಕಮಗಳೂ, ದಕ್ಷಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ. ಉಡುಪಿ. ಹಾವೇರಿ, ಮತ್ತು ಉತ್ತ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ 2500 ಕ್ಕಿಂತ ಕಡಿಮೆಯಿಲ್ಲದ ಜನಸಂಖ್ಯೆಯುಳ್ಳ ಪ್ರದೇಶವನ್ನು ಮತ್ತು 5 ಕಿ.ಮೀ.ಗಳ ತ್ರಿಜ್ಯದ 10 ಕಿ.ಮೀ.ಗಳ ವ್ಯಾಸದ ಒಳಗಿರುವ ಪ್ರದೇಶವನ್ನು ಸರ್ಕಾರವು ಗ್ರಾಮ ಪಂಚಾಯತಿ ಪ್ರದೇಶವೆಂದು ಘೋಷಿಸಬಹುದು. |

## ಗೌರವ ಧನ

| | ಗ್ರಾಮ ಪಂಚಾಯತಿ | ತಾಲ್ಲೂಕು ಪಂಚಾಯತಿ | ಜಿಲ್ಲಾ ಪಂಚಾಯತಿ |
|---|---|---|---|
| ಅಧ್ಯಕ್ಷರು | 1000 | 4.500 | ಸಚಿವ ಸಂಪುಟ ಸ್ಥಾನಮಾನ |
| ಉಪಾಧ್ಯಕ್ಷರು | 600 | 3,000 | – |
| ಸದಸ್ಯರು | 500 | 1,500 | – |

downloaded from: www.kpscvaani.com


# ಗ್ರಾಮ ಸ್ವರಾಜ್ಯದ ಘಟಕಗಳು

| 1. ಜನವಸತಿಯ ಸಭಾದ ಸಭೆಗಳು | | | | | |
|---|---|---|---|---|---|
| ಕಾರಣ ಮತ್ತು ಕರೆಯುವರು | ಅಧ್ಯಕ್ಷತೆ | ಕೋರಂ | ಅವಧಿ | ಭಾಗವಹಿಸುವವರು | ಕನಿಷ್ಠ ಇರಬೇಕಾದ |
| ಜನವಸತಿಯ ಸಭಾದ ಸಾಮಾನ್ಯ ಸಭಾ | | | | | |
| ಸಂಬಂಧಪಟ್ಟ ಜನವಸತಿ ಪ್ರದೇಶದ ಸದಸ್ಯರು | ಸದಸ್ಯರು | 1/5 ಅಥವಾ 20 ಮತದಾರರು | ಆರು ತಿಂಗಳಿಗೊಮ್ಮೆ | ಜನವಸತಿಯ ಮತದಾರರು | 30% |
| ಜನವಸತಿಯ ಸಭಾದ ವಿಶೇಷ ಸಭಾ | | | | | |
| 10% ಮತದಾರರು ಲಿಖಿತದಲ್ಲಿ ಮನವಿ ಸಲ್ಲಿಸಿದಾಗ | ಸದಸ್ಯರು | – | 3 ತಿಂಗಳಿಗೊಮ್ಮೆ | ಜನವಸತಿಯ ಮತದಾರರು | – |
| ಜನವಸತಿಯ ಸಭಾದ ತುರ್ತುಸಭಾ | | | | | |
| ಪ್ರಕೃತಿ ವಿಕೋಪ/ ಸಾರ್ವಜನಿಕ ಮಹತ್ವದ ವಿಷಯದ ಕುರಿತು ನಿರ್ಣಯಕ್ಕಾಗಿ | ಅಧ್ಯಕ್ಷರು/ ಉಪಾಧ್ಯಕ್ಷರು | – | – | ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಜನವಸತಿಯ | – |

| 2. ವಾರ್ಡ ಸಭಾದ ಸಭೆಗಳು | | | | | |
|---|---|---|---|---|---|
| ಕಾರಣ ಮತ್ತು ಕರೆಯುವರು | ಅಧ್ಯಕ್ಷತೆ | ಕೋರಂ | ಅವಧಿ | ಭಾಗವಹಿಸುವವರು | ಕನಿಷ್ಠ ಇರಬೇಕಾದ |
| ವಾರ್ಡ ಸಭಾದ ಸಾಮಾನ್ಯ ಸಭೆ | | | | | |
| ಸಂಬಂಧಪಟ್ಟ ವಾರ್ಡಿನ ಸದಸ್ಯರು | ಪದಸ್ಯರು | 1/5 ಅಥವಾ 20 ಮತದಾರರು | ಆರು ತಿಂಗಳಿಗೊಮ್ಮೆ | ವಾರ್ಡಿನ ಮತದಾರರು | – |
| ವಾರ್ಡ ಸಭಾದ ವಿಶೇಷ ಸಭೆ | | | | | |
| 10% ಮತದಾರರು ಲಿಖಿತದಲ್ಲಿ ಮನವಿ ಸಲ್ಲಿಸಿದಾಗ | ಸದಸ್ಯರು | – | 3 ತಿಂಗಳಿಗೊಮ್ಮೆ | ವಾರ್ಡಿನ ಮತದಾರರು | – |
| ವಾರ್ಡ ಸಭಾದ ತುರ್ತು ಸಭೆ | | | | | |
| ಪ್ರಕೃತಿ ವಿಕೋಪ/ಸಾರ್ವಜನಿಕ ಮಹತ್ವದ ವಿಷಯದ ಕುರಿತು ನಿರ್ಣಯಕ್ಕಾಗಿ | ಅಧ್ಯಕ್ಷರು/ ಉಪಾಧ್ಯಕ್ಷರು | – | – | ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ವಾರ್ಡಿನ ಮತದಾರರು | – |

downloaded from: www.kpscvaani.com

| 3. ಗ್ರಾಮ ಸಭಾದ ಸಭೆಗಳು | | | | | |
|---|---|---|---|---|---|
| ಕಾರಣ ಮತ್ತು ಕರೆಯುವವರು | ಅಧ್ಯಕ್ಷತೆ | ಕೋರಂ | ಅವಧಿ | ಭಾಗವಹಿಸುವವರು | ಕನಿಷ್ಠ ಇರಬೇಕಾದ |
| **ಗ್ರಾಮ ಸಭಾದ ಸಾಮಾನ್ಯ ಸಭೆ** | | | | | |
| ಅಧ್ಯಕ್ಷರು | ಅಧ್ಯಕ್ಷರು | 1/10 ಅಥವಾ 100 ಮತದಾರರು | ಆರು ತಿಂಗಳಿಗೊಮ್ಮೆ | ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಗ್ರಾಮದ ಮತದಾರರು & ಪ್ರತಿಯೊಂದು ವಾರ್ಡ ಸಭಾದಿಂದ ಕನಿಷ್ಠ ಹತ್ತು ಮಂದಿ ಸದಸ್ಯರು ಸಭೆಯಲ್ಲಿ ಹಾಜರಿರತಕ್ಕದ್ದು. | 30% |
| **ಗ್ರಾಮ ಸಭಾದ ವಿಶೇಷ ಸಭೆ** | | | | | |
| 1) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮತ್ತು<br>2) 10% ಮತದಾರರು ಲಿಖಿತದಲ್ಲಿ ಮನವಿ ಸಲ್ಲಿಸಿದಾಗ.<br>3) ಏಪ್ರಿಲ್ ಮತ್ತು ಆಕ್ಟೋಬರ್ ತಿಂಗಳಲ್ಲಿ ಹಣಕಾಸು ವಿಚಾರಕ್ಕಾಗಿ ಅಧ್ಯಕ್ಷರು ಕರೆಯುತ್ತಾರೆ. | ಅಧ್ಯಕ್ಷರು | – | ವರ್ಷಕ್ಕೆ ಕನಿಷ್ಠ ಒಮ್ಮೆಯಾದರು ಕರೆಯಬೇಕು. 3 ತಿಂಗಳಲಿ 2 ಭಾರೀ ಕರೆಯಲು ಬರುವುದಿಲ್ಲ | ಅಧ್ಯಕ್ಷರು, ಉಪಾಧ್ಯಕ್ಷರುಗಳು, ಸದಸ್ಯರು, ಅಧಿಕಾರಿಗಳು, ಗ್ರಾಮದ ಮತದಾರರು | – |

| ಗ್ರಾಮ ಪಂಚಾಯಿತಿ | | | | | | | |
|---|---|---|---|---|---|---|---|
| ಪಂಚಾಯತ ಸಭೆಗಳು | ಎಷ್ಟು ತಿಂಗಳಿಗೊಮ್ಮ | ಯಾರು ಕರೆಯುತ್ತಾರೆ? | ನೋಟಿಸ್ ನೀಡುವ ಅವಧಿ? | ಕೋರಂ | ನಿರ್ಣಯ | ಅಧ್ಯಕ್ಷತೆ | ಇತರೆ |
| ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆ | ಪ್ರತಿ ತಿಂಗಳು | ಗ್ರಾ.ಪಂ. ಅಧ್ಯಕ್ಷರು | 7ದಿನ ಮೊದಲು | ಅರ್ಧದಷ್ಟು ಅಥವಾ 50% | ಅರ್ಧದಷ್ಟಿ ಅಥವಾ 50% | ಗ್ರಾ.ಪಂ. ಅಧ್ಯಕ್ಷರು | * ಕಾರ್ಯದರ್ಶಿಯು ಸಭೆಯ ನಿರ್ಣಯಗಳ ಪ್ರತಿಯನ್ನು 3 ದಿನಗಳೊಳಗಾಗಿ ಗ್ರಾಮ ಪಂಚಾಯತಿ ಸೂಚನಾ ಫಲಕದಲ್ಲಿ ಪ್ರದರ್ಶಿಸಬೇಕು. 10 ದಿನದ ಒಳಗೆ ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸಬೇಕು.<br>* ನಡವಳಿ ಪುಸ್ತಕವು ಕಾರ್ಯದರ್ಶಿಯ ಸುಪರ್ದಿನಲ್ಲಿರಬೇಕು. |
| ಗ್ರಾಮ ಪಂಚಾಯತಿಯ ವಿಶೇಷ ಸಭೆ | ಅಧ್ಯಕ್ಷರು ತಮ್ಮ ವಿವೇಚನೆ ಮೇರೆಗೆ ಮತ್ತು 1/3 ಸದಸ್ಯರ ಕೋರಿಕೆ ಮೇರೆಗೆ | ಗ್ರಾ.ಪಂ. ಅಧ್ಯಕ್ಷರು 15 ದಿನಗಳ ಒಳಗೆ ವಿಶೇಷ ಸಭೆ ಕರೆಯಬೇಕು. | 3ದಿನ ಮೊದಲು | ಅರ್ಧದಷ್ಟು ಅಥವಾ 50% | ಅರ್ಧದಷ್ಟು 50% | ಗ್ರಾ.ಪಂ. ಅಧ್ಯಕ್ಷರು | |
| ಗ್ರಾಮ ಪಂಚಾಯತಿಯ ತುರ್ತು ಸಭೆ | ಪ್ರಕೃತಿ ವಿಕೋಪ / ಸಾರ್ವಜನಿಕ ಮಹತ್ವದ ವಿಷಯದ ಕುರಿತು ನಿರ್ಣಾಯಕ್ಕಾಗಿ | ಗ್ರಾ.ಪಂ. ಅಧ್ಯಕ್ಷರು | 24 ಗಂಟೆಗಳ ಒಳಗೆ | | | | |

downloaded from: www.kpscvaani.com 

| ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ | | | | | | |
|---|---|---|---|---|---|---|
| ಪಂಚಾಯತ ಸಭೆಗಳು | ಎಷ್ಟು ತಿಂಗಳಿಗೊಮ್ಮ | ಯಾರು ಕರೆ–ಯುತ್ತಾರೆ? | ನೋಟಿಸ್ ನೀಡುವ ಅವಧಿ? | ಕೋರಂ | ನಿರ್ಣಯ | ಅಧ್ಯಕ್ಷತೆ |
| ತಾಲ್ಲೂಕು ಪಂಚಾಯತಿಯ ಸಾಮಾನ್ಯ ಸಭೆ | ಎರಡು ತಿಂಗಳು | ತಾ.ಪಂ.ಅಧ್ಯಕ್ಷರು | 10 ದಿನ ಮೊದಲು | ಅರ್ಧದಷ್ಟು ಅಥವಾ 50% | ಅರ್ಧದಷ್ಟು ಅಥವಾ 50% | ತಾ.ಪಂ. ಅಧ್ಯಕ್ಷರು |
| ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆ | ಎರಡು ತಿಂಗಳು | ಜಿ.ಪಂ. ಅಧ್ಯಕ್ಷರು | 10 ದಿನ ಮೊದಲು | ಅರ್ಧದಷ್ಟು ಅಥವಾ 50% | ಅರ್ಧದಷ್ಟು ಅಥವಾ 50% | ಜಿ.ಪಂ. ಅಧ್ಯಕ್ಷರು |
| ಜಿಲ್ಲಾ ಪಂಚಾಯತಿಯ ವಿಶೇಷ ಸಭೆ | ಅಧ್ಯಕ್ಷರು ತಮ್ಮ ವಿವೇಚನೆ ಮೇರೆಗೆ & 1/3 ಸದಸ್ಯರ ಕೋರಿಕೆ ಮೇರೆಗೆ | ಜಿ.ಪಂ.ಅಧ್ಯಕ್ಷರು 15 ದಿನಗಳ ಒಳಗೆ ವಿಶೇಷ ಸಭೆ ಕರೆಯಬೇಕು | 7ದಿನ ಮೊದಲು | ಅರ್ಧದಷ್ಟು ಅಥವಾ 50% | ಅರ್ಧದಷ್ಟು ಅಥವಾ 50% | ಜಿ.ಪಂ. ಅಧ್ಯಕ್ಷರು |
| * ಪ್ರಥಮ ಸಭೆಯ ದಿನಾಂಕವನ್ನು ಅಥವಾ ಅಧ್ಯಕ್ಷನ/ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ನಡೆಸಲಾಗುವ ಸಭೆಯ ದಿನಾಂಕವನ್ನು ಅಸಿಸ್ಟೆಂಟ್ ಕಮೀಷನರ್ ಅವರು ಗೊತ್ತುಪಡಿಸುತ್ತಾರೆ ಮತ್ತು ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಅಧ್ಯಕ್ಷತೆಯನ್ನು ವಹಿಸುತ್ತಾರೆ.<br>* ಸಭೆಯಲ್ಲಿ ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಪ್ರತಿಯನ್ನು ಆ ಸಭೆಯು ನಡೆದ 3 ದಿವಸಗಳೊಳಗಾಗಿ ತಾಲೂಕ ಪಂಚಾಯತಿಯ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು ಮತ್ತು 10ದಿನಗಳ ಒಳಗೆ ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು. | | | | | | |

## ಸ್ಥಾಯಿ ಸಮಿತಿಗಳು

| | ಸ್ಥಾಯಿ ಸಮಿತಿಗಳು | ಅಧ್ಯಕ್ಷತೆ | ಅಧಿಕಾರಾವಧಿ | ಸದಸ್ಯರ ಸಂಖ್ಯೆ | ಕಾರ್ಯದರ್ಶಿ |
|---|---|---|---|---|---|
| ಗ್ರಾಮ ಪಂಚಾಯತಿ | ಸಾಮಾನ್ಯ ಸ್ಥಾಯಿ ಸಮಿತಿ | ಉಪಾಧ್ಯಕ್ಷರು | 30 ತಿಂಗಳು | 3 ರಿಂದ 5 | – |
| | ಸಾಮಾಜಿಕ ನ್ಯಾಯ ಸಮಿತಿ | ಅನುಸೂಚಿತ ಜಾತಿಗಳು ಮತ್ತು ಅನುಸೂಚತಿ ಪಂಗಡಗಳ ಸದಸ್ಯರಲ್ಲಿ ಒಬ್ಬರು | 30 ತಿಂಗಳು | 3 ರಿಂದ 5 | – |
| | ಹಣಕಾಸು, ಲೆಕ್ಕ ಪರಿಶೋಧನೆ & ಯೋಜನಾ ಸ್ಥಾಯಿ ಸಮಿತಿ | ಅಧ್ಯಕ್ಷರು | 30 ತಿಂಗಳು | 3 ರಿಂದ 5 | – |
| ತಾಲೂಕ ಪಂಚಾಯತಿ | ಸಾಮಾನ್ಯ ಸ್ಥಾಯಿ ಸಮಿತಿ | ಉಪಾಧ್ಯಕ್ಷನು | 20 ತಿಂಗಳು | 6 | ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ |
| | ಸಾಮಾಜಿಕ ನ್ಯಾಯ ಸಮಿತಿ | ಸದಸ್ಯರಲ್ಲಿ ಒಬ್ಬರು | 20 ತಿಂಗಳು | 6 | ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ |
| | ಹಣಕಾಸು, ಲೆಕ್ಕ ಪರಿಶೋಧನೆ & ಯೋಜನಾ ಸ್ಥಾಯಿ ಸಮಿತಿ | ಅಧ್ಯಕ್ಷರು | 20 ತಿಂಗಳು | 6 | ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ |

downloaded from: www.kpscvaani.com

# ಸ್ಥಾಯಿ ಸಮಿತಿಗಳು

| | ಸ್ಥಾಯಿ ಸಮಿತಿಗಳು | ಅಧ್ಯಕ್ಷತೆ | ಅಧಿಕಾರಾವಧಿ | ಸದಸ್ಯರ ಸಂಖ್ಯೆ | ಕಾರ್ಯದರ್ಶಿ |
|---|---|---|---|---|---|
| ಜಿಲ್ಲಾ ಪಂಚಾಯತಿ | ಸಾಮಾನ್ಯ ಸ್ಥಾಯಿ ಸಮಿತಿ | ಉಪಾಧ್ಯಕ್ಷನು | 20 ತಿಂಗಳು | 7 | ಜಿ.ಪಂ. ಉಪ ಕಾರ್ಯದರ್ಶಿಗಳು |
| | ಸಾಮಾಜಿಕ ನ್ಯಾಯ ಸಮಿತಿ | ಸದಸ್ಯರಲ್ಲಿ ಒಬ್ಬರು | 20 ತಿಂಗಳು | 7 | ಜಿ.ಪಂ. ಉಪ ಕಾರ್ಯದರ್ಶಿಗಳು |
| | ಹಣಕಾಸು, ಲೆಕ್ಕ ಪರಿಶೋಧನೆ & ಯೋಜನಾ ಸ್ಥಾಯಿ ಸಮಿತಿ | ಅಧ್ಯಕ್ಷರು | 20 ತಿಂಗಳು | 7 | ಜಿ.ಪಂ. ಉಪ ಕಾರ್ಯದರ್ಶಿಗಳು |
| | ಶಿಕ್ಷಣ ಮತ್ತು ಆರೋಗ್ಯ ಸಮಿತಿ | ಸದಸ್ಯರಲ್ಲಿ ಒಬ್ಬರು | 20 ತಿಂಗಳು | 7 | ಜಿ.ಪಂ. ಉಪ ಕಾರ್ಯದರ್ಶಿಗಳು |
| | ಕೃಷಿ ಮತ್ತು ಕೈಗಾರಿಕಾ ಸಮಿತಿ | ಸದಸ್ಯರಲ್ಲಿ ಒಬ್ಬರು | 20 ತಿಂಗಳು | 7 | ಜಿ.ಪಂ. ಉಪ ಕಾರ್ಯದರ್ಶಿಗಳು |

# ಅಧ್ಯಕ್ಷರ ಚುನಾವಣೆ

| ಅರ್ಹತೆ ಆಯ್ಕೆ | | | ಅಧಿಕಾರ ಅವಧಿ | ಮೀಸಲಾತಿ | | | ರಾಜಿನಾಮೆ | ಎಷ್ಟು ತಿಂಗಳುವರಿಗೆ ಅವಿಶ್ವಾಸ ಮಂಡಿಸಲು ಬರುವುದಿಲ್ಲ |
|---|---|---|---|---|---|---|---|---|
| | | | | ಎಸ್.ಸಿ & ಎಸ್.ಟಿ | ಹಿಂದುಳಿದ ವರ್ಗ | ಮಹಿಳೆ | | |
| ಗ್ರಾಮ ಪಂಚಾಯತಿಯ ಅಧ್ಯಕ್ಷರು | ಗ್ರಾಮ ಪಂಚಾಯತಿಯ ಸದಸ್ಯರಾಗಿರಬೇಕು | ಸದಸ್ಯರ ಬಹುಮತದ ಅಧಾರದ ಮೇಲೆ | 5 ವರ್ಷ | ರಾಜ್ಯದಲ್ಲಿರುವ ಅವರ ಜನಸಂಖ್ಯೆಗೆ ಅನುಪಾತ ಅನುಸಾರ | 1/3 | 50% | ಅಸಿಸ್ಟೆಂಟ್ ಕಮೀಷನರರಿಗೆ | 30 |
| ತಾಲೂಕ ಪಂಚಾಯತಿಯ ಅಧ್ಯಕ್ಷರು | ತಾಲೂಕ ಪಂಚಾಯತಿ ಸದಸ್ಯರಾಗಿರಬೇಕು | ಸದಸ್ಯರ | 5ವರ್ಷ | ರಾಜ್ಯದಲ್ಲಿರುವ ಅವರ ಜನಸಂಖ್ಯೆಗೆ ಅನುಪಾತ ಅನುಸಾರ | 1/3 | 50% | ಕಮೀಷನರರಿಗೆ | 30 |
| ಜಿಲ್ಲಾ ಪಂಚಾಯತಿಯ ಅಧ್ಯಕ್ಷರು | ಜಿಲ್ಲಾ ಪಂಚಾಯತಿಯ ಸದಸ್ಯರಾಗಿರಬೇಕು | ಸದಸ್ಯರ ಬಹುಮತದ ಆಧಾರದ ಮೇಲೆ | 5ವರ್ಷ | ರಾಜ್ಯದಲ್ಲಿರುವ ಅವರ ಜನಸಂಖ್ಯೆಗೆ ಅನುಪಾತ ಅನುಸಾರ | 1/3 | 50% | ಸರ್ಕಾರಕ್ಕೆ | 30 |

downloaded from: www.kpscvaani.com


## ರಾಜೀನಾಮೆಗಳು

| ಯಾರು? | ಯಾರಿಗೆ? |
|---|---|
| ಗ್ರಾ.ಪಂ./ತಾ.ಪಂ/ಜಿ.ಪಂ.ಸದಸ್ಯರು | ಗ್ರಾ.ಪಂ/ ತಾ.ಪಂ/ ಜಿ.ಪಂ ಅಧ್ಯಕ್ಷರಿಗೆ |
| ಗ್ರಾ.ಪಂ.ಅಧ್ಯಕ್ಷರು (10ದಿನದಲ್ಲಿ ವಾಪಸ್ ರಾಜೀನಾಮೆಯನ್ನುಪಡೆಯಬಹುದು) | ಅಸಿಸ್ಟೆಂಟ್ ಕಮೀಷನರ್ |
| ತಾ.ಪಂ.ಅಧ್ಯಕ್ಷರು (15 ದಿನದಲ್ಲಿ ವಾಪಸ್ ರಾಜೀನಾಮೆಯನ್ನು ಪಡೆಯಬಹುದು) | ಡೆಪ್ಯುಟಿ ಕಮೀಷನರ್ |
| ಜಿ.ಪಂ.ಅಧ್ಯಕ್ಷರು (15ದಿನದಲ್ಲಿ ವಾಪಾಸ್ ರಾಜೀನಾಮೆಯನ್ನು ಪಡೆಯಬಹುದು) | ಸರ್ಕಾರಕ್ಕೆ |
| ಗ್ರಾ.ಪಂ./ತಾಪಂ/ಜಿ.ಪಂ. ಉಪಾಧ್ಯಕ್ಷರು | ಗ್ರಾ.ಪಂ/ತಾ.ಪಂ/ಜಿ.ಪಂ ಅಧ್ಯಕ್ಷರಿಗೆ |
| ಹಣಕಾಸು ಆಯೋಗದ ಅಧ್ಯಕ್ಷರು | ಹಣಕಾಸು ಇಲಾಖೆಯ |
| ಕುಂದು ಕೊರತೆ ನಿವಾರಣಾ ಪ್ರಾಧಿಕಾರಿ | ಸರ್ಕಾರಕ್ಕೆ |
| ರಾಜ್ಯ ಚುನಾವಣಾ ಆಯುಕ್ತರು | ರಾಜ್ಯಪಾಲರಿಗೆ |

## ದಂಡಗಳು

| | |
|---|---|
| 100 ಮೀಟರುಗಳ ಅಂತರದೊಳಗಿನ ಚುನಾವಣಾ ಪ್ರಚಾರ ಮೊದಲಾದ ನಿಯಮ ಉಲ್ಲಂಘನೆಗಾಗಿ 500 ರೂಗಳವರೆಗೆ ದಂಡ ವಿಧಿಸಬಹುದು. | ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ 3 ತಿಂಗಳ ಕಾರಾಗೃಹವಾಸ ದಂಡನೆ |
| ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ 3 ತಿಂಗಳ ಕಾರಾಗೃಹವಾಸ ದಂಡನೆ | ಮತದಾನದ ರಹಸ್ಯವನ್ನು ಕಾಪಾಡುವಲ್ಲಿ ವಿಫಲವಾದರೆ 3 ತಿಂಗಳ ಕಾರಾಗೃಹವಾಸ ದಂಡನೆ |
| ಚುನಾವಣೆಯಲ್ಲಿ ಅಧಿಕೃಇಗಳು ಮೊದಲಾದವರು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡತಕ್ಕದ್ದಲ್ಲ ಅಥವಾ ಮತದಾನದ ಮೇಲೆ ಪ್ರಭಾವ ಬೀರತಕ್ಕದ್ದಲ್ಲ. ಮಾಡಿದರೆ 6 ತಿಂಗಳ ಕಾರಾಗೃಹವಾಸ ದಂಡನೆ | ಚುನಾವಣೆಗಳಿಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಭಂಗ–500 ರೂ.ದಂಡ |
| ಚುನಾಚಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣೀಕೆ ಏಜೆಂಟರಾಗಿ ಕಾರ್ಯನಿರ್ವಹಿಸುವ ಸರ್ಕಾರಿ ನೌಕರರುಗಳಿಗೆ 3 ತಿಂಗಳ ದಂಡನೆ | ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವುದು ಅಪರಾಧ 1 ವರ್ಷ ದಂಡನೆ |
| ಚುನಾವಣಾ ದಿನದ ಹಿಂದಿನ ದಿನ ಮತ್ತು ಚುನಾವಣಾ ದಿನದಂದು ಸಾರ್ವಜನಿಕ ಸಭೆಗಳ ನಿಷೇಧ–250 ರೂ.ದಂಡ | ಚುನಾವಣಾ ಸಭೆಗಳಲ್ಲಿ ಗಲಭೆ–500 ರೂ. ಗಳವರೆಗೆ ದಂಡ ಮತ್ತು ಅವನನ್ನು ಚಾರಂಟು ಇಲ್ಲದೆ ಪೋಲೀಸ್ ಅಧಿಕಾರಿಯು ಬಂಧಿಸಬಹುದು. |
| ಕಿರು ಹೊತ್ತಿಗೆಗಳು, ಭಿತ್ತಿಪತ್ರಗಳು, ಮುಂತಾದವುಗಳನ್ನು ಮುದ್ರಿಸುವುದರ ಬಗ್ಗೆ ನಿರ್ಬಂಧಗಳು ಆರು ತಿಂಗಳವರೆಗಿನ ಕಾರಾಗೃಹವಾಸ ಅಥವಾ 100–ರೂ ದಂಡ ಅಥವಾ ಎರಡನ್ನೂ ವಿಧಿಸಬಹುದು. | ಚುನಾವಣೆಯಲ್ಲಿ ಮತದಾರರನ್ನು ಮತದಾನ ಕೇಂದ್ರಕ್ಕೆ ಕರೆತರಲು ವಾಹನವನ್ನು ಒದಗಿಸಿದ್ದರೆ ಅವನಿಗೆ 500 ರೂ.ಗಳವರೆಗೆ ದಂಡ ವಿಧಿಸಬಹುದು. |
| ಸಾರ್ವಜನಿಕ ರಸ್ತೆ ಅಥವಾ ಆಸ್ತಿಗಳಿಗೆ ಅಡೆತಡೆಗಳನ್ನು ನಿರ್ಮಿಸಿದರೆ ಅಥವಾ ಒತ್ತುವರಿ ಮಾಡಿಕೊಂಡರೆ ರೂ.100 ರೂಗಳ ದಂಡ & ಮುಂದುವರಿಯುವಂತಹ ಪ್ರತಿಯೊಂದು ದಿನಕ್ಕೆ ಐದು ರೂಪಾಯಿ ಹೆಚ್ಚಿನ ದಂಡ | ಮಣ್ಣು, ಮರಳು ಅಥವಾ ಇತರ ಸಾಮಾಗ್ರಿಗಳನ್ನು ತೆಗೆದು ಹಾಕಿದರೆ ಅಥವಾ ಒತ್ತುವರಿಯನ್ನು ಮಾಡಿದರೆ 200 ರೂಗಳ ದಂಡ & ಮುಂದುವರಿಯುವಂತಹ ಪ್ರತಿಯೊಂದು ದಿವಸಕ್ಕೆ, 2 ರೂ.ಹೆಚ್ಚಿನ ದಂಡ ವಿಧಿಸಬಹುದು. ಹಾಗೂ ವಸ್ತುವಿನ ಬೆಲೆಯ 2 ರಷ್ಟನ್ನು ದಂಡವಾಗಿಸಬಹುದು. |

 downloaded from: www.kpscvaani.com

## ದಂಡಗಳು

| | |
|---|---|
| ಸಾರ್ವಜನಿಕ ಯಾವುದೇ ಹೆಸರು ಅಥವಾ ಸಂಖ್ಯೆಯನ್ನು ವಿರೂಪಗೊಳಿಸುವ ಅಥವಾ ನಾಶಪಡಿಸುವ ವ್ಯಕ್ತಿಗೆ 100 ರೂಗಳ ಹೆಚ್ಚಿನ ದಂಡ | ನಿಷೇಧಿತ ಸ್ಥಳದಲ್ಲಿ ಶವ ಸಂಸ್ಕಾರ ಮಾಡುವ ವ್ಯಕ್ತಿಗೆ 100 ರೂಗಳವರೆಗೆ ದಂಡ ವಿಧಿಸಬಹುದು. |
| ಸೋಂಕು ತಗಲಬಹುದಾದ ವಸ್ತುಗಳಿಗೆ–50ರೂ ದಂಡ | ಅಸಹ್ಯಕರವಾದ ವಾಸನೆಯಿಂದ ಕೂಡಿದ ಮಲವನ್ನು ಅಥವಾ ಇತರ ಪದಾರ್ಥವನ್ನು ಸಂಗ್ರಹಿಸುವ ಅಥವಾ ಉಪಯೋಗಿಸುವ ಯಾವನೇ ವ್ಯಕ್ತಿಗೆ 100 ರೂ.ಗಳ ದಂಡ |
| ಹೊಗೆ ಹೊರಸೂಸುವಿಕೆ–100 ರೂಗಳ ದಂಡ | ಉಪದ್ರವಕಾರಿ ಕೆಲಸಗಳನ್ನು ಮಾಡುವವರಿಗೆ 500 ರೂ.ಗಳ ದಂಡ |

## ವಿಸ್ತೃತ ರೂಪಗಳು

| | |
|---|---|
| MGNEGA | MAHATMA GADHI NATIONAL EMPLOYMENT GUARANTEE ACT<br>ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ |
| NRLA | NATIONAL RURAL LIVELIHOOD MISSION<br>ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಅಭಿಯಾನ |
| NRDAWP | NATIONAL RURAL DRINKING WATER PROGAMME<br>ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ |
| IAY | INDIRA AAWAS YOJANA<br>ಇಂದಿರಾ ಆವಾಸ ಯೋಜನೆ |
| RGPSY | RAJEEV GANDHI PANCHAYAT SASHAKTIKARANA ABHIYANA<br>ರಾಜೀವ ಗಾಂಧಿ ಪಂಚಾಯಿತಿ ಸಶಕ್ತೀಕರಣ ಅಭಿಯಾನ |
| RGCY | RAJIV GANDHI CHAITANYA YOJANA<br>ರಾಜೀವ ಗಾಂಧಿ ಚೈತನ್ಯ ಯೋಜನೆ |
| TSC | TOTAL SANTATIONAL CAMPAIGN<br>ಸಂಪೂರ್ಣ ನೈರ್ಮಲ್ಯ ಆಂದೋಲನ |
| NBA | NIRMALA BHARATA ABHIYANA<br>ನಿರ್ಮಲ ಭಾರತ ಅಭಿಯಾನ |
| SBM | SWACH BHARAT MISSION<br>ಸ್ವಚ್ಚ ಭಾರತ ಅಭಿಯಾನ |
| RGRHCL | RAJIV GANDHI RURAL HOUSING CORPORATION LIMITED<br>ರಾಜೀವ ಗಾಂಧಿ ಗ್ರಾಮೀಣ ವಸತಿ ನಗಮ ನಿಯಮಿತ |

| | |
|---|---|
| ANSIRD | ABDUL NAJEERSAB STATE INSTITUTE OF RURAL DEVELOPMENT<br>ಅಬ್ದುಲ್ ನಜೀರಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ |
| RDPR | DISTRICT RURAL DEVEIOPMENT AUTHORITY<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಜ್ ಇಲಾಖೆ |
| DRDA | DISTRICT RURAL DVALOPMENT AUTHORITY<br>ಜಿಲ್ಲಾ ಗ್ರಾಮೀಣಭಿವೃದ್ಧಿ ಸಂಸ್ಥೆ |
| CEO | CHIEF EXECUTIVE OFFICER<br>ಮುಖ್ಯ ಕಾರ್ಯನಿವಾಹಕ ಅಧಿಕಾರಗಳು |
| DS | DEPUTY SECRETARY<br>ಉಪ ಕಾರ್ಯದರ್ಶಿ |
| AS | ASSISTANT SECRETARY<br>ಸಹಾಯಕ ಕಾರ್ಯದರ್ಶಿ |
| EO | EXECUTIVE OFFICER<br>ಕಾರ್ಯನಿರ್ವಾಹಕ ಅಧಿಕಾರಿಗಳು |
| PDO | PANCHAYAT DEVELOPMENT OFFICER<br>ಪಂಚಾಯತ ಅಭಿವೃದ್ಧಿ ಅಧಿಕಾರಿ |
| SDAA | SECOND DIVISION ACCOUNT ASSISTANT<br>ದ್ವಿತೀಯ ದರ್ಜೆ ಲೆಕ್ಕ ಸಹಾಯಕರು |
| BRGF | BACKWARD REGION GRANT FUND<br>ಹಿಂದುಳಿದ ಪ್ರದೇಶಗಳ ಅನುದಾನ ನಿಧಿ |

downloaded from: www.kpscvaani.com


| | |
|---|---|
| SSA | SARVA SHIKSHA ABHIYANE<br>ಸರ್ವ ಶಿಕ್ಷಣ ಅಭಿಯಾನ |
| NRHM | NATIONAL RURAL HEALTH MISSION<br>ರಾಷ್ಟ್ರೀಯ ಗ್ರಾಮೀಮ ಆರೋಗ್ಯ ಅಭಿಯಾನ |
| RFD | RESULT FRAMEWORK DOCUMENT<br>ಫಲಿತಾಂಶ ಚೌಕಟ್ಟು ದಾಖಲೆ |
| MPIC | MONTHLY PROGRAMME IMPLEMENTATION CALENDAR<br>ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ |
| PRED | PANCHAYAT RAJ ENGINEERING DEPARTMENT<br>ಪಂಚಾಯತ ರಾಜ್ ಇಂಜೀನಿಯರಿಂಗ್ ಇಲಾಖೆ |
| KRIDL | KARNATAKA RURAL INFRASTRUCTURE DEVELOPMENT LIMITED<br>ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ |
| KSRLPS | KARNATAKA STATE RURAL LIVELIHOOD PROMOTION SOCIETY<br>ಕರ್ನಾಟಕ ರಾಜ್ಯ ಗ್ರಾಮೀಣ ಜೀವನಧಾರ ಸಂವರ್ಧನಾ ಸಂಸ್ಥೆ |
| KRWSSA | KARNATAKA RURAL WATER SUPPLY AND SANITATION AGENCY<br>ಕರ್ನಾಟಕ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಂಸ್ಥೆ |
| SGSY | SWARNAJAYANTI GRAM SWAROGAR YOJANA<br>ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ |
| KRRDA | KARNATAKA RURAL ROADS DEVELOPMENT AGENCY<br>ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ |
| PMGSY | PRADHANA MANTRI GRAM SADAK YOJANA<br>ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ |

| | |
|---|---|
| WGDP | WESTERN CHATS DEVELOPMENT PROGRAMMER<br>ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ |
| PEAIS | PANCHAYAT EMPOWERMENT AND ACCOUNTABILITY INCENTIVE SCHEME<br>ಪಂಚಾಯತ ಸಬಲೀಕರಣ ಮತ್ತು ಹೊಣೆಗಾರಿಕೆ ಉತ್ತೇಜನ ಯೋಜನೆ |
| PMEYSA | PRADHANA MAHILA ECVAM YUVA SHAKTI ABHIYANA<br>ಪಂಚಾಯತ ಮಹಿಳಾ ಏವಂ ಯುವಶಕ್ತಿ ಅಭಿಯಾನ |
| IMIS | INTEGRATED MANAGEMENT INFORMATION SYSTEM<br>ಸಮಗ್ರ ನಿರ್ವಹಣಾ ಮಾಹಿತಿ ವ್ಯವಸ್ಥೆ |
| NGP | NIRMALA GRAM PURAKARA<br>ನಿರ್ಮಲ ಗ್ರಾಮ ಪುರಸ್ಕಾರ |
| DDA | DESERT DEVELOPMENT PROGRAMME<br>ಮರಭೂಮಿ ಅಭಿವೃದ್ಧಿ ಕಾರ್ಯಕ್ರಮ |
| MWS | MINI WATER SUPPLY<br>ಕಿರು ನೀರು ಸರಬರಾಜು |
| O&M | OPERATION AND MANAGEMENT<br>ಕಾರ್ಯಚರಣೆ ಮತ್ತು ನಿರ್ವಹಣೆ |
| MKSP- | MAHILA KISAN SASHAKTIKARANA PARIYOJANE<br>ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ |
| MFIRED | MAHATMA GANDHI INSTITUTE OF RURAL ENERGY AND DEVELOPMENT<br>ಮಹಾತ್ಮಾ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ |
| NABARD | NATIONAL BANK AGRICULTURE AND RURAL DEVELOPMENT<br>ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಭಿವೃದ್ಧಿ ಬ್ಯಾಂಕು. |